ಕೊಂಡಿರುವವರು ಹೋಗಿಬಿಡುತ್ತಾರೆ, ಇನ್ನು ವ್ಯವಸಾಯ ಇಲಾಖೆಯಲ್ಲಿ ಆಗಿರುವ ಪ್ರಸಂಗ ಹೇಳಿದ್ದಾರೆ. ಅದು ಖಾತ್ರಿ ಆಗಿರುವುದು ಎಲ್ಲರೂ ಒಪ್ಪಿಕೊಳ್ಳುತ್ತಾರೆ, ಯಾರು ಯಾರು ಸೀನಿಯಾರಿಟಿ ಲಿಸ್ಟ್ ಅಖೈರು ಆಗದೆ ಬಡ್ತಿ ಪಡೆದಿದ್ದಾರೋ ಅವರಿಗೆ ಉನ್ನತ ಸ್ಥಾನದಲ್ಲಿ ಸಿಗುವ ಯಾವ ಸೌಲಭ್ಯ ಕೊಡುವುದಕ್ಕೆ ಹೋಗಬೇಡಿ. ಒಂದು ಸಾರಿ ಲಿಸ್ಟ್ ಅಖೈರು ಆಗುವವರೆಗೆ ಪ್ರಿಲಿಮಿನರಿ ಲಿಸ್ಟ್ ಪ್ರಕಾರ ಬಡ್ತಿ ಪಡೆಯುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಅನುಕೂಲ ಆಗುವುದಾದರೆ ಎಲ್ಲರೂ ಸಮನಾಗಿ ಅನುಕೂಲ ಪಡೆಯುತ್ತಾರೆ. ಪ್ರಯೋಜನ ಆಗುವುದಾದರೆ ಎಲ್ಲರಿಗೂ ಸಮನಾಗಿ ಪ್ರಯೋಜನ ಸಿಗುವ ಹಾಗೆ ಆಗುತ್ತದೆ. ಅದನ್ನು ಮಾಡಬೇಕು. ಜೊತೆಗೆ ಸರ್ವೆ ಇಲಾಖೆಯಲ್ಲಿ ಬಡ್ತಿ ಕ್ರಮದಲ್ಲಿ ಕೂಡ ಅನೇಕ ಲೋಪದೋಷಗಳು ಇವತ್ತು ನಡೆದಿವೆ. ಅಲ್ಲೂ ಕೂಡ ಇವತ್ತಿನವರೆಗೂ ಬಡ್ತಿಕ್ರಮ ಕ್ರಮಬದ್ಧವಾಗಿ ಆಗಿಲ್ಲ. ಅನೇಕ ಜನರಿಗೆ ಅನ್ಯಾಯವಾಗಿದೆ. ಸರ್ವೆ ಡಿಪಾರ್ಟ್‌ಮೆಂಟಿನ ಕೆಲವು ಡೈರೆಕ್ಟರ್ ಕಾಲದಲ್ಲಿ ವಿಪರೀತ ವರ್ಗಾವರ್ಗಿಗಳಲ್ಲಿ ಅನೇಕ ಲೋಪದೋಷಗಳು ಆಗಿ ಸರ್ವೆ ಸೆಟಲ್‌ಮೆಂಟ್ ಇಲಾಖೆ ಅತ್ಯಂತ ಕೆಟ್ಟ ಸ್ಥಿತಿಯಲ್ಲಿದೆ. ಇದನ್ನು ದುರಸ್ಥಿಪಡಿಸುವ ಕೆಲಸ ಇವತ್ತಿನವರೆಗೂ ಆಗಿಲ್ಲ. ಇತ್ತೀಚೆಗೆ ಇರುವ ಡೈರೆಕ್ಟರ್ ಟ್ರಾನ್ಸ್‌ಫರ್ ಆಗಿದ್ದಾರೆ. ಈ ಇಲಾಖೆಯನ್ನು ಕೂಡ ಸರಿಪಡಿಸಿ, ಆ ಜನಕ್ಕೆ ಆಗಿರತಕ್ಕ ಅನ್ಯಾಯವನ್ನು ಬಗೆಹರಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಒಂದು ಮಾತು ಹೇಳಬೇಕಾಗಿದೆ. ಈ ಮಸೂದೆಯನ್ನು ಮಂಡಿಸುವುದರಿಂದ ತಾವು ಏನು ಹೇಳುತ್ತೀರಿ, ಹಿಂದೆ ಆಗಿರತಕ್ಕ ವಿಷಯಗಳಿಗೆ ಮಾತ್ರ ಇದು ಲಾಗು ಆಗತಕ್ಕದ್ದು ಎಂದು. ಮುಂದೆ, ಇವತ್ತು ಸೇವೆಗಳನ್ನು ನಿರ್ವಹಿಸತಕ್ಕ ವ್ಯವಸ್ಥೆ ಏನಿದೆ ಅದೇ ವ್ಯವಸ್ಥೆಯಲ್ಲಿ ಕಳೆದ 17 ವರ್ಷಗಳಿಂದ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಪ್ರತಿಯೊಂದು ಸಾರಿ ಶಾಸನ ಸಭೆ ಅಧಿವೇಶನದಲ್ಲಿ ಇದು ಸಾಕಷ್ಟು ರೀತಿಯಲ್ಲಿ ಚರ್ಚೆಯಾಗಿದೆ ಅನೇಕ ಸರ್ಕಾರಗಳು ಉತ್ತರ ಹೇಳಿದ ಸಂದರ್ಭ ಉಂಟು. 15—20 ವರ್ಷ ಕಾಲ ಚರ್ಚೆಮಾಡುವುದರಲ್ಲಿಯೇ ಮುಂದುವರಿಸಿಕೊಂಡು ಹೋಗಿ, ಈಗ ಹಿಂದೆ ಮಾಡಿರತಕ್ಕ ತಪ್ಪುಗಳನ್ನೆಲ್ಲ ತಪ್ಪಿಸುವುದಕ್ಕೆ ಇಂತಹ ಒಂದು ಕಾನೂನು ತಂದರೆ ಸಾಕು ಎಂದು ಇದ್ದಾರೆ ನೀವು ಇಲ್ಲದೇ ಇದ್ದರೆ, ಬರುವ ಸರ್ಕಾರ ಮಾಡಬಹುದು ಎಂದು ತಿಳಿದುಕೊಂಡಿದ್ದಾರೆ. ಅದಕ್ಕೆ ಅವಕಾಶ ಆಗಬಾರದು. ಪ್ರತಿವರ್ಷ ಬಡ್ತಿ ಕ್ರಮ, ಎಲ್ಲಾ ಇಲಾಖೆಯಲ್ಲಿ ಪರಿಶೀಲನೆಮಾಡುವ ಕ್ರಮ ಇಟ್ಟುಕೊಳ್ಳಬೇಕು. ಪ್ರತಿವರ್ಷ ಕೂಡ ಹೆಚ್ಚಿನ ಸೇವೆ ಸಲ್ಲಿಸಿ ಬಡ್ತಿ ಕ್ರಮಕ್ಕೆ ಅರ್ಹರು ಆಗಬಹುದು. ಎಲ್ಲಾ ಇಲಾಖೆಯ ಬಡ್ತಿ ಕ್ರಮಗಳಿಗೆ ಸೇವಾ ನಿಯಮಗಳನ್ನು ಪರಿಶೀಲನೆಮಾಡಿ, ಪರಿಷ್ಕರಣಮಾಡಿ, ಯಾರು ಯಾರು ಬಡ್ತಿಗೆ ಅರ್ಹರೋ ಅವರಿಗೆ ಬಡ್ತಿ ಮಾಡುವ ಕ್ರಮ

(ಶ್ರೀ ಕಾಗೋಡು ತಿಮ್ಮಪ್ಪ)

ಮಾಡಬೇಕು. ಯಾವ ಇಲಾಖೆಯಲ್ಲಿ ಪ್ರಮೋಷನಲ್ ಲಿಸ್ಟ್ ಫೈನಲೈಸ್ ಮಾಡುವುದಿಲ್ಲ ಅಂಥ ಸಂದರ್ಭದಲ್ಲಿ ನೀವು ಪ್ರತಿವರ್ಷ ಸಂಬಂಧಪಟ್ಟ ಇಲಾಖೆಯ ಮುಖ್ಯಾಧಿಕಾರಿಗಳ ಮೇಲೆ ಶಿಸ್ತಿನಕ್ರಮ ತೆಗೆದುಕೊಳ್ಳತಕ್ಕ ಅವಕಾಶ ಗಳನ್ನು ಈ ಕಾನೂನಿನಲ್ಲಿ ಅಳವಡಿಸಿಕೊಳ್ಳಬೇಕು.

Head of the departments should finalise the promotional list every year.

ಇದನ್ನು ಇಂಥ ಕಾನೂನಿನಲ್ಲಿ ಮಾಡಿದರೆ Head of the Departments ಗೆ ನಾಳೆ ಅದು ತನ್ನ ಮೈಮೇಲೆ ಬರುತ್ತದೆ, ತನ್ನ ಸ್ಥಾನಮಾನಕ್ಕೆ ಚ್ಯುತಿ, ಧಕ್ಕೆ ಬರುವ ಸಂಭವ ಉಂಟು ಎನ್ನುವ ಹೆದರಿಕೆ ಬರುತ್ತದೆ. ಖಾಯಂ ಆಗಿ, ಖಚಿತವಾಗಿ ಪ್ರತಿ ವರ್ಷದ ಪ್ರಮೋಷನಲ್ ಲಿಸ್ಟನ್ನು ಎಲ್ಲಾ ಯಥಾವತ್ತಾಗಿ ಮಾಡಿ ಸರ್ಕಾರಕ್ಕೆ ಕಳುಹಿಸುವ ಪ್ರಯತ್ನ ಮಾಡುತ್ತಾರೆ.

ಇಲ್ಲದೇ ಹೋದರೆ ಇದು ಏನಾಗುತ್ತದೆ ಎಂದರೆ, ಇನ್ನೂ ನಿಧಾನ ಮಾಡಿಕೊಂಡು ಹೋದರೆ ಸಂಬಂಧಪಟ್ಟ ಗುಮಾಸ್ತರ ಮೇಲೆ ಹಾಕುತ್ತಾರೆ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಈ ಬಗ್ಗೆ ಕೇಳಿದರೆ ತಯಾರಾಗುತ್ತಾ ಇದೆ ಎಂದು ಹೇಳುತ್ತಾರೆ, ಒಂದು ವೇಳೆ ಕೇಳದೆ ಇದ್ದರೆ ಇದು ಹಾಗೆಯೇ ಕೂತಿರುತ್ತದೆ, ಈ ರೀತಿ ನಡೆಯುತ್ತಾ ಇದೆ. ಆದುದರಿಂದ ನಾನು ಹೇಳುವುದು ಏನೆಂದರೆ ಈ ಬಗ್ಗೆ ಅವರನ್ನು ಸಾಕಷ್ಟು ಹಿಡಿತದಲ್ಲಿಟ್ಟುಕೊಳ್ಳುವ ಹಾಗೆ ಮಾಡದೇ ಹೋದರೆ ಅವರಿಗೆ ಎಷ್ಟು ಕಾಲಾವಕಾಶ ಬೇಕೋ ಅಷ್ಟು ಕಾಲಾವಕಾಶವನ್ನು ಉಪಯೋಗಿಸಿಕೊಳ್ಳುತ್ತಾರೆ. ಈರೀತಿ ತಡವಾಗಿ ಅನೇಕ ನೌಕರರು ಕೋರ್ಟಿಗೆ ಹೋಗುವ ಸಂದರ್ಭ ಬಂದಿದೆ. ಕೆಲವು ಸಂದರ್ಭದಲ್ಲಿ ಸತ್ತಮೇಲೆ ಪೆನ್‌ಷನ್ ಹೋಗುವ ಸಂದರ್ಭ ಇದೆ. ಜೀವಂತವಿದ್ದಾಗ ಬರುವುದಿಲ್ಲ. ಒಂದುವೇಳೆ ಆ ರೀತಿ ಆದರೆ ಅವರ ವಾರಸುದಾರರಿಗೆ ಹೋಗುವಂತೆ ಮಾಡಬೇಕು. ಆದರೆ ಇದನ್ನೇ ಖಾಯಂ ಆಗುವಂತೆ ಅವಕಾಶ ಮಾಡಿಕೊಡಬೇಡಿ. ಆ ಮನುಷ್ಯನಿಗೆ ಸಂಬಂಧಪಟ್ಟ ಬಡ್ತಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳೂ ಕೂಡ ಅವನ ಜೀವಂತ ಕಾಲದಲ್ಲಿಯೇ ನಿರ್ಧಾರವಾದರೆ ಸಂಬಂಧಪಟ್ಟ ಸರ್ಕಾರಕ್ಕೋ ಕೋರ್ಟಿಗೋ ಹೋಗಿ ಅವನು ನ್ಯಾಯವನ್ನು ಪಡೆಯುತ್ತಾನೆ. ಅವನಿಗೆ ರಾಜ್ಯಾಂಗ ಬದ್ಧವಾಗಿ ಸಮಾನವಾದ ಎಲ್ಲಾ ಹಕ್ಕುಗಳೂ ಇವೆ. ಅವನಿಗೆ ಈ ಪ್ರಜಾಪ್ರಭುತ್ವದಲ್ಲಿ ತನ್ನ ಎಲ್ಲಾ ಹಕ್ಕನ್ನೂ ಕೂಡ ಚಲಾಯಿಸುವುದಕ್ಕೆ ಸಾರ್ವಭೌಮತ್ವವನ್ನು ಪಡೆದಿದ್ದಾನೆ, ಮೇಲಾಗಿ ನ್ಯಾಯಾಲಯ ಇದೆ. ಅವನಿಗೆ ಏನೇನು ಸವಲತ್ತುಗಳನ್ನು ಸರ್ಕಾರದಿಂದ ಸಿಗಬೇಕೋ ಆ ಹಕ್ಕನ್ನು

(ಶ್ರೀ ಕಾಗೋಡು ತಿಮ್ಮಪ್ಪ)

ಚಲಾಯಿಸುವುದಕ್ಕೆ ಅವನು ಜೀವಂತನಾಗಿದ್ದಾಗಲೇ ಇದನ್ನು ಮಾಡುವುದಕ್ಕೆ ಸಾಧ್ಯವಾಗದೇ ಹೋದರೆ ಅವನು ಹುಟ್ಟಿ ಬೆಳೆದದ್ದು ಏತಕ್ಕೆ? ಈ ಬಡ್ತಿಯ್ಯಾವಾಗಲೂ ಒಂದು ಕ್ರಮಬದ್ಧವಾಗಿ ನಡೆಯಬೇಕು. ಪ್ರತಿವರ್ಷವೂ ಕೂಡ ಈ ಬಡ್ತಿಗೆ ಸಂಬಂಧಪಟ್ಟ ವಿಷಯಗಳನ್ನು ಪರಿಷ್ಕರಣೆ ಮಾಡಿ, ವಿಮರ್ಶೆ ಮಾಡತಕ್ಕಂಥ ಕಾನೂನನ್ನು ಇಲ್ಲಿ ಅಳವಡಿಸಬೇಕು. ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಜೊತೆಗೆ ಈ ಮಸೂದೆಯಿಂದ ಮುಂದೆ ಆಗತಕ್ಕಂಥ ಸೇವಾ ಬಡ್ತಿ ಕ್ರಮ ಏನು ಇದೆ ಅದನ್ನು ನ್ಯಾಯವಾಗಿ ಒದಗಿಸಿಕೊಡಬೇಕು. ಒಂದು ವೇಳೆ ಬಡ್ತಿ ಕೊಡುವಾಗ ಮುಂದೆ ಏನಾದರೂ ಲೋಪದೋಷಗಳನ್ನು ಮಾಡಿದ್ದರೆ ಅದನ್ನು ಪ್ರಸ್ತಾಪ ಮಾಡತಕ್ಕಂಥ ಹಕ್ಕು ನೌಕರರಿಗೆ ಇರಬೇಕು. ಅವರಿಗೆ ಇರತಕ್ಕಂಥ ಈ ಮೂಲಭೂತವಾದ ಹಕ್ಕನ್ನು ಯಾರೂ ಕಸಿದುಕೊಳ್ಳಬಾರದು. ಅವರಸೇವಾ ಬಡ್ತಿಗೆ ಅನ್ಯಾಯಗಳು ಆಗದಂತೆ ನೋಡಿಕೊಂಡು ಹೋಗಲು ಅವಕಾಶ ಮಾಡಿ ಕೊಡಬೇಕು. ಮತ್ತು ಹಿಂದೆ ನಡೆದಂಥ ಘಟನೆಯನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸ ಮಾಡಬೇಕು. ಮತ್ತು ಈ ಹಿಂದೆ ಕೊಳೆತು ರಾಶಿ, ರಾಶಿ ಗಟ್ಟಲೆ ಬಿದ್ದಿರತಕ್ಕಂಥ ಕೇಸುಗಳನ್ನು ಇನ್ನು 1—1½ ವರ್ಷದಲ್ಲಿ ಪೂರ್ಣಗೊಳಿಸಿ ಒಂದು ಹಂತಕ್ಕೆ ಬಂದು ಮುಟ್ಟುತ್ತೇವೆ ಎನ್ನುವ ಆಶ್ವಾಸನೆ ಕೊಡಬೇಕು. ಇಲ್ಲದೇ ಹೋದರೆ ಸಂಬಂಧಪಟ್ಟ ಮಂತ್ರಿಗಳು ಹೊಣೆಗಾರರಾಗಬೇಕು. ಈಗ ಇದಕ್ಕೆ ಯಾರೂ ಕೂಡ ಜವಾಬ್ದಾರರಾಗಲು ತಯಾರಿಲ್ಲ, ಇವರು ಹಿಂದಿನವರ ಮೇಲೆ ಹೇಳುತ್ತಾರೆ. ಅವರ ಅವರ ಹಿಂದಿನವರ ಮೇಲೆ ಹೇಳುತ್ತಾರೆ. ಈ ರೀತಿ ಆಗಬಾರದು. ಆದುದರಿಂದ ಈ ಒಂದು ಕಾನೂನು ಆದ ಮೇಲಾದರೂ ಕೂಡ ಈ ನೌಕರಸೇವಾ ಬಡ್ತಿಯನ್ನು ಒಂದು ವರ್ಷದೊಳಗೆ ಪೂರೈಸುತ್ತೇವೆ ಅನ್ನುವ ಒಂದು ಅಶ್ವಾಸನೆ ಕೊಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದನ್ನು ಪೂರೈಸತಕ್ಕಂಥಾದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯನ್ನು ಸರ್ಕಾರ ಕಳಚಿಕೊಂಡರೆ ಆಗುವುದಿಲ್ಲ. ಇದನ್ನು ಪೂರೈಸುವುದಾದರೆ ಅವರ ನೈತಿಕ ಮಟ್ಟವನ್ನು ಉಳಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದರ ಜೊತೆಗೆ ಈ ರಾಜ್ಯದ ನೌಕರರಿಗೆ ಯಾವ ರೀತಿಯಾಗಿಯೂ ಅನಾನುಕೂಲ ಮತ್ತು ಅನ್ಯಾಯವಾಗದ ರೀತಿಯಲ್ಲಿ ರಕ್ಷಣೆ ನೀಡಬೇಕು ಎಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ, ಇದು ಒಂದು ಕರಾಳ ಶಾಸನವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿ ಈ ಶಾಸನವನ್ನು ವಿರೋಧಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

SRI B. B SAYANAK (Belgaum).—Madam Speaker, I rise to oppose this Bill. I endorse the opinion of some of the hon. members who have said that this is a Black Bill. After the States Reorganisation, there is not a final seniority list prepared with the result some junior officers have been promoted. Juniors have been promoted by passing the seniority and merit of other persons. Consequent upon the supersession of their seniority some of the officers have gone in writ petitions to the High Court and they have obtained justice: The Government have gone in appeal to the Supreme Court. I am sorry to say that the aggrieved persons though they have fought tooth and nail for their survival and have established their right. Now the Government is not going to do full justice to them. Some of the officers who had gone to High Court, have brought judgements in their favour and as a consequence thereof they have drawn their arrears of salary and some officials are in the process of getting justice. In the meanwhile. the Government has brought this Bill in order to prevent them from getting their legitimate claims. I cannot understand why discrimination is being made in respect of few officials by introducing this Bill.

Another thing, if the Supreme Court is going to confirm the decision of the High Court, what will be the fate of this Bill, whether the Government is going to introduce another Bill in respect of these public servants? According to me, Government is making an experiment whether the people or the Assembly or the Civil servants are going to accept this Bill or not. If after passing of this Black Bill, the Civil Servants were to approach the High Court and if the High Court were to give a decision saying that this Bill against the constitution, then what will be the fate of this Bill? This is a specific question which I want to pose to Government for an answer.

Another thing in some of the departments, the Cadre and Recruitment Rules have not been framed even after 17 years of reorganisation of the State. I want to know

(SRI B. B. SAYANAK)

why this is so? Whether the Government is sincere to give justice to all the senior and meritorious persons?

According to clause (2) (2) of this Bill, the effect of this Bill will be a retrospective one. That means this Bill comes into force from 1-11-56. If that is the case, so many persons, some of them who have retired and some of them have died, what will be their fate? Some provision has been made in this Bill protecting the interests of those persons who have retired without getting promotions and those who have died; but those persons who cannot get any seniority or promotion during their life time, no provision has been made.

And, now, after their death and retirement, you are going to do some justice. I do not say full justice, but some justice is being done, according to you.

Regarding the arrears, as my hon. friend Mr. Krishnan said if you pay the arrears to the persons who got favourable decisions of the High Court, what harm is there? You are not the sufferer but the public is the sufferer. So, you must give arrears to those persons, who got a decision from the High Court.

With these words, I oppose this Bill and thank the Chair for having given me an opportunity to speak.

**ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಕಾನೂನು ಮಂತ್ರಿಗಳು ತಂದಿರತಕ್ಕ ಈ ಬಿಲ್ಲನ್ನು ನಾನು ಸಂಪೂರ್ಣ ಸ್ವಾಗತಿಸುತ್ತ ಶ್ರೀ ಕಾಗೋಡು ತಿಮ್ಮಪ್ಪನವರು ಮಾಡಿದ ಭಾಷಣದ ಬಗ್ಗೆ ಮತ್ತು ವಿರೋಧವನ್ನು ವ್ಯಕ್ತಪಡಿಸಿದ್ದಕ್ಕೆ ಸಖೇದಾಶ್ಚರ್ಯ ಪಡುತ್ತೇನೆ. ಅದಕ್ಕೆ ಕಾರಣವಿಷ್ಟೆ. ಶ್ರೀ ತಿಮ್ಮಪ್ಪನವರು ಸೆಲೆಕ್ಟ್ ಸಮಿತಿಯಲ್ಲಿ ಇದ್ದವರು. ಕ್ರಾಂತಿ ಕಾರಕ ಭೂಸುಧಾರಣಾ ತಿದ್ದುಪಡಿ ವಿಧೇಯಕ ತಂದಂಥ ಜನ, ಯಾರು ದುಡಿಮೆ ಯಿಂದ ಕಷ್ಟಪಟ್ಟು ಸಾವಿರಾರು ರೂಪಾಯಿ ಇನ್‌ವೆಸ್ಟ್ ಮಾಡಿ ಸ್ವಂತ ಸಾಗು ವಳಿ ಮಾಡಿಕೊಂಡು ಬಂದಿದ್ದರೋ ಅಂಥವರಿಗೆ ಕಂದಾಯದ 10–15 ಪಟ್ಟು ಕಾಂಪೆನ್‌ಸೇಷನ್ ಕೊಟ್ಟು ಬಿಡುಗಡೆ ಮಾಡಬೇಕು ಎಂದು ಹೇಳಿದಂಥ ಜನ, ಇಲ್ಲಿ ಏನೂ ಕೆಲಸ ಮಾಡದೆ ಅದರ ಪ್ರತಿಫಲವನ್ನು ಮಾತ್ರ ತೆಗೆದುಕೊಳ್ಳುತ್ತಿರುವ

(ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್)

ವರ ಬಗ್ಗೆ ಅನುಕಂಪ ವ್ಯಕ್ತಪಡಿಸಿರುವುದಕ್ಕೆ ಅವರಿಗೆ ಶಹಭಾಸ್ ಕೊಡುತ್ತೇನೆ; ಇದು ನಿಜವಾದ ಸಮಾಜವಾದ. ಏಕೆಂದರೆ ಯಾರು ದುಡಿಮೆಯ ಬಗ್ಗೆ ಮಾತನಾಡುತ್ತಾರೆ, ಯಾರು ಕಷ್ಟಪಡುತ್ತಾರೆ ಅವರ ಬಗ್ಗೆ ಹೆಚ್ಚಿನ ಸವಲತ್ತನ್ನು, ಹೆಚ್ಚಿನ ಪರಿಹಾರವನ್ನು ಕೊಡಬೇಕು ಎಂದು ಹೇಳಬೇಕೋ ಅಂಥವರು ದುಡಿಮೆ ಇಲ್ಲದೆ ವರ್ಷಾನುಗಟ್ಟಲೆ ಕಾಲ ಕುಳಿತುಕೊಂಡು ಯಾವುದೋ ಕೋರ್ಟ್ ಆಜ್ಞೆಯ ಮುಸುಕಿನಲ್ಲಿ ಪರಿಹಾರ ಪಡೆಯುವುಧಕ್ಕೆ ಹೊರಟಿರುವ, ಈ ರಾಜ್ಯದ ಬೊಕ್ಕಸವನ್ನು ಬರಿದು ಮಾಡಲು ಹೊರಟಿರುವ ಅಧಿಕಾರಿಗಳ ಬಗ್ಗೆ ವಕಾಲತ್ತು ವಹಿಸುತ್ತಿರುವ ಅವರಿಗೆ ನಾನು ಎಷ್ಟು ಮೆಚ್ಚಿದರೂ 'ಸಾಲದು. ಶ್ರೀ ಅಂಬಲ್ ನಲ್ಲಿ ಇದರ ಉದ್ದೇಶವಾದರೂ ಏನು ಎನ್ನುವುದನ್ನು ಕಾನೂನು ಮಂತ್ರಿಗಳು ವಿಶದವಾಗಿ ಹೇಳಿದ್ದಾರೆ. 1956 ರಿಂದ ಇಲ್ಲಿಯವರೆಗೂ ಯಾವ ಜವಾಬ್ದಾರಿಯನ್ನೂ ವಹಿಸಿಕೊಳ್ಳದೆ, ಕೆಳವರ್ಗದಲ್ಲಿ ಇದ್ದು ಯಾವುದೋ ಒಂದು ಕೋರ್ಟ್ ಆಜ್ಞೆಗೆ ಅನುಸಾರವಾಗಿ ಅಲ್ಲಿಂದ ಇಲ್ಲಿಯವರೆಗೂ ಆತನಿಗೆ ಗುರುತರವಾದ ಜವಾಬ್ದಾರಿ ಇತ್ತು ಎಂದು ತಿಳಿದುಕೊಂಡು ಪರಿಹಾರ ಕೊಡಬೇಕು ಎಂದರೆ ಈ ದೇಶಕ್ಕಂತೂ ಸಾಧ್ಯವಿಲ್ಲ. ಇದು ರಾಜಮಹಾರಾಜರ ಬೊಕ್ಕಸವಲ್ಲ, ರೈತವರ್ಗ ಕೊಟ್ಟಿರತಕ್ಕ ಹತ್ತಿಪ್ಪತ್ತು ರೂಪಾಯಿಗಳ ಕಂದಾಯದ ಮೂಲಕ ಬಂದಿರತಕ್ಕ ದುಡ್ಡನ್ನು ಕೆಲವಾರು ನೌಕರರಿಗೆ ಸವಲತ್ತು ಕೊಡಬೇಕು, ಅವರಿಗೆ ಕೊಡಬೇಕು ಎನ್ನುವ ವಾದವನ್ನು, ವಕೀಲಿಯನ್ನು ಏಕೆ ನಮ್ಮ ಮಿತ್ರರು ಹಿಡಿದಿದ್ದಾರೋ ನನಗೆ ತಿಳಿಯದು.

ಶ್ರೀ ಎಚ್. ಡಿ. ದೇವೇಗೌಡ :—ನಮಗೆ ಒಂದೊಂದು ಸಾವಿರ ರೂಪಾಯಿ ಫಿಕ್ಸ್ ಆಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಕಂಟೆಂಟ್ ಆದೀತು, ನಾಳೆಯ ದಿವಸ ಪ್ರಿವಿಲೇಜಿಗೆ ಹಾಕುತ್ತೀರಿ ಎಂದು ಹೇಳಲಿಲ್ಲ. ನೀವೇ ಒಪ್ಪಿಕೊಂಡ ಮೇಲೆ ನನ್ನ ತಕರಾರಿಲ್ಲ.

ಈ ಹೊತ್ತು ಯಾವ ಪ್ರಮೋಷನ್ ಆಗಲೀ, ಯಾವ ಒಂದು ಅಧಿಕಾರಕ್ಕೆ ಕೂರಿಸಬೇಕಾಗಲೀ, ಅವನ ಯೋಗ್ಯತೆ ಪ್ರಧಾನವಾಗಿರಬೇಕು. ಕೇವಲ ಇಂತಿಷ್ಟು ವರ್ಷ ಕೆಲಸ ಮಾಡಿದ್ದಾನೆ ಎಂದು ಅವನಿಗೆ ಒಂದು ಹುದ್ದೆಯನ್ನು ನಿರ್ಮಾಣ ಮಾಡಿ ಕೊಡುವುದು ನಿಜವಾಗಿಯೂ ಕೆಲಸಕಾರ್ಯ ತೆಗೆದುಕೊಳ್ಳತಕ್ಕ ರೀತಿಯಲ್ಲ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಒಂದು ನ್ಯೂನತೆ ಇದರಲ್ಲಿ ಇರುತ್ತದೆ. 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಬಂತು' ಎನ್ನುವ ಗಾದೆ ಇದೆ. ಅದರಂತೆ ಇದರಲ್ಲಿರುವ ಒಂದು ವಿಚಾರದಲ್ಲಿ ದುರುಪಯೋಗವಾಗುವುದಕ್ಕೆ ಕೂಡ ಸಾಧ್ಯವಿದೆ. ಯಾವನೋ ಒಬ್ಬ ಅಧಿಕಾರಿ ಚೆನ್ನಾಗಿ ಕೆಲಸ ಮಾಡುತ್ತಿದ್ದರೂ ಕೂಡ ಮೇಲಿನ ಅಧಿಕಾರಿಗೆ ಅವನ ಮೇಲೆ ವಿರೋಧವಿದ್ದರೆ ಈ ಬಿಲ್ಲಿನ ರಕ್ಷಣೆ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್).

ಪಡೆದು ಅವನಲ್ಲಿರತಕ್ಕ ಯೋಗ್ಯತೆಯನ್ನು ಬದಿಗೊತ್ತಿ ಅವನ ಕೈಕೆಳಗೆ ನೌಕರಿ ಮಾಡುವವನನ್ನು ಮೇಲೆ ತರುವುದಕ್ಕೆ ಅವಕಾಶ ಇದರಲ್ಲಿ ಆಗುತ್ತದೆ. ಅದನ್ನು ಸಂಬಂಧಪಟ್ಟವರು, ಮೇಲೆ ಯಾರು ಅಧಿಕಾರ ಸೂತ್ರ ಹಿಡಿದಿದ್ದಾರೆ ಅವರು ಕ್ಷ ಕಿರಣ ಬೀರಿ ಯಾವತ್ತೂ ನಿಗಾ ವಹಿಸಬೇಕಾಗುತ್ತದೆ, ಇದು ವಿಧಿ ವಿಪರ್ಯಾಸ ಎಂದು ಹೇಳಬಹುದು.

1956 ರಿಂದ ಏನು ಕರ್ನಾಟಕ ರಚನೆಯಾಯಿತು. ಆಗ ನಾವು ಮಾಡಬೇಕಾದಂಥ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡದೆ ಇರುವುದರ ಕಾರಣ ಈ ಹೊತ್ತು 25 ವರ್ಷಗಳ ಕಾಲ ಅಸಿಸ್ಟೆಂಟ್ ಡೈರೆಕ್ಟರಾಗಿ ಕೆಲಸ ಮಾಡಿದವನು ಇಂಡಸ್ಟ್ರಿಯಲ್ ಡಿಪಾರ್ಟಮೆಂಟಿನಲ್ಲಿ ಅಸಿಸ್ಟೆಂಟ್ ಡೈರೆಕ್ಟರಾಗಿಯೇ ಇದ್ದಾನೆ. ರಾಜ್ಯದ ಆಡಳಿತದಲ್ಲಿ ಸುಸೂತ್ರವಾಗಿ ಕೆಲಸ ಮಾಡತಕ್ಕ ಕೆಲಸಗಾರನ ಯೋಗ್ಯತೆ, ಆತನ ಮೇಧಾಶಕ್ತಿ, ಆತನಲ್ಲಿರುವ ಚಾಕಚಕ್ಯತೆಯನ್ನು ಪುರಸ್ಕಾರ ಮಾಡುವುದಕ್ಕೆ ತಿಳಿಯದೆಹೋದರೆ ಕೆಲಸ ಹೇಗೆ ಆಗುತ್ತದೆ? ಆಫೀಸುಗಳಲ್ಲಿ ಹೋಗಿ ನೋಡಿದರೆ ಯಾರಿಗೆ ಪ್ರಮೋಷನ್ ಸಿಕ್ಕಿಲ್ಲ, ಯಾರು ಹತ್ತಾರು ವರ್ಷಗಳ ಕಾಲ ಬರೀ ಲಾಬಿ ಮಾಡಿಕೊಂಡು ನನಗ ಪ್ರಮೋಷನ್ ಸಿಕ್ಕಿಲ್ಲ, ಕೋರ್ಟಿಗೆ ಹೋಗಬೇಕು, ಇಲ್ಲ ಎಂ. ಎಲ್. ಎ. ಗಳನ್ನು ಹಿಡಿಯಬೇಕು, ಮಂತ್ರಿಗಳನ್ನು ಹಿಡಿಯಬೇಕು ಎಂದು ಇರುತ್ತಾರೆ ಅವರು ಎಷ್ಟರಮಟ್ಟಿಗೆ ಕೆಲಸ ಮಾಡಿಯಾರು? ಆಫೀಸಿನಲ್ಲಿ ತನ್ನ ಜೀವನದ ಉದ್ದೇಶವನ್ನು ಸಾಧನೆ ಮಾಡಿಕೊಳ್ಳುವುದು ಒಂದೇ ಆತನ ಗುರಿಯಾಗಿರುವಾಗ ಬೇರೆ ವಿಷಯ ಆತನ ಗಮನಕ್ಕೆ ಬರುತ್ತದೆಯೇ ಎಂದು ಯೋಚನೆಮಾಡಬೇಕಾಗಿದೆ. ಇದು ದೊಡ್ಡ ಅವ್ಯವಸ್ಥೆಯಾಗುವುದಕ್ಕೆ ಐದು ರಾಜ್ಯಗಳಿಂದ ಸೇರಿಕೊಂಡಿರತಕ್ಕ ಕರ್ನಾಟಕದ ವಿಧ ವಿಧವಾದ ಕಾನೂನು ಏನಿವೆ ಅವನ್ನೆಲ್ಲ ಸಮನ್ವಯ ಮಾಡಿ ಕರ್ನಾಟಕದ ಇಡೀ ಅನ್ವಯಿಸತಕ್ಕ ಕಾನೂನು 17 ವರ್ಷವಾದರೂ ಮಾಡಲಿಲ್ಲವೆಂದರೆ ಇದು ನಿಜವಾಗಿಯೂ ನಾವು ತಲೆ ತಗ್ಗಿಸಬೇಕಾದ ವಿಚಾರ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಕ್ಯಾಬಿನೆಟ್ ಮುಂದೆ ಇದೆ, ಇನ್ನೂ ಅಪ್ರೂವ್ ಆಗಿಲ್ಲ ಎನ್ನುವುದನ್ನು ಕೆಲವು ಇಲಾಖೆಗಳಲ್ಲಿ ಕೇಳಿದ್ದೇನೆ. ಇದಕ್ಕೆ ಇರತಕ್ಕ ಸಾಧಕಬಾಧಕಗಳೇನು, ಇದಕ್ಕೆ ಏಕೆ ಒಂದು ಡೆಡ್‌ಲೈನ್ ಫಿಕ್ಸ್ ಮಾಡಬಾರದು? ಅಧಿಕಾರಿಗಳು ತಮ್ಮ ಹೆಂಡಿರು ಮಕ್ಕಳನ್ನು ಸಲಹಬೇಕು. ಆದರೆ ತನ್ನ ಪ್ರಮೋಷನ್, ತನ್ನ ಬಡ್ತಿ ಇದರ ಬಗ್ಗೆ 24ಗಂಟೆಯೂ ತಲೆ ಕೆಡಿಸಿಕೊಳ್ಳುವುದಾದರೆ ನಾವು ರಾಜ್ಯದಲ್ಲಿ ಏನು ತಾನೆ ಮಾಡುವುದಕ್ಕಾದೀತು ಎಂದು ಯೋಚನೆ ಮಾಡಬೇಕಾಗುತ್ತದೆ. ಕ್ಲಾಜ್ ನಾಲ್ಕರಲ್ಲಿ ಹೇಳಿರುವ ವಿಚಾರದ ಬಗ್ಗೆ ನಾನು ಕಾನೂನು ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈ ಹೊತ್ತು ಏನೇ ಆಗಲೀ, ಕತ್ತೆಯಾದರೂ ಚಿಂತೆ ಇಲ್ಲ, ಕುದುರೆಯಾದರೂ ಚಿಂತೆ ಇಲ್ಲ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಎಂದು ಯಾರಾದರೂ ಹೇಳಿದರೆ, ಅವರಿಗೆ ವ್ಯತ್ಯಾಸವೇನೂ ಕಾಣುವ ಹಾಗೆಯೇ ಇಲ್ಲ. ಎರಡನ್ನೂ ಒಂದೇ ತರಹ ನೋಡತಕ್ಕ ಸಮಾಜವಾದ ನಮಗೆ ಬೇಕಿಲ್ಲ. ಕುದುರೆಯನ್ನು ಕುದುರೆ, ಕತ್ತೆಯನ್ನು ಕತ್ತೆ ಎಂದು ಕರೆಯಬೇಕಾಗುತ್ತದೆ. ಒಂದು ಗುರುತರವಾದ ಜವಾಬ್ದಾರಿಯನ್ನು ವಹಿಸಬೇಕಾದರೆ ಆತನ ಯೋಗ್ಯತೆಗೆ ಪ್ರಾಮುಖ್ಯತೆ ಕೊಡಬೇಕಾಗುತ್ತದೆ. ಆದೇ ದೃಷ್ಟಿಯಿಂದ ಈ ಹೊತ್ತಿನ ದಿವಸ ಸುಪ್ರೀಂ ಕೋರ್ಟಿನ ಚೀಫ್ ಜಸ್ಟೀಸ್ ಅವರ ನೇಮಕವಾಯಿತು. ಅದನ್ನು ಅಭಿನಂದಿಸಬೇಕು. ಆದರೆ ಇದರಲ್ಲಿ ನಾನು ಮೊದಲೇ ಹೇಳಿದಂತೆ ಫೇವರಿಟಿಸಂ ಎನ್ನುವುದು ಇರಕೂಡದು. ಯೋಗ್ಯತೆ ಒಂದೇ ಪ್ರಧಾನವಾಗಿರಬೇಕು. ಆದರೆ ಅದನ್ನು ಅಳೆಯುವ ಬಗೆ ಹೇಗೆ? ನನ್ನ ಬಂಧು ಕೂಡಾ ಬಹಳ ಯೋಗ್ಯ, ಮೇಧಾಶಕ್ತಿ ಇರುವವನು, ಜಾಣ್ಮೆಯ ಅಪರಾವತಾರ ಎಂದು ಹೇಳುವ ಅಭಿಮಾನ ನನಗೆ ಬರುವುದು ಸಹಜ. ನನ್ನ ಬಂಧುವಾಗಲೀ, ನನ್ನ ವೈರಿಯಾಗಲೀ, ನನ್ನನ್ನು ನೋಡಲಿ, ನೋಡದೆ ಇರಲಿ, ನಮಸ್ಕಾರ ಹಾಕಲಿ, ಹಾಕದೇ ಇರಲಿ. ಕರೆದು ಕೊಡತಕ್ಕ, ಪುರಸ್ಕಾರ ಮಾಡತಕ್ಕ ಪದ್ಧತಿಯನ್ನು ನಾವು ಈ ಪ್ರಮೋಶನ್‌ನಲ್ಲಿ ತೆಗೆದುಕೊಂಡು ಬಾರದೆ ಹೋದರೆ ಯಾವತ್ತೂ ಕೂಡ ನಮ್ಮ ಕಾರ್ಯಾಂಗ ಸುಸೂತ್ರವಾಗಿ ನಡೆಯುವುದಕ್ಕಾಗುವುದಿಲ್ಲ ಎನ್ನುವವರಲ್ಲಿ ನಾನೂ ಒಬ್ಬ.

2.30 P.M.

ನಾನು ವಿದ್ಯಾರ್ಥಿಯಾಗಿದ್ದಾಗ ಮಹಾರಾಜಾ ಕಾಲೇಜಿನಲ್ಲಿ ಪಾರ್ಥಸಾರಥಿ ಎಂಬುವರು ಅಸಿಸ್ಟೆಂಟ್ ಮಾಸ್ಟರ ಅಂದರೆ ಲೆಕ್ಚರರ್ ಆಗಿದ್ದರು. ನಾನು ಆ ಕಾಲೇಜಿಗೆ ಹೋಗುವುದಕ್ಕೂ ಮೊದಲು ಸಹ ಅವರು ಅದೇ ಕೆಲಸ ಮಾಡುತ್ತಿದ್ದರು. ಅವರ ವಿದ್ಯಾರ್ಥಿಯೊಬ್ಬರು ಮುಂದೆ ಅದೇ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆದರು. ಮುಂದೆ ವೈಸ್-ಛಾನ್ಸಲರ ಆದರು. ಆದರೆ ಇವರು ಮಾತ್ರ ಅದೇ ಹುದ್ದೆಯಲ್ಲಿ ಇದ್ದರು. ತಮ್ಮ ಶಿಷ್ಯನನ್ನು ಮಾತ್ರ ನರಸಿಂಹ ಎಂದೇ ಕರೆಯುತ್ತಿದ್ದರು. ತಮಗೆ ಪ್ರಮೋಷನ್ ಸಿಗಲಿಲ್ಲ, ಅನ್ಯಾಯವಾಯಿತು ಎಂಬ ವಿಚಾರವನ್ನೇ ಅವರು ತರಗತಿಯಲ್ಲಿ ಹೇಳುತ್ತಿದ್ದರು. ಇಂತಹ ಅರಳು ಮರಳನ್ನು ಕ್ರಿಯೇಟ್ ಮಾಡಿದರೆ ರಾಜ್ಯದಲ್ಲಿ ಕೆಲಸ ಸುಸೂತ್ರವಾಗಿ ನಡೆಯುವುದಾದರೂ ಹೇಗೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈ ಬಿಲ್ಲನ್ನು ತಂದಿರುವ ಉದ್ದೇಶ ಸಫಲವಾದರೆ ಈ ರಾಜ್ಯಕ್ಕೆ ನಿಜಕ್ಕೂ ಒಳ್ಳೆಯ ಸುಯೋಗ ಬರುತ್ತದೆಂದು ಹೇಳುವವರ ಪೈಕಿ ನಾನೂ ಸಹ ಒಬ್ಬ. ಮುಖ್ಯವಾಗಿ ಸರ್ಕಾರಿ ನೌಕರರ ಕಾರ್ಯದಕ್ಷತೆಯ ಬಗ್ಗೆ ಗುಪ್ತ ವರದಿಯನ್ನು ಸರ್ಕಾರದವರು ಇಡಬೇಕಾಗುತ್ತದೆ. ಈ ಕೆಲಸವನ್ನು ನೌಕರರ ಮೇಲಿನ ಅಧಿಕಾರಿಗಳಿಗೆ ವಹಿಸುವುದು ಸರಿಯಲ್ಲ. ಏಕೆಂದರೆ ಅಧಿಕಾರಿಗೂ ಕೆಳಗಿನ ನೌಕರರಿಗೂ ಏನಾದರೂ ಆಗದಿದ್ದರೆ ಅಂತಹ ನೌಕರರ ಗುಪ್ತ ವರದಿಯನ್ನು ತಯಾರಿಸುವಾಗ ಹತ್ತಿಕ್ಕುವ

(ಶ್ರೀ ಎಸ್. ಎಂ. ಶೀರಸಾಳಿ ಚಂದ್ರಶೇಖರ್)

ಪ್ರವೃತ್ತಿ ಇರುತ್ತದೆ. ಈ ಕಾರಣದಿಂದ ರಾಜ್ಯದ ಸೂತ್ರವನ್ನು ಹಿಡಿದುಕೊಂಡಿರುವವರು ಬೇರೆ ಒಂದು ಮಿಷಿನರಿ ಇಟ್ಟುಕೊಂಡು, ಅಂದರೆ ಸಿ. ಐ. ಡಿ.ಗಳನ್ನು ಎಲ್ಲ ಕಡೆ ಹಾಕಿ, ಪ್ರತಿಯೊಬ್ಬ ನೌಕರನೂ ಯಾವ ರೀತಿ ಕೆಲಸ ಮಾಡುತ್ತಾನೆ. ಆಫೀಸ್ ವೇಳೆಯಲ್ಲಿ ಯಾರು ತಮ್ಮ ಕೆಲಸ ಸರಿಯಾಗಿ ಮಾಡದೇ ಹೋಟೇಲಿನಲ್ಲಿ ಕುಳಿತಿರುತ್ತಾರೆ ಎಂಬುದನ್ನು ಪರೀಕ್ಷೆ ಮಾಡಬೇಕು. ಈ ರೀತಿ ಪರೀಕ್ಷೆ ಮಾಡುವ ಬಗ್ಗೆ ಒಂದು ಅಂಗವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆ ರೀತಿ ಪರೀಕ್ಷೆ ಮಾಡುವ ಮೂಲಕ, ಯಾರು ತನ್ನ ದೇಶ, ತನ್ನ ಸರ್ಕಾರ ಎಂಬ ಅಭಿಮಾನದಿಂದ ದುಡಿಯುತ್ತಾರೋ ಅಂತಹ ಆಫೀಸರಗಳಿಗೆ ಮತ್ತು ನೌಕರರಿಗೆ ಪುರಸ್ಕಾರ ಕೊಟ್ಟರೆ ನಮ್ಮ ಆಡಳಿತ ಯಂತ್ರ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತದೆಂದು ಹೇಳುವವರಲ್ಲಿ ನಾನೂ ಒಬ್ಬ. ಈ ರೀತಿ ಮಾಡದೇ ಕೇವಲ ಸಮಾಜವಾದದ ಬಗ್ಗೆ, ಸರ್ವೋದಯದ ತತ್ವದ ಬಗ್ಗೆ, ಜಗತ್ತಿನ ಕಲ್ಯಾಣದ ಬಗ್ಗೆ ಮಾತನಾಡುವುದರಲ್ಲಿ ಅರ್ಥವಿಲ್ಲ. ಮೊದಲು ಕಾರ್ಯಾಂಗ ಸರಿಯಾಗಿ ಕೆಲಸ ಮಾಡಬೇಕು. ಕಾರ್ಯಾಂಗ ಸರಿಯಾಗಿ ಕೆಲಸ ಮಾಡದಿದ್ದರೆ ಮೇಲೆ ಕುಳಿತಿರುವ ಪಾಲಿಸಿ ಮೇಕರ್ಸ್ ಯಶಸ್ವಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಕೇವಲ ಒಬ್ಬ ಮಂತ್ರಿಯಾಗಲೀ, ಒಬ್ಬ ಮುಖ್ಯಮಂತ್ರಿಯಾಗಲೀ ಎಲ್ಲ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳು ಏನಾದರು ಆರ್ಡರ್ ಪಾಸ್‌ಮಾಡಿದರೆ ಅದನ್ನು ಅವರ ಆಪ್ತಕಾರ್ಯದರ್ಶಿ ಮುಂದಕ್ಕೆ ಕಳಿಸದಿದ್ದರೆ ಆ ಆರ್ಡರ್‌ಗೆ ಯಾವ ಬೆಲೆಯೂ ಬರುವುದಿಲ್ಲ. ಈ ಕಾರಣದಿಂದ ಕಾರ್ಯಾಂಗವನ್ನು ಸರಿಯಾಗಿ ವ್ಯವಸ್ಥಿತವಾಗಿ ಇಟ್ಟುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ರಥ ಮುಂದಕ್ಕೆ ಹೋಗುವುದಿಲ್ಲವೆನ್ನುವ ಅಭಿಪ್ರಾಯ ನನ್ನದಿದೆ. ಈ ಒಂದು ಬಿಲ್ಲಿನ ಉದ್ದೇಶ ಸಫಲವಾಗಲೀ ಎಂದು ಹೇಳಿ ಮತ್ತೊಮ್ಮೆ ಇದನ್ನು ಸ್ವಾಗತಿಸಿ ಮಾನ್ಯ ಕಾನೂನು ಮಂತ್ರಿಗಳನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎಸ್. ಪಾಟೀಲ್ : (ಹುಮ್ನಾಬಾದ್) ಮಾನ್ಯ ಅಧ್ಯಕ್ಷಿಣಿಯವರೇ ನಮ್ಮ ಎದುರಿಗೆ ಏನು ಬಿಲ್ಲನ್ನು ಮಾನ್ಯ ಮಂತ್ರಿಗಳು ತಂದಿದ್ದಾರೆ, ಅದರ ಬಗ್ಗೆ ಈಗಾಗಲೇ ಸಾಕಷ್ಟು ಮಂದಿ ಸದಸ್ಯರು ಮಾತನಾಡಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಈ ಬಿಲ್ಲನ್ನು ತರತಕ್ಕಂಥ ಅವಶ್ಯಕತೆ ಏನಿತ್ತು ಎಂಬ ಅನುಮಾನವನ್ನು ಆ ಕಡೆಯ ಸದಸ್ಯರು ಮತ್ತು ಈ ಕಡೆಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಈ ಒಂದು ವಿಧೇಯಕವನ್ನು ಪಾಸ್ ಮಾಡದಿದ್ದರೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಖರ್ಚು ಬರುತ್ತದೆ. ಅಷ್ಟೊಂದು ಹಣ ಕೊಡಲು ಸರ್ಕಾರದ ಕೈಯಲ್ಲಿ ಇಲ್ಲ, ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಸರ್ಕಾರದ ಹತ್ತಿರ ಹಣ ಇಲ್ಲದಿದ್ದರೆ ಬೇರೆ ಉಪಾಯ ಕಂಡುಹಿಡಿಯಬೇಕಾಗಿತ್ತೇ ಹೊರತು, ಈಗ

(ಶ್ರೀ ವಿ. ಎಸ್. ಪಾಟೀಲ್)

ತಂದಿರತಕ್ಕಂಥ ವಿಧೇಯಕ ಅದಕ್ಕೆ ರೆಮಿಡಿಯಲ್ಲ, ಡಯಗ್ನಿಸನ್ ಅಲ್ಲ, ಟ್ರೀಟ್‌ಮೆಂಟ್ ಅಲ್ಲ ಎಂದು ಹೇಳುತ್ತೇನೆ. ಇದರ ಬಗ್ಗೆ ಮಾತನಾಡುತ್ತಾ ಮೆಂಡ್ ಅಥವಾ ಎಂಡ್ ಎಂದು ಹೇಳಿದರು. ಇದು ಎಂಡ್ ಅಲ್ಲ, ಬ್ಲಾಕ್ ಆಗುತ್ತದೆ. ಸಪೊರ್ಕೇಷನ್ ಅಗುತ್ತದೆ. ಈ ರೀತಿ ಆಗಬಾರದಾಗಿತ್ತು. ಏಕೆಂದರೆ ನಾವು ಒಳ್ಳೆಯ ಹಾದಿ ಹುಡುಕುತ್ತಿರುವಾಗ, ಒಬ್ಬ ರೈತ ಹೊಲ ಊಳುವಾಗ ಮಧ್ಯದಲ್ಲಿ ಒಂದು ಕಲ್ಲನ್ನು ಹಾಕಿದಂತೆ ಆಗುತ್ತದೆ. ಇಂದು ಸರ್ಕಾರ ಜ್ಯುಡಿಷಿಯರಿ ಬಗ್ಗೆ ಸ್ಕ್ಯಾಂಡಿ ರಿಗಾರ್ಡ್ ತೋರಿಸುತ್ತಿದೆ ಎಂದು ರೈಟ್ ರೀಆಕ್ಷನರೀಸ್ ಹೇಳುತ್ತಿದ್ದಾರೆ. ತೋಳ ಬಂತು ತೋಳ ಬಂತು ಎಂದು ಹೇಳುತ್ತಿದ್ದಾರೆ. ಆದರೆ ತೋಳ ಬರಲಿಲ್ಲ, ಕೇವಲ ತೋಳದ ಬಟ್ಟೆಯನ್ನು ಹುಲಿಯ ಬಟ್ಟೆಯನ್ನು ಜನರಿಗೆ ತೋರಿಸುತ್ತಿದ್ದಾರೆ. ಚೀಫ್ ಜಸ್ಟಿಸನ್ನು ನೇಮಕ ಮಾಡಿದ ಪದ್ಧತಿ ಸರಿಯಲ್ಲವೆಂದು ಕೆಲವರು ಹೇಳಿದರು. ಆದರೆ ಅದರಿಂದ ಏನೂ ಆಗಲಿಲ್ಲ. ಇಂತಹ ಸಮಯದಲ್ಲಿ ಮುಖ್ಯವಾಗಿ ನಾನು ಈ ವಿಧೇಯಕದ ಬಗ್ಗೆ ಹೇಳುವುದೇನೆಂದರೆ ಹೈಕೋರ್ಟಿನವರು ಏನು ತೀರ್ಮಾನ ಕೊಟ್ಟಿದ್ದಾರೋ ಅದಕ್ಕೆ ಬೆಲೆ ಇಲ್ಲದಂತೆ ಮಾಡುತ್ತಿದ್ದೀರಿ. ಹೈಕೋರ್ಟಿನ ತೀರ್ಮಾನದ ವಿರುದ್ಧ ಸುಪ್ರೀಂ ಕೋರ್ಟಿಗೆ ಹೋಗಿದ್ದೀರಿ; ಆದರ ತೀರ್ಮಾನ ಏನು ಬರುತ್ತದೆಂಬುದು ಇನ್ನೂ ನಮಗೆ ಗೊತ್ತಿಲ್ಲ, ಆ ಒಂದು ತೀರ್ಪು ಬರುವ ವರೆಗೆ ಎಷ್ಟು ಜನರಿಗೆ ಪರಿಹಾರ ಕೊಡಬೇಕಾಗಿತ್ತೋ, ಎಷ್ಟು ಜನರಿಗೆ ಪ್ರಮೋಷನ್ ಕೊಡಬೇಕಾಗಿತ್ತೋ, ಅದು ಇಲ್ಲದಂತೆ ಮಾಡವುದಕ್ಕೆ ಹೊರಟಿದ್ದೀರಿ ಹಿಂದಿನ ತಾರೀಖಿನಿಂದ ತಮಗೆ ಅರಿಯರ್ಸ್ ಬರಬೇಕೆಂದು ಯೂರು ಯೂರು ಕೋರ್ಟಿನಿಂದ ತೀರ್ಮಾನ ತೆಗೆದುಕೊಂಡು ಬಂದಿದ್ದಾರೋ, ಆ ಒಂದು ಸ್ಥಳದಲ್ಲಿ ಅವರಿಗೆ ಕೇಳಲು ಅವಕಾಶವಿರದಂತೆ ಮಾಡಲು ಈ ವಿಧೇಯಕ ವನ್ನು ತಂದಿದ್ದೀರಿ. ನಿರಾಪಧಿ ಜನರಿಗೆ, ನಾನ್ ಪೊಲೀಟಿಕಲ್ ಜನರಿಗೆ ಇದ ರಿಂದ ಬಾಯಿ ತೆರೆಯದಂತೆ ಆಗಿದೆ ಇಂತಹ ಒಂದು ಕಾನ್‌ಟ್ರವರ್ಸಿಯಲ್ ಬಿಲ್ಲನ್ನು ಮಾನ್ಯ ಮಂತ್ರಿಗಳು ತರಬಾರದಾಗಿತ್ತು. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಒಂದು ಸಲಹೆ ಕೊಡಬೇಕೆಂದಿದ್ದೇನೆ. ನಾನು ಅವರಿಗಿಂತ ಸಣ್ಣ ವಯಸ್ಸಿನವನಾದ್ದರಿಂದ, ನಾನು ಕೊಟ್ಟ ಸಲಹೆಯನ್ನು ಮಾನ್ಯ ಮಂತ್ರಿಗಳು ಸಜೆಷನ್ ಎಂದು ತಿಳಿದುಕೊಳ್ಳಲಿ. ಇಂತಹ ವಿಧೇಯಕವನ್ನು ಸಭೆಯ ಮುಂದೆ ತರುವುದಕ್ಕೆ ಮೊದಲು, ಈ ಸಭೆಯ ಎಲ್ಲ ಪಕ್ಷದ ಸದಸ್ಯರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ನಂತರ ತರುವುದು ಒಳ್ಳೆಯದು. ಹೈದರಾಬಾದ್ ಕರ್ನಾಟಕ ದಿಂದ, ಮದ್ರಾಸ್ ಕರ್ನಾಟಕದಿಂದ, ಮುಂಬೈ ಕರ್ನಾಟಕದಿಂದ ಬಂದಂಥ ಅಧಿಕಾರ ವರ್ಗದವರು ಇದ್ದಾರೆ. ಇವರುಗಳ ಹಣೇಬರಹ ಏನು ಎಂಬುದು ಇನ್ನೂ ತೀರ್ಮಾನವಾಗಿಲ್ಲದಿರುವುದರಿಂದ, ಕಚೇರಿಯ ಕೆಲಸಗಳು ನಡೆಯುವುದು

(ಶ್ರೀ ವಿ. ಎಸ್. ಪಾಟೀಲ್)

ನಿಧಾನವಾಗುತ್ತಿದೆ; ನೋಟ್‌ಗಳನ್ನು ಪ್ರಿಪೇರ್ ಮಾಡುವುದು ನಿಧಾನವಾಗುತ್ತಿದೆ. ವಿಧಾನ ಸೌಧಕ್ಕೆ ಏನಾದರೂ ಟ್ರಂಕಾಲ್ ಬಂದರೆ, ಫೋನ್, ಮೆಸೇಜ್ ಬಂದರೆ ಆಗ ಮಾತ್ರ ಪೇಪರ್‌ಗಳು ಅಲ್ಲಾಡುತ್ತವೆ. ಇಲ್ಲದಿದ್ದರೆ ಪೇಪರ್‌ಗಳು ಮೂವ ಆಗುವುದೇ ಇಲ್ಲ. ನ್ಯಾಯ ಬದ್ಧವಾಗಿ ಎಷ್ಟು ಜನರಿಗೆ ಪ್ರಮೋಷನ್ ಸಿಗಬೇಕಾಗಿತ್ತೋ, ಅದು ಸಿಗದೆ ಗಾಳಿಪಾಲಾಗಿದೆ. ಇದಕ್ಕೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಆ ವಿಚಾರದಲ್ಲಿ ತಾವು ವಿವರಗಳನ್ನು ತರಿಸಿಕೊಂಡು ನೋಡಿ ಈ ಸಭೆಗೆ ಹೇಳಿಕೆ ಕೊಡಿ, ಇಲ್ಲವೇ ನನಗೆ ಪ್ರೈವೇಟಾಗಿ ಕಾಗದ ಬರೆದು ತಿಳಿಸಿ. ಒಟ್ಟಿನಲ್ಲಿ ನ್ಯಾಯ ದೊರಕಿಸಿಕೊಡಿ. ಚಿಟಗುಪ್ಪ ಎಂದು ಸ್ಥಳವಿದೆ. ಅಲ್ಲಿ 14 ವರ್ಷದಿಂದ ಕೆಲಸ ಮಾಡುತ್ತಿರುವ ಒಬ್ಬ ಪ್ಯೂನ್ ಇದ್ದಾನೆ. ಆತನು ತನಗೆ ಪ್ರಮೋಷನ್ ಕೊಡಿ ಇಲ್ಲವೇ ಮಿನಿಮಮ್ ಸಂಬಳವನ್ನಾದರೂ ಕೊಡಿ ಎಂದು ಕೇಳುತ್ತಿದ್ದಾನೆ. ಆದರೆ ಅವನ ಬೇಡಿಕೆ ಇಲ್ಲಿಯವರೆಗೆ ಮೇಲಿನ ಅಧಿಕಾರಿಗಳು ಈಡೇರಿಸಿಕೊಟ್ಟಿಲ್ಲ. ಇಂದಿಗೂ ಸಹ ಕೇವಲ 8 ರೂಪಾಯಿಗಳ ಸಂಬಳ ಪಡೆಯುತ್ತಿದ್ದಾನೆ. ಆತನಿಗೆ ಪ್ರಮೋಷನ್ ಕೊಡಬಾರದೆಂದು ಪಿತೂರಿ ನಡೆಯುತ್ತಿದೆಯೋ ಏನೋ ಗೊತ್ತಿಲ್ಲ. ಮೇಲಿನ ಅಧಿಕಾರಿಗಳ ಪಿತೂರಿಯಿಂದ ಆ ಸಣ್ಣ ವ್ಯಕ್ತಿಗೆ ನ್ಯಾಯ ದೊರೆಯುತ್ತಿಲ್ಲ. ಆತ ಎಲ್ಲಿಯವರೆಗೆ ಈ ಅನ್ಯಾಯವನ್ನು ಸಹಿಸಬೇಕು? ನಾನು ಹೇಳಿದಂಥ ವಿಚಾರ ಕರೆಕ್ಟ್ ಇದ್ದರೆ, ಸಂಬಂಧಪಟ್ಟ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ, ಆ ಅಧಿಕಾರಿಯನ್ನು ಬಜಾರ್‌ಗೆ ಕರೆದುಕೊಂಡು ಬಂದು ಆತನ ತಲೆಯನ್ನು ಬೋಳಿಸಿ.

ಪ್ರತಿಯೊಂದು ಜಿಲ್ಲೆಯಲ್ಲಿಯೂ ಇಂಥಾ ಕೇಸುಗಳು ಸಾವಿರಾರು ಇವೆ. ಈ ವಿಧಾನಸೌಧದ ಬಿಲ್ಡಿಂಗ್‌ನಲ್ಲಿ ಅಂಥಾ 500 ಸಮಸ್ಯೆಗಳು ಇವೆ. ಏಮೋಷನಲ್ ಇಂಟಿಗ್ರೇಷನ್ ಆಯಿತು. ಹೈದರಾಬಾದ್ ಕರ್ನಾಟಕ ಎಂದರೆ ಪ್ರಮೋಷನ್ ಕೊಡುವುದಕ್ಕೆ ಸ್ವಲ್ಪ ಹಿಂದೆ ಸರಿಯುತ್ತಾರೆ. ಸಾಮಾನ್ಯವಾಗಿ ಯಾವ ಅಧಿಕಾರಿಗಳಿಗೆ ಪ್ರಮೋಷನ್ ಕೊಡಬೇಕು ಎಂದು ಜಿ. ಎ. ಡಿ. ಗೆ ಫೈಲ್ ಬಂದರೆ ಅದಕ್ಕೆ ಅಧಿಕಾರಿಗಳು ಸೈನ್ ಹಾಕಿ ಕಳುಹಿಸುವುದು ಕಷ್ಟ. ಪ್ರಮೋಷನ್ ಫೈಲುಗಳಿಗೆ ಸೈನು ಹಾಕಬೇಕಾದರೆ ಕುಲ ಗೋತ್ರ, ಟ್ರೇಡು, ನೆಂಟಸ್ಥನ ಎಲ್ಲಾ ನೋಡುತ್ತಾರೆ. ಈ ಒಂದು ಕಾರಣದಿಂದಲೇ ಎಷ್ಟೋ ಪ್ರಮೋಷನ್‌ಗಳು 7-8 ವರ್ಷಗಳಿಂದ ನಿಂತು ಹೋಗಿವೆ. ಯಾವುದಾದರೂ ಟೆಕ್ನಿಕಲ್ ಡಿಫಿಕಲ್ಟಿ ಇದ್ದರೆ, ಕೇಂದ್ರ ಸರ್ಕಾರದ ಡೈರೆಕ್ಷನ್ ಬೇಕಾಗಿದ್ದರೆ ಅಥವಾ ಜುಡಿಷಿಯಲ್ ಇಂಟರ್‌ಪ್ರಿಟೇಷನ್ ಇದ್ದರೆ ಸ್ವಲ್ಪ ಕಾಲ ತೆಗೆದುಕೊಂಡರೂ ಪರವಾಯಿಲ್ಲ. ಇಂಥಾ ಯಾವುದೇ ಕಾರಣಗಳೂ ಇಲ್ಲದಿದ್ದರೂ ಸಹ ಪ್ರಮೋಷನ್ ಕೊಡುವುದಕ್ಕೆ ವರ್ಷಾನುಗಟ್ಟಲೆ ತಳ್ಳುತ್ತಿದ್ದಾರೆ. ಇದು ಸರಿಯಲ್ಲ. ಮೆಡಿಕಲ್ ಡಿಪಾರ್ಟ್‌

(ಶ್ರೀ ವಿ. ಎಸ್. ಪಾಟೀಲ್)

ಮೆಂಟಿನಲ್ಲಿಯೂ ಸಹ ಇದೇ ರೀತಿ ಕೆಲವು ಅನ್ಯಾಯಗಳು ಆಗಿವೆ. ಯಾವುದೇ ಒಂದು ಪ್ರಮೋಷನ್ ಸಿಕ್ಕಬೇಕಾದರೆ ಮಂತ್ರಿಗಳ ಅಳಿಯನೋ ಸಹೋದರನೋ ಆಗಿದ್ದರೆ ಬೇಗ ಪ್ರಮೋಷನ್ ಸಿಕ್ಕುತ್ತದೆ. ಈ ದೃಷ್ಟಿಯಿಂದ ಯಾವುದೇ ಇಲಾಖೆಯನ್ನು ತೆಗೆದುಕೊಂಡರೂ ಕೂಡ ನ್ಯಾಯವಾಗಿ ಯಾರಿಗೆ ಯಾವ ಕಾಲಕ್ಕೆ ಪ್ರಮೋಷನ್ ಸಿಕ್ಕಬೇಕೋ ಅದು ಸಿಕ್ಕುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ನಿಗಾ ವಹಿಸಬೇಕು. ಮತ್ತು ಆ ಬಗ್ಗೆ ಮಾನ್ಯ ಕಾನೂನು ಶಾಖೆಯ ಮಂತ್ರಿಗಳು ಈ ಸಭೆಯನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಈ ಬಗ್ಗೆ ಒಂದು ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಹೈದರಾಬಾದ್ ಕರ್ನಾಟಕಕ್ಕೆ ಹೈಕೋರ್ಟಿನಲ್ಲಿ ಪ್ರಾತಿನಿಧ್ಯ ಇರಲಿಲ್ಲ. ಈಗ ಯಾರೋ ಒಬ್ಬರನ್ನು ಜುಡಿಷಿಯಲ್ ಆಫೀಸರನ್ನಾಗಿ ಪ್ರಮೋಟ್ ಮಾಡಿದ್ದಾರೆ. ಹೈಕೋರ್ಟಿನಲ್ಲಿ ಕೂಡಾ ಯಾವುದೇ ಒಂದು ಪ್ರಮೋಷನ್ ಕೊಡಬೇಕಾಗಿದ್ದರೂ ಕೂಡ ಕ್ಯಾಸ್ಟ್, ಕ್ರೀಡ್ ಎಲ್ಲವನ್ನು ನೋಡುತ್ತಾರೆ. ಇಂಥಾ ಒಂದು ಪರಿಸ್ಥಿತಿ ಇರುವಾಗ ಈ ಒಂದು ನಿರಾಶಾದಾಯಕವಾದ ಬಿಲ್ಲನ್ನು ಈ ಸಭೆಯ ಮುಂದೆ ತಂದಿದ್ದಾರೆ. ಇದು ಸಮರ್ಪಕವಾಗಿಲ್ಲ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ ಅಲ್ಲಿ ಇದನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಅವರು ಈ ಸಭೆಗೆ ವರದಿ ಮಾಡಿದ ಮೇಲೆ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದು ಈ ಬಿಲ್ಲಿನ ಮೆರಿಟ್ ಮತ್ತು ಡೀಮೆರಿಟ್ ಬಗ್ಗೆ ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಇದನ್ನು ಈಗ ತಂದಿರುವ ರೀತಿಯಲ್ಲಿಯೇ ಪಾಸು ಮಾಡುವುದಾದರೆ ಸಾರ್ವಜನಿಕರಿಂದ ಹೆಚ್ಚು ಟೀಕೆಗೆ ಗುರಿಯಾಗಬೇಕಾಗುತ್ತದೆ ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತೇನೆ. ಇದಕ್ಕೆ ಒಂದು ಪ್ರೆಸ್ಟೀಜ್ ಇಷ್ಯೂ ತರಬೇಡಿ. ಇದರಿಂದ ಅನೇಕ ನೌಕರರಿಗೆ ತೊಂದರೆಯಾಗುತ್ತದೆ. ಎಂದು ನಾನು ಹೇಳುತ್ತೇನೆ.

ಮೈಸೂರು ಅಪೆಲೇಟ್ ಟ್ರಿಬ್ಯುನಲ್‌ನಲ್ಲಿ ಒಬ್ಬ ವ್ಯಕ್ತಿಗೆ ಪ್ರಮೋಷನ್ ಆಯಿತು. ಆ ಬಗ್ಗೆ ಸಂಬಂಧಪಟ್ಟ ಫೈಲು ಸೆಕ್ರೆಟೇರಿಯಟ್‌ಗೆ ಲಾ ಡಿಪಾರ್ಟ್‌ಮೆಂಟಿಗೆ ಬಂದು $4\frac{1}{2}$ ವರ್ಷವಾಯಿತು. ಇನ್ನೂ ಅದು ತೀರ್ಮಾನವಾಗಿಲ್ಲ. ಇವೊತ್ತು ಯಾವುದೇ ಒಬ್ಬ ನೌಕರನಾಗಲೀ ಕಷ್ಟಪಟ್ಟು ಬೆವರು ಸುರಿಸಿ ಕೆಲಸ ಮಾಡಬೇಕಾಗುತ್ತದೆ. ಹೀಗಿರುವಾಗ ಅವರಿಗೆ ಆಗತಕ್ಕಂಥಾ ಅನ್ಯಾಯವನ್ನು ಹೋಗಲಾಡಿಸಬೇಕು. ಯಾರು ಅವರ ಪ್ರಮೋಷನ್ ಬಗ್ಗೆ ಅಡ್ಡಿ ಬರುತ್ತಾರೆ ಅಂಥಾ ಹೆಗ್ಗಣಗಳನ್ನು ಬಲಿ ಹಾಕಬೇಕು. ಅಂಥವರಿಗೆ ಬೆಂಬಲ ಕೊಡಬಾರದು. ಇವೊತ್ತು ಸಿವಿಲ್ ಸರ್ವೆಂಟ್‌ಗಳಲ್ಲಿ ಡಿಸ್‌ಕಂಟೆಂಟ್‌ಮೆಂಟ್ ಇದ್ದುದರಿಂದ ಉತ್ತರ ಪ್ರದೇಶದಲ್ಲಿ ಸಶಸ್ತ್ರ ಪೋಲೀಸಿನವರಿಗೂ ಮತ್ತು

(ಶ್ರೀ ವಿ. ಎಸ್. ಪಾಟೀಲ್)

ಸೈನಿಕರಿಗೂ ನಡೆದಂತಹ ಗಲಭೆಯಲ್ಲಿ ಸುಮಾರು 28 ಪ್ರಾಣಗಳು ಹೋಗಿವೆ ಎಂದು ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ ಸರ್ಕಾರದ ಮೆಷನರಿ ಏನಿದೆ ಅದು ಸುಲಲಿತವಾಗಿ ನಡೆಯಬೇಕಾಗಿದ್ದರೆ ಪ್ರಗತಿಪರವಾದ ಕಾನೂನು ಕಾಯಿದೆಯನ್ನು ತರಬೇಕಾಗುತ್ತದೆ. ಯಾವುದೇ ಒಂದು ಪ್ರಮೋಷನ್ನಿಗೆ ಸಂಬಂಧಪಟ್ಟ ಫೈಲು ಬೇಗ ಮೂವ್ ಆಗುವುದಿಲ್ಲ. ಇಂಥಾದ್ದರ ಕಡೆಗೆ ಮಾನ್ಯ ಮಂತ್ರಿಗಳು ಗಮನಿಸಿ ನ್ಯಾಯವಾಗಿ ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅವರಿಗೆ ಪ್ರಮೋಷನ್ ಕೊಟ್ಟು ಅವರಿಗೆ ಸೋಷಿಯಲ್ ಜಸ್ಟೀಸ್ ಸಿಕ್ಕುವಂತೆ ಮಾಡಬೇಕು. ಬೀದರ್‌ನಲ್ಲಿ ಒಬ್ಬರು ಉಪಾಧ್ಯಾಯರಿಗೆ ನ್ಯಾಯವಾಗಿ ಪ್ರಮೋಷನ್ ಸಿಕ್ಕಬೇಕಾಗಿರುವುದು ಸಿಕ್ಕಿಲ್ಲ. ಮಾನ್ಯ ಕಾನೂನು ಶಾಖೆಯ ಮಂತ್ರಿಗಳು ಸ್ವಲ್ಪ ಧೈರ್ಯ ಮಾಡಿ ತಮ್ಮ ಸುತ್ತುಮುತ್ತು ಇರತಕ್ಕವರ ಬಲೆಗೆ ಬೀಳದೆ, ಅವರ ಮಾತುಗಳಿಗೆ ಕಿವಿಗೊಡದೆ ಬೇಗ ಪ್ರಮೋಷನ್ ಫೈಲಿಗೆ ಸೈನು ಮಾಡುವಂತೆ ಮಾಡಬೇಕು. ಕಾಯಿದೆ ಪ್ರಕಾರ ರೂಲ್ಸ್ ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅದು ಸಿಕ್ಕುವಂತೆ ವ್ಯವಸ್ಥೆ ಮಾಡಿ. ಆ ಬಗ್ಗೆ ಯಾವ ಎಂ. ಎಲ್. ಎ. ಹೇಳಿದರೂ ತಾವು ತಲೆಬಾಗಬೇಡಿ. ಯಾವುದೇ ಒಂದು ಒಳ್ಳೆಯ ಕೆಲಸವನ್ನು ಮಾಡಿ ಜನಗಳ ವಿಶ್ವಾಸವನ್ನು ಪಡೆದುಕೊಳ್ಳಿ. ಈಗ ಈ ಬಿಲ್ಲನ್ನು ಯಾವ ಫಾರಂನಲ್ಲಿ ತಂದಿದ್ದೀರೋ ಅದು ಸರಿಯಾಗಿಲ್ಲ. ಇದನ್ನು ಸ್ವಾಗತ ಮಾಡುವವರು ಒಬ್ಬರೂ ಸಿಕ್ಕುವುದಿಲ್ಲ. ಈ ಬಿಲ್ಲನ್ನು ಮತ್ತೊಂದು ಫಾರಂನಲ್ಲಿ ತರಬೇಕಾಗುತ್ತದೆ. ಈ ಮಸೂದೆಯನ್ನು ವಿರೋಧಪಕ್ಷದಲ್ಲಿ ಸಹ ಯಾರೂ ಸ್ವಾಗತ ಮಾಡುವುದಿಲ್ಲ. ಅದ್ದರಿಂದ ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ತಾವು ಪ್ರೆಸ್ಟೀಜ್ ಇಷ್ಯೂ ಎಂದು ತಿಳಿದುಕೊಳ್ಳಬಾರದು. ಆದ್ದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ) :—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಸ್ವಾಗತ ಮಾಡುತ್ತಾ, ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ಯಾರು ಕೆಲಸ ಮಾಡಲಿಲ್ಲವೋ, ಅವರಿಗೆ ಸಂಬಳ ಕೊಡಕೂಡದು ಎಂದು ಇದೆ. ಇದು ನ್ಯಾಚುರಲ್ ಜಸ್ಟಿಸ್ ಮತ್ತು ಇಕ್ವಿಟಿ (natural Justice and equity) ಗನುಗುಣವಾಗಿದೆ. 1956ನೇ ಇಸವಿಯಲ್ಲಿ ಸ್ಟೇಟ್ ರೀಆರ್ಗನೈಸೇಶನ್ ಆಯಿತು. ಆ ಕಾಲದಲ್ಲಿ ಬಾಂಬೆ ಕರ್ನಾಟಕದಿಂದ, ಮದ್ರಾಸ್ ಕರ್ನಾಟಕದಿಂದ ಮತ್ತು ಹೈದರಾಬಾದ್ ಕರ್ನಾಟಕದಿಂದ, ಕೆಲವು ಪ್ರದೇಶಗಳು ಬಂದು ಮೈಸೂರು ರಾಜ್ಯದೊಂದಿಗೆ ಸೇರಿಕೊಂಡಿತು. ಆಗ 43 ಇಲಾಖೆಗಳು ಇದ್ದವು. ಆದರೆ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ

(ಶ್ರೀ ಕೆ. ಎಂ. ರುದ್ರಪ್ಪ)

ಸಂಬಳ ಸಾರಿಗೆಗಳು ಇದ್ದವು. ಅವುಗಳೆಲ್ಲವನ್ನು ಈಕ್ವೇಟ್ ಮಾಡಬೇಕಾಗಿತ್ತು. ಒಂದು ಪ್ರೊವಿಜನಲ್ ಲಿಸ್ಟ್ ಆದ ಮೇಲೆ ಫೈನಲ್ ಲಿಸ್ಟ್ ಮಾಡುವುದು ನಮ್ಮ ಸರ್ಕಾರದ ಕೈಯಲ್ಲಿ ಇಲ್ಲ. ಅದು ಕೇಂದ್ರ ಸರ್ಕಾರದ ಕೈಯಲ್ಲಿ ಇದೆ. ಅದಕ್ಕೆ ಯು. ಪಿ. ಎಸ್. ಸಿ. ಯ ಅಧ್ಯಕ್ಷರು ಇರತಕ್ಕಂತಹ ಒಂದು ಸಮಿತಿ ಇದೆ. ಅವರಲ್ಲಿ ಯೂನಿಯನ್ ಲಾ ಸೆಕ್ರೆಟರಿಯವರು ಸಹ ಇದ್ದಾರೆ. ಆದ್ದರಿಂದ ಇದ ರಲ್ಲಿ ಏನಾದರೂ ಲೋಪದೋಷಗಳು ಇದ್ದರೆ, ಅದು ಆಗ ಆಗಿರಬಹುದು. ಆದರೆ ಅದು ನಮ್ಮ ರಾಜ್ಯ ಸರ್ಕಾರದ ಕೈಯಲ್ಲಿ ಇರಲಿಲ್ಲ. ಕೋರ್ಟಿನಲ್ಲಿ ಕೆಲವು ಸಂದರ್ಭಗಳಲ್ಲಿ ಕೆಲಸ ಮಾಡದಿದ್ದರೂ ಸಹ ಸಂಬಳ ಕೊಡಿ ಎಂದು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಈ ಬಿಲ್ಲಿಗೆ ಸಪೋರ್ಟು ಆಗುವ ಹಾಗೆ ಎರಡು ಸುಪ್ರೀಂ ಕೋರ್ಟು ಡಿಸಿಶನ್ಸ್ ಬಂದಿವೆ. ಅದು ಈ ಮಸೂದೆಗೆ ಬೆಂಬಲ ಕೊಡುತ್ತದೆ. ಮಾನ್ಯ ಸದಸ್ಯರಿಂದ ಕೃಷ್ಣನ್‌ರವರು ಅದು ಇದಕ್ಕೆ ಸಂಬಂಧವಿಲ್ಲವೆಂದು ಹೇಳುತ್ತಿದ್ದಾರೆ. ನಾನು ಹೇಳುವುದು, ಆದರೆ ಪ್ರಿನ್ಸಿಪಲ್ ಒಂದೇ ಆಗಿರುವುದು ಅದರಲ್ಲಿ ಇದೆ. ಆದ್ದರಿಂದ ಆ ಡಿಸಿಶನ್ ಈ ಮಸೂದೆಗೆ ಬಹಳ ಸಹಾಯಕವಾಗಿದೆ. ನಮ್ಮ ಸರ್ಕಾರದ ವರಮಾನದಲ್ಲಿ ಶೇಕಡಾ 40 ಭಾಗ ಸರ್ಕಾರೀ ಅಧಿಕಾರಿಗಳ ಸಂಬಳಕ್ಕಾಗಿ ಹೋಗುತ್ತಿದೆ. ನಾವು ಎರಡೂ ವರೆ ಪರ್‌ಸೆಂಟ್ ಇರತಕ್ಕಂತಹ ಜನಸಂಖ್ಯೆಗೆ ಇಷ್ಟು ಹಣವನ್ನು ಖರ್ಚು ಮಾಡು ತ್ತಿದ್ದೇವೆ. ಆದರೂ ಹೈಕೋರ್ಟಿನಲ್ಲಿ ರಿಟ್ರಾಸ್ಪೆಕ್ಟಿವ್ ಪ್ರೋಮೋಶನ್ ಕೊಡು ವುದನ್ನು ನಿಲ್ಲಿಸಿ ಎಂದು ಏನೂ ಬಿಲ್ಲಿನಲ್ಲಿ ಹೇಳಿಲ್ಲ. ಕೇವಲ ಸಂಬಳ ಕೊಡಬೇಡಿ ಎಂದು ಮಾತ್ರ ಹೇಳುತ್ತಿದ್ದಾರೆ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಾಗತ ಮಾಡಬೇಕಾಗಿತ್ತು. ಅವರು ಹಳ್ಳಿಗಾಡಿನಿಂದ ಬಂದವರು. ಯಾವುದೋ ಕಾರಣಕ್ಕೋಸ್ಕರ ಇದನ್ನು ವಿರೋಧ ಮಾಡುತ್ತಿರುವುದು ವಿಷಾದನೀಯ. ಅವರು ಇದರಿಂದ ಸುಪ್ರಿಮೆಸಿ ಅಫ್‌ಲಾ ಮತ್ತು ರೂಲ್‌ಅಫ್ ಲಾ ಕ್ಕೆ ಧಕ್ಕೆ ಬಂದಿದೆ ಎಂದು ಹೇಳುತ್ತಿದ್ದಾರೆ. ಅಂಥ ಧಕ್ಕೆ ಇದರಿಂದ ಏನೂ ಬಂದಿಲ್ಲ. ಯಾವ ದೃಷ್ಟಿ ಯಿಂದ ನೋಡಿದರೂ ಇದು ಸರಿಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಚಾರವೇನೆಂದರೆ, ಸರ್ಕಾರೀ ಅಧಿಕಾರಿಗಳು ಕೋರ್ಟಿಗೆ ಹೋಗಿ ನ್ಯಾಯ ದೊರಕಿಸಿಕೊಳ್ಳುವುದನ್ನು ತಪ್ಪಿಸಿದ್ದಾರೆಂದು ಕೆಲವರು ಹೇಳಿದರು. ಇದು ಹಾಗೇನೂ ಇಲ್ಲ. ಅವರು ಕೆಲಸ ಮಾಡಿಲ್ಲ, ಅದಕ್ಕೆ ಸಂಬಳ ಕೊಡುವುದಿಲ್ಲ ವೆಂದು ಹೇಳುತ್ತಿದ್ದಾರೆ, ಅಷ್ಟೆ ಗಝೆಟೆಡ್ ಪೋಸ್ಟುಗಳ ಬಗ್ಗೆ ಕೇಂದ್ರಸರ್ಕಾರ ತೀರ್ಮಾನ ಕೊಟ್ಟಿದ್ದಾರೆ. ಇನ್ನು ಎನ್. ಜಿ. ಓ ಬಗ್ಗೆ, ಡೆಪ್ಯೂಟಿ ತಾಹಸೀ ಲ್ದಾರರ ಬಗ್ಗೆ ಮತ್ತು ರೆವೆನ್ಯೂ ಇನ್ಸ್‌ಪೆಕ್ಟರುಗಳ ಬಗ್ಗೆ, ಸೀನಿಯಾರಿಟಿ ಲಿಸ್ಟ್ ಪೆಂಡಿಂಗ್ ಇದೆ(ಅದ್ದರಿಂದ ಅದನ್ನು ಇನ್ನು ಮುಂದೆ ಸರಿಯಾಗಿ ಮಾಡಿ, ನ್ಯಾಯವನ್ನು ಅವರಿಗೆ ದೊರಕಿಸಿಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ

(ಶ್ರೀ ಕೆ. ಎಂ. ರುದ್ರಪ್ಪ)

ಕೇಡರ್,ಅಂಡ್ ರೆಕ್ರುಟ್‌ಮೆಂಟ್ ರೂಲ್ಸನ್ನು ಸರಿಯಾದ ರೀತಿಯಲ್ಲಿ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಸಚಿವರು ಹೆಚ್ಚಿನ ಮುತುವರ್ಜಿ ವಹಿಸಿಕೊಂಡು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಿಲ್ಲನ್ನು ತಾರದೆ ಹೋದರೆ ಕೆಲಸ ಮಾಡದಿದ್ದರೂ ಸಂಬಳ ಕೊಡಿ ಎಂದು ಹೇಳಿದ ಹಾಗೆ ಆಗುತ್ತದೆ. ಬಡವರ ಹಿತರಕ್ಷಣೆ ಮಾಡಬೇಕೆಂದು ನಮ್ಮ ಉದ್ದೇಶ ಇರುವಾಗ ಇಂಥ ಕಾನೂನುಗಳನ್ನು ನಾವು ತರಬೇಕಾಗುತ್ತದೆ ಆದ್ದರಿಂದ ನಾನು ಇದನ್ನು ಸಂಪೂರ್ಣವಾಗಿ ಸ್ವಾಗತ ಮಾಡಿ, ಇದಕ್ಕೆ ಬೆಂಬಲ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ) ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದಿರುವ ಬಿಲ್ಲನ್ನು ಸ್ವಾಗತ ಮಾಡುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಮಿತ್ರರಾದ ಚಂದ್ರಶೇಖರವರು ಹೇಳಿದಂತೆ ವಿರೋಧ ಪಕ್ಷದವರು ಯಾವ ಒಂದು ಆಧಾರವಿಲ್ಲದೆ ಇದನ್ನು ಅಪೋಸ್ ಮಾಡುತ್ತಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತಿದೆ. ನ್ಯಾಯ ಇರಲಿ, ನೀತಿ ಇರಲಿ ಅವರು ವಿರೋಧ ಮಾಡಿಯೇ ಮಾಡುತ್ತಾರೆ. ಇವತ್ತು ರಾಜ್ಯದ ಬೊಕ್ಕಸದಿಂದ ಹಣ ಕೊಡಬೇಕಾದ ಸಂದರ್ಭದಲ್ಲಿ ಇದನ್ನು ತಡೆಗಟ್ಟದಿದ್ದರೆ, ಯಾವ ರೀತಿ ಸಮಾಜವಾದವನ್ನು ತರುವುದಕ್ಕೆ ಸಾಧ್ಯವಿದೆ ಎಂದು ಯೋಚನೆ ಮಾಡಬೇಕು. ಸರಕಾರದವರು ಇವತ್ತು ತಂದಿರತಕ್ಕಂತಹ ಬಿಲ್ಲು ಅಭಿನಂದನೀಯವಾದುದು. ನಮ್ಮ ರಾಜ್ಯ ಎಂಥ ದುಸ್ಥಿತಿಯಲ್ಲಿದೆ ಎಂದು ಎಲ್ಲರಿಗೂ ಗೊತ್ತಿದೆ. ಇವತ್ತು ಮಳೆಯಿಲ್ಲದೆ ಬೆಳೆಯಿಲ್ಲದೆ ಕ್ಷಾಮ ಬಂದು ಪರಿಸ್ಥಿತಿ ಗಂಭೀರವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಹಣಕಾಸಿನ ವಿಚಾರವನ್ನು ನಾವು ನೋಡದೆ ಇದನ್ನು ಅಪೋಸ್ ಮಾಡುವುದು ಬಹಳ ವ್ಯಸನಕರವಾದ ಸಂಗತಿ. ಇಂಥ ಮಹತ್ವವಾದ ಮಸೂದೆಗೆ ಅವರು ಪ್ರೋತ್ಸಾಹ ಕೊಡಬೇಕಾಗಿತ್ತು. ಎರಡನೆಯದು ಏನೆಂದರೆ, ನಮ್ಮ ಮೈಸೂರು ದೇಶ ಹರಿದು ಹಂಚಿಹೋಗಿದ್ದದ್ದು ಈಗ ಒಂದಾಗಿದೆ. ಬಾಂಬೆ, ಮದ್ರಾಸ್, ಹೈದರಾಬಾದಿಗೆ ಸೇರಿದ್ದಂತಹ ಪ್ರದೇಶಗಳು ಈಗ ನಮ್ಮಲ್ಲಿ ಸೇರಿಕೊಂಡಿವೆ. ಅಂದರೆ ಈ 5 ಪ್ರದೇಶಗಳಲ್ಲಿ ಯಾವ ಒಂದು ರೂಲ್ಸ್ ಆಂಡ್ ರೆಗ್ಯುಲೇಶನ್ಸ್ ಇತ್ತು ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಿದರೆ, ಈ ವಿರೋಧಕ್ಕೆ ಅವಕಾಶ ಇರುತ್ತಿರಲಿಲ್ಲವೆಂದು ಕಾಣುತ್ತದೆ. ಈ ರೀತಿ ಅನೇಕ ತರದ ರೂಲ್ಸ್‌ಗಳಿರುವುದರಿಂದ ತೊಂದರೆಯಾಗಿದೆ, ಅದನ್ನು ಸರಿಪಡಿಸುವುದಕ್ಕೋಸ್ಕರ ಈ ಬಿಲ್ಲನ್ನು ತಂದಿದ್ದಾರೆ

3-00 P.M.

ಆದರೆ ಇದರ ವಿಚಾರದಲ್ಲಿ ಸರ್ಕಾರದವರು ಕೂಡ ಒಂದು ತಪ್ಪನ್ನು ಮಾಡಿದ್ದಾರೆಂದು ತೋರಿಸಬಹುದು. ರಾಜ್ಯಗಳ ಪುನರ್ವಿಂಗಡಣೆಯಾಗಿ ಇಲ್ಲಿಗೆ

(ಶ್ರೀ ಬಿ. ಇ. ರಾಮಯ್ಯ)

17-18 ವರ್ಷಗಳಾಯಿತು. ಆದಾಗ್ಯೂ ರಾಜ್ಯದ ಎಲ್ಲಾ ಭಾಗಗಳಿಗೂ ಸಂಬಂಧ ಪಟ್ಟಹಾಗೆ ಒಂದು ಯೂನಿಫಾರಂ ರೂಲ್ಸ್‌ನ್ನು ಇಲ್ಲಿಯವರೆಗೂ ಜಾರಿಗೆ ತರದಿರು ವುದು ಒಂದು ಬಹಳ ವ್ಯಸನಕರವಾದ ವಿಷಯ. ಒಂದೊಂದು ಇಲಾಖೆಗೂ ಇರ ಬೇಕಾದ ಒಂದು ಸೀನಿಯಾರ್ಟಿ ಲಿಸ್ಟ್ ಇನ್ನೂವರೆಗೂ ಫೈನಲೈಜಾಗಲಿಲ್ಲ ಎಂದರೆ ಏನು ಹೇಳಬೇಕು? ಇದರಿಂದಲೇ ಈ ಒಂದು ಗೊಂದಲ. ಎಲ್ಲಾ ಇಲಾಖೆಗಳಲ್ಲೂ ಏಳುವುದಕ್ಕೆ ಮುಖ್ಯ ಕಾರಣ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು, ಈ ಅಧಿಕಾರಿಗಳ ವರ್ಗಾವರ್ಗಿ ವಿಚಾರದಲ್ಲಿ ಅಥವಾ ಬಡ್ತಿ ದೊರೆಯ ತಕ್ಕ ವಿಚಾರದಲ್ಲಿ ರಾಜಕೀಯ ಪಕ್ಷಗಳವರ ವಸೀಲಬಾಜಿ ನಡೆಯಬಾರದು ಎಂದು. ನಿಜ, ಇದಕ್ಕೆ ಯಾರೇ ಪ್ರೋತ್ಸಾಹ ಕೊಟ್ಟರೂ ಅದು ತಪ್ಪಾಗುತ್ತದೆ. ಆದರೆ ಸರ್ಕಾರಕ್ಕೂ ಕೂಡ ಈ ದಿವಸ ಈ ಒಂದು ರಾಜಕಾರಣಿಗಳ ಇನ್‌ಫ್ಲುಯೆನ್ಸನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆಗೆ ಹೇಳುವುದಾದರೆ ತಾ: 1-10-1953 ರಲ್ಲಿ ನಮ್ಮ ಬಳ್ಳಾರಿ ಜಿಲ್ಲೆ ಅಖಿಲ ಕರ್ನಾಟಕಕ್ಕೆ ಒಂದು ನಾಂದಿಯಾಗಿ ಮೈಸೂರು ರಾಜ್ಯಕ್ಕೆ ಸೇರಿತು. ಆದರೆ ಈ ದಿವಸ ನಮ್ಮ ಜಿಲ್ಲೆಯ ನೌಕರರ ಪರಿಸ್ಥಿತಿ ಅತ್ತಲಾಗಿ ಗಂಡೂ ಅಲ್ಲ ಇತ್ತಲಾಗಿ ಹೆಣ್ಣೂ ಅಲ್ಲ ಅನ್ನುವಂತಾಗಿದೆ. ಒಬ್ಬರು ಹೇಳುತ್ತಾರೆ ನಮ್ಮ ಬಳ್ಳಾರಿ ಜಿಲ್ಲೆ ಹೊಸಪಟ್ಟಿಯಲ್ಲಿ ಸಿನಿಯಾರ್ಟಿ ತೋರಿಸ ಬೇಕು ಎಂದು, ಆದರೆ ಆ ನೌಕರರು ಹೇಳುತ್ತಾರೆ ಅವರ ಹೆಸರುಗಳನ್ನು ಹಳೇ ಸೀನಿಯೊರ್ಟಿ ಪಟ್ಟಿಯಲ್ಲಿ ಸೇರಿಸಬೇಕು ಎಂದು. ಅಂತೂ ಈ ಗೊಂದಲ ಇನ್ನೂ ತಪ್ಪಲಿಲ್ಲ. ಅದಕ್ಕಾಗೇ ಈಗ ಈ ಮಸೂದೆಯಲ್ಲಿ ಹೇಳಿದಂತೆ ಈ ಗೊಂದಲ ದೆಶೆಯಿಂದ 4-5 ಕೋಟಿ ಹಣವನ್ನು ಸರ್ಕಾರದವರು ವಿನಾಕಾರಣ ಚೆಲ್ಲಬೇಕಾ ಗಿವೆ ಈ ದಿವಸ ಈ ಇಲಾಖೆಗಳಲ್ಲಿ ಮೊಖ್ತೇಸರರು ತಮ್ಮ ಖುಷಿ ಬಂದಹಾಗೆ ಪ್ರಮೋಷನ್‌ಗಳನ್ನು ಕೊಡುತ್ತಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಇರ ತಕ್ಕ ಒಂದೇ ಮಾರ್ಗ ಒಂದು ನಿರ್ದಿಷ್ಟವಾದ ಸೀನಿಯೊರ್ಟಿ ಪಟ್ಟಿಯನ್ನು ಮಾಡುವುದು. ಅದನ್ನು ಮಾಡದೆ ಏಕೆ ಕೈಬಿಟ್ಟಿದ್ದಾರೋ ತಿಳಿಯುವುದಿಲ್ಲ. ಈಗಲಾದರೂ ಇದನ್ನು ಕೂಡಲೆ ಮಾಡಬೇಕೆಂದು ಹೇಳುತ್ತೇನೆ. ಈ ದಿವಸ ಇಲಾಖೆಗಳಲ್ಲೆಲ್ಲಾ ದೊಡ್ಡದಾದ ರೆವಿನ್ಯೂ ಇಲಾಖೆಯಲ್ಲಿ ಒಂದು ನಿರ್ದಿಷ್ಟವಾದ ಸೀನಿಯಾರ್ಟಿ ಲಿಸ್ಟಿಲ್ಲ. ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಯಾರಿಗೆ ಯಾವಾಗ ಬಡ್ತಿ ಸಿಗುತ್ತೆ ಎಂಬುದು ತಿಳಿಯುವುದಕ್ಕಾಗಿಲ್ಲ ಅಲ್ಲಿ ಕೆಲಸ ಮಾಡತಕ್ಕ ಜನ ರೆಲ್ಲಾ ಬಹಳ ಜಿಗುಪ್ಸೆಯಿಂದ ಕೂಡಿದ್ದಾರೆ. ಆಫೀಸುಗಳಲ್ಲಿ ನಡಯಬೇಕಾದ ಕೆಲಸ ಕಾರ್ಯಗಳು ಸಕಾಲಕ್ಕೆ ನಡೆಯುತ್ತಿಲ್ಲ. ಇನ್ನಾದರೂ ಸರ್ಕಾರದವರು ಒಂದು ನಿರ್ದಿಷ್ಟವಾದ ಅವಧಿಯೊಳಗೆ ಇದನ್ನು ಮಾಡುವುದಾಗಿ ಭರವಸೆ ಕೊಡ ಬೇಕಾದ್ದು ಅತ್ಯಗತ್ಯ.

(ಶ್ರೀ ಬಿ. ಇ. ರಾಮಯ್ಯ)

ಇನ್ನು ಈ ದಿವಸ ಸರ್ಕಾರದವರು ಮಾಡತಕ್ಕ ಅವಿವೇಕ ಏನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕರಣೀಕರ ಜಾಗದಲ್ಲಿ ವಿಲೇಜ್ ಅಕೌಂಟೆಂಟ್ ಗಳನ್ನು ನೇಮಕ ಮಾಡಿದ್ದಾರೆ. ಆದರೆ ಈ ದಿವಸ ಈ ಎರಡು ವರ್ಗದವರು ಕೆಲಸ ಮಾಡುತ್ತಿದ್ದಾರೆ. ಪ್ರತಿಯೊಬ್ಬರಿಗೂ 200 ರೂಪಾಯಿ ಸಂಬಳ ಅಂದರೆ ಏನಾಯಿತು ? ಇದರಲ್ಲೂ ಕೂಡ ವಸೀಲಬಾಜಿ ಕೆಲಸಕ್ಕೆ ಸರ್ಕಾರದವರು ಬಗ್ಗಿದ್ದಾರೆಂದು ಹೇಳಬಹುದು. ಈ ಹಣವನ್ನು ಉಳಿಸಿದ್ದರೆ ಬೇರೆ ಜನೋಪ ಕಾರದ ಕೆಲಸಗಳಿಗೆ ಬಳಸುವುದಕ್ಕೆ ಸಾಧ್ಯವಾಗುತ್ತಿತ್ತು. ಅದನ್ನು ತಪ್ಪಿಸದೆ ಒಂದು ಕೆಲಸಕ್ಕೆ ಇಬ್ಬರಿಗೆ ಸಂಬಳ ಕೊಡುತ್ತಿದ್ದಾರೆ ಸರ್ಕಾರದವರು ಅದಷ್ಟು ಜಾಗ್ರತೆ ಇಂಥದನ್ನು ತಡೆಗಟ್ಟಬೇಕು. ಇದನ್ನು ಮುಂದುವರಿಸಿ ದರೆ ಖಜಾನೆಯು ಲೂಟಿಯಾಗಿ ಹೋಗುತ್ತದೆ. ಈ ದಿವಸ ಸರ್ಕಾರದಲ್ಲಿ ವಿನಾ ಕಾರಣ ಸಿಬ್ಬಂದಿಯನ್ನು ಹೆಚ್ಚುಮಾಡಲಾಗಿದೆ. ಆದರೆ ಜನರಿಗೆ ಇದರಿಂದ ಆದ ಪ್ರಯೋಜನವೇನು ? ಒಬ್ಬ ಮಂತ್ರಿಗಳಿಗೆ ಒಂದು ಪೆಟಿಶನ್ ಕೊಟ್ಟರೆ 8 ದಿನ ಕಳೆದರೂ ಆ ಕಾಗದಗಳು ಒಂದು ರೂಮಿನಿಂದ ಇನ್ನೊಂದು ರೂಮಿಗೆ ಸಾಗುವು ದಿಲ್ಲ. ಆ ರೂಮುಗಳಾದರೋ ಒಂದರ ಪಕ್ಕದಲ್ಲಿ ಒಂದಿದ್ದರೂ ಇಷ್ಟೇಕೆ ನಿಧಾನ ? ಇದರಿಂದ ಏನು ಗೊತ್ತಾಗುತ್ತದೆ ಎಂದರೆ ಅಡ್ಮಿನಿಷ್ಟ್ರೇಷನ್ನಿನಲ್ಲಿ ಅದಕ್ಷತೆ ಹೆಚ್ಚಿದೆ ಎಂಬುದನ್ನು ತೋರಿಸುತ್ತದೆ. ಇಂಥ ವಿಳಂಬವನ್ನು ತಡೆಗಟ್ಟಲು ಜನರು ದೂರಪ್ರ ದೇಶಗಳಿಂದ ಈ ಬೆಂಗಳೂರಿಗೆ ದುಡ್ಡನ್ನು ಖರ್ಚು ಮಾಡಿಕೊಂಡು ಬರುವುದಕ್ಕೆ ಸಾಧ್ಯವೇ ? ಹಿಂದೆ 1957-58ರಲ್ಲಿ ಈ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸುವು ದಕ್ಕೆ ಮತ್ತು ಆಡಳಿತದಲ್ಲಿ ಮಿತವ್ಯಯವನ್ನು ತೋರಿಸುವುದಕ್ಕಾಗಿ ಒಂದು ಸಮಿತಿಯನ್ನು ಗೋರ್ವಲಾ ಅವರ ನೇತೃತ್ವದಲ್ಲಿ ಮಾಡಲಾಯಿತು. ಈಗಲಾದರೂ ಒಂದು ಎಕ್ಸ್‌ಪರ್ಟ್ ಕಮಿಟಿ ನೇಮಿಸಿ ಯಾವ ಇಲಾಖೆಗೆ ಎಷ್ಟು ಅಧಿಕಾರಿಗಳು, ಜವಾನರು ಮುಂತಾದವರು ಬೇಕು ಎಂದು ಪರಿಶೀಲಿಸಿ ಯೂನಿಫಾರಂ ಆದ ಒಂದು ವ್ಯವಸ್ಥೆ ಮಾಡಬೇಕು. ಉದಾಹರಣೆಗೆ ಈಗ 19–20 ಡಿ ಸಿ ಗಳಿದ್ದಾರೆ, ಒಂದು ಡಿ ಸಿ ಆಫೀಸಿನಲ್ಲಿ ಕಡಿಮೆ ಅಧಿಕಾರಿಗಳಿರ ಬಹುದು, ಇನ್ನೊಂದು ಕಡೆ ಜಾಸ್ತಿ ಸಿಬ್ಬಂದಿ ಇರಬಹುದು ಇದನ್ನು ನೋಡಿ ಒಂದು ಯೂನಿಫಾರ್ಮಿಟಿ ಇರುವಂತೆ ವ್ಯವಸ್ಥೆ ಮಾಡಬೇಕು. ಇದರಿಂದ ಹಣಕಾಸೂ ಉಳಿತಾಯವಾಗುವುದು. ಶೇಕಡ 40-50 ರಷ್ಟು ರಾಜ್ಯದ ಆದಾಯ ವನ್ನು ಶೇಕಡ ಎರಡೂವರೆಯಷ್ಟಿರುವ ಅಧಿಕಾರಿಗಳಿಗೆ ಕೊಡುತ್ತಿದ್ದಾರೆ ಎಂದು ರುದ್ರಪ್ಪನವರು ಹೇಳಿದರು ಇದನ್ನು ಗಮನಿಸಬೇಕು. ರಾಜ್ಯದ ಪರಿಸ್ಥಿತಿ ಹದಗೆಟ್ಟಿದೆ. ಇದನ್ನೆಲ್ಲಾ ಗಮನಿಸಿ ಒಂದು ಸಮಿತಿ ಮಾಡಿ ಸರಿಪಡಿಸಬೇಕೆಂದು ಸೂಚಿಸಿ ಈ ಬಿಲ್ಲನ್ನು ಸ್ವಾಗತಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರುವ ಸಿವಿಲ್‌ರೈಟ್ಸ್‌ಗೆ ಸಂಬಂಧಪಟ್ಟ ಬಿಲ್ಲಿನಮೇಲೆ ಮಾತನಾಡುತ್ತಾ ವಿಶಾಲ ಮೈಸೂರಾದ ಮೇಲೆ ಕರ್ನಾಟಕ ಏಕೀಕರಣವಾದಮೇಲೆ ಹಳೇ ಮೈಸೂರಿನ ಅಧಿಕಾರಿಗಳಿಗೆ ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಈಗಾಗಲೆ ಮಾತನಾಡಿದ ಕೆಲವರು ಇದನ್ನು ಸ್ವಾಗತಿಸಿದ್ದಾರೆ, ಮತ್ತೆ ಕೆಲವರು ವಿರೋಧಿಸಿದ್ದಾರೆ. ಇದನ್ನು ನಾನು ವಿರೋಧಿಸುತ್ತೇನೆ. ಹಳೆಯ ಮೈಸೂರು ಅಧಿಕಾರಿಗಳಿಗೆ ಬಹಳ ಅನ್ಯಾಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ವಿಶಾಲ ಮೈಸೂರಾದಾಗ ಮುಂಬಯಿ, ಮದ್ರಾಸು ಮುಂತಾದ ಪ್ರದೇಶದ ಕೆಲವು ಭಾಗಗಳು ಸೇರಿಕೊಂಡವು. ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ ಕಾನೂನುಗಳಿದ್ದುವು. ನಮ್ಮ ರಾಜ್ಯಕ್ಕೆ ಇತರ ರಾಜ್ಯಗಳವರು ಬಂದು ಸೇರಿದ ಮೇಲೆ ಎಲ್ಲರಿಗೂ ಅನ್ಯಯವಾಗುವಂತೆ ಒಂದು ಕಾನೂನು ಮಾಡಲಾಯಿತು. ನಂತರ ಒಂದು ಸೀನಿಯಾರಿಟಿ ಲಿಸ್ಟ್ ಮಾಡಿದರು. ಇದರಲ್ಲಿ ಹಳೆಯ ಮೈಸೂರಿನವರಿಗೆ ಅನ್ಯಾಯವಾಗಿದೆ. ಮೈಸೂರಿಗೆ ಭಾರ ಬೀಳುವುದು ಎಂದು ಇತರ ರಾಜ್ಯಗಳಿಂದ ಕರ್ನಾಟಕಕ್ಕೆ ಬಂದವರಿಗೆ ಪ್ರಮೋಷನ್ನುಗಳನ್ನು ಕೊಟ್ಟು ಕಳಿಸಿದರು. ಇದರಿಂದ ಅವರಿಗೆ ಹೆಚ್ಚು ಸೌಲಭ್ಯ ದೊರೆತು ನಮ್ಮವರಿಗೆ ಅನ್ಯಾಯವಾಗಿದೆ. ಇಲ್ಲಿ 15-20 ವರ್ಷ ಸರ್ವಿಸ್ ಆದವರಮೇಲೆ ಹೊರಗಿನಿಂದ ಬಂದವರು 4-5 ವರ್ಷ ಸರ್ವಿಸ್ ಆಗಿರುವವರು ಸೀನಿಯಾರಿಟಿಯನ್ನು ಪಡೆದಿದ್ದಾರೆ. ಇದರಿಂದ ಅಧಿಕಾರಿಗಳಲ್ಲಿ ದಕ್ಷತೆ ಹೇಗೆ ನಿರೀಕ್ಷೆ ಮಾಡಲು ಸಾಧ್ಯ? ಬರಡು ಹಸುವಿನಲ್ಲಿ ಹಾಲನ್ನು ನಿರೀಕ್ಷೆಮಾಡಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಅತೃಪ್ತರಾಗಿರುವ ಅಧಿಕಾರಿಗಳಿಂದ ಒಳ್ಳೆಯದನ್ನು ನಿರೀಕ್ಷೆಮಾಡಲು ಸಾಧ್ಯವಿಲ್ಲ. ಅಲ್ಲದೆ ಇದರಿಂದ ಲಂಚರುಷುವತ್ತಿಗೆ ಅವಕಾಶವಾಗಿದೆ. ಕಾರಣ ಹೆಚ್ಚು ಸರ್ವಿಸ್ ಆಗಿರುವವರಿಗೆ ಪ್ರಮೋಷನ್ ಸಿಕ್ಕವುದಿಲ್ಲ. ಕಡಿಮೆ ಸರ್ವಿಸ್ ಮಾಡಿರುವವರು ಸೀನಿಯರ್ ಆಗಿದ್ದಾರೆ ಆದುದರಿಂದ ಆದಷ್ಟು ಸಂಪಾದನೆ ಮಾಡಿ ರಿಟೈರ್ ಆಗೋಣ ಎಂಬ ಮನೋಭಾವನೆ ಅನೇಕ ಅಧಿಕಾರಿಗಳಲ್ಲುಂಟಾಗಿದೆ. ಇದರಿಂದ ದಕ್ಷತೆ ಹಾಳಾಗಿದೆ. ಈಗ ಕೋರ್ಟಿನಲ್ಲಿ ಒಂದು ತೀರ್ಮಾನವಾದರೆ ಎರಡು ಸಂಬಳ ಕೊಡಬೇಕಾಗುವುದು ಎಂಬ ಸಮಸ್ಯೆ ಇದೆ. ಆದರೆ ಪ್ರಮೋಷನ್ ಸಿಕ್ಕಬೇಕಾದಾಗ ಸಿಕ್ಕಿದ್ದರೆ ಅದಕ್ಕೆ ತಕ್ಕ ವೇತನ ಮೊದಲೇ ಪಡೆಯುತ್ತಿದ್ದರು. ಅನ್ಯಾಯವಾದುದರಿಂದ ಅವರಿಗೆ ಕೋರ್ಟಿನಲ್ಲಿ ತೀರ್ಮಾನವಾದಮೇಲೆ ಪರಿಹಾರ ಕೊಡಬೇಕಾದ್ದು ಸರಕಾರದ ಕರ್ತವ್ಯ. ಆದುದರಿಂದ ಕೋರ್ಟು ಪರಿಹಾರ ಕೊಡಬೇಕೆಂದಾಗ ಕೊಡುವುದು ನ್ಯಾಯವಾದುದು. ಅದನ್ನು ತಪ್ಪಿಸುವುದು ಯಾವ ವಿಧದಲ್ಲೂ ನ್ಯಾಯವಲ್ಲ. ಈ ಸಂದರ್ಭದಲ್ಲಿ ಒಂದು ಸಮಿತಿ ಮಾಡಿ ಯಾರ್ಯಾರು ಎಷ್ಟು ವರ್ಷ ಕೆಲಸ ಮಾಡಿದ್ದಾರೆ ಎಂದು ನೋಡಿ ಅದರ ಪ್ರಕಾರ ಪ್ರಮೋಷನ್ ಕೊಟ್ಟು ಅವರವರಿಗೆ ನ್ಯಾಯವಾಗಿ ದೊರೆಯಬೇಕಾದ ಪ್ರಮೋಷನ್ ವಗೈರೆ ಕೊಟ್ಟರೆ ಆಡಳಿತ ಚೆನ್ನಾಗಿ ನಡೆಯುತ್ತದೆ. ಇಲ್ಲದಿದ್ದರೆ ಇಲ್ಲ. ಈಗಲೂ

(ಶ್ರಿ ಎಚ್. ಜಿ. ಚನ್ನಪ್ಪ)

ಕಾಲ ಮಿಂಚಿಲ್ಲ. ಸರ್ವಿಸ್ ರಿಜಿಸ್ಟರ್ ನೋಡಿದರೆ ಎಷ್ಟು ವರ್ಷ ಕೆಲಸ ಮಾಡಿದ್ದಾರೆ ಎಂದು ಗೊತ್ತಾಗುವುದು. ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅವರಿಗೆ ಕೊಟ್ಟರೆ ಪ್ರತಿಯೊಬ್ಬ ಅಧಿಕಾರಿಯೂ ಚೆನ್ನಾಗಿ ಕೆಲಸ ಮಾಡುವರು. ಇಲ್ಲದಿದ್ದರೆ ನಿರುತ್ಸಾಹ ಬಂದು ಕೆಲಸ ಕುಂಠಿತವಾಗುವುದು. ಲಂಚರುಷುವತ್ತೂ ಹೆಚ್ಚುವುದು. ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದುದರಿಂದ ಈ ಬಿಲ್ಲು ಪಾಸಾಗುವುದಕ್ಕೆ ಮುಂಚೆ ಒಂದು ಸಮಿತಿ ಮಾಡಿ ಚರ್ಚಿಸಿ ನಂತರ ಈ ಸಭೆಯ ಮುಂದೆ ತಂದು ಅಂಗೀಕಾರ ಪಡೆಯುವುದೊಳ್ಳೆಯದು ಎಂದು ಇಷ್ಟು ಹೇಳಿ ಹಳೆಯ ಮೈಸೂರು ಅಧಿಕಾರಿಗಳಿಗಾಗಿರುವ ಅನ್ಯಾಯ ಸರಿಪಡಿಸಬೇಕು. ಇಲ್ಲದಿದ್ದರೆ ದಕ್ಷತೆ ಹೋಗುವುದು ಎಂದು ತಿಳಿಸಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ. ಯಂ. ಬಿ. ರಾಮಸ್ವಾಮಿ.—(ಅನೇಕಲ್) : ಸನ್ಮಾನ್ಯ ಸಭಾಧ್ಯಕ್ಷಿಣಿಯರೇ, ಈ ದಿವಸ ಏನು ಬಿಲ್ಲನ್ನು ತಂದಿದ್ದಾರೆ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಬೆಂಬಲ ಅದಕ್ಕೆ ಕೊಟ್ಟು ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. 1-11-56ರಲ್ಲಿ ಕರ್ನಾಟಕದ ಏಕೀಕರಣವಾದ ಮೇಲೆ ಬಹುಶಃ ಅನೇಕ ಇಲಾಖೆಗಳಲ್ಲಿ ಇಂಟರ್‌ಸ್ಟೇಟ್ ಸೀನಿಯಾರಿಟಿ ಬಗ್ಗೆ ದೊಡ್ಡ ಆಂದೋಳನವಾಗಿದೆ. ಪ್ರಥಮವಾಗಿ ಮತ್ತು ಮೂಲಭೂತವಾಗಿ ಇಲಾಖೆಗಳ ಅಧಿಕಾರಿಗಳ ಸೀನಿಯಾರಿಟಿ ಪಟ್ಟಿ ಮಾಡುವುದಕ್ಕೆ ಘನ ಸರಕಾರದವರು ಕೊಟ್ಟಿದ್ದ ಆದೇಶಗಳನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಿರುವ ಅನೇಕ ಉದಾಹರಣೆಗಳಿವೆ. ಉದಾಹರಣೆಗೆ ಅನಿಮಲ್ ಹಸ್ಬೆಂಡ್ರಿ ಇಲಾಖೆಯಲ್ಲಿ ಎಲ್ಲಾ ಅರ್ಹತೆಗಳನ್ನು ಪಡೆದಿದ್ದ ಒಬ್ಬ ಅಧಿಕಾರಿ ತನಗೆ ನ್ಯಾಯ ದೊರೆಯದೆ ಮೈಸೂರು ಹೈಕೋರ್ಟಿಗೆ ಹೋಗಿ ನ್ಯಾಯವನ್ನು ಪಡೆದ, ಕೋರ್ಟು ಆತ ಅರ್ಹನಾಗಿದ್ದಾನೆ, ಹೆಡ್ ಆಫ್‌ದಿ ಡಿಪಾರ್ಟ್‌ಮೆಂಟ್ ಆಗಬೇಕು ಎಂದು ನಿರ್ಣಯ ಮಾಡಿತು. ಸರಕಾರ ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. ಇದರ ಬಗ್ಗೆ ಅಪೀಲು ಸುಪ್ರೀಂ ಕೋರ್ಟಿಗೆ ಹೋಗಿ ವಜಾ ಆಗಿದೆ. ಈಗಿರುವ ಅನಿಮಲ್ ಹಸ್ಬೆಂಡ್ರಿ ಇಲಾಖೆ ಡೈರೆಕ್ಟರ ನೇಮಕ ಕ್ರಮಬದ್ಧವಾಗಿಲ್ಲ, ಅವರು ಎಲ್ಲಾ ಅರ್ಹತೆಗಳನ್ನು ಪಡೆದಿಲ್ಲ ಎಂದು ಸುಪ್ರೀಂ ಕೋರ್ಟು ಕೇಸನ್ನು ವಜಾಮಾಡಿತು. ಈಗ ನಮ್ಮ ಸರಕಾರ ಕೋರ್ಟಿನ ಆಜ್ಞೆಯನ್ನು ಜಾರಿಗೆ ತಂದಿಲ್ಲ. ಈಗಿರುವ ಡೈರೆಕ್ಟರು ವಿದೇಶಕ್ಕೆ ಹೋಗುವವರಿದ್ದಾರೆ. ಆಗ ಇನ್‌ಚಾರ್ಜ್ ಅರೇಂಜ್‌ಮೆಂಟ್ ಮಾಡಲು ಕಾನೂನು ರೀತ್ಯ ಯಾರು ಸೀನಿಯಾರಿಟಿ ಪಟ್ಟಿಯಲ್ಲಿ ಮೊದಲಿನವರೋ ಆ ಒಬ್ಬ ಅಧಿಕಾರಿ ಹೆಡ್‌ಕ್ವಾರ್ಟರಿನಲ್ಲಿರುವರು. ಆ ಅಧಿಕಾರಿಯನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಬೇಕೆಂದಿದೆ. ಆದರೆ ಮೊನ್ನೆ ವರದಿ ಬಂದಿರುವ ಪ್ರಕಾರ ಎ ಅಂಡ್ ಎಫ್‌ನಲ್ಲಿರುವ ಸೆಕ್ರೆಟರಿ ಇಂಥ

ವರಿಗೇ ಕೊಡಬೇಕೆಂದು ಹೇಳಿದ ಮೇಲೆ ಬಹುಶಃ ಸೀರಿಯಲ್ ನಂಬರು 3 ಅಥವಾ 4ನೆಯವರಿಗೆ ಕೊಟ್ಟಿರಬೇಕು, ಜೂನಿಯರಿಗೆ ಕೊಟ್ಟಿರುವುದು ಅರ್ಹ ವಾಗುವುದಿಲ್ಲ.

ಇದೇ ರೀತಿಯಲ್ಲಿ ನಡೆಯುತ್ತಾ ಹೋದರೆ, ಅಧಿಕಾರಿಗಳು ಅವರಲ್ಲಿ ರತಕ ಇಂಟರೆಸ್ಟನ್ನು ಕಳೆದುಕೊಳ್ಳುತ್ತಾರೆ ಮತ್ತು ಅವರು ಈ ಸರ್ಕಾರದಲ್ಲಿ ಆಸಕ್ತಿ ಯನ್ನು ಕಳೆದುಕೊಂಡು ಎಂಟೈರ್ ಡಿಪಾರ್ಟ್‌ಮೆಂಟ್ ಹಾಳಾಗುವ ಸಂಭವ ಬರುತ್ತದೆ ಎಂದು ನನಗಾದರೂ ಅನ್ನಿಸುತ್ತದೆ. ಯಾವ ಒಬ್ಬ ಅಧಿಕಾರಿ ಕೆಲಸದಲ್ಲಿ ಅರ್ಹತೆಯನ್ನು ಪಡೆದುಕೊಂಡಿದ್ದಾನೆ, ಅವನಿಗೆ ಕಾನೂನು ರೀತ್ಯ ಎಲ್ಲಾ ಸವಲತ್ತುಗಳನ್ನು ಕಲ್ಪಿಸಿಕೊಡುವುದು ಎಲ್ಲರ ಕರ್ತವ್ಯ. ತಮ್ಮದೇ ಆದ ಧೋರಣೆಯನ್ನು ತಾಳಿ, ಜಾತೀಯ ಗೊಂದಲ, ಅಥವಾ ಸಂಬಂಧದ ಗೊಂದಲ ಮಾಡಿ ಸೀನಿಯಾರಿಟಿ ಲಿಸ್ಟ್ ಅವರದ್ದೇ ಮಾಡಿ ಇಲಾಖೆಗಳನ್ನು ಹಾಳುಮಾಡುವ ಒಂದು ಪರಿಸ್ಥಿತಿಗೆ ಕೆಲವು ಅಧಿಕಾರಿಗಳು ತಂದಿದ್ದಾರೆ. ಮತ್ತು ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಆದಾಗ ಅನೇಕ ಮಂದಿ ಹೊಸ ಮೈಸೂರಿನವರು ಈ ಕಡೆ ಬಂದರು. ಅವರು ಬಂದಾಗ ಅವರಲ್ಲಿ ಕೆಲವರು ಸರ್ವೀಸಿಗೆ ಸೇರಿ ಮೂರು ನಾಲ್ಕು ವರ್ಷಗಳಾದರೂ, ಇಲ್ಲಿ 18 ವರ್ಷ ಸರ್ವೀಸ್ ಮಾಡಿರತಕ್ಕ ಅಧಿಕಾರಿಗಳನ್ನು ಸೂಪರ್‌ಸೀಡ್ ಮಾಡಿದ್ದಾರೆ. ಪಟ್ಟಿಯನ್ನು ಮಾಡುವಾಗ ಸೆಂಟ್ರಲ್ ಗವರ್ನಮೆಂಟಿನವರು ಸುಸಜ್ಜಿತವಾಗಿ ಮಾಡಬೇಕು ಎಂದು ಡೈರೆಕ್ಷನ್ಸ್ ಕೊಟ್ಟಿರುತ್ತಾರೆ. ಆ ನೀತಿಯನ್ನು ಮತ್ತು ಅದರ ರೂಪರೇಖೆಗಳನ್ನು ಇಟ್ಟು ಕೊಂಡು ಪಟ್ಟಿಯನ್ನು ತಯಾರು ಮಾಡಬೇಕು. ಡೈರೆಕ್ಷನ್ಸ್ ಕೊಟ್ಟರೂ ಇವರು ಸರಿಯಾದ ರೀತಿಯಲ್ಲಿ ಪಟ್ಟಿಯನ್ನು ತಯಾರು ಮಾಡಲಿಲ್ಲ. ಈ ರೀತಿ ಸೀನಿ ಯಾರಿಟಿ ಪಟ್ಟಿಯನ್ನು ತಲೆಕೆಳಗು ಮಾಡುವುದರಿಂದ ಇಲಾಖೆಗಳಲ್ಲಿ ಲಂಚಗುಳಿ ತನ ಹೆಚ್ಚಾಗಿ ಅಧಿಕಾರಿಗಳು ಕೆಲಸಮಾಡಲಿಕ್ಕೆ ಇಷ್ಟವಿಲ್ಲದೆ ಏನೋ ಬರಬೇಕು, ಸರ್ಕಾರದಲ್ಲಿ ಸೇರಿಬಿಟ್ಟಿದ್ದೇವೆ, ಏನೋ ಕಾಲಕಳೆದು ಹೋಗಬೇಕು ಎನ್ನುವ ಮನೋಭಾವವನ್ನು ತಳೆಯುತ್ತಾರೆ. ಇಲಾಖೆಗಳಲ್ಲಿ ರೆಡ್ ಟೇಪಿಸಂ ವಿಪರೀತ ವಾಗಿದೆ. ಮೊನ್ನೆ ತಾನೆ ಅಧಿಕಾರಕ್ಕೆ ಬಂದಿರತಕ್ಕವರ ಕೈಕೆಳಗೆ 20 ವರ್ಷ ಸರ್ವೀಸ್ ಮಾಡಿರತಕ್ಕವರು ಕೆಲಸ ಮಾಡಬೇಕು ಎಂದು ಅವರ ಮನಸ್ಸು ವ್ಯಾಕುಲವಾಗಿದೆ. ಆದ್ದರಿಂದ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡುವಾಗ ಕ್ರಮಬದ್ಧವಾಗಿ, ಗವರ್ನಮೆಂಟ್ ಆಫ್ ಇಂಡಿಯಾದವರು ಏನು ಆದೇಶ ಕೊಟ್ಟಿದ್ದಾರೆ ಅದನ್ನು ಚಾಚೂ ತಪ್ಪದೆ ಮಾಡಿದರೆ ಒಳ್ಳೆಯದು ಆದೀತು ಆದ್ದರಿಂದ ನಾನು ಮಾನ್ಯ ಸರ್ಕಾರ ದವರನ್ನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಬಹಳ ಎಚ್ಚರಿಕೆಯಿಂದ ಯಾವ ಒಬ್ಬ ಅಧಿಕಾರಿ ನಿಜವಾಗಿಯೂ ಕೆಲಸಗಳನ್ನು ದಕ್ಷತೆಯಿಂದ ಮಾಡುತ್ತಾನೆ, ಅವನಿಗೆ ಅರ್ಹತೆ ಇದೆಯೇ, ಅಥವಾ ಅವನು ಸರಿಯಾದ ರೀತಿಯಲ್ಲಿ ನಡೆಸ್ತು

(ಶ್ರೀ ಎಂ. ಬಿ. ರಾಮಸ್ವಾಮಿ)

ಕೊಳ್ಳುತ್ತಿದ್ದಾನೆಯೇ ಎನ್ನುವ ಬಗ್ಗೆ ವಿಚಾರಮಾಡಿ ಪ್ರಮೋಷನ್‌ಅನ್ನು ಕೊಡಬೇಕು ಅದು ಬಿಟ್ಟು ಕೇವಲ ಒತ್ತಡಕ್ಕೋಸ್ಕರ ಮಣಿದು ಪ್ರಮೋಷನ್ ಕೊಡುವುದು ಸಾಧ್ಯವಲ್ಲ.

ಮತ್ತೊಂದು ವಿಚಾರ, ಈ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ಸ್ ಬಗ್ಗೆ, ಅನೇಕ ಡಿಪಾರ್ಟಮೆಂಟಿನಲ್ಲಿ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ಸ್ ತಾವು ಬ್ರಹ್ಮ ಎಂದು ತಿಳಿದುಕೊಂಡಿದ್ದಾರೆ. ಕ್ಲಾಸ್ 1, ಕ್ಲಾಸ್ 2, ಕ್ಲಾಸ್ 3 ಅಧಿಕಾರಿಗಳ ಹಣೇಬರಹವನ್ನು ಇವರು ಬರೆದು ಮುಗಿಸಿರುವುದು ಅನೇಕ ಸಂದರ್ಭಗಳಲ್ಲಿ ನಡೆದಿದೆ. ಸೆಕ್ರೆಟರಿ ಮತ್ತು ಈ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ಸ್ ಇವರಿಗೆ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕು. ಅವನು ಹೇಳಿದ ಕೂಡಲೆ ಅವನಿಗೆ ಏನು ಬೇಕೋ ಅದನ್ನು ಮಾಡಿಕೊಡಬೇಕು, ಏನು ಬೇಕೋ ಅದನ್ನು ಸಪ್ಲೈ ಮಾಡಬೇಕು. ಅನೇಕ ವಿಚಾರಗಳಲ್ಲಿ ಇವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳದೆ ಹೋದ ಪಕ್ಷದಲ್ಲಿ ಅಧಿಕಾರಿಗಳ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ಸ್‌ನ್ನು ಹಾಳುಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. ಒಂದು ಉದಾಹರಣೆ ಹೇಳಬೇಕಾದರೆ, ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ಸ್ ಆಗಿ ಪ್ರೊಮೋಷನ್ ಮಾಡುವಾಗ ಜೂನಿಯರ್ ಇಂಜಿನಿಯರ್ಸ್‌ನಲ್ಲಿ ಸೆಲೆಕ್ಟ್ ಆದವನು ಸೀರಿಯಲ್ ನಂಬರ್ 3ರಲ್ಲಿ ಇದ್ದವನಿಗೆ, ಒಂದು ವರ್ಷದ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬಂದಿಲ್ಲ ಎಂದು ಪ್ರಮೋಷನ್‌ಅನ್ನು ತಡೆಹಿಡಿದರು. ಅವನು ನಿಷ್ಠೆಯಿಂದ ಬೆಳಗಾಂ ಜಿಲ್ಲೆಯಲ್ಲಿ ಕೆಲಸ ಮಾಡುವ ವ್ಯಕ್ತಿ. ಅದನ್ನು ಅವನು ತೆಗೆದುಕೊಂಡು ಬಂದಾಗ ಎರಡನೆಯ ವರ್ಷದ್ದು ಬಂದಿಲ್ಲ ಎಂದು ಮತ್ತೆ ನಿಲ್ಲಿಸಿದರು, ಹೀಗೆ ಆರು ತಿಂಗಳು ಡಿಲೇ ಮಾಡಿ ಅವನ ಸೀನಿಯೊರಿಟಿಯನ್ನು ಕೆಳಗೆ ಕಳುಹಿಸಿದರು, ಅವನದು ಇವತ್ತಿನ ದಿವಸ 16ನೇ ನಂಬರ್, ಈ ತರಹ ಮಾಡುತ್ತಾ ಹೋದರೆ ಲಂಚಗುಳಿತನ ಹೆಚ್ಚಾಗುತ್ತದೆ, ಮತ್ತು ಇನ್‌ಎಫಿಷಿಯನ್ಸಿ ಹೆಚ್ಚಾಗುತ್ತದೆ. ಇದರಿಂದ ಅಧಿಕಾರಿಗಳಲ್ಲಿ ಬೇಜಾರು ಬಂದಿದೆ, ಮತ್ತು ಇಲಾಖೆಗಳು ಹಾಳಾಗುವುದಕ್ಕೆ ಅವಕಾಶವಾಗುತ್ತದೆ.

ಇನ್ನು ರೆವೆನ್ಯೂ ಡಿಪಾರ್ಟ್‌ಮೆಂಟಿಗೆ ಬರಬೇಕಾದರೆ, ಅಲ್ಲಿ ಒಂದು ನಿರ್ದಿಷ್ಟವಾದ ಸೀನಿಯೊರಿಟಿ ಲಿಸ್ಟ್ ಇಲ್ಲ. ಈಗತಾನೇ ಲಿಸ್ಟ್ ಆಗಿದೆ ಎಂದು ಸಚಿವರು ಹೇಳಿದರು, ಆದರೆ ಅದು ಪರಿಪೂರ್ಣವಾಗಿಲ್ಲ. ಇನ್ನೂ ರೆವೆನ್ಯೂ ಇನ್ಸ್‌ಪೆಕ್ಟರ್‌ರದು, ಡೆಪ್ಯೂಟಿ ತಹಾಸೀಲ್ದಾರರದು, ತಹಾಸೀಲ್ದಾರರದು, ಅಸಿಸ್ಟೆಂಟ ಕಮಿಷನರದು, ಪ್ರತಿಯೊಂದರಲ್ಲಿಯೂ ನಿರ್ದಿಷ್ಟವಾದ ಸೀನಿಯಾರಿಟಿ ಲಿಸ್ಟ್‌ನ್ನು ಮಾಡಿಲ್ಲ. ಯಾರೋ ಒಬ್ಬ ರೆವಿನ್ಯೂ ಸೆಕ್ರೆಟರಿ ಬರುತ್ತಾರೆ, ಅವರು

ಒಂದು ಆರ್ಡರ್ ಮಾಡಿದರೆ, ಮತ್ತೊಬ್ಬರು ಬಂದು ಅದನ್ನು ಕಿತ್ತು ಹಾಕುವುದು ಮತ್ತು ಇನ್ನೊಂದು ಆರ್ಡರ್‌ಅನ್ನುಮಾಡುವುದು ಆಗಿದೆ. ರೆವೆನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಒಳ್ಳೆಯದಕ್ಷ ಅಧಿಕಾರಿಗಳು ಇಲ್ಲವೆಂದು ನಾನು ಹೇಳುವುದಿಲ್ಲ. ಇಂಥ ಅಧಿಕಾರಿಗಳು ಇದನ್ನೆಲ್ಲಾ ನೋಡಿ ಬೇಜಾರಾಗಿ ನಾವು ಸರ್ವೀಸಿಗೆ ಏತಕ್ಕಾದರೂ ಸೇರಿದ್ದೇವೆ ಎಂದು ಅವರಿಗೆ ವ್ಯಾಕುಲವುಂಟಾಗಿದೆ. ಆದ್ದರಿಂದ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡುವಾಗ ಸರಿಯಾದ ರೀತಿಯಲ್ಲಿ, ಕೂತು ಎಲ್ಲಾ ಲೋಪದೋಷಗಳನ್ನು ತೆಗೆದು, ಎಲ್ಲರ ಮಾಹಿತಿಗಳನ್ನು ತೆಗೆದು ಕೊಂಡು, ಎಂದು ಅವನು ಡ್ಯೂಟಿಗೆ ಸೇರಿದ್ದು, ವಿದ್ಯಾ ಅರ್ಹತೆ ಏನು, ಆಯಾ ಕೆಲಸದಲ್ಲಿ ಸರಿಯಾದ ಅರ್ಹತೆಯನ್ನು ಅವನು ಪಡೆದಿದ್ದಾನೆಯೇ ಮತ್ತು ಅವನು ಕ್ರಮಬದ್ಧವಾದ ಸಂಖೆಯಲ್ಲಿದ್ದಾನೇ ಎನ್ನುವ ಬಗ್ಗೆ ವಿಚಾರ ಮಾಡಿ ನಿರ್ಧಾರಕ್ಕೆ ಬರುವುದು ಸಾಧು. ಅದುಬಿಟ್ಟು ನಮ್ಮ ಜಾತೀಯವನನ್ನು ಮೇಲಕ್ಕೆ ತರಬೇಕು ಎಂದು ಹೊರಟರೆ ಬಹುಶಃ ಡಿಪಾರ್ಟ್‌ಮೆಂಟುಗಳು ಹಾಳಾಗುತ್ತವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಇಲಾಖೆಗಳಲ್ಲಿ ಈ ಪ್ರವೃತ್ತಿ ಬೆಳೆದು ಬಂದಿದೆ.

ಹೆಲ್ತ್ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳುವುದಾದರೆ, ಅಲ್ಲಿ ಇನ್‌ಚಾರ್ಜ್ ಅರೇಂಜ್‌ಮೆಂಟ್ ಮಾಡುವಾಗ ನಾವು ಸರಿಯಾದ ರೀತಿಯಲ್ಲಿ ಮಾಡಿದ್ದೇವೆ ಎಂದು ಮಾನ್ಯ ಸಿದ್ದವೀರಪ್ಪನವರು ಹೇಳಿದರು. ನಾನಾದರೂ ಹೇಳುತ್ತಿದ್ದೇನೆ, ವಿಕ್ಟೋರಿಯಾ ಹಾಸ್ಪಿಟಲ್‌ನಲ್ಲಿ ಒಬ್ಬ ಡಾಕ್ಟರ್ ಡಬ್ಬಲ್ ಎಂ. ಎಸ್. (ಸರ್ಜರಿ) ಮಾಡಿದ್ದಾರೆ. ಮತ್ತು ಸೀನಿಯಾರಿಟಿಯಲ್ಲಿ ಮೊದಲನೆಯವರು. ಈತನ ಸೀನಿಯಾರಿಟಿಯನ್ನು ನಿರಾಕರಿಸಿದ್ದಾರೆ, ಮತ್ತೊಬ್ಬ ಡಾಕ್ಟರು ಒಂದೂವರೆ ವರ್ಷದಲ್ಲಿ ರಿಟೈರ್ ಆಗುತ್ತಾನೆ ಎಂದು ಅವನಿಗೆ ಪ್ರಮೋಷನ್ ಕೊಟ್ಟು, 16 ವರ್ಷ ಸರ್ವೀಸ್‌ನಲ್ಲಿರಬೇಕಾದಂಥ ಡಾಕ್ಟರನ್ನು ಹಿಂದಕ್ಕೆ ಹಾಕಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ.—ಆತನು ಯಾರು ಸ್ವಲ್ಪ ಹೇಳಿ?

ಶ್ರೀ ಎಂ. ಬಿ. ರಾಮಸ್ವಾಮಿ.—ಆತ ಸೀನಿಯಾರಿಟಿಯಲ್ಲಿ ಮೊದಲನೆಯವನಾಗಿರುತ್ತಾನೆ, ಮತ್ತು ಅರ್ಹತೆಯನ್ನು ಪಡೆದಿರುತ್ತಾನೆ ಅಂಥವನಿಗೆ ಇನ್‌ಚಾರ್ಜ್ ಇಟ್ಟರೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಜೂನಿಯರ್ ಆಗಿರುವವರನ್ನು ಯಾವುದೋ ಒತ್ತಡಕ್ಕೆ ಒಳಗಾಗಿ ಅಸೋಸಿಯೇಟ್ ಪ್ರೊಫೆಸರ್ ಮಾಡುವುದು ಅಥವಾ ಅಸಿಸ್ಟೆಂಟ್ ಪ್ರೊಫೆಸರ್ ಮಾಡುವುದು ಸಾಧುವಾದುದಲ್ಲ.

ಶ್ರೀ ಟಿ. ಎಂ. ಮಂಜುನಾಥ.—ಮಾನ್ಯ ಸಿದ್ದವೀರಪ್ಪನವರು, ಅವನಿಗೆ ಪ್ರಮೋಷನ್ ಕೊಟ್ಟಿಲ್ಲ, ಇನ್‌ಚಾರ್ಜ್ ಹಾಕಿದ್ದೇವೆ ಎಂದು ಹೇಳಿದರು, ಅದು ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಹೇಳಿ ?

ಶ್ರೀ ಎಂ. ಬಿ. ರಾಮಸ್ವಾಮಿ.—ಮಂತ್ರಿವರ್ಯರ ಗಮನಕ್ಕೆ ಅನೇಕ ವಿಷಯಗಳು ಬರುತ್ತಾ ಇಲ್ಲ ಎಂದು ನಾನು ನಂಬಿಕೊಂಡಿದ್ದೇನೆ. ಅನೇಕ ಅಧಿಕಾರಿಗಳು ಕೆಲವು ವಿಷಯಗಳನ್ನು, ಪ್ರಮೋಷನ್ ಮಾಡುವ ವಿಚಾರದಲ್ಲಿ ಆಗಲಿ, ಯಾವ ವಿಷಯದಲ್ಲಿಯೇ ಆಗಲೀ ಇವರಿಗೆ ಬೇರೆ ವಿಧಧ ಕಲ್ಪನೆ ಕೊಟ್ಟು, ನಿಜವಾಗಿ ಪ್ರಮೋಷನ್ ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲುತ್ತಾ ಇಲ್ಲ ಎಂದು ನಾನು ಇವತ್ತಿನ ದಿವಸ ಹೇಳಬೇಕಾಗಿದೆ.

ಎಜುಕೇಷನ್ ಡಿಪಾರ್ಟಮೆಂಟಿನಲ್ಲಿ, ಪ್ರೊಬೇಷನರ್ಸ್ ಅನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ತೆಗೆದುಕೊಂಡರು. ಇವರನ್ನು ತೆಗೆದುಕೊಳ್ಳುವಾಗ ಒಂದು ನಿರ್ದಿಷ್ಟವಾದ ರೂಲ್ಸ್ ಅನ್ನು ಅವರು ಇಟ್ಟುಕೊಂಡಿದ್ದಾರೆ ಎಂದು ನನ್ನ ಭಾವನೆ. ಯಾರು ಪಿ. ಎಸ್. ಸಿ. ಯಿಂದ ಬಂದಿದ್ದಾರೆ ಅವರನ್ನು ಕ್ಲಾಸ್ 1 ಕ್ಕೆ ಪ್ರೊಮೋಷನ್ ಕೊಡುವಾಗ ಎಲ್ಲಾ ವಿಚಾರದಲ್ಲೂ ನಮ್ಮ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಸ್ಟ್ರಿಕ್ಟ್ ಆಗಿ ಫಾಲೊ ಮಾಡಬೇಕು, ಆದರೆ ಇದನ್ನು ಸರಿಯಾಗಿ ಫಾಲೋ ಮಾಡುತ್ತಾ ಇಲ್ಲ. ಯಾವ ಒಬ್ಬ ಎ. ಡಿ. ಒ. ಡೈರೆಕ್ಟ್ ಆಗಿ ರಿಕ್ರೂಟ್‌ಮೆಂಟಿನಲ್ಲಿ ಬಂದಿದ್ದಾನೆ. ಅವನಿಗೆ ಡೆಪ್ಯುಟಿ ಡೈರೆಕ್ಟರ್ ಪೋಸ್ಟ್ ಸಿಗಬೇಕಾಗಿತ್ತೋ ಅದನ್ನು ಸರಿಯಾದ ರೀತಿಯಲ್ಲಿ ಅವನಿಗೆ ಕೊಡುತ್ತಾ ಇಲ್ಲ. ಕಾನ್‌ಫಿಡೆನ್ಷಿಯಲ್ ರಿಪೋರ್ಟ್ ಸರಿಯಿಲ್ಲ, ನಿನ್ನ ಯೋಗ್ಯತೆ ಸರಿಯಿಲ್ಲ, ನಿನಗೆ ಅರ್ಹತೆ ಇಲ್ಲ ಎಂದು ಹೇಳಿ ಜೂನಿಯರ್ ಪೋಸ್ಟ್ ಆಫೀಸರುಗಳನ್ನು ಮೇಲಕ್ಕೆ ತಂದಿದ್ದಾರೆ.

3-30 P.M.

ಶ್ರೀ ಟಿ. ಎಂ. ಮಂಜುನಾಥ.—ಇಲಾಖಾ ಪ್ರಕಾರ ಹೇಳುತ್ತಾ ಇದ್ದೀರಿ. ಅವರ ಹೆಸರನ್ನು ಹೇಳಿಬಿಡಿ. ಮಂತ್ರಿಗಳು ಗುರುತು ಹಾಕಿಕೊಳ್ಳುತ್ತಾರೆ.

ಶ್ರೀ ಎಂ. ಬಿ ರಾಮಸ್ವಾಮಿ.—ಹೇಳುತ್ತೇನೆ, ಈ ಒಂದು ಸೀನಿಯಾರಿಟಿ ಪಟ್ಟಿ ಏನು ಇದೆ ಅದನ್ನು ಸರಿಯಾದ ವ್ಯವಸ್ಥೆಯಲ್ಲಿ ಮಾಡಬೇಕು. ದಕ್ಷ ಅಧಿಕಾರಿಗಳಿಗೆ ಹೆಚ್ಚು ಉತ್ತೇಜನ ಕೊಡಬೇಕು ಮತ್ತು ಅವರಿಗೆ ಅನುಕೂಲವಾದ ರೀತಿಯಲ್ಲಿ ಕಾನೂನು ರೀತ್ಯಾ ಕಾನೂನು ಪ್ರಕಾರ ಅವರಿಗೆ ಇನ್‌ಸೆಂಟಿವ್ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಸಿಸ್ಟೆಂಟ್ ಕಮೀಷನರುಗಳನ್ನು ಪ್ರಮೋಷನ್ ಮಾಡುವಾಗ, ಎಲ್ಲಾ ಇಲಾಖೆಯಲ್ಲಿ ಪ್ರಮೋಷನ್ ಕೊಡುತ್ತಾ ಇದ್ದರೂ ರೆವಿನ್ಯೂ ಇಲಾಖೆಯಲ್ಲಿ ಪ್ರಮೋಷನ್ ನಿಲ್ಲಿಸಿದ್ದಾರೆ ಎಂದು ನನಗೆ ಗೊತ್ತಾಗಿದೆ. ಏತಕ್ಕಾಗಿ ಎಂದರೆ ಡೆಪ್ಯುಟಿ ಕಮಿಷನರ್ ಆಗಬೇಕಾದಂಥ 6—7 ಜನ ಹರಿಜನ ಅಧಿಕಾರಿಗಳು ಇದ್ದಾರೆ.

ಅಧ್ಯಕ್ಷರು:—ಇದು ಪ್ರಮೋಷನ್ ಕೊಡುವ ಬಿಲ್ಲೇ ?

ಶ್ರೀ ಎಂ. ಬಿ ರಾಮಸ್ವಾಮಿ:—ಬಹುಶಃ ಬೇರೆ ಯಾರಾದರೂ ಆಗಿದ್ದರೆ ಪ್ರಮೋಷನ್ ಕೊಡುತ್ತಾ ಇದ್ದರು; ಎಂದು ನಂಬಿಕೊಂಡಿದ್ದೇನೆ. ಒಂದರಿಂದ ಎಳರವರೆಗೆ ಹರಿಜನ ಅಸಿಸ್ಟೆಂಟ್ ಕಮೀಷನರಿಗೆ ಇವತ್ತಿನ ದಿವಸ ಪ್ರಮೋಷನ್ ಕೊಟ್ಟಿದ್ದಾರೆ. ಅವರು ಬಹುಶಃ ಡೆಪ್ಯುಟಿ ಕಮಿಷನರ್ ಆಗುತ್ತಿದ್ದರು. ಜಾತಿ ಗೊಂದಲದಿಂದಲೇ ಪ್ರಮೋಷನ್ ನಿಲ್ಲಿಸಿದ್ದಾರೆ. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟನಲ್ಲಿ ಇದ್ದಾಗ್ಯೂ ಅವರಿಗೆ ಬಡ್ತಿ ಸಹ ಕೊಟ್ಟಿಲ್ಲ. ಇದನ್ನು ಸರಿಪಡಿಸ ಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ.

ಇನ್ನು ಸೆಕ್ರಟರಿಯೇಟ್ ವಿಚಾರದಲ್ಲಿ ಒಂದು ಮಾತು ಹೇಳಿ ಮುಗಿಸುತ್ತೇನೆ. ಅಸಿಸ್ಟೆಂಟ್‌ರಿಂದ ಹಿಡಿದು ಸೆಕ್ಷನ್ ಆಫೀಸರ್ ಮತ್ತು ಅಂಡರ್ ಸೆಕ್ರಟರಿಗಳವರೆಗೆ ಇದ್ದಾರೆ. ನನಗೆ ತಿಳಿದಮಟ್ಟಿಗೆ ಕ್ಲಾಸ್ 4 ರಿಂದ ಬಂದಿರತಕ್ಕವರು ಅಂಡರ್ ಸೆಕ್ರಟರಿಗಳು ಆಗಿದ್ದನ್ನು ನಾನು ನೋಡಿದ್ದೇನೆ. ಡೆಪ್ಯುಟಿ ಸೆಕ್ರಟರಿಗಳು ಆಗಿ ದ್ದವರನ್ನು ನೋಡಿದ್ದೇನೆ. ಸೀನಿಯಾರಿಟಿ ಲಿಸ್ಟ್ ಮಾಡಿದಾಗ ಸರಿಯಾದ ರೀತಿಯಲ್ಲಿ ಅಲ್ಲೂ ಮಾಡಿಲ್ಲ. ಪ್ರತಿಯೊಂದು ಸೆಕ್ಷನ್‌ನಲ್ಲೂ ಪ್ರತಿಯೊಂದು ಡಿಪಾರ್ಟ ಮೆಂಟಿನಲ್ಲೂ ಅವರದೇ ಆದ ಒಂದು ಸೀನಿಯಾರಿಟಿ ಪಟ್ಟಿ ಮಾಡಿ ಯಾರು ನಿಜವಾಗಿ ಅರ್ಹತೆ ಪಡೆದು ಇರುತ್ತಾರೋ ಅಂಥವರ ಬಗ್ಗೆ ನಿರ್ಲಕ್ಷ್ಯಮಾಡಿದ್ದಾರೆ. ಸೆಕ್ರೆಟರಿಯೇಟ್‌ನಲ್ಲಿ ಅನೇಕರು ದಕ್ಷ ಅಧಿಕಾರಿಗಳೂ ಇದ್ದಾರೆ. ಅವರಿಗೆ ಇನ್ನೂ ಸೀನಿಯಾರಿಟಿ ಪಟ್ಟಿ ಪ್ರಕಾರ ಬಡ್ತಿ ದೊರೆತ್ತಿಲ್ಲ. ಕಾರಣ ಈ ಒಂದು ಸೀನಿಯಾರಿಟಿ ಪಟ್ಟಿಯನ್ನು ಸರಿಯಾಗಿ ಮಾಡಿದ್ದಾಗ್ಯೂ ಸಹ, ಸರಿಯಾದ ಕಾಲದಲ್ಲಿ ಅವರಿಗೆ ಪ್ರಮೋಷನ್ ಕೊಟ್ಟಿಲ್ಲ. ಪಿ. ಎಸ್. ಸಿ. ಯಿಂದ ಕೆಲವರನ್ನು ರಿಕ್ರೂಟ್ ಮಾಡಿ ದರೂ ಅಲ್ಲಿ ಸೀನಿಯಾರಿಟಿ ಕಳೆದುಕೊಂಡರು. ಹೀಗೆ ಮಾಡುವುದರಿಂದ ಇಲಾಖೆ ಗಳಲ್ಲಿ ಲಂಚಗುಳಿತನ ಹೆಚ್ಚಾಗುತ್ತದೆ ; ಮತ್ತು ಅನೇಕ ಗೊಂದಲಕ್ಕೆ ಈಡಾಗುವು ದಕ್ಕೆ ಅವಕಾಶವಾಗಿದೆ. ಅಧಿಕಾರಿಗಳು ಏನು ಕೆಲಸ ಮಾಡಬೇಕೆಂದು ಅದನ್ನು ಶಕ್ತಿ ಇಟ್ಟುಕೊಂಡು ಬಂದಿದ್ದಾರೆ ಅವರು ಕಳೆದುಕೊಂಡಿದ್ದಾರೆ. ಅದಕ್ಕೆ ಅವಕಾಶ ಕೊಡದೆ ಇನ್ನುಮುಂದೆ ಆದರೂ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಪರಿಪೂರ್ಣ ಮಾಡಿ ಘನ ಸರ್ಕಾರದವರು ಏನು ಆದೇಶ ಕೊಟ್ಟಿದ್ದಾರೆ ಅದನ್ನು ಚಾಚೂ ತಪ್ಪದೇ ಅನುಸರಿಸಿದರೆ, ಎಲ್ಲಾ ಅಧಿಕಾರಿಗಳಿಗೂ ಎಲ್ಲಾ ಇಲಾಖೆಗಳಲ್ಲಿ ಒಂದು ನ್ಯಾಯ ದೊರೆಯುತ್ತದೆಂದು ನಾನು ನಂಬಿಕೊಂಡಿದ್ದೇನೆ. ಈ ಸಂದರ್ಭದಲ್ಲಿ ಇಷ್ಟೊಂದು ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷಿಣೀಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್ :— ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಾನು ಮಂಡಿಸಿದ ಈ ಬಿಲ್ಲಿನ ಮೇಲೆ ಅನೇಕ ಮಾನ್ಯ ಸದಸ್ಯರು ನಾನಾ ರೀತಿಯಿಂದ ತಮ್ಮ ಅಭಿಪ್ರಾಯಗಳನ್ನು ಸದನದ ಮುಂದೆ ವ್ಯಕ್ತಪಡಿಸಿದ್ದಾರೆ. ಹೀಗೆ ವ್ಯಕ್ತಪಡಿಸುತ್ತಿರುವಾಗ ಕೆಲವು ಸದಸ್ಯರು ಕೋರ್ಟಿನ ಹುಕುಂಗಳನ್ನು ಅಮಾನ್ಯ ಮಾಡುವ ರೀತಿಯಲ್ಲಿ ಈ ಬಿಲ್ಲನ್ನು ತಂದಿದ್ದಾರೆ, ಮತ್ತು ಸುಪ್ರೀಂ ಕೋರ್ಟಿನಿಂದ ಆದಂಥ ಹುಕುಂ ಕೂಡ ಸೂಪರ್‌ಸೀಡ್ ಮಾಡುವ ರೀತಿಯಲ್ಲಿ ಬಿಲ್ಲನ್ನು ಮಾಡಿದ್ದಾರೆ ಇಂಥ ಅಧಿಕಾರ ಈ ಬಿಲ್ಲಿನಲ್ಲಿ ಸರಕಾರಕ್ಕೆ ಕೊಟ್ಟಿದೆ ಎಂದು ಹೇಳಿದ್ದಾರೆ. ಅದೂ ಅಲ್ಲದೆ ಕೆಲವೊಂದು ಕಾನೂನಿನಲ್ಲಿರುವ ತೊಂದರೆ ಅಥವಾ ತೊಡಕುಗಳನ್ನು ಸಹ ಶ್ರೀಮಾನ್ ಕೃಷ್ಣನ್‌ರವರು ಇದರಲ್ಲಿ ಪಾಯಿಂಟ್ ಔಟ್ ಮಾಡಿದ್ದಾರೆ. ಸರ್ಕಾರದವರು ತಾವು ಮಾಡಿದಂಥ ಮಿಸ್ಟೇಕ್ಸ್ ಅಥವಾ ಮಿಸ್‌ಡೀಡ್ಸ್‌ನಿಂದ ಪಾರಾಗುವುದಕೋಸ್ಕರ ಒಂದು ಬಿಲ್ಲನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಎನ್ನುವಷ್ಟರಮಟ್ಟಿಗೆ ಕೆಲವು ಸದಸ್ಯರು ಹೇಳಿದ್ದಾರೆ. ಆದರೆ ನಿಜವಾಗಿ ಇದ್ದ ಪರಿಸ್ಥಿತಿಯನ್ನು ಅರಿತುಕೊಂಡಾಗ ನಾನು ನಂಬುತ್ತೇನೆ. ಮಾನ್ಯ ಸದಸ್ಯರು ಈ ಬಗ್ಗೆ ಮಾಡಿದಂಥ ಟೀಕೆಗಳು ಅಷ್ಟೊಂದು ಸಮರ್ಥನೀಯವಲ್ಲ ಎಂದು ಅವರಷ್ಟಕ್ಕೆ ಅವರೇ ಮನವರಿಕೆ ಮಾಡಿಕೊಳ್ಳುತ್ತಾರೆ ಎನ್ನುವ ಭರವಸೆಯನ್ನು ನಾನು ತಾಳುತ್ತೇನೆ.

ಅಧ್ಯಕ್ಷಣಿಯವರೇ, ಸನ್ಮಾನ್ಯ ಸದಸ್ಯರಿಗೆ ಗೊತ್ತಿದ್ದ ಹಾಗೇ ಇಂಟಿಗ್ರೇಷನ್ ಅಥವಾ ರೀ ಆರ್ಗನೈಜೇಷನ್ ಮೇಲಿಂದ ಮೇಲೆ ಆಗತಕ್ಕ ವಿಷಯವಲ್ಲ. ಇದು ಎಕ್ಸ್ಟ್ರಾರ್ಡಿನರಿ ಇವೆಂಟು, ಇಂಥ ಎಕ್ಸ್ಟ್ರಾರ್ಡಿನರಿ ಇವೆಂಟಿನಲ್ಲಿ ಕೂಡ ನಾನಾ ಭಾಗಗಳಿಂದ ಬಂದಂಥ ಸರ್ಕಾರಿ ನೌಕರರನು ಇಂಟಿಗ್ರೇಟ್ ಮಾಡಬೇಕಾದರೆ ಬಹಳ ಕಷ್ಟದಾಯಕವಾದುದು ಎನ್ನುವ ಮಾತನ್ನು ಮಾನ್ಯ ಸದಸ್ಯರು ನಂಬುತ್ತಾರೆಂದು ಭಾವಿಸುತ್ತೇನೆ. ಇಂಟಿಗ್ರೇಷನ್ ಆದನಂತರ ನಾನು ಮೊದಲೇ ಹೇಳಿದ ಹಾಗೆ ಸೆಂಟ್ರಲ್ ಗೌವರ್ನಮೆಂಟ್ ಇದರ ಸಂಪೂರ್ಣ ಅಧಿಕಾರವನ್ನು ಇಟ್ಟುಕೊಂಡಿದ್ದಾರೆ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ಮಾಡುವ ಅಧಿಕಾರ ನಮ್ಮ ಸರ್ಕಾರದ್ದು ಅಲ್ಲ. ಅದು ಸಂಪೂರ್ಣವಾಗಿ ಸೆಂಟ್ರಲ್ ಗೌವರ್ನಮೆಂಟಿನ ಅಧಿಕಾರ ಆದರೆ ಪ್ರಾವಿಷನ್‌ಲ್ ಲಿಸ್ಟ್ ತಯಾರು ಮಾಡುವಾಗ ಸೆಂಟ್ರಲ್ ಗೌವರ್ನಮೆಂಟಿನವರು ಕೆಲವೊಂದು ಪ್ರಿನ್ಸಿಪಲ್‌ಗಳನ್ನು ಹಾಕಿಕೊಟ್ಟಿದ್ದಾರೆ. ನಿನ್ನೆ ನಾನು ಹೇಳಿದ್ದೆ, ನೇಚರ್ ಆಫ್ ಪೋಸ್ಟ್, ಕ್ವಾಲಿಫಿಕೇಷನ್ ರೆಸ್ಪಾನ್ಸಿಬಿಲಿಟಿ ಮತ್ತು ಪೇ ಅಟಾಚಡ್ ಟು ದಿ ಪೋಸ್ಟ್ ಗಮನದಲ್ಲಿಟ್ಟುಕೊಂಡು, ಇಕ್ವೇಷನ್ ಆಫ್ ಪೋಸ್ಟ್ ಮಾಡಿ ಎಂದು ಕೆಲವು ನಿಯಮಗಳನ್ನು ಕೇಂದ್ರ ಸರಕಾರದವರು ಹಾಕಿಕೊಟ್ಟಿದ್ದರು. ಆ ದೃಷ್ಟಿಯಿಂದ ಇಕ್ವೇಷನ್ ಮಾಡುವಾಗ ಆಯಾಯಾ ಡಿಪಾರ್ಟ್‌ಮೆಂಟ್ ಮಾಹಿತಿಗಳನ್ನು ಸಂಕಲನ ಮಾಡಿ ಪ್ರಾವಿಷನಲ್ ಸೀನಿಯಾರಿಟಿ ಲಿಸ್ಟ್ ಮಾಡುವಾಗ ಬಹಳ ಕಷ್ಟಪಟ್ಟುಕೊಂಡು ಅನೇಕ ದಿವಸದವರೆಗೆ ಮಾಡಿ

ದ್ದಾರೆ. ಪ್ರೊವಿಷನಲ್ ಲಿಸ್ಟ್ ಮಾಡಿದ ನಂತರ ಆ ಪ್ರೊವಿಷನಲ್ ಲಿಸ್ಟ್‌ನ ಆಧಾರದ ಮೇಲೆ ಪುನಃ ಫೈನಲ್ ಲಿಸ್ಟ್ ಆಗುವವರೆಗೆ ಪ್ರಮೋಷನನ್ನು ಕೊಟ್ಟು ಕೊಂಡು ಹೋಗಬೇಕೆಂಬ ನಿರ್ದೇಶನವನ್ನು ಕೇಂದ್ರ ಸರಕಾರದವರು ಇತ್ತಿದ್ದಾರೆ. ಆ ಪ್ರಕಾರ ಕೆಲವು ಆಫೀಸರುಗಳ ಮತ್ತು ಕೆಲವು ನೌಕರರುದಾರರು ಪ್ರೊವಿಷನಲ್ ಲಿಸ್ಟ್ ಮಾಡುವಾಗ ಈ 4 ಪ್ರಿನ್ಸಿಪಲ್‌ಗಳನ್ನು ಸರಿಯಾಗಿ ಮತ್ತು ಸಮಂಜಸವಾಗಿ ಪರಿಶೀಲನೆ ಮಾಡಲಿಲ್ಲ. ಇನ್ ಕರೆಕ್ಟ್ ಇನ್‌ಫರ್ಮೇಷನ್ ಅಥವಾ ಡೇಟಾ ಮೇಲೆ ಹೆಚ್ಚು ಕಡಿಮೆ ಮಾಡಿದ್ದಾರೆ ಎನ್ನುವ ತಿಳುವಳಿಕೆಯ ಮೇಲೆ ರಿಟ್ ಪೆಟಿಷನ್‌ಗಳನ್ನು ಹಾಕಿ ಪ್ರೊವಿಷನಲ್ ಲಿಸ್ಟ್ ಚಾಲೆಂಜ್ ಮಾಡಿ ಹೈ ಕೋರ್ಟಿಗೆ ಹೋದರು.

Mr. Deputy Spekaer in the Chair.

ಹೈಕೋರ್ಟಿಗೆ ಸೇರಿದಂಥ ರಿಟ್ ಪೆಟಿಷಸನ್‌ಗಳಿಗೆ ಸ್ಟೇ ಸಹ ಕೊಟ್ಟಿದ್ದಾರೆ. ಹೈಕೋರ್ಟು ಕೊಟ್ಟಂಥ ಸ್ಟೇಗಳ ಪರಿಣಾಮವಾಗಿ, ಪ್ರೊವಿಜನಲ್ ಲಿಸ್ಟ್ ಅಮಲ ಜಾವಣೆ ಆಗದೆ ಹಾಗೆಯೇ ಉಳಿದಿವೆ. ಇದೂ ಅಲ್ಲದೆ ಅನೇಕ ರಿಟ್ ಪೆಟಿಷನ್ನು ಗಳನ್ನು ಪ್ರೊವಿಜನಲ್ ಲಿಸ್ಟ್ ಆಧಾರದ ಮೇಲೆ ಮಾಡುತ್ತಾ ಇರುವಾಗ ಹೈಕೋರ್ಟಿನ ಇನ್‌ಟರ್‌ಫಿಯರೆನ್ಸಿನಿಂದಾಗಿ, ಮತ್ತು ಸ್ಟೇ ಪರಿಣಾಮದಿಂದಾಗಿ ಇದರಲ್ಲಿ ಫೈನಲ್ ಸೀನಿಯಾರಿಟಿ ಲಿಸ್ಟ್ ಮಾಡುವುದು ಸ್ವಲ್ಪ ವಿಳಂಬವಾಗಿದೆ. ಇದಕ್ಕೆ ಸೆಂಟ್ರಲ್ ಗವರ್ನಮೆಂಟ್ ಅಡ್ವೈಸರಿ ಕಮಿಟಿ ಇದೆ. ಆ ಅಡ್ವೈಸರಿ ಕಮಿಟಿಯವರು ಅಬ್‌ಜಕ್ಷನ್ ಕಾಲ್‌ಫಾರ್ ಮಾಡಿ ಕೊನೆಯ ನಿರ್ಣಯ ಸೆಂಟ್ರಲ್ ಗವರ್ನಮೆಂಟಿನವರು ತೆಗೆದುಕೊಂಡು ಫೈನಲ್ ಲಿಸ್ಟ್ ಮಾಡಬೇಕಾದರೆ ಅವರಿಗೆ ಬಹಳ ಕಾಲ ಹಿಡಿದಿದೆ. ಉದಾಹರಣೆಯಾಗಿ ತಮಗೆ ಹೇಳುವುದಾದರೆ, 39-40 ಸಾವಿರ ಜನ ನೌಕರರು ಇದ್ದಂಥ ಸಮಯದಲ್ಲಿ ಪ್ರತಿಯೊಬ್ಬ ಆಫೀಸರ ವಿಷಯ ವಾಗಿ ಮಾಹಿತಿ ಕಲೆಕ್ಟ್ ಮಾಡಿ, ಅಬಜಕ್ಷನ್ ಸ್ವೀಕಾರ ಮಾಡಿ ಕೊನೆಗೆ ನಿರ್ಣಯ ತೆಗೆದುಕೊಳ್ಳಬೇಕಾದರೆ, ಈ ದೊಡ್ಡ ಸಮಸ್ಯೆ ಬಗ್ಗೆ ಸಾಕಷ್ಟು ವ್ಯಾಳ್ಯವಿನಿಮಯ ಆಗಿದೆ ಎನ್ನುವುದನ್ನು ಒಪ್ಪುತ್ತಾರೆಂದು ನಾನು ಭರವಸೆ ತಾಳಿದ್ದೇನೆ. ನಿನ್ನೆ ನಾನು ಹೇಳಿದ ಹಾಗೆ 39 ಸಾವಿರ ನೌಕರದಾರರಲ್ಲಿ ಕೇವಲ 1800 ಜನರ ಬಗ್ಗೆ ಮಾತ್ರ ಫೈನಲ್ ಲಿಸ್ಟ್ ಆಗಿಲ್ಲ ಎನ್ನುವುದನ್ನು ತಮ್ಮ ನಜರಿಗೆ ಸಾದರು ಪಡಿಸಿದ್ದೇನೆ. ಇದರಲ್ಲಿ ಕೇಂದ್ರ ಸರ್ಕಾರದ್ದಾಗಲೀ, ಅಥವಾ ನಮ್ಮ ರಾಜ್ಯ ಸರ್ಕಾರದ್ದೇ ಆಗಲಿ ಯಾವುದೇ ತಪ್ಪು ಅಥವಾ ಹೊಣೆಗಾರಿಕೆ ಇದೆ ಎನ್ನುವ ಮಟ್ಟಿನ ಮಾತ್ರ ನಾನು ಒಪ್ಪುತ್ತಾ ಇಲ್ಲ. ಆಯಾಯ ಕಾಲಕ್ಕನುಗುಣವಾಗಿ ಅದರಲ್ಲಿ ವೇಳ್ಯ ವಿನಿಮಯವಾಗಿದೆಯೇ ಹೊರತು, ಅವರು ಚಾಲೆಂಜ್ ಮಾಡುವಂಥ ರೀತಿ ನೀತಿಗಳನ್ನು ನೋಡಿ ಸಾಮಾನ್ಯವಾಗಿ ಅಲ್ಲಿ ತೊಡಕು ಬಂದಿವೆ ಎಂದು ಹೇಳ ಬೇಕೇ ವಿನಾ ಒಮ್ಮೆ ಪ್ರೊವಿಜನಲ್ ಲಿಸ್ಟ್ ಮಾಡಿದ ನಂತರ ಹೆಡ್ ಆಫ್ ದಿ ಡಿಪಾರ್ಟಮೆಂಟ್ ಇಚ್ಛಾನುಸಾರವಾಗಿ ಪ್ರಮೋಷನ್ಸ್ ಕೊಟ್ಟುಕೊಂಡು ಬಂದಿಲ್ಲ,

(ಶ್ರೀ ಡಿ. ಕೆ. ನಾಯ್ಕರ್)

ಅಲ್ಲಿ ಅನ್ಯಾಯ ಮಾಡಿದೆ ಎನ್ನುವುದನ್ನು ಸರ್ಕಾರ ಒಪ್ಪುತ್ತಾ ಇಲ್ಲ.

ಶ್ರೀ. ಎಂ. ಎಸ್. ಕೃಷ್ಣನ್.—ಪ್ರೊವಿಜನಲ್ ಲಿಸ್ಟ್ ಮಾಡಿದ್ದು ಸರಿ, ಅದರಲ್ಲಿ ತೊಡಕುಗಳು ಇಲ್ಲ, ಸರಿಯಾಗಿ ನ್ಯಾಯವಾಗಿ ಮಾಡಿದ್ದಾರೆ ಎಂದು ನಿಮ್ಮ ಅಭಿಪ್ರಾಯವೇ ?

ಶ್ರೀ ಡಿ. ಕೆ. ನಾಯ್ಕರ್.—ಪ್ರೊವಿಜನಲ್ ಲಿಸ್ಟ್ ಮಾಡುವಾಗ ನಾನು ಹೇಳಿದ ಹಾಗೆ 39,000 ಜನರ ಪ್ರೊವಿಜನಲ್ ಸೀನಿಯಾರಿಟಿ ಲಿಸ್ಟ್ ಮಾಡಬೇಕಾದರೆ ಡಿಫೆಕ್ಟಿವ್ ಇನ್‌ಫರ್‌ಮೇಷನ್‌ನಿಂದ ಅಥವಾ ಇನ್ನು ಯಾವುದೇ ರೀತಿಯಿಂದ ಒಂದೆರಡು ಹೆಚ್ಚು ಕಡಿಮೆ ಆಗಿರಬಹುದು. ಅದು ಸ್ವಯಂಕೃತ ಅಪರಾಧ ಎಂದು ಹೇಳಿದರೆ ನಾನು ಹೊಣೆಯಲ್ಲ. ಅದು ಬುದ್ಧಿಪೂರ್ವಕವಾಗಿ ಮಾಡಿದಂಥ ಕೃತ್ಯಗಳು ಇದ್ದರೆ ಮಾತ್ರ ಅವನ್ನು ಅಪವಾದ ಎಂದು ತಿಳಿದು ಕೊಂಡಿದ್ದೇನೆ. ಆದುದರಿಂದ ಯಾವುದಾದರೂ ಒಂದು ಕಾರಣದಿಂದ ಸೀನಿಯಾರಿಟಿ ಪಟ್ಟಿಯಲ್ಲಿ ಹೆಚ್ಚು ಕಡಿಮೆ ಆದಾಗ ಅದನ್ನು ಹೆಡ್ ಆಫ್ ಡಿಪಾರ್ಟ್‌ಮೆಂಟ್ಸ್ ಬುದ್ಧಿಪೂರ್ವಕವಾಗಿ ಮಾಡಿದ್ದಾರೆ ಎಂಬುದನ್ನು ನಾನು ಒಪ್ಪುತ್ತಾ ಇಲ್ಲ. ಅದೂ ಅಲ್ಲದೆ ನಾನು ಹೇಳಿದೆ ಏನೆಂದರೆ ದೇಶಾದ್ಯಂತ ಮಾಹಿತಿ ಕಲೆಕ್ಟ್ ಮಾಡುವಾಗ ಅವರಲ್ಲಿ ಹೆಚ್ಚು ಕಡಿಮೆ ಆಗಿದ್ದ ಕಾರಣ ರಿಟ್ ಪೆಟಿಷನ್ಸ್ 1969 ರಿಂದ ಬಂದಿದೆ. ಫೈನಲ್ ಸೀನಿಯಾರಿಟಿ ಲಿಸ್ಟ್ 1964—65 ರಿಂದ ಬರಬೇಕಾಗಿತ್ತು. ಪ್ರೊವಿಜನಲ್ ಫೈನಲ್ ಲಿಸ್ಟ್‌ನಲ್ಲಿ ತಮ್ಮ ಸ್ಥಾನಮಾನಗಳು ಹೆಚ್ಚು ಕಡಿಮೆ ಆದುದರಿಂದ ಅನೇಕ ಜನ ಗೌರ್ನಮೆಂಟ್ ಸರ್ವೆಂಟ್ಸ್ ರಿಟ್ ಪೆಟಿಷನ್ಸ್ ಮಾಡಿದಂಥ ಉದಾಹರಣೆಗಳು ನನ್ನ ನಜರಿಗೆ ಬಂದಿದೆ. ಆದುದರಿಂದ ಕಾಲಾವಕಾಶ ಇಂಥಾದ್ದರಲ್ಲಿ ವ್ಯಯ ಆಗಿದೆಯೇ ಹೊರತು, ಇದರಲ್ಲಿ ಕೇಂದ್ರ ಸರ್ಕಾರದ ಬೇಜವಾಬ್ದಾರಿ ಅಥವಾ ನಮ್ಮ ರಾಜ್ಯಸರ್ಕಾರದ ಬೇಜವಾಬ್ದಾರಿ ಇದಕ್ಕೆ ಇಲ್ಲ. ನಮ್ಮ ಮಿಸ್‌ಡೀಡ್ಸ್ ನಮ್ಮ ಮಿಸ್ಟೇಕ್ಸ್ ರೆಕ್ಟಿಫೈ ಮಾಡುವುದಕ್ಕೋಸ್ಕರ ಈ ಬಗೆಯ ಬಿಲ್ ತಂದಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇಲ್ಲ. ಅದು ಸಮರ್ಥನೀಯವಲ್ಲ ಎಂದು ನಾನು ತಮ್ಮ ಎದುರಿಗೆ ಹೇಳಬಯಸುತ್ತೇನೆ.

ಕಾನೂನು ಬಗ್ಗೆ ನಾನು ಹೇಳಿದೆ, ಮಾನ್ಯ ಕೃಷ್ಣನ್‌ರವರು ಹೇಳಿದ ಹಾಗೆ ಯಾವ ಪೋಸ್ಟ್‌ನಲ್ಲಿ ಒಬ್ಬ ಮನುಷ್ಯ ಅಧಿಕಾರ ವಹಿಸಿಕೊಂಡು ಕೆಲಸ ಮಾಡುತ್ತಾನೋ ಅಂಥ ಮನುಷ್ಯನಿಗೆ ಮಾತ್ರ ಆ ಸ್ಥಾನಕ್ಕೆ ಅನುಗುಣವಾಗಿ ಅಥವಾ ಆ ಪೋಸ್ಟ್‌ಗೆ ಅನುಗುಣವಾಗಿ ಇರತಕ್ಕ ಪಗಾರವನ್ನು ಹೊಂದಲಿಕ್ಕೆ ಅರ್ಹ ಪರಿಸ್ಥಿತಿ ಇದೆ. ಈಗ ದುಡಿಯಲಿಕ್ಕೆ ಸ್ಥಾನ ಇಲ್ಲದೆ ಇರುವಾಗ ಕೆಳಗಿನ ತರಗತಿಯ ಸ್ಥಾನ

ರಿಂದ ಹೈಯರ್ ಸ್ಕೇಲ್‌ಗೆ ಪ್ರಮೋಷನ್ ಕೊಟ್ಟಾಗ, ಅರಿಯರ್ಸ್ ಕೊಡಬೇಕು ಎನ್ನುವುದು ನಿಜವಾದ ತತ್ವಕ್ಕೆ ವಿರುದ್ಧವಾದುದು. ಹೈಕೋರ್ಟ್ ಕೆಲವು ಕೇಸ್‌ಗಳಲ್ಲಿ 3 ವರ್ಷದವರೆಗೆ ಅರಿಯರ್ಸ್ ಕೊಡಬೇಕು ಎಂದು ತೀರ್ಮಾನ ಕೊಟ್ಟಿದೆ. ಇನ್ನು ಕೆಲವು ಕೇಸ್‌ಗಳಲ್ಲಿ ಅರಿಯರ್ಸ್ ಕೊಟ್ಟೇ ಇಲ್ಲ. ಮತ್ತೆ ತಮಗೆ ಕಾನೂನು ರೀತ್ಯಾ ಹೇಳುವುದಾದರೆ, ಸ್ವಾಮಿ ಇದರಲ್ಲಿ ಅರಿಯರ್ಸ್ ಸಿಕ್ಕ ಬೇಕಾದರೆ, ಹೈಕೋರ್ಟಿನವರು ಕೊಡುವಂಥಾದ್ದು ಸಮರ್ಥನೀಯ ಎಂದು ನಾನು ಹೇಳುವು ದಿಲ್ಲ. ಅರಿಯರ್ಸ್ ಕ್ಲೈಂ ಮಾಡಬೇಕಾದರೆ ಲಿಮಿಟೇಷನ್ ಬಾಧೆ ಬರುತ್ತದೆ. ಅದನ್ನು ಪುನಃ ಕೋರ್ಟಿಗೆ ಹೇಳಿ ಪಡೆಯುವುದಕ್ಕೆ ಅವಕಾಶ ಇದೆ. ಆದ್ದರಿಂದ ಹೈಕೋರ್ಟಿಗೆ ನಾವು ಯಾವುದೇ ರೀತಿಯ ಅವಮಾನ್ಯ ಮಾಡುವುದಾಗಲೀ........

ಶ್ರೀ ಎಂ. ಎಸ್. ಕೃಷ್ಣನ್ :—ಅರಿಯರ್ಸ್ ಕೊಡುವುದರಲ್ಲಿ ಲಿಮಿಟೇಷನ್ ಬಾಧೆ ಹೇಗೆ ಬರುತ್ತದೆ? ಏನಾದರೂ ಮೊದಲೇ ಟೈಂ ಬಾರ್‌ನೊಳಗೆ ರಿಟ್ ಪಿಟಿಷನ್ ಹಾಕದೇ ಹೋದರೆ, ಆಗಬಹುದು. ರಿಟ್ ಹಾಕಿ ವ್ಯವಹಾರ ನಡೆ ಯುತ್ತಿದ್ದರೆ ಅವರ ಮೇಲೆ ಕೋರ್ಟ್ ತೀರ್ಮಾನ ಮಾಡಿದಮೇಲೆ ಬಾಧೆ ಹೇಗೆ ಬರುತ್ತದೆ?

ಶ್ರೀ ಡಿ. ಕೆ. ನಾಯ್ಕರ್ :—ಮನಿ ರಿಕವರಿ ಮಾಡಬೇಕಾದರೆ ಯಾವ ಲಿಮಿಟೇಷನ್ ಬಾಧೆ ಬರುತ್ತದೋ, ಅದು ಬರುತ್ತದೆ. ಅದಕ್ಕೋಸ್ಕರ ಈಗ ನಾನು ಹೇಳಿದ ಹಾಗೆ ಹೈಕೋರ್ಟಿನ ಹುಕುಂ ಅನ್ನು ಡೆಫರ್ ಮಾಡುವ ರೀತಿ ಯಲ್ಲಿ ಬಿಲ್ಲನ್ನು ತಂದಿದ್ದೇವೆ ಎನ್ನುವುದನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ. ಕಾನೂನು ರೀತಿ ಹೇಳುವುದಾದರೆ, ಮಾನ್ಯ ಸದಸ್ಯರಿಗೆ ತಿಳಿಸಪಡಿಸುತ್ತೇನೆ, ರೆಟ್ರಾಸ್ಪೆಕ್ಟೀವ್ ಕಾನೂನು ಮಾಡುವಂಥ ಅಧಿಕಾರ ಲೆಜಿಸ್ಲೇಚರ್‌ಗೆ ಇದೆ ಎಂದು ಸುಪ್ರೀಂಕೋರ್ಟ್ ಹೋಲ್ಡ್ ಮಾಡಿದ್ದಾರೆ. ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ಕಾನೂನು ಮಾಡುವ ಅಧಿಕಾರ ಲೆಜಿಸ್ಲೆಚರ್‌ಗೆ ಇದೆ ಎಂದು ಹೇಳುವಾಗ, ರೆಟ್ರಾಸ್ಪೆಕ್ಟೀವ್ ಎಫೆಕ್ಟಾಗಿ ಜಾರಿಗೆಬರುವಂಥ ಕಾನೂನು ನಾವು ತಂದಿದ್ದೇವೆ. 1-11-1956 ರಿಂದ ಇಂಥ ಒಂದು ಕಾನೂನನ್ನು ನಾವು ಜಾರಿಗೆ ತಂದಿದ್ದೇವೆ. ಸುಪ್ರೀಂಕೋರ್ಟಿನವರ ನಿರ್ಣಯದ ಪ್ರಕಾರ ಈ ಬಗ್ಗೆ ಲೆಜಿಸ್ಲೇಚರ್ ಕಾಂಪಿ ಟೆಂಟ್ ಆಗಿದೆ ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ:—ರೆಟ್ರಾಸ್ಪೆಕ್ಟೀವ್ ಅಂದರೆ, ಎಷ್ಟು ವರ್ಷದ ಹಿಂದಿನಿಂದ?

ಶ್ರೀ ಡಿ. ಕೆ. ನಾಯ್ಕರ್ :—ಎಷ್ಟು ವರ್ಷ ಹಿಂದಿನಿಂದಲೂ ಆದರೂ ತರಬಹುದು.

ಶ್ರೀ ಎಚ್. ಡಿ. ದೇವೇಗೌಡ :—ನಾಯ್ಕರ್‌ರವರು ಹುಟ್ಟದೇ ಇದ್ದ ಹಿಂದಿನ ಕಾಲದಿಂದಲೂ ತೆಗೆದುಕೊಳ್ಳಬೇಕು ಎಂದು ಅರ್ಥವೇ ?

ಶ್ರೀ ಡಿ. ಕೆ. ನಾಯ್ಕರ್ :—ನಾನು ಕಾಂಪಿಟೆನ್ಸ್ ಆಫ್ ಲೆಜಿಸ್ಲೇಚರ್ ವಿಚಾರ ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್: ಲೆಜಿಸ್ಲೇಚರ್ ರೆಟ್ರಾಸ್ಪೆಕ್ಟೀವ ಎಫೆಕ್ಟಿನಿಂದ ಕಾನೂನು ಮಾಡುವುದನ್ನು ನಾವು ಪ್ರಶ್ನೆ ಮಾಡಲಿಲ್ಲ.

The question is whether the Government can bring forward such a Legislation. Even if the Legislature is competent, from other points of view, which you have professed and which you are saying and about which you are not prepared to answer, you cannot bring forward such a Legislation.

ಶ್ರೀ ಡಿ. ಕೆ. ನಾಯ್ಕರ್.—ರೆಟ್ರಾಸ್ಪೆಕ್ಟೀವೆ ಎಫೆಕ್ಟ್ ಕಾನೂನು ಮಾಡುವ ಅಧಿಕಾರ ನಾವು ಹೊಂದಿದ ಮೇಲೆ ಇಂತಹ ಕಾನೂನನ್ನು ನಾವು ತರುವುದರಲ್ಲಿ ಯಾವ ತಪ್ಪೂ ಇಲ್ಲ, ಕಾನೂನಿನ ಬಾಧೆಯೂ ಇಲ್ಲ. ಇನ್ನೊಂದು ಸಮರ್ಥನೆ ನಾವು ಹೇಳುವುದಾದರೆ, ಇದರಲ್ಲಿ ಏನಾಗುತ್ತಿದೆ, ಈ ಕಾನೂನು ಜಾರಿಗೆ ಬಂದರೆ, ಹೈಕೋರ್ಟಿನ ಹುಕುಂಗಳು ಎಷ್ಟರಮಟ್ಟಿಗೆ ಇನ್‌ಆಪರೇಟಿವೆ ಆಗಿ ಉಳಿಯುತ್ತದೆ ಎಂದರೆ, ಅರಿಯರ್ಸಿಗೆ ಮಾತ್ರ ಪ್ರಮೋಷನ್‌ಗೆ ಇಲ್ಲ. ಆ ಹುಕುಂನ ಆಧಾರದ ಮೇಲೆ ತೀರ್ಮಾನ ಕೊಡುವಂಥಾದ್ದು ಉಳಿಯುತ್ತದೆ. ಯಾರು ಯಾರು ಸೀನಿಯಾರಿಟಿ ಹುಕುಂನ ಪ್ರಕಾರ ಬಡ್ತಿ ತೆಗೆದುಕೊಳುವುದಕ್ಕೆ ಅರ್ಹತೆ ಪಡೆದಿದ್ದಾರೋ ಅವರಿಗೆ ಪ್ರಮೋಷನ್ ಎಲ್ಲಾ ಬರುತ್ತದೆ. ಅವರು ಕಳೆದು ಕೊಳ್ಳುವುದೇನೆಂದರೆ, ಕೇವಲ ಅರಿಯರ್ಸ್ ಮತ್ತು ಕೇಂದ್ರ ಸರ್ಕಾರದವರು ಪಂಜಾಬ್ ಸರ್ಕಾರಕ್ಕೆ ಈ ಬಗ್ಗೆ ಆದೇಶ ನೀಡಿದಾಗ, ಅವರು ಅದನ್ನು ಅನುಸರಿಸಿದ್ದಾರೆ.

ಶ್ರೀ ವಿ. ಎಸ್. ಪಾಟೀಲ್.—ಆನರಬಲ್ ಮಿನಿಸ್ಟರ್ ಲಿಮಿಟೇಷನ್ ಕಾನೂನಿನ ಚೌಕಟ್ಟಿನಲ್ಲಿ ಬರಬೇಕೆಂದು ಹೇಳುತ್ತಾರೆ. When my right is being justified in a Court of Law, when it is justiceable, it taks 10-15 year's time from the date from which my right has been declared, I will be entitled to claim reimbursement for all the losses now faced.

ಇದರಲ್ಲಿ ಲಿಮಿಟೇಷನ್ ಏನಿದೆಯೋ ಅದನ್ನು ರೀಎಗ್ಸಾಮಿನ್ ಮಾಡಬೇಕು.

ಶ್ರೀ ಡಿ. ಕೆ. ನಾಯ್ಕರ್ :—ನಾನು ಮೊದಲೇ ಹೇಳಿದ ಹಾಗೆ ಆ ಲಿಮಿಟೇಷನ್ನಿನಲ್ಲಿ ಅವರಿಗೆ ಚಾನ್ಸ್ ಕೊಡಬಹುದಾಗಿತ್ತು. ಆ ರೀತಿಯಾಗಿ ಪ್ರೊಟೆಕ್ಷನ್ ಕೊಡುವುದಕ್ಕಿಂತ ಅವರು ಕೇಳಿದಂಥ ಹಕ್ಕನ್ನು ನಿರ್ದಿಷ್ಟಪಡಿಸಿ ಅವರ ಚಾರ್ಜನ್ನು ಸಿವಿಲ್ ಕೋರ್ಟಿಗೆ ವಹಿಸಿ ಪರಿಹಾರ ಪಡೆಯಲಿಕ್ಕೆ ಅವರಿಗೆ ಬಿಟ್ಟುಕೊಡಬಹುದಾಗಿತ್ತು. ಕೆಲವರಿಗೆ ಅದೇ ರೀತಿಯಾಗಿ 3 ವರ್ಷ ಕೊಡಿಸಿದ್ದಾರೆ. ಇನ್ನು ಅಧಿಕಾರದ ಬಗ್ಗೆ ಹೇಳುವಾಗ ಹಾಗೂ ರಿಟ್ರಾಸ್ಪೆಕ್ಟಿವ್ ಎಫೆಕ್ಟ ಬಗ್ಗೆ ಕಾನೂನು ಮಾಡುವಾಗ ಲೆಜಿಸ್ಲೇಚರ್‌ನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಿ ಎಂಬ ಪ್ರಶ್ನೆ ಇಲ್ಲಿ ಇಲ್ಲ. ಆದ್ದರಿಂದ ಕಾನೂನು ರೀತ್ಯ ಈ ಬಿಲ್ಲನ್ನು ತರುವುದರಲ್ಲಿ ಸರ್ಕಾರಕ್ಕೆ ಏನೇನು ತೊಂದರೆ ಇರುತ್ತದೆಂಬುದನ್ನು ಈ ಸದನದ ಮುಂದೆ ವ್ಯಕ್ತಪಡಿಸಬೇಕೆಂದು ನಾನು ಮಾನ್ಯ ಸದಸ್ಯರನ್ನು ಕೇಳಿದ್ದಕ್ಕೆ ಅವರಲ್ಲಿ ಕೆಲವರು ಇದರಲ್ಲಿ ಡಬ್ಬಲ್ ಪೇಮೆಂಟ್ ಆಗುವುದಿಲ್ಲವೇ ಎಂದು ಕೇಳಿದರು. ಸುಪ್ರೀಂ ಕೋರ್ಟಿನ ನಿರ್ಣಯದ ಮೇರೆಗೆ ಸ್ಟ್ಯಾಚುಟರಿ ಎವಿಡೆನ್ಸನ್ನು ಎಕ್ಸರ್‌ಸೈಜ್ ಮಾಡುವಾಗ 1970ನೇ ಮತ್ತು 1967ನೇ ಇಸವಿಯ ಕೇಸಸ್ ಬಗ್ಗೆ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೇವೆ. ಈ ಅಪಾಯಿಂಟ್‌ಮೆಂಟ್ ಪ್ರಶ್ನೆ ಆರ್ಟಿಕಲ್ 15ರ ಪ್ರಕಾರ ಕನಸಿಡರ್ ಮಾಡುವಾಗ-ಅಪಾಯಿಂಟ್‌ಮೆಂಟ್ ಇನ್‌ಕ್ಲೂಡ್ಸ್ ಪ್ರೊಮೋಷನ್ ಎಂದು ಹೇಳಿದೆ. ಅದನ್ನು ತಾವು ತಿಳಿದುಕೊಳ್ಳಲಿಲ್ಲ. ಅಪಾಯಿಂಟ್‌ಮೆಂಟ್ ಅಂದರೆ ಪ್ರೊಮೋಷನ್ಸ್ ಇನಕ್ಲೂಡ್ ಆಗುತ್ತದೆ. ನಾನು ಬೇಕಾದರೆ ರೂಲಿಂಗ್‌ಗಳನ್ನು ಕೊಡುತ್ತೇನೆ. ತಾವು ಓದಿಕೊಳ್ಳಬಹುದು. ಆದ್ದರಿಂದ ಈ ಪ್ರೊಮೋಷನ್ಸ್‌ನಲ್ಲಿ ಬಾಕಿ ಕೇಸ್‌ನಲ್ಲಿ ಯಾರ ಪೋಸ್ಟ್ ಹೋಲ್ಡ್ ಮಾಡಿದೆ, ಸ್ಟಾಚುಟರಿ ಎವಿಡೆನ್ಸ್ ಎಕ್ಸರ್‌ಸೈಜ್ ಮಾಡಿದೆಯೋ ಅಂತಹವರು ಮಾತ್ರ ಅರಿಯರ್ಸ್ ಪಡೆಯಬೇಕು. ಸುಪ್ರೀಂ ಕೋರ್ಟಿನ ಕಾನೂನನ್ನು ವಿರೋಧ ಮಾಡಿದರೆ ಅದು ಬಹಳ ವ್ಯತಿರಿಕ್ತವಾಗುತ್ತದೆ. ಅಂತಹ ಸಂದರ್ಭವನ್ನು ಮೊಟಕು ಮಾಡುವುದಕ್ಕೋಸ್ಕರ ಈ ಬಗೆಯ ಬಿಲ್ಲನ್ನು ಸರ್ಕಾರ ಇಲ್ಲಿ ತಂದಿದೆಯೆಂದು ಮಾನ್ಯ ಶ್ರೀ ಕೃಷ್ಣನ್‌ನವರು ಹೇಳಿದರು. ಇನ್ನೊಂದು ಶಂಕೆಯನ್ನು ಹೇಳಿದ್ದಾರೆ. ಈ ಬಿಲ್ಲಿನಲ್ಲಿ 311ನೇ ಸೆಕ್ಷನ್ ಪ್ರಕಾರ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಒಂದು ಭಾಗ ವ್ಯತ್ಯಾಸ ಬರುತ್ತದೆಂದು ಅವರು ವ್ಯಕ್ತ ಮಾಡಿದ್ದಾರೆ 311 ಕ್ಲಾಜು (2)ರಲ್ಲಿ ಹೇಳಿರುವ ಪ್ರಕಾರ ಅಪ್ಲಿಕೇಷನ್ ಇದಕ್ಕೆ ಹೊಂದುವುದಿಲ್ಲ. ಏಕೆಂದರೆ, ಅಫಿಷಿಯೇಟಿಂಗ್‌ನಲ್ಲಿ ಯಾವುದೇ ಉದ್ದೇಶವೆಂಬುದು ಸ್ಪಷ್ಟವಾಗಿ 311ರೊಳಗೆ ಬರುವುದಿಲ್ಲ. ಆದನ್ನು ನಾನು ಸವಿಸ್ತಾರವಾಗಿ ಹೇಳುತ್ತೇನೆ. ಸರ್ಕಾರದವರು ಯೋಗ್ಯ ವೇಳೆಯಲ್ಲಿ ಪ್ರೋಮೋಷನ್ ಕೊಡದೆ ಅವರನ್ನು ಪ್ರಿವೆಂಟ್ ಮಾಡಿದ್ದಾರೆಂಬ ಮಾತು ತಪ್ಪು. ಅವರಿಗೆ ಅರಿಯರ್ಸ್ ಕೊಡದೇ ಇರುವುದು ತಪ್ಪು ಎಂಬುದಾಗಿ ಮಾನ್ಯ ಶ್ರೀ ಕೃಷ್ಣನ್ ಅವರು ಹೇಳಿದರು. ಮಾನ್ಯ ಶ್ರೀ ಕೃಷ್ಣನ್ ಅವರಿಗೆ ನಾನು ಸರ್ಕಾರದ ಪತಿ

ಶ್ರೀ. ಡಿ. ಕೆ. ನಾಯ್ಕರ್

ಯಿಂದ ಹೇಳುವುದಾದರೆ, ಆ ರೀತಿ ಪ್ರಿವೆಂಟ್ ಮಾಡುವಂಥಾದನ್ನು ನಾವು ಮಾಡ ಲಿಲ್ಲವೆಂದು ಈಗಾಗಲೇ ಹೇಳಿದೆ. ಸರ್ಕಾರದ ಕಡೆಯಿಂದ ಏನೂ ಅನ್ಯಾಯ ವಾಗಿಲ್ಲ. ಯಾವ್ಯಾವದೋ ಕಾರಣಗಳಿಂದ ಫೈನಲ್ ಲಿಸ್ಟ್ ನಿಜವಾಗಿ ತಡ ವಾಗಿದೆ, ಅದರ ಪರಿಣಾಮವಾಗಿ ಇವೆಲ್ಲವೂ ಆಗಿದೆ. ಆದ್ದರಿಂದ ಸರ್ಕಾರದವರು ಅವರಿಗೆ ಕೊಡುವಂಥ ಪ್ರೊಮೋಷನ್ನನ್ನು ಪ್ರಿವೆಂಟ್ ಮಾಡಿ ಅದರಲ್ಲಿ ಸರ್ಕಾರ ಉಳಿಸಿಕೊಳ್ಳಬೇಕೆಂದು ಏನೂ ಪ್ರಯತ್ನ ಮಾಡಿಲ್ಲ. ಅದನ್ನು ಮಾನ್ಯ ಸದಸ್ಯರು ನಂಬಬೇಕು.

ಇನ್ನು ಮಾನ್ಯ ಶ್ರೀ ದೇವೇಗೌಡರು ಹೇಳುತ್ತಾ ಹೇಳುತ್ತಾ ಸರ್ಕಾರಕ್ಕೆ ಹಣವಿಲ್ಲ, ಪೇಮೆಂಟ್ ಮಾಡುವುದನ್ನು ಉಳಿಸಿಕೊಳ್ಳುವುದಕ್ಕೆ ಈ ಬಗೆಯ ಕಾನೂನನ್ನು ತಂದಿದ್ದಾರೆಂದು ಕಟುವಾಗಿ ಟೀಕೆ ಮಾಡಿದ್ದಾರೆ. ಆದರೆ ನಿಜ ವಾಗಿ ನೋಡಿದರೆ ಅದು ಅಷ್ಟೊಂದು ಸಮಂಜಸವಾಗಲಿಲ್ಲ. ಇದು ಸರಿಯಲ್ಲ. ನಾನು ಮಾನ್ಯ ಶ್ರೀ ದೇವೇಗೌಡರಿಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ಹಣ ಕೊಡುವುದು ಅಷ್ಟೇ ಅಲ್ಲ. ವರ್ಕ್ ಮಾಡದೇ ಇದ್ದರೂ ನಾನು ಹೇಳಿದ ಹಾಗೆ ಯಾರಿಗೋ ಪ್ರೊಮೊಷನ್ ಮಾಡಿ ಅವರಿಗೆ ಕೊಟ್ಟಿದೆ.

ಶ್ರೀ ಎಂ. ಎಸ್. ಕೃಷ್ಣನ್ :....ಪ್ರೊಮೊಷನ್ ಯಾರಿಗೆ ಕೊಡಬೇಕಾ ಗಿತ್ತೋ ಆ ಮನುಷ್ಯನಿಗೆ ಸಿಕ್ಕಲಿಲ್ಲ. ಕೋರ್ಟಿಗೆ ಹೋಗಿ ತೀರ್ಮಾನ ಮಾಡಿ ದ್ದರೂ ಯಾರನ್ನೋ ಪ್ರೊಮೋಟ್ ಮಾಡುವುದು ಸರಿಯಲ್ಲ. ಇವರನ್ನು ಮಾಡ ಬೇಕಾಗಿತ್ತು. ಯಾರ ಪ್ರಯತ್ನದಿಂದ ಪ್ರೊಮೊಷನ್ ಕೊಟ್ಟಿದ್ದಾರೋ ಅವರು ಈಗ ಅಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಡಿ. ಕೆ. ನಾಯ್ಕರ್ : ಅದಕ್ಕೆ ನಮ್ಮದು ತಪ್ಪಲ್ಲ. ಅವರದೂ ತಪ್ಪಲ್ಲ.

ಶ್ರೀ ಎಂ. ಎಸ್. ಕೃಷ್ಣನ್ : ಮೂರಿ ಕಣ್ಣು ಹೋತ್ತನ ಮೇಲೆ ಎಂದು ಹೇಳಿದ ಹಾಗೆ ಇದೆ.

ಶ್ರೀ ಡಿ. ಕೆ. ನಾಯ್ಕರ್ : ಮಾನ್ಯ ಶ್ರೀ ಆರ್ಮುಗಂ ಅವರು ದಿಂಡಿಗಲ್ ಚುನಾವಣೆಯ ವಿಚಾರವಾಗಿ ಮಾತನಾಡುತ್ತಾ ಕೇವಲ 500 ಓಟುಗಳನ್ನು ತೆಗೆ ದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲವೆಂದು ಹೇಳಿದರು. ನಾನೂ ಸಹ ಅವರಿಗೆ ಅದೇ ರೀತಿಯಲ್ಲಿ ರಿಪೋರ್ಟ್ ಮಾಡಿ ಒಂದು ವಿಚಾರವನ್ನು ಹೇಳಬಹುದಾಗಿತ್ತು.

ಅವು ಒಂದು ಟೆಸ್ಟ್ ಐದ್ಯೆದು ವರ್ಷಗಳಿಗೊಮ್ಮೆ ಆ ತರಹ ಒಂದು ಚಾನ್ಸ್ ಬರುತ್ತದೆ. ಅದು ನಿಮಗೂ ಬರುತ್ತದೆ. ನಮಗೂ ಬರುತ್ತದೆ. ಸಧ್ಯಕ್ಕೆ ಆ ಚಾನ್ಸ್ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ : ನೀವು 5 ವರ್ಷಗಳು ಉಳಿದುಕೊಳ್ಳಿ. ಟೆಸ್ಟ್ ಆಮೇಲೆ.

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಈಗ ಒಂದು ವಿಷಯವನ್ನು ತಮ್ಮ ಮುಂದೆ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ಕಾನೂನನ್ನು ತಂದಾಗ್ಯೂ ಈ ಈ ಸಮಸ್ಯೆ ಸಂಪೂರ್ಣವಾಗಿ ಬಗೆಹರಿಸುವುದು ಸರಕಾರಕ್ಕೆ ಜವಾಬ್ದಾರಿ ಇದೆಯೆಂದು ಹೇಳಿದ್ದೇನೆ. ಈ ಸಂಬಂಧದಲ್ಲಿ ಮಾನ್ಯ ಸದಸ್ಯರಿಗೆ ಕಳಕಳಿಯಿಂದ ಹೇಳುವುದೇನೆಂದರೆ, ಈ ಕಾನೂನು ಬಂದನಂತರ ಯಾವತ್ತೂ ಸಂಬಂಧಪಟ್ಟ ಇಲಾಖೆ ಸರಕಾರದ ಆದೇಶದ ಮೇರೆಗೆ ಸೀನಿಯಾರಿಟಿ ಫೈನಲ್ ಲಿಸ್ಟ್ ಮಾಡಿ ಅದರ ಪ್ರಕಾರ ಪ್ರಮೋಷನ್ಸ್ ಮಾಡುವುದನ್ನು ಅನುಸರಿಸಬೇಕು ಈ ಸಮಸ್ಯೆ ಒನ್ಸ್ ಫಾರಾಲ್ ಮುಗಿಯಬೇಕೆಂದು ಈ ಬಿಲ್ಲನ್ನು ತಂದಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಅಲಾಟೀಸ್‌ಗೆ ಮಾತ್ರ ಪ್ರೊವಿಸನ್ ಮಾಡಿ ಅವರಿಗೆ ಅರಿಯರ್ಸ್ ಕೊಡದೆ ಅಲಾಟೀಸ್ ಬಿಟ್ಟು ಉಳಿದ ಸರ್ವೆಂಟ್ಸ್ ಏನಿದ್ದಾರೆಯೋ ಅವರೂ ಕೂಡ ಗ್ರೆಡೇಷನ್ ಲಿಸ್ಟ್ ಮಾಡಬೇಕಾಗಿದೆ. ಇದನ್ನು ಮಾಡುವಾಗ ಅಲ್ಲಿ ಏನಾದರೂ ಹೆಚ್ಚುಕಡಿಮೆಯಾದರೆ, ಅವರಿಗೆ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಡುವುದಿದ್ದರೆ ಅದರಲ್ಲಿ ಡಿಸ್ಕ್ರಿಮಿನೇಷನ್ ಆಗಬಾರದು. ಸರಕಾರ ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನದಲ್ಲಿಟ್ಟುಕೊಂಡು ಮಾಡಿದ್ದನ್ನು ಸೆಕ್ಷನ್ 303 ಹಾಗೂ ಸೆಕ್ಷನ್ 304 ಕ್ಲಾಜುಗಳಲ್ಲಿ ಅಳವಡಿಸಿದೆ.

ಇದರ ತಾತ್ಪರ್ಯ ಇಷ್ಟೆ. ಇದರಲ್ಲಿರತಕ್ಕಂಥ ಸಮಸ್ಯೆಗಳನ್ನು ಒಂದೇ ಸಲ ಬಗೆಹರಿಸಲಿಕ್ಕೆ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದೇವೆ.

4-00 P.M.

ಇನ್ನು ಕೊನೆಯದಾಗಿ ಈ ಸೀನಿಯಾರಿಟಿ ಬಗ್ಗೆ ಕೆಲವು ಮಾನ್ಯ ಸದಸ್ಯರು ಮೆಡಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿ ಹಾಗೆ ಇದೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಹೀಗೆ ಇದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆ ರೀತಿ ಹೇಳಿದಾಗ ಮಾನ್ಯ ಶ್ರೀಮಾನ್ ಹೆಚ್. ಸಿದ್ದವೀರಪ್ಪನವರು ಇವೆಲ್ಲಾ ಇನ್‌ಚಾರ್ಜ್ ಅರೇಂಜ್‌ಮೆಂಟ್ಸ್ ಹೊರತು ಬೇರೇ ಏನೂ ಅಲ್ಲ. ಇದು ಪ್ರಮೋಷನ್ಸ್ ಅಲ್ಲ ಫೈನಲ್ ಆಗಿ ಸೀನಿಯಾರಿಟಿ ಲಿಸ್ಟ್ ಆದಮೇಲೆ ಅದನ್ನು ಸರಿಪಡಿಸುತ್ತೇವೆ ಎಂದು ಹೇಳಿದರು. ಅದೇ ರೀತಿಯಾಗಿ ನಾನೂ ಕೂಡ ಈ ಕಾನೂನು ಜಾರಿಗೆ ಬಂದಮೇಲೆ ಆ ಬೇಸಿಸ್ ಮೇಲೆ ಈ ಡಿಪಾರ್ಟ್‌ಮೆಂಟಿನ ಸೀನಿಯಾರಿಟಿ ಲಿಸ್ಟ್ ಮತ್ತು ಅವರವರ ಕೇಡರ್ ಅಂಡ್ ರೆಕ್ರೂ

(ಶ್ರೀ ಡಿ. ಕೆ. ನಾಯಕರ್)

ಟ್‌ಮೆಂಟ್ ರೂಲ್ಸುಗನುಗುಣವಾಗಿ ಒಂದು ಫೈನಲ್ ಲಿಸ್ಟ್ ಮಾಡಿದ ಮೇಲೆ ಪ್ರಮೋಷನ್ ಮಾಡುತ್ತೇವೆ. ಆದುದರಿಂದ ಮಾನ್ಯ ಸದಸ್ಯರು ಈ ಬಿಲ್ಲನ್ನು ಪಾಸ್ ಮಾಡಲಿಕ್ಕೆ ಸಂಪೂರ್ಣ ಬೆಂಬಲವನ್ನು ನೀಡಬೇಕೆಂದು ಹೇಳುತ್ತೇನೆ. ಅಲ್ಲದೆ ಅವರು ಕೊಟ್ಟಂಥ ಅಮೂಲ್ಯವಾದ ಸಲಹೆಗಳಿಗೆ ಅವರಿಗೆ ಕೃತಜ್ಞತೆಯನ್ನು ಅರ್ಪಿಸಿ ಮತ್ತೊಮ್ಮೆ ಈ ಸಂದರ್ಭವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ತಮಗೂ ಕೂಡ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

MR. DEPUTY SPEAKER.-I will now put the consideration motion to the vote of the house. The question is:

"That the Mysore State Civil Services (Regulation of promotion, pay and pensions) Bill, 1973 be taken into consideration."

The motion was adopted

MR. DEPUTY SPEAKER.—There is one notice of a motion by Sri M. S. Krishnan for referring the Bill to a Joint Select Committee. He may move his motion.

SRI. M. S. KRISHNAN— All of us have signed it Sir Mr. Deve Gowda also has signed it.

I beg to move the following motion under Rule 74 (1) of the Rules of Proceedure

"That the Mysore State Civil Services (Regulation of promotion, pay and pensions) Bill 1973 be referred to a Joint Select Committee consisting of a total number of twelve members, nine from the Assembly and three from the Council and that the concurrence of the Legislative Council be obtained therefor, and that the following members of this House shall be members of the Joint Select Committee;

Sri D. K. Naikar, Minister for Law
,, C. M. Armugam,

,, M. Veerappa Moily,
,, K. Sriramulu,
,, H. D. Devegouda,
,, M. S. Krishnan,
,, Kagodu Thimmappa,
,, B. B. Sayanak,
,, M. M Sajjan,
,, P. C. Shettar.

MR. DEPUTY SPEAKER :—Motion moved :

"That the Mysore State Civil Services (Regulation of promotion, pay and pension) Bill 1973 be referred to a Joint Select Committee consisting of a total number of twelve members, nine from the Assembly and three from the Council and that the concurrence of the Legislative Council be obtained therefor, and that the following members of this House shall be members of the Joint Select Committee :

Sri. D. K. Naikar, Minister for Law
,, C. M. Armugam,
,, M. Veerappa Moily,
,, K. Sriramaulu,
,, H. D. Devegouda,
,, M. S. Krishnan,
,, Kagodu Thimmappa,
,, B. B. Sayanak,
,, M. M. Sajjan,
,, P. C. Shettar."

SRI M. S. KRISHNAN :—Sir, I am moving this motion because I was fondly hoping that there may be no necessity for this if the Minister had conceded at least some of the points which we had raised during the discussion. Unfortunately, the Minister has not conceded even a single point. On the other hand, he has tried to support whatever he has said as

(SRI M. S. KRISHNAN)

usual. Therefore, I and the Hon. Leader of the opposition, Sri Devegowda have been forced to move this amendment for three or four reasons. Even from what the Minister has said, there are several aspects of it about which there is controversy. On the one side, the opposition feels very strongly that there are certain clauses in the Bill which are are not in consonance with the Constitution. Of course, he did not refer to article 311 and 309. He said that it does not attract article 311. He said that officiating is a temporary placement and it is not a reduction.

SRI D.K. NAIKAR: No right or title will accrue to the officiating persons.

SRI M.S. KRISHNAN :—First of all, the wording of this Bill speaks of promotion. The whole approach is a civil servant has been promoted by virtue of the provi sional seniority list and he has been functioning there for some time. It is considered to be officiating. My submission is that this is not officiating ; it is actually functioning in that place for 2, 3, 4 years and from that position he is removed again.

MR. DEPUTY SPEAKER :—The motion is so clear that it does not require any clarification.

SRI M. S. KRISHNAN :—I thought I could convince the Minister. Now the position is this : I think there are certain controversial questions in this. That is why I press that this matter should be referred to Joint Select Committee. One very controversral question is.

SRI D.K. NAIKAR :—This bill is identical to the Bill introduced in the Punjab and almost all the directions carried out by the Punjab Govenment have been adopted in our Government. These directions have also been tested in the Supreme Court. They have been upheld

by the Supreme Court in 1962. Please do not have any doubt about the legal veracity of these provisions.

SRI M. S. KRISHNAN :— The Hon. Minister says that there has been similar Bill in the Punjab and it has been tested in the Supreme Court. I am not conversant with the Punjab Bill and also the Supreme Court decision. So I am not competent to answer. But I do take what he has stated. But even from the point of view of convincing the opposition and taking us along with them, probably, it would not do any harm either to the State or to the interest of any body or the exchequer. if this Bill is referred to a Joint Select Committee, where this matter can be gone into in detail. According to me, it is not a small matter: it is a vital matter for us.

SRI H. S. SIDDAPPA :— When the Supreme Court up held the Punjab High Court Judgement, the Judges of the Supreme Court were different at that time.

SRI M. S. KRISHNAN :— I do not know who were the judges. The second question is, he referred to article 16 and he has referred to some cases which have been decided in that regard.

SRI D. K. NAIKAR : - Please note - 1962 - Supreme Court P-41.

SRI M. S. KRISHNAN-—A controversy has arisen in regard to the position of a person who has got promotion by virtue of the High Court or Supreme Court decision. The position in regard to promotion is that Government itself admits that he has been promoted. The only point is whether he should get arrears or not. To that the answer given is that arrears need not be given on two counts. One is that he did not work and the other is lack of finance. According to me, both are not justifiable. I am not really convinced by the statement that Government is paying to a person who has not worked. The man did

(SRI M. S. KRISHNAN)

not work because he was forced not to work by the Government. If he had been permitted to work, he would have worked Under the circumstances to say that he has not worked and so he is not entitled to arrears is not correct and justifiable morally and legally. Legal it has been decided in favour of the Government servants and not in favour of Government. The Government wants to get out of that legal position by means of this Act. Let this Bill go to a Joint Select Committee and discussed threadbare and let us know how many cases there are and what is the financial implication to the State, and let us find out how to find that money. Under the Payment of Bonus Act, the workers are paid in National Savings Certificate over and above a certain percentage. A similar thing could be done in this case also or some other method could be found to pay the money due to Government servants in instalments. These are matters of detail which can be gone into in the Joint Select Committee.

I cannot understand the question of lack of finance when the Government has got money to pay for so many other things. For instance, they are prepared to pay lakhs and lakhs to the Rayanakere Farm and to the mahavatak but they are not prepared to do justice to class III and class IV people. I am not fighting for the highest official though they may also get the benefit. I think it is very correct that they should be paid and money should not be the consideration. Under these circumstances, the approach of the Government itself is wrong. These points should be discussed and that is why it should go to the Select Committee.

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ಸನ್ಮಾನ್ಯ ಉಪಾಧ್ಯಕ್ಷರೇ, ಇಂಟರ್ ಸ್ಟೇಟ್ ಸೀನಿಯಾರಿಟಿ ಬಗ್ಗೆ ಸರ್ಕಾರದವರು ತಂದಿರತಕ್ಕ ಮಸೂದೆಗೆ ಕೆಲವು ಮಂಡನೆಗಳನ್ನು ಮಾನ್ಯ ಕೃಷ್ಣನ್ ಮತ್ತು ಇತರ ಸ್ನೇಹಿತರು ತಂದಿರುವುದನ್ನು ಅನುಮೋದನೆ ಮಾಡುತ್ತ ಅದರ ಬಗ್ಗೆ ಎರಡು ಮಾತು ಹೇಳಲು ಅಪೇಕ್ಷೆ ಪಡುತ್ತೇನೆ. 1956ನೆ ಇಸವಿಯಲ್ಲಿ ರಾಜ್ಯ ದೊಡ್ಡದಾದ

[illegible] ಸರ್ಕಾರದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳ ಸೀನಿಯಾರಿಟಿ ಬಗ್ಗೆ [illegible] ಇತಿಶ್ರೀ ಹಾಡಬೇಕೆಂದು, ಕೊನೆಯನ್ನು ಮುಟ್ಟಬೇಕು ಎನ್ನುವ ಘನ ಉದ್ದೇಶದಿಂದ ಸರ್ಕಾರದವರು ಈ ಮಸೂದೆಯನ್ನು ತಂದಿದ್ದಾರೆ, ಇದನ್ನು [illegible]ನಾಗ ಅವಸರದಲ್ಲಿ ಅನೇಕ ಸಣ್ಣಪುಟ್ಟ ಅಧಿಕಾರಿ ವರ್ಗದವರಿಗೆ ಇದರಿಂದ ತೊಂದರೆಯಾಗಿದೆ. ಆಗಿನ ಕಾಲದಲ್ಲಿ ಉನ್ನತ ಸ್ಥಾನದಲ್ಲಿರುವ ಅಧಿಕಾರಿಗಳು ಪ್ರಭಾವವನ್ನು ಬೀರಿ ಅವರು ಅದರ ಉಪಯೋಗವನ್ನು ಪಡೆದುಕೊಂಡಿದ್ದಾರೆ. ಆದರೆ ಯಾವ ಒಂದು ಪ್ರಭಾವವನ್ನು ಸಹ ಮಾಡುವುದಕ್ಕೆ ಆಗದೆ ಇರತಕ್ಕ ವ್ಯಕ್ತಿಗಳು ಅನೇಕ ಜನ ದೇಶಕ್ಕೋಸ್ಕರ ಸೇವೆ ಮಾಡಿ ತಮ್ಮ ಕಾರ್ಯವನ್ನು ದೇಶಕ್ಕೋಸ್ಕರ ಮುಡುಪಾಗಿಟ್ಟಂಥ, ನಿಷ್ಕಲವಾದ ಸೇವೆಯನ್ನು ಮಾಡಿದಂಥ ಅನೇಕ ಅಧಿಕಾರಿಗಳಿಗೆ ಇನ್ನೂ ಅನ್ಯಾಯವಾಗಿದೆ ಎನ್ನುವುದನ್ನು ಈ ಸಭೆ ಮನಗಂಡಿದೆ. ಇಂಥ ಕಾಲದಲ್ಲಿ ಸರ್ಕಾರ ಐದು ಕೋಟಿ ರೂಪಾಯಿ ಅಂದಾಜು ಮಾಡಿ ಆ ಹಣವನ್ನು ಕೊಡುವುದಕ್ಕಾಗುವುದಿಲ್ಲವೆನ್ನತಕ್ಕ ಮೂಲ ಉದ್ದೇಶವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ಸರ್ಕಾರ ಲಘುವಾಗಿ ತೆಗೆದುಕೊಳ್ಳ ಬಾರದು. ಮೊನ್ನೆ ತಾನೇ ನಾವು ನೋಡಿದ ಹಾಗೆ ಕೃಷಿಕರ ಋಣ ಪರಿಹಾರಕ್ಕೋಸ್ಕರ ಒಂದು ಕಾನೂನನ್ನು ಅಂಗೀಕಾರ ಮಾಡಿದೆವು. ಯಾರು ದೇಶಕ್ಕೋಸ್ಕರ ದುಡಿದಂಥ ಅಧಿಕಾರಿಗಳಿದ್ದಾರೆ, ಅವರ ಋಣ ಪರಿಹಾರ ಮಾಡ ತಕ್ಕ ಈ ಮಸೂದೆಯನ್ನು ತಂದು ಅವರಿಗೆ ಕೊಡತಕ್ಕ ಹಣವನ್ನು ಕೊಡದೆ ಇರುವ ಹಾಗೆ ಮಾಡಿದರೆ ಕೆಲಸ ಮಾಡಿದಂಥ ಜನತೆಗೆ ಅನ್ಯಾಯ ಮಾಡಿದ ಹಾಗೆ ಆಗುವುದಿಲ್ಲವೇ ? ಇದಕ್ಕೆ ನಾವು ಹೊಣೆಯಲ್ಲ. ಕೇಂದ್ರ ಸರ್ಕಾರ ಹೊಣೆ ಎನ್ನುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಹೇಳಿದರು. ಕೇಂದ್ರ ಸರ್ಕಾರದವರು ಇಂಟರ್‌ಸ್ಟೇಟ್ ಸೀನಿಯಾರಿಟಿ ಪಟ್ಟಿ ಬಗ್ಗೆ ನಿಧಾನ ಮಾಡಿದ್ದರೆ ಅವರಿಂದ ಹಣವನ್ನು ತೆಗೆದುಕೊಳ್ಳಿ. ಆದುದರಿಂದ ಸರ್ಕಾರ ಅವಸರದ ಕ್ರಮ ತೆಗೆದು ಕೊಳ್ಳದೆ ಇದನ್ನು ಜಂಟೀ ಸಲಹಾ ಸಮಿತಿಯವರು ಪರಿಶೀಲನೆ ಮಾಡುವುದಕ್ಕೆ ಸರ್ಕಾರದವರು ಒಪ್ಪಿಕೊಳ್ಳಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ. ಅವಸರದ ಕ್ರಮ ತೆಗೆದುಕೊಳ್ಳಬಾರದು, ಇದರಿಂದ ಅನೇಕ ಜನ ಅಧಿಕಾರಿಗಳಿಗೆ, ನಿರಪರಾಧಿ ಅಧಿಕಾರಿಗಳಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಮಾನ್ಯ ಸ್ನೇಹಿತರು ತಂದಿರುವ ಸೂಚನೆಯನ್ನು ಒಪ್ಪಿಕೊಂಡು ಈ ಮಸೂದೆಯನ್ನು ಜಂಟೀ ಸಲಹಾ ಸಮಿತಿಗೆ ಕಳುಹಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ ಕೆ. ನಾಯ್ಕರ್ :—ಶ್ರೀ ಮಂಜುನಾಥ ಅವರು ಹೇಳಿದ ಹಾಗೆ ಕೇಂದ್ರ ಸರ್ಕಾರದವರದು ತಪ್ಪಿದೆ ಎಂದು ನಾನು ಹೇಳಿಲ್ಲ. ಅವರು ಅಪಾರ್ಥ ಮಾಡಿಕೊಂಡಿದ್ದಾರೆ, ಫೈನಲ್ ಸೀನಿಯಾರಿಟಿ ಪಟ್ಟಿಯನ್ನು ಅಂಗೀಕಾರ ಮಾಡುವ ಹೊಣೆ ಕೇಂದ್ರ ಸರ್ಕಾರದ್ದು ಇತ್ತು. ಆ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಸಮಿತಿಗಳ ಮುಖಾಂತರ ಆಕ್ಷೇಪಣೆಗಳೇನಾದರೂ

(ಶ್ರೀ ಡಿ. ಕೆ. ನಾಯಕರ್)

ಇದ್ದರೆ ಕೊಡಬಹುದು ಎಂದು ಹೇಳಿ ಮತ್ತು ಹೈಕೋರ್ಟಿನಿಂದ ಇದರ ಬಗ್ಗೆ ಕೊಟ್ಟಿದ್ದ ಸ್ಟೇ ವೇಕೆಟ್ ಆದನಂತರ ಎಲ್ಲ ಪೂರ್ತಿಯಾಗಿ, ಪ್ರೊಸೀಜರಲ್ ಮ್ಯಾಟರ್ಸ್‌ನಿಂದ ನಿಧಾನವಾಗಿದೆ. ಯಾರ ತಪ್ಪಿನಿಂದಲೂ ಆಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಕೃಷ್ಣನ್ ಅವರು ಹೇಳಿದ ಹಾಗೆ ಸೀನಿಯಾರಿಟಿ ಪಟ್ಟಿ ತಯಾರು ಮಾಡುವುದರಲ್ಲಿ ವಾಯಿದೆ ಕೊಡಬೇಕಾದುದನ್ನು ಹೆಚ್ಚು ಕೊಟ್ಟಿದ್ದಾರೆ, ಇದರಿಂದ ಹಣ ಕೊಡಬೇಕಾದುದನ್ನು ಕೊಡಬಾರದು ಎನ್ನುವುದು ತಪ್ಪು, ಅದನ್ನು ಪರಿಶೀಲನೆ /ಮಾಡುವುದಕ್ಕೆ ಸೆಲೆಕ್ಟ್ ಕಮಿಟಿಗೆ ಹೋಗಬೇಕು ಎನ್ನುವ ವಾದವನ್ನು ಹೇಳುತ್ತಿದ್ದರು.

ನಾನು ಅವರಿಗೆ ಇಷ್ಟೇ ಹೇಳುತ್ತಿದ್ದೇನೆ, 'ಏನೆಂದರೆ ಪ್ರೋವಿಜನಲ್ ಲಿಸ್ಟ್ ಪ್ರಕಾರ ಸೀನಿಯಾರಿಟಿ ಇದ್ದಂಥ "ವೈ" ಎಂಬ ಅಧಿಕಾರಿಗೆ ಪ್ರಮೋಷನ್ ಕೊಟ್ಟಿರುತ್ತೇವೆ. ಮುಂದೆ ಫೈನಲ್ ಲಿಸ್ಟ್ ತಯಾರಾದ ಮೇಲೆ "ಎಕ್ಸ್" ಎಂಬ ಇನ್ನೊಬ್ಬ ಅಧಿಕಾರಿ ಫೈನಲ್ ಸೀನಿಯಾರಿಟಿ ಲಿಸ್ಟ್‌ನ ಪ್ರಕಾರ "ವೈ" ಸ್ಥಾನ ತನಗೇ ಬರಬೇಕಾಗಿತ್ತು, ತಾರತಮ್ಯವಾಗಿದೆ ಎಂದು ಹೇಳಿದರೆ "ಎಕ್ಸ್"ಗೆ ಯಾವ ಅರ್ಹತೆಯ ಮೇಲೆ ಪ್ರಮೋಷನ್ ಕೊಡುವುದಕ್ಕಾಗುತ್ತದೆ. ಫೈನಲ್ ಲಿಸ್ಟ್‌ನಲ್ಲಿ ತನ್ನ ಹೆಸರು ಮೇಲೆ ಬಂದಿದೆ, ಅದರ ಒಂದು ಪರಿಣಾಮವಾಗಿ ಹಿಂದಿನಿಂದ ಅರಿಯರ್ಸ್ ಕ್ಲೈಂ ಮಾಡುತ್ತೇನೆಂದು ಹೇಳಿದರೆ, ಕಾನೂನು ಪ್ರಕಾರ ಅರಿಯರ್ಸ್ ಕೊಡುವುದಕ್ಕಾಗುವುದಿಲ್ಲವೆಂದು ಈ ಸ್ಟೇಟ್‌ಮೆಂಟಿನಲ್ಲಿ ಹೇಳಿದೆ. ಆದ್ದರಿಂದ ಈ ವಿಚಾರವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಬೇಕೆಂಬ ವಾದದಲ್ಲಿ ಹುರುಳಿಲ್ಲವೆಂದು ಹೇಳುತ್ತೇನೆ. ಮುಖ್ಯವಾಗಿ ಈ ಪ್ರಾವಿಜನ್‌ಗಳು ಸುಪ್ರೀಂ ಕೋರ್ಟಿನ ತೀರ್ಮಾನಕ್ಕೆ ಅನುಗುಣವಾಗಿರುವುದರಿಂದ ಅದನ್ನೇ ನಾವು ಅನುಸರಿಸುತ್ತಿದ್ದೇವೆ. ಆದ್ದರಿಂದ ಇದರಲ್ಲಿ ತಾರತಮ್ಯಕ್ಕೆ ಆಗಲೀ, ಭಿನ್ನಾಭಿಪ್ರಾಯಕ್ಕೆ ಆಗಲೀ, ಅವಕಾಶವಿಲ್ಲದಿರುವುದರಿಂದ ಅವರ ಸೂಚನೆಯನ್ನು ತಳ್ಳಿಹಾಕಬೇಕೆಂದು ಹೇಳುತ್ತೇನೆ.

MR. DEPUTY SPEAKER : The question is :

That the Mysore State Civil Services (Regulation of Promotion, Pay and Pension) Bill, 1973, be referred to a Joint Select Committee, consisting of a total number of twelve numbers, nine from the Legislative Assembly and three from the Legislative Council that

and the concurrence of the Legislative Council be obtained therefor and that the following members of this House shall be members of the Joint Select Committee : *viz.*

SRIYUTHS : D. K. Naikar, Minister for Law
C. M. Armugam
M. Veerappa Moily
K. Sriramulu
H. D. Deve Gowda
M. S. Krishnan
Kagodu Thimmappa
B. B. Sayanak
M. M. Sajjan
P. C. Shettar

The motion was negatived

Clause—2

DEPUTY SPEAKER : I will put clause by clause. Clause-2. There are no amendments. The question is :

"That clause-2 do stand part of the Bill". The motion was adopted clause-2 was added to the bill.

The motion was adopted Clause 2 was added to the bill.

Clause—3

DEPUTY SPEAKER

Clause—3

There is an amendment by Sri M. S. Krishnan.

SRI M. S. KRISHNAN : I move :

"That for sub-clause (1) (a) substitute the following :

Ordinarily be entitled to promotion any post or office with effect from a retrospective date, unless the High Court, Supreme Court or any other judicial authority has decided that retrospective effect be given".

(SRI M. S. KRISHNAN)

"In sub-clause (1) (b) for the words "unless the said............... ... his officiation" substitute the following.—

"unless his work has been found unsatisfactory during the period of the promotion and disciplinary action has been taken in this regard."

MR. DEPUTY SPEAKER : Amendment moved :

"That for sub-clause (1) (a) substitute the following:

"Ordinarily be entitled to promotion any post or office with effect from a retrospective date, unless the High Court, Supreme Court or any other judicial authority has decided that retrospective effect be given."

In sub-clause (1) (a) for the words "unless the said .... his officiation" substitute the following:

"unless his work has been found unsatisfactory during the period of the promotion and disciplinary action has been taken in this regard."

‡ SRI M. S. KRISHNAN .

The whole purpose in moving this amendment is, if the High Court or Supreme Court or any other court has specifically stated promotion be given with retrospective effect and arrears of pay etc., be given from any particular date, that decision has to be implemented. I have already spoken on this question and I believe it is not correct on the part of the Government to deny this because a civil servant who has gone to the High Court will have spent a lot of money. It will be a question of demoralisation of the entire state apparatus, Secondly, my plea is that it poses a serious danger if we agree to the provision mentioned in the Bill, because the same provision can be used for any other purpose also. I am sure the Government if it were to be democratic and help the

common man, cannot bring in such a law. Once they bring in such a law, it can be applied to industrial employees also because there is no bar and power is there in the concurrent list. They can bring in an amendment to the Industrial Disputes Act and it will be a most retrograde step. That is why I have moved this amendment.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕೃಷ್ಣನ್ ಅವರು ತಂದಿರುವ ತಿದ್ದುಪಡಿಯನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗಿನ ಕಾಲವಲ್ಲಿ ಕೋರ್ಟಿಗೆ ಹೋಗಿ ನ್ಯಾಯವನ್ನು ಪಡೆದ ಜನರು ಎಷ್ಟು ಶ್ರಮಪಟ್ಟಿರುತ್ತಾರೆ, ಎಷ್ಟು ನೊಂದಿರುತ್ತಾರೆ ಎಂಬ ಅನುಭವ ಎಲ್ಲರಿಗೂ ಇದೆ. ಕೋರ್ಟಿಗೆ ಹೋದವರು ದುಬಾರಿ ಹಣವನ್ನು ಖರ್ಚು ಮಾಡಿರುವುದೇ ಅಲ್ಲದೆ, ಮಾನಸಿಕವಾಗಿಯೂ ಸಹ ನೊಂದಿರುತ್ತಾರೆ. ಕೋರ್ಟಿನಲ್ಲಿ ನ್ಯಾಯವನ್ನು ಪಡೆದವರಿಗೆ ತಾವು ಪರಿಹಾರವಾಗಿ ಹಣವನ್ನು ಕೊಟ್ಟರೂ ಸಹ, ಅದು ಸಾಲದು . ಏಕೆಂದರೆ ತಾವು ಏನು ಪರಿಹಾರ ಎಂದು ಕೊಡುತ್ತೀರೋ, ಆ ಪರಿಹಾರದ ಹಣಕ್ಕಿಂತ ಹೆಚ್ಚು ಹಣವನ್ನು ಅನೇಕ ಸಂದರ್ಭಗಳಲ್ಲಿ ಅವರು ವ್ಯಾಜ್ಯಕ್ಕಾಗಿ ಖರ್ಚು ಮಾಡಿರುತ್ತಾರೆ ಯಾರು ತಮಗೆ ಅನ್ಯಾಯವಾಗಿದೆ ಎಂದು ಭಾವಿಸುತಾರೋ ಅಂತಹವರು ಕೊನೆಗೆ ಕೋರ್ಟಿಗೆ ಹೋಗುತ್ತಾರೆ. ಕೋರ್ಟಿನವರಾದರೂ ತಮ್ಮ ರಕ್ಷಣೆಗೆ ಬಂದರು, ತಮ್ಮ ಹಕ್ಕನ್ನು ಎತ್ತಿಹಿಡಿದರು ಎಂಬ ತೃಪ್ತಿಯ ಉಸಿರನ್ನು ಬಿಡುವ ಕಾಲಕ್ಕೆ, ನೀವು ಅದನ್ನು ನೆಲಸಮ ಮಾಡಿ ಕೋರ್ಟಿನ ತೀರ್ಮಾನವನ್ನು ಅಲ್ಲಗಳೆಯುವ ಪ್ರಯತ್ನವನ್ನು ಮಾಡುವುದಕ್ಕೆ ಏನು ಹೊರಟಿದ್ದೀರಿ, ಅದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ ಮತ್ತು ಮಾನ್ಯ ಕೃಷ್ಣನ್ ಅವರ ಈ ತಿದ್ದುಪಡಿಗೆ ನನ್ನ ಪೂರ್ಣ ಬೆಂಬಲವನ್ನು ಕೊಡುತ್ತೇನೆ.

‡ SRI D. K. NAIKAR : In respect of the amendment brought by Sri Krishnan I would only point out that section 3 refers to civil servants whose promotions are guided on the basis of gradation list and it does not refer to promotion inrespect of allottees. Section 4 relates to promotion of allottees. We have not made provision for allottees to get retrospective promotion. Such being the case, it would amount to discrimination and it is not proper also.

MR. DETUTY SPEAKER : I will put the amendment to the vote of the House. The question is :—

"That for sub-clause (1) (a) substitute the following:

"Ordinarily be entitled to promotion to any post or office with effect from a retrospective date, unless the High Court, Supreme Court, or any other judicial authority has decided that retrospective effect be given.

In sub-clause (1) (b) for the words 'unless the said .... his officiation" substitute the following:—

'unless his work has been found unsatisfactory during the period of the promotion and disciplinary action has been taken in this regard,'

The amendment was negatived

MR. DEPUTY SPEAKER : The question is :

That clause 3 do stand part of the Bill

The motion was adopted.

Clause 3 was added to the Bill

4-30 P. M.

CLAUSE-4

MR. DEPUTY SPEAKER : There are amendments by Mr. M. S. Krishnan.

SRI M. S. KRISHNAN : Sri, I move the following amendments :

"In sub-clause (1) delete "officiate in" as well as "with effect from a prospective date to be specified in the order":

In sub-clause (2) for the words "but such person shall not be entitled to payment of any arrears for the period prior to the date of his actual promotion.

Substitute "but such person shall be entitled to payment of arrears for the period for which he is entitled to".

In sub-clause (3) delete "but he shall not be entitled to payment of any arrears for the period prior to the date of his actual promotion".

In sub-clause (3) substitute "but he shall not be entitled to payment of any arrears .... actual promotion", by "shall be paid arrears if any he is entitled to".

The following new clause as clause 4(a) shall be added after clause 4.

"4(A) Those Civil Servants who are entitled to arrears by virtue of a decision of a court or authority shall be paid the same either in a lumpsum or in instalments as the Government deems necessary".

MR. DEPUTY SPEAKER : Amendments moved

"That in sub-clause (1) delete "officiate in" as well as "with effect from a prospective date to be specified in the order".

In sub-clause (2) for the words "but such person shall not be entitled to payment of any arrears for the period prior to the date of his actual promotion".

Substitute "but such person shall be entitled to payment of arrears for the period for which he is entitled to".

(MR. DEPUTY SPEAKER)

In sub-clause (3) delete "but he shall not be entitled to payment of any arrears for the period prior to the date of his actual promotion".

In sub-clause (8) substitute "but he shall not be entitled to payment of any arrears ... . actual promotion" by "he shall be paid arrears if any he is entitled to".

The following new clause as clause 4(a) shall be added after clause 4.

"4 (A) Those Civil Servants who are entitled to arrears by virtue of a decision of a court or authority shall be paid the same either in a lumpsum or in instalments as the Government deems necessary"

‡ SRI M. S. KRISHNAN : In sub-clauses (1), (2), (3) and (8) all of them convey the same idea, *viz.* that arrears need not be paid. But we have been urging upon the Government that arrears should be paid. Hence, I have moved the amendments to the said sub-clauses.

Then I have also suggested insertion of a new clause *i.e.*, clause 4(A) in order to accommodate the Government realising its financial difficulties. This amendment suggests that the arrears could be paid either in lumpsum or in instalments. This is a sort of a compromise amendment and I hope it will be acceptable to the Government. Sir, the Government has paid already arrears in several cases and now they plead their difficulty. I have taken into consideration the financial difficulties of the Government as well as the justice to be meeted to the employees. I hope the Government will accept it.

SRI D. K. NAIKAR : I can only say that the amendments proposed by Hon. Member Sri Krishnan are not consistent with the concept of the main Bill and hence I cannot accept them.

MR. DEPUTY SPEAKER: Now, I will put all the amendments to the vote of the House. The question is:

"That in sub-clause (1) delete "officiate in" as well as "with effect from a prospective date to be specified in the order".

In sub-clause (2) for the words "but such person shall not be entitled to payment of any arrears for the period prior to the date of his actual promotion".

Substitute "but such person shall be entitled to payment of arrears for the period for which he is entitled to".

In sub-clause (3) delete "but he shall not be entitled to payment of any arrears for the period prior to the date of his actual promotion".

In sub-clause (8) substitute "but he shall not be entitled to payment of any arrears ....actual promotion" by "he shall be paid arrears if any he is entitled to".

The following new clause as 4(A) shall be added after clause 4:

"4(A) Those Civil Servants who are entitled to arrears by virtue of a decision of a court or authority shall be paid the same either in a lumpsum or in instalment as the Government deems necessary".

The motion was negetived

MR. DEPUTY SPEAKER: The question is:

"That clause 4 do stand part of the Bill"

The motion was adopted

(MR. DEPUTY SPEAKER)

Clause 4 was added to the Bill

CLAUSE 5 TO 13

MR. DEPUTY SPEAKER : The question is :

"That clauses 5 to 13, both inclusive, do stand part of the Bill".

The motion was adopted

"Clauses 4 to 13 both inclusive, were added to the Bill.

CLAUSE 1 ETC.

MR. DEPUTY SPEAKER : The question is :

" That clause 1 the long Title and the preamble Enacting Formula do stand part of the Bill".

SRI H. D. DEVE GOWDA : Sir I press for a division.

The House Divided

MR. DEPUTY SPEAKER . The result of the division is:

Ayes — 45
Noes — 15

The "Ayes" have it

The motion was adopted

Clause 1, long Title the preamble and Enacting Formula were added to the Bill.

Motion to pass

SRI D. K NAIKER : I move :

"That the Mysore State Civil Servants (Regulation of Promotion, Pay and Pension) Bill, 1973 be passed"

MR. DEPUTY SPEAKER : The question is :

SRI H. D. DEVE GOWDA : Sir, before you put the motion to the vote of the House I want to make a statement.

ಇವತ್ತು ಏನೊಂದು ಈ ವಿಧೇಯಕವನ್ನು ತಂದು ಸಂಖ್ಯಾಬಲದ ಆಧಾರದ ಮೇಲೆ ಪಾಸ ಮಾಡಿಕೊಳ್ಳತಕ್ಕಂತಹ ಉದ್ಧಟತನದ ಹವ್ಯಾಸಕ್ಕೆ ಹೊರಟಿದ್ದೀರಿ ಅದರಿಂದ ನೌಕರರು ಕೋರ್ಟಿಗೆ ಹೋಗಿ ನ್ಯಾಯ ಪಡೆಯುವುದಕ್ಕೆ ತಡೆ ಹಾಕಿದ್ದೀರಿ. ಇಂಥ ಕರಾಳ ಶಾಸನ ತರುವ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟನೆ ಮಾಡಿ ನಾವು ಸಭಾತ್ಯಾಗವನ್ನು ಮಾಡುತ್ತೇವೆ.

MR. DEPUTY SPEAKER :—The question is :

"That the Mysore State Civil Services (Regulation of promotion, pay and pension) Bill, 1973, be passed."

The Motion was adopted and the Bill was passed.

MYSORE STATE AGRICULTURAL UNIVERSITIES BILL, 1973, MOTION TO CONSIDER.

SRI K. H. PATIL :—(Minister for Agriculture and Forests) : Sir, I beg to move :—

"That the Mysore State Agricultural Universities Bill, 1973, be taken into consideration.

MR. DEPUTY SPEAKER :—Motion moved :—

"That the Mysore State Agricultural Universities Bill, 1973, be taken into consideration"

ಶ್ರೀ ಕೆ. ಎಚ್. ಪಾಟೀಲ್ :—ಮಾನ್ಯ ಸಭಾಪತಿಗಳೆ, ಇಂದು ಮೈಸೂರು ರಾಜ್ಯದ ಅಗ್ರಿಕಲ್ಚರಲ್ ಯೂನಿವರ್ಸಿಟಿ ಬಿಲ್ಲನ್ನು ಈ ಸದನದಲ್ಲಿ ಮಂಡಿಸುವುದಕ್ಕೆ ಸಂತೋಷ ಮತ್ತು ಅಭಿಮಾನ ಪಡುತ್ತೇನೆ. ಕೆಲವು ದಿವಸಗಳ ಹಿಂದೆ ಬಿಲ್ಲನ್ನು ಸರಿಯಾದ ರೀತಿಯಲ್ಲಿ ಓದಲಾರದೆ ಅಥವಾ ಸರ್ಕಾರದ ಅಭಿಪ್ರಾಯವೇನೆಂಬು

(ಶ್ರೀ ಕೆ. ಎಚ್. ಪಾಟೀಲ್)

ದನ್ನು ತಿಳಿಯದೆ ಕೆಲವು ಸದಸ್ಯರು ಈ ಬಿಲ್ಲನ್ನು ಪ್ರತಿಭಟಿಸಿದರು. ಅದಲ್ಲದೆ ಅನೇಕ ರೀತಿಯ ಕಟ್ಟು ಕತೆಗಳನ್ನು ಕಟ್ಟಿ ಈ ಬಿಲ್ಲಿನ ಬಗ್ಗೆ ನನ್ನ ಮೇಲೆ ಉಗ್ರವಾದ ಟೀಕೆಗಳನ್ನು ಈ ಮನೆಯ ಹೊರಗೂ ಮತ್ತು ಒಳಗೂ ಮಾಡಲಾಯಿತು. ನಾನು ಮಾನ್ಯ ಸದಸ್ಯರುಗಳಿಗೆ ನಿಜವಾದ ರೀತಿಯಲ್ಲಿ ಇವುಗಳನ್ನು ಮುದ್ರಿಸಿ ಕೊಟ್ಟಿದ್ದರೆ ಈ ಪ್ರವಾದ ಆಗುತ್ತಾ ಇರಲಿಲ್ಲವೆಂದು ಕಾಣುತ್ತದೆ. ನಮ್ಮ ಶಾಸನವನ್ನು ಇಂಗ್ಲೀಷ್ ಭಾಷೆಯಲ್ಲಿ ಡ್ರಾಫ್ಟ್ ಮಾಡಿರುವುದರಿಂದ ಮತ್ತು ಅದನ್ನು ತರ್ಜುಮೆಗೊಳಿಸುವುದಕ್ಕೆ ಬೇಕಾದಂತಹ ಪರಿಣತರ ಅಭಾವವಿರುವುದರಿಂದ ಕೆಲವು ದಿವಸ ತೊಂದರೆಯಾಗುತ್ತದೆ.

ಶ್ರೀ ಪಾಟಾಳ್ ನಾಗರಾಜ್:—ನಿಮಗೆ ಟ್ರಾನ್ಸ್‌ಲೇಟ್ ಮಾಡುವುದಕ್ಕೆ ಎಷ್ಟು ಜನ ಬೇಕು ?

ಶ್ರೀ ಕೋಣಂದೂರು ಲಿಂಗಪ್ಪ:—ನಿಮ್ಮ ಅಂಡರ ಸೆಕ್ರೆಟರಿಗಳಲ್ಲಿ ತರ್ಜುಮೆ ಮಾಡುವವರು ಇದ್ದಾರೆ.

ಶ್ರೀ ಕೆ. ಎಚ್. ಪಾಟೀಲ್:—ಈಗ ಇದ್ದಂತಹ ಆಕ್ಟ್ ಏನಿದೆ, ಅದರಲ್ಲಿ ಆಗಿರುವಂತಹ ಬದಲಾವಣೆಗಳನ್ನು ಮತ್ತು ಅದರಲ್ಲಿ ಆಗುವಂತಹ ಸುಧಾರಣೆಗಳು ಏನೆಂಬುದನ್ನು ನಾನು ಸ್ಪಷ್ಟವಾಗಿ ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದರೆ ನನ್ನ ಮೇಲೆ ಯಾವ ದೋಷಾರೋಪಣೆಯನ್ನು ಮಾಡುತ್ತಾ ಇರಲಿಲ್ಲವೆಂದು ತಿಳಿಯುತ್ತೇನೆ. ಕೆಲವು ಪತ್ರಿಕಾಕರ್ತರು ನನ್ನ ಹತ್ತಿರ ಬಂದು ಕೆಲವು ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ನಾನು ಈ ಸದನದಲ್ಲಿಯೇ ಹೇಳಬೇಕಲ್ಲದೆ, ಪತ್ರಿಕಾಕರ್ತರಿಗೆ ಹೇಳಬಾರದು ಎಂದು ಸುಮ್ಮನೆ ಕೂತಿದ್ದೆ. ಅದೇನೆಂದರೆ ಕೆ. ಎಚ್. ಪಾಟೀಲರೇ ಇದನ್ನು ಡ್ರಾಫ್ಟ್ ಮಾಡಿದ್ದಾರೆ; ಲಾ ಡಿಪಾರ್ಟ್‌ಮೆಂಟಿಗೆ ಸಹ ಇದು ಹೋಗಿಲ್ಲ ಮತ್ತು ತಜ್ಞರನ್ನು ಸಹ ಕನ್‌ಸಲ್ಟ್ ಮಾಡಿಲ್ಲವೆಂದು ಕೆಲವರು ಹೇಳಿದ್ದಾರೆ. ಕೇವಲ ಧಾರವಾಡದಲ್ಲಿ ಒಂದು ಯೂನಿವರ್ಸಿಟಿ ಮಾಡುವ ಉದ್ದೇಶದಿಂದ ಯಾರನ್ನೂ ಕನ್‌ಸಲ್ಟ್ ಮಾಡದೆ ಈ ರೀತಿ ಮಾಡಿದ್ದಾರೆಂದು ಟೀಕೆ ಮಾಡಿದ್ದಾರೆ. ಹಾಗೆ ಹೇಳುವ ಮಾನ್ಯ ಸದಸ್ಯರ ಅಭಿಪ್ರಾಯ ತಪ್ಪು ಎಂದು ಹೇಳುವುದಕ್ಕಿಂತ ಅವರು ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಹೇಳುತ್ತೇನೆ. ಒಕ್ಕಲುತನದ ಸಚಿವನಾಗಿ ನಾನು ನೇರವಾಗಿ ಬಿಲ್ಲನ್ನು ತಂದರೂ ಸಹ ತಪ್ಪಾಗುವುದಿಲ್ಲ. ಆದರೆ ನಾನು ಆ ರೀತಿ ಮಾಡುವುದಿಲ್ಲ. ಅಧಿಕಾರಕ್ಕೆ ಬಂದಂದಿನಿಂದ ಇಂದಿನ ತನಕ ಅಗ್ರಿಕಲ್ಚರಲ್ ಯೂನಿವರ್ಸಿಟಿಯಾದರೆ ಅದಕ್ಕೆ ಹೇರಳವಾದ ಹಣ ಖರ್ಚಾಗುತ್ತದೆ ಎಂದು ಕೆಲವರು ಹೇಳಿದ್ದಾರೆ. ಕೆಲವರು ಇಲ್ಲಿಯ ಹಣವನ್ನು ತೆಗೆದುಕೊಂಡು ಹೋಗಿ ಧಾರವಾಡಕ್ಕೆ ಸುರಿಯುತ್ತಿದ್ದಾರೆಂದು ಹೇಳಿದರು.

ಧಾರವಾಡದಲ್ಲಿ ಯೂನಿವರ್ಸಿಟಿಯಾಗುವ ಪೂರ್ವದಲ್ಲಿಯೇ ಎಲ್ಲ ಸೌಕರ್ಯಗಳಿಂದ ಕೂಡಿದ ಯೂನಿವರ್ಸಿಟಿ ಪ್ರಿಮಿಸಸ್ ರೆಡಿಯಾಗಿ ನಿಂತಿದೆ. ಅಲ್ಲಿರತಕ್ಕಂತಹ ಸುತ್ತು ಮುತ್ತಲಿನ ಜಮೀನು ಮತ್ತು ವ್ಯಾಸಂಗಕ್ಕೆ ಅರ್ಹವಾದ ವಾತಾವಾರಣ ಯೂನಿವರ್ಸಿಟಿ ಸ್ಥಾಪನೆಗೆ ಯೋಗ್ಯವಾಗಿದೆ. ಇದು ಐ. ಎ. ಆರ್. ನವರ ಒಪ್ಪಿಗೆಯನ್ನು ಸಹ ಪಡೆದಿದೆ. ಈ ಅಗ್ರಿಕಲ್ಚರಲ್ ಯೂನಿವರ್ಸಿಟಿ ರೈತನ ಸುಧಾರಣೆಗೋಸ್ಕರ ಮತ್ತು ಅವನಿಗೆ ಬೇಕಾಗುವಂತಹ ಸಲಕರಣೆ ಒದಗಿಸುವ ರಿಸರ್ಚ್‌ಗಾಗಿ ಹೆಚ್ಚಿನ ಕೆಲಸವನ್ನು ಮಾಡಬೇಕಾಗಿದೆ. ನಾವು ಭಾರತಾದ್ಯಂತ ನೋಡಿದಾಗ ಮತ್ತು ಮಹಾರಾಷ್ಟ್ರವನ್ನು ತುಲನೆ ಮಾಡಿ ನೋಡಿದಾಗ ನಾವು ಅಷ್ಟು ಪ್ರಗತಿಯನ್ನು ಸಾಧನೆ ಮಾಡಿಲ್ಲ. ಇವೊತ್ತಿನ ದಿವಸ ರೈತರಿಗೆ ಬೇಕಾಗುವ ಬೇರೆ ಕಡೆಗಳಲ್ಲಿ 4-5 ಅಗ್ರಿಕಲ್ಚರಲ್ ಯೂನಿವರ್ಸಿಟಿಗಳನ್ನು ಮಾಡಿರುವಾಗ ನಮ್ಮಲ್ಲಿ ಒಂದು ಯೂನಿವರ್ಸಿಟಿ ಸಹ ಹೆಚ್ಚು ಆಗುತ್ತಾ ಇಲ್ಲ. ಹಾಗಿದ್ದರೆ ಒಂದು ಯೂನಿವರ್ಸಿಟಿ ಇದ್ದರೆ ಸಾಲದೇ ಎಂದು ಕೆಲವರು ಪ್ರಶ್ನೆ ಮಾಡಬಹುದು. ಆದರೆ ಒಂದು ಯೂನಿನರ್ಸಿಟಿ ಮಾಡಿದರೆ ಅದರಲ್ಲಿ ರಿಸರ್ಚ್ ಇರಬೇಕಾಗುತ್ತದೆ, ಮತ್ತು ಕೆಲವು ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸ್ ಇರಬೇಕಾಗುತ್ತದೆ. ಅವರು ನಿವಿಷ ನಿವಿಷಕ್ಕೂ ಸಲಹೆಯನ್ನು ಕೊಡಬೇಕಾಗುತ್ತದೆ. ಬೆಂಗಳೂರು ಅಗ್ರಿಕಲ್ಚರಲ್ ವಿಶ್ವವಿದ್ಯಾನಿಲಯದಲ್ಲಿ ಹಾರ್ಟಿಕಲ್ಚರ್ ವಿಭಾಗವನ್ನು ಮಾಡುವುದಕ್ಕಾಗಲಿಲ್ಲ. ಮಂಗಳೂರಿನ ಫಿಶರೀಸ್ ಕಾಲೇಜು ಭವ್ಯವಾಗಿ ಬೆಳೆದು ಬರಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ರಾಯಚೂರಿನಲ್ಲಿರುವ ಪಾಲಿಟೆಕ್ನಿಕ್ಕನ್ನು ಇಂಜನಿಯರಿಂಗ್ ಕಾಲೇಜಾಗಿ ಮಾಡಬೇಕೆಂದು ಪ್ರಯತ್ನ ನಡೆದಿದೆ. ಹಾಗೆಯೇ ಫಾರೆಸ್ಟ್ರೀ ಕಾಲೇಜು ಮತ್ತು ಹೋಂ ಸಯನ್ಸ್ ಕಾಲೇಜು ಮಾಡಬೇಕೆಂದು ಇದೆ. ಇವೆಲ್ಲಕ್ಕೂ ಅಗ್ರಿಕಲ್ಚರಲ್ ಯೂನಿವರ್ಸಿಟಿಯ ಬೆಳವಣಿಗೆಗೆ ಲಕ್ಷ್ಯ ಕೊಡದಿದ್ದರೆ ಸಾಧ್ಯವಾಗುವುದಿಲ್ಲ. ಅಗ್ರಿಕಲ್ಚರಲ್ ಯೂನಿವರ್ಸಿಟಿ ರಿಸರ್ಚಿಗೆ ಬೇಕಾಗುವ ಸಂಪೂರ್ಣ ಹಣ ಐ. ಸಿ. ಎ. ಆರ್. ನವರು ಕೊಡುತಾರೆ. ನಾವು ಅದಕ್ಕೆ ಬೇಕಾದಂತಹ ಸ್ಕೀಮನ್ನು ಕಳುಹಿಸುತ್ತಾ ಇಲ್ಲವೆಂದು ಹೇಳುತ್ತಿದ್ದಾರೆ. ಇಷ್ಟು ದಿವಸ ನಮ್ಮ ಮೈಸೂರು ರಾಜ್ಯ ಎಲ್ಲದರಲ್ಲಿಯೂ ಪ್ರಗತಿ ಪಡೆದಿದ್ದರೂ, ಇವತ್ತು ಕಾಟನ್ ರಿಸರ್ಚ್ ಲ್ಯಾಬೊರೇಟರಿ ನಮ್ಮಲ್ಲಿ ಇಲ್ಲ. ಹತ್ತಿಯ ಯೋಗ್ಯತೆಯನ್ನು ನೋಡಿ ಅದರ ಸ್ಟ್ರೆಂತ್, ಲೆಂತ್ ಇತ್ಯಾದಿಗಳನ್ನು ಸೈಂಟಿಫಿಕಾಗಿ ನೋಡಬೇಕಾದರೆ ನಾವು ನಮ್ಮ ಹತ್ತಿಯನ್ನು ಲ್ಯಾಬೊರೇಟರಿಗೆ ಕಳುಹಿಸಬೇಕಾಗುತ್ತದೆ. ಮಟ್ಟುಂಗ್ ಲ್ಯಾಬೊರೇಟರಿಯಲ್ಲಿ ನಮ್ಮ ಹತ್ತಿ ಬಹಳ ಉತ್ತಮವಾದುದು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇವತ್ತು ಯೂನಿವರ್ಸಿಟಿಯ ಅವಶ್ಯಕತೆ ಬಹಳ ಇದೆ. ಪ್ರತಿಯೊಬ್ಬ ರೈತನ ಮನೆ ಮನೆಗೂ ಮುಟ್ಟುವಂತಹ ರೀತಿಯಲ್ಲಿ ಈ ಕೇಂದ್ರಗಳು ಕೆಲಸ ಮಾಡಬೇಕಾಗಿದೆ. ಇವತ್ತು ಗುಲ್ಬರ್ಗಕ್ಕೆ ಬೇಕಾದಂತ ಬೇಳೆಕಾಳು ಬೆಳೆಯಬೇಕಾದರೆ ಅದಕ್ಕ ಬೇಕಾಗುವಂತಹ ರಿಸರ್ಚ್ ಮಾಡಬೇ

(ಶ್ರೀ ಕೆ. ಹೆಚ್. ಪಾಟೀಲ್)

ಕಾಗುತ್ತದೆ. ಅದರ ಬಗ್ಗೆ ಯೂನಿವರ್ಸಿಟಿಯವರು ಕಣ್ಣು ತೆರೆಯುತ್ತಾ ಇಲ್ಲ. ಇಲ್ಲಿ ಹಾರ್ಟಿಕಲ್ಚರ್ ಬಗ್ಗೆ ಇನ್ನೂ ಸುಧಾರಣೆಯಾಗಬೇಕಾಗಿದೆ. ಶ್ರೀಮಾನ್ ಮರಿಗೌಡರ ಶ್ರಮದಿಂದ ಹೆಚ್ಚು ಕೆಲಸ ನಡೆದಿದ್ದರೂ ಸಮೃದ್ಧಿಯಾಗಿ ರೈತರಿಗೆ ಲಾಭದಾಯಕವಾಗುವಂತಹ ಬದಲಾವಣೆ ಮಾಡಿ, ವಸ್ತುಗಳನ್ನು ಯಾವ ರೀತಿ ಯಲ್ಲಿ ರೂಪಾಂತರಿಸಿಕೊಳ್ಳಬೇಕೆಂಬುದರ ಬಗ್ಗೆ ನಾವು ಹೆಚ್ಚು ಗಮನ ಹರಿಸಿಲ್ಲ. ಈಗ ಯೂನಿವರ್ಸಿಟಿ ಎಕ್ಸ್‌ಟೆನ್‌ಷನ್ ವಿಭಾಗದವರು ಒಳ್ಳೆಯ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ಒಂದು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಬೇಕೆಂಬ ನಿಶ್ಚಯವನ್ನು ನಾನು ಮಾಡಿದೆ. ನನ್ನ ಸಹೋ ದ್ಯೋಗಿಗಳು ಕ್ಯಾಬಿನೆಟ್ಟಿನಲ್ಲಿ ಬಹಳ ವರ್ಷಗಳಿಂದ ಈ ವಿಚಾರವನ್ನು ತೆಗೆದು ಕೊಂಡರೂ ಇದು ವರೆಗೆ ತೀರ್ಮಾನವಾಗದೆ ಇತ್ತು. ಆದರೂ ನಾನು ಸುಮ್ಮನೆ ಕುಳಿತುಕೊಳ್ಳಲಿಲ್ಲ. ನಾವು ಇಂತಹ ಆಕ್ಟನ್ನು ತರಬೇಕಾದರೆ ಇದನ್ನು ನಾವು ಮೊದಲು ಪರೀಕ್ಷೆ ಮಾಡೋಣವೆಂದು ಹೇಳಿ ಒಂದು ತಜ್ಞರ ಸಮಿತಿ ಯನ್ನು ನೇಮಿಸಿದ್ದೇವೆ. ಆ ತಜ್ಞರ ಸಮಿತಿಯವರು ವರದಿಯನ್ನು ಕೊಟ್ಟರು. ಆ ವರದಿಯನ್ನು ನೋಡಿದ ಮೇಲೆ, ಯೂನಿವರ್ಸಿಟಿ ತಜ್ಞರು, ನಮ್ಮ ತಜ್ಞರು ಪರದೇಶದ ಎಲ್ಲಾ ಯೂನಿವರ್ಸಿಟಿಗಳ ಆಕ್ಟನ್ನು ಪರಾಂಬರಿಸಿ ಕೊನೆಗೆ ಒಂದು ನಿರ್ಣಯಕ್ಕೆ ಬಂದಿದ್ದಾರೆ. ಅದರಲ್ಲಿ ಅನೇಕ ಲೋಪದೋಷಗಳಿವೆ. ಆದರೆ ಲೋಪದೋಷಗಳು ಇದರಲ್ಲಿ ಏನೂ ಇಲ್ಲವೆಂದು ನಾನು ಹೇಳುವುದಿಲ್ಲ. ಕೆಲವು ಕಡೆಗಳಲ್ಲಿ ಅಸಮರ್ಪಕವಾದ ರೀತಿಯಲ್ಲಿ ಡ್ರಾಫ್ಟ್ ಕಾಣುತ್ತಾ ಇರಬಹುದು. ಇವೆಲ್ಲ ವಿಚಾರಣೆಯಾದ ಮೇಲೆ ಇದಕ್ಕೆ ಒಂದು ಹೆಸರನ್ನು ಇಡುವುದು ಸೂಕ್ತ ವೆಂದಾಗ ಒಬ್ಬ ಮಾನ್ಯ ಸದಸ್ಯರು ಕೆ. ಎಚ್. ಪಾಟೀಲ್ ಅವರ ಕಾಯಿದೆಯೆಂದು ಇಡೋಣವೆಂದರು. ಅದರಲ್ಲಿ ನನ್ನ ಪರಿಶ್ರಮ ಇವತ್ತು ಇರಬಹುದು. ನಾಳೆ ಇರಲಿಕ್ಕಿಲ್ಲ. ಈಗ ನಾವು ಈ ದೇಶದ, ರಾಜ್ಯದ, ರಾಷ್ಟ್ರದ ರಾಜಕೀಯ ಕ್ಕೋಸ್ಕರ ಇರುತ್ತೇವಷ್ಟೆ. ವ್ಯವಸಾಯಾಭಿವೃದ್ಧಿಯನ್ನು ರಾಜಕೀಯಕ್ಕಾಗಿ ಮಾಡುವುದಿಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ. ಯಾವ ಸರಕಾರವೇ ಆಗಲೀ, ಆ ಕಡೆಯವರು ಆಗಲೀ, ಈ ಕಡೆಯವರೇ ಆಗಲೀ ಮೂರನೆಯವರು ಯಾರೇ ಆಗಲೀ ಅವರಿಗೆ ನಾನು ಪ್ರಾರ್ಥನೆ ಮಾಡುವುದಿಷ್ಟೇ. ನಾನು ಈಗಾಗಲೇ ಈ ಕಾಯಿದೆಯ ಬಗ್ಗೆ ಮೊದಲಿದ್ದ ಕಾಯಿದೆ ಮತ್ತು ಅನಂತರ ಈ ಬಿಲ್ಲಿಗೆ ಬಂದಂಥ ತಿದ್ದುಪಡಿಗಳನ್ನು ಸೇರಿಸಿ ಒಂದು ಪುಸ್ತಕದ ರೂಪದಲ್ಲಿ ಎಲ್ಲ ಸದಸ್ಯರ ಕೈಗೆ ಕೊಟ್ಟಿದ್ದೇನೆ. ನಾಳೆಯ ದಿವಸ ಇದರ ಅವಶ್ಯಕತೆಯ ಕಡೆಗೆ ಒಂದು ಪುಸ್ತಕ ವನ್ನು ಹಂಚುತ್ತೇನೆ. ಇದರಲ್ಲಿ ಪ್ರಾಮುಖ್ಯವಾದ 10-11 ಸೆಕ್ಷನ್‌ಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳು ಆಗುತ್ತವೆ. ಉಳಿದುದು ಹಾಗೆಯೇ ಇರುತ್ತವೆ. ಅಂತಹ ಎರಡು ಮೂರು ಬದಲಾವಣೆಗಳಿಂದ ನಿಜವಾಗಿ ಇದು ಒಳ್ಳೆಯ

ಪ್ರೋಗ್ರೆಸಿವ್ ಬಿಲ್ ಆಗುತ್ತದೆಂದು ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಚಾನ್ಸಲರ್ ಅವರು ಹೇಳಿದ್ದಾರೆ. ಇದು ರೈತರ ದೃಷ್ಟಿಯಿಂದ ಬಹಳ ಅತ್ಯುತ್ತಮವಾದು ದೆಂದು ಹೋದ ವರ್ಷ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಲ್ಲಿ ಮಾಡಿದನ್ನು ಮಾನ್ಯ ಸದಸ್ಯರಲ್ಲಿ ಅನೇಕರು ರೈತರಾದವರು ತಾವೇ ಸಾಕ್ಷಿಭೂತವಾಗಿ ನೋಡಿದ್ದಾರೆ. ನಮಗೆ ಅಗ್ರಿಕಲಚರಲ್ ಕಾಲೇಜಿನಲ್ಲಿ ಅಡ್ಮಿಷನ್ಸ್ ಸಿಗುವುದಿಲ್ಲವೆಂದು ಹೇಳಿದಂಥ ಮಾತು ನೆನಪಿನಲ್ಲಿರಬಹುದು. ಅನೇಕ ಜನರು ಸ್ವಯಂ ಪ್ರಯತ್ನ ಮಾಡಿದರೂ ಸಹ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಲ್ಲಿ ಅಡ್ಮಿಷನ್ ಸಿಗಲಿಲ್ಲ. ರೈತರಿಗೇ ಆಗಲೀ, ಇತರರಿಗೇ ಆಗಲೀ ರೆಪ್ರಸೆಂಟೇಷನ್ ಕೊಡುವುದಕ್ಕಾಗಲಿಲ್ಲ ಆದರೂ ಸಹ ಆಗಲೂ ಸ್ವಯಂ ಪ್ರಯತ್ನ ಮಾಡಿ ನೂರಾರು ಚೀಟಿಗಳನ್ನು ಹಂಚಿ ಮಾನ್ಯ ಸದಸ್ಯರು ಶಿಫಾರಸ್ಸು ಮಾಡಿದಂಥ ಸುಮಾರು 20-30 ಜನರಿಗೆ ಅಡ್ಮಿಷನ್ ಅಲ್ಲಿ ಕೊಟ್ಟಿದ್ದೇವೆ. ಅಷ್ಟು ಮಾತ್ರ ಸಾಧ್ಯವಾಯಿತು. ಈಗ ಈ ಕಾಯಿದೆ ಯಲ್ಲಿಯೂ ಮಾನ್ಯ ಸದಸ್ಯರೆಲ್ಲರೂ ಒಪ್ಪುವಂತೆ ಯೋಗ್ಯವಾದಂಥ ನಿರ್ದಿಷ್ಟವಾದ ರೂಪರೇಖೆಗಳನ್ನು ಅಳವಡಿಸಿದ್ದೇವೆ. ರೈತರಿಗೆ, ಹರಿಜನರಿಗೆ ಹಿಂದುಳಿದ ವರ್ಗ ದವರಿಗೆ ಮತ್ತು ಇನ್ನೂ ಅನೇಕ ಜನಾಂಗಗಳವರಿಗೆ ಅಡ್ಮಿಷನ್ ರಿಜರ್ವ್ ಮಾಡಿರುವ ಹಾಗೆ ಈಗಾಗಲೇ ಸಲಹೆಗಳನ್ನು ನೀಡಿದ್ದೇವೆ. ಇನ್ನೂ ಕೆಲವು ಸಲಹೆಗಳನ್ನು ಕೊಟ್ಟು ಅವರಿಗೆ ಬೇಕಾದಂಥ ಸೌಲಭ್ಯಗಳನ್ನು ಕೊಡಬೇಕೆಂದು ಬರೆದಿದ್ದೇವೆ. ಪೊಲಿಟಿಕಲ್ ಸಫರರ್ಸ್‌ಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡ ಬೇಕೆಂದು ಸಲಹೆ ಇದೆ ಅದನ್ನು ಒಪ್ಪೋಣ. ಮೊದಲಿನಿಂದಲೂ ಇದು ತಂದಂಥ ಪ್ರಾವಿಷನ್. ಅಗ್ರಿಕಲ್‌ಚರಲ್ ಎಂಪ್ಲಾಯಿ ಅಸೋಸಿಯೇಷನ್ನಿ ನವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಈ ಕಾಯಿದೆಯ ಬಗ್ಗೆ ಟೀಕೆ ಮಾಡಿದರು. ಈ ವಿಚಾರದಲ್ಲಿ ನಾನು ಒಂದು ಕಮಿಟಿಯನ್ನು ಕರೆದು ಇದರ ಬಗ್ಗೆ ವಿಚಾರಮಾಡಿದ ಮೇಲೆ ಇವತ್ತು ಬಂದು ಈ ಕಾಯಿದೆ ಬಹಳ ಚೆನ್ನಾಗಿದೆಯೆಂದು ಹೇಳಿ ಕೇವಲ 4 ಸೆಕ್ಷನ್‌ಗಳಲ್ಲಿ ಮಾತ್ರ ಅಲ್ಪಸ್ವಲ್ಪ ಬದಲಾವಣೆ ಗಳನ್ನು ಸೂಚಿಸಿದ್ದಾರೆ. ಅದನ್ನೂ ಸಹ ಸರ್ಕಾರ ಒಪ್ಪುವುದಕ್ಕೆ ಯಾವುದೇ ರೀತಿಯಲ್ಲಿ ಏನೂ ಅಭ್ಯಂತರವಿಲ್ಲವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಟ್ಟಿನಲ್ಲಿ ಈ ಕಾಯಿದೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಪರಾಂಬರಿಸಿದರೆ, ನಿಜವಾಗಿಯೂ ಇದರಲ್ಲಿ ಯಾವುದೇ ರೀತ್ಯ ಸಂಶಯವಿಲ್ಲ. ಚಾನ್ಸಲರಿಗೆ ಇರುವ ಅಧಿಕಾರವನ್ನು ಪ್ರೊಚಾನ್ಸಲರಿಗೆ 3—4 ಸೆಕ್ಷನ್‌ಗಳಲ್ಲಿ ಕೊಡಲಾಗಿದೆ. ಚಾನ್ಸ ಲರ್ ಒಬ್ಬರನ್ನು ಸರ್ಕಾರದಿಂದ ನೇಮಿಸುವಂಥಾದ್ದು. ಅದು ಆಗಬಹುದು. ಆದರೆ ಪ್ರೊಚಾನ್ಸಲರ್ ಎಲೆಕ್ಟೆಡ್ ಪ್ರತಿನಿಧಿಯಾಗಬಹುದು. ಅದಕ್ಕೆ ಶ್ರೀ ಕೆ. ಎಚ್. ಪಾಟೀಲರೇ ಇರಬಹುದು. ಅಥವಾ ಇನ್ನು ಯಾರಾದರೂ ಇರಬಹುದು. ಅವರು ನಮ್ಮಿಂದ ಚುನಾಯಿತ ಪ್ರತಿನಿಧಿಯಾಗಿ ಅವರಿಗೆ ಇರುವ ಅಧಿಕಾರವನ್ನು ಇವರಿಗೆ ವರ್ಗಾಯಿಸಬಹುದಷ್ಟೆ. ಆದರಿಂದೇನು ಅಷ್ಟೊಂದು ಪ್ರಮಾದವಾಯಿತು?

ಶ್ರೀ ಎಂ. ಎಸ್. ಕೃಷ್ಣನ್ :—ಮಂತ್ರಿಗಳು ಯಾರೋ ರಾಜೀನಾಮೆ ಕೊಟ್ಟಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್ :—ನನ್ನ ಬಗ್ಗೆ ಮಾನ್ಯ ಸದಸ್ಯರಿಗೆ ಸಾಕಷ್ಟು ಪರಿಚಯವಿರಬೇಕು. ಮಂತ್ರಿ ಪದವಿ ಹೋದರೆ ನಾನು ನನ್ನ ಇತಿಹಾಸಕ್ಕೆ ತಿಲಾಂಜಲಿಯನ್ನು ಕೊಡುವವನಲ್ಲ. ಉತ್ತಮರಾರೂ ಈ ಕಾಲದಲ್ಲಿ ರಾಜೀನಾಮೆ ಕೊಡುವುದಿಲ್ಲ. ಈ ಮಾತನ್ನು ನಾನು ಹಿಂದೆ ಎದುರು ಪಕ್ಷದಲ್ಲಿ ಕೂತುಕೊಂಡು ಟೀಕೆಮಾಡಿದ್ದೇನೆ. ಎದುರು ಪಕ್ಷದಲ್ಲಿದ್ದಾಗ ನಾವೇ ಟೀಕೆಮಾಡುವಾಗ ಇಲ್ಲದಸಲ್ಲದ ನುಡಿಗಳಲ್ಲಿ ರೀತಿನೀತಿಗಳಲ್ಲಿ ಇಂತಹ ಅನೇಕ ಕಾಯಿದೆಗಳನ್ನು ವಿರೋಧಮಾಡುತ್ತಿದ್ದೆವು. ರೈತರಿಗೆ ಸಮರ್ಪಕವಾದ ರೀತಿಯಲ್ಲಿ ಕಾಯಿದೆಗಳನ್ನು ತರದಿದ್ದರೆ ನಾವೇ ಹಿಂದೆ ವಿರೋಧವಾಗಿದ್ದೆವು. ಅಂಥಾದ್ದು ಜನತೆಯ ಮುಂದೆ ಬರಲಿಲ್ಲವೆ? ಆದ್ದರಿಂದ ಈಗ 63 ಸೆಕ್ಷನ್‌ಗಳನ್ನೊಳಗೊಂಡ ಈ ಕಾಯಿದೆಯನ್ನು ನಾವಾದರೂ ಒಂದು ಸಾರಿಯಲ್ಲ, ಎರಡು ಸಾರಿಯಲ್ಲ, ಅನೇಕ ಸಾರಿ ನೋಡಿ ಬದಲಾವಣೆಗಳನ್ನು ಹಾಗೂ ತಕ್ಕ ಸೂಚನೆಗಳನ್ನು ಕಳುಹಿಸಿದ್ದೇವೆ. ಇಲ್ಲದಿದ್ದರೆ ಅಂತಹ ಸೂಚನೆಗಳನ್ನು ನಾವೇ ಒಪ್ಪುವುದಿಲ್ಲ. ಎಷ್ಟೋ ಸಾರಿ ಯೋಗ್ಯವಾದ ಸೂಚನೆಗಳು ಇದ್ದರೂ ಅವನ್ನು ಅನೇಕ ಸಾರಿ ಒಪ್ಪಬೇಕಾಗಿದ್ದರೂ ಕೆಲವಾರು ಸಂದರ್ಭಗಳಲ್ಲಿ ತಿರಸ್ಕರಿಸುತ್ತೇವೆಂದು ಹೇಳಿದಾಗ ಯಾವುದೇ ರೀತಿಯ ಟೀಕೆಗಳನ್ನು ಯಾರೂ ಮಾಡಲಿಲ್ಲ. ನಾನು ಯಾವ ಪುಸ್ತಕವನ್ನೂ ನೋಡಲಿಲ್ಲ. ಉಳಿದ ರಾಜ್ಯಗಳ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯ ಪ್ರತಿಯೊಂದು ಕ್ಲಾಜಿಗೂ ನಾವು ವಿರೋಧಮಾಡಿಲ್ಲ. ಅದು ವ್ಯಂಗ್ಯವಾಗಿ ಟೀಕೆ ಮಾಡುವಂಥ ಟೀಕೆ ಆಗಬಾರದು. ನಾನು ಇದಕ್ಕಿಂತ ಹೆಚ್ಚಿಗೆ ಏನೂ ಹೇಳುವುದಿಲ್ಲ.

ಮಾನ್ಯ ಸಭಾಪತಿಗಳೇ, ಈ ಯೂನಿವರ್ಸಿಟಿ ಬಿಲ್‌ನಲ್ಲಿ ಒಂದು ಬದಲಾವಣೆಯನ್ನು ಮಾಡಿದ್ದೇವೆ. ಅದಕ್ಕೆ ಅನೇಕ ಸದಸ್ಯರ ವಿರೋಧಾಭಿಪ್ರಾಯ ಇದೆಯೆಂದು ನಾನು ಭಾವನೆ ಮಾಡುತ್ತೇನೆ. ಅದಕ್ಕಾಗಿ ಒಂದು ಸಣ್ಣ ಸಲಹೆಯನ್ನು ಮಾಡಲು ಅಪೇಕ್ಷೆ ಮಾಡುತ್ತೇನೆ. ಯೂನಿವರ್ಸಿಟಿ ನೌಕರರು ಸರ್ಕಾರಿ ನೌಕರರಾಗಿದ್ದಾರೆಂದು ಹೇಳಿದ್ದೇವೆ. ಇದನ್ನು ಏಕೆ ಹಾಕಿದಿರಿ ಎಂಬುದಾಗಿ ನಾನು ಲಾ ಮಿನಿಸ್ಟರನ್ನು ಕೇಳಿದೆ. ಅವರು ಯೂನಿವರ್ಸಿಟಿ ಅಧಿಕಾರಿಗಳಲ್ಲಿ ಇಂದು ಕೆಲವರು ಸರ್ಕಾರದಿಂದ ಅಲ್ಲಿಗೆ ಹೋಗಿರುವಾಗ ಅವರಿಗೆ ಅಲ್ಲಿ ರಿಪ್ರಾಟ್ರಿಯೇಟ್ ಮಾಡುವುದಕ್ಕೆ ಎಲ್ಲಿಯೂ ಸ್ಥಾನವಿಲ್ಲ. ಅವರು ಇಂತಹ ಅಂತರ್ಗತ ಸ್ಥಿತಿಯಲ್ಲಿದ್ದಾರೆ, ಹೈಕೋರ್ಟು ಕಳುಹಿರುವ ಆಜ್ಞೆ ತಪ್ಪು ಎಂದು ಹೇಳಿದರು. ಹೀಗೆ ಅಲ್ಲಿ ಅನೇಕ ಜನ ಸರ್ಕಾರದ ನೌಕರರು ಇದ್ದಾರೆ. ಅವರು ಸರ್ಕಾರದ ನೌಕರರೋ ಅಥವಾ ಯೂನಿವರ್ಸಿಟಿ ನೌಕರರೋ ಎಂಬುದು ಏನೂ ತಿಳಿಯದೇ

ಇರುವ ಸಮಸ್ಯೆ ಇರುವಾಗ ನಾನು ಆ ರೀತಿಯಾಗಿ ಸಲಹೆ ಮಾಡಿದೆ. ಮಾನ್ಯ ಸದಸ್ಯರು ಆ ಸಲಹೆ ಬೇಡವೆಂದು ಹೇಳಿದರೆ ಅದನ್ನು ಬದಲಾವಣೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ನನ್ನ ಒಟ್ಟು ಅಭಿಪ್ರಾಯ, ಯೂನಿವರ್ಸಿಟಿ ತನ್ನ ಅಟಾನಮಸ್ ನೇಚರನ್ನು ಕಳೆದುಕೊಳ್ಳಬಾರದು. ಅದು ಇರಬೇಕು. ಆದರ ಜೊತೆಗೆ ಸರ್ಕಾರದವರೂ ಕೂಡ ಯೂನಿವರ್ಸಿಟಿ ಪೂರೈಸುವಂಥ ಹೇರಳವಾಗಿ ಹಣದ ವಿತರಣೆಯಲ್ಲಿ, ಖರ್ಚಿನಲ್ಲಿ, ಅವ್ಯವಹಾರ, ಅಪಚಾರ ಮಾಡದಂತೆ ಸೂಕ್ತ ಮಾರ್ಗಗಳನ್ನು ಅನುಸರಣೆ ಮಾಡುವಂತಿರಬೇಕೆಂದು ನನ್ನ ಅಭಿಪ್ರಾಯ. ಹಿಂದಿನ ಆಕ್ಟಿನೊಳಗೆ ಯಾವ ರೀತಿಯಾದಂಥ ಈಗಿನ ಬದಲಾವಣೆಗಳನ್ನು ಮಾಡಿದ್ದಾರೆ? ಹಿಂದಿನ ಆಕ್ಟ್‌ನಲ್ಲಿ ಪ್ರೊಛಾನ್ಸಲರಿಗೆ ಯೂನಿವರ್ಸಿಟಿ ಬೋರ್ಡ್ ಮ್ಯಾನೇಜ್‌ಮೆಂಟಿನ ಬದಲಾವಣೆ ಇಲ್ಲವೆಂದು ಕಾನೂನು ಇಲ್ಲವೇ? ನೋಟೀಸ್ ಕೊಟ್ಟು ಪೇಪರ್ಸ್ ತರಿಸುವ ಅಧಿಕಾರವಿಲ್ಲವೇ? ಆದ್ದರಿಂದ ದೊಡ್ಡ ದೊಡ್ಡ ಯೂನಿವರ್ಸಿಟಿಗಳನ್ನು ರದ್ದು ಮಾಡಬೇಕೆಂಬ ಕಾನೂನು ಇರುವುದು ಸಮರ್ಪಕವಲ್ಲ. ಅದಕ್ಕಿಂತ ಮೊದಲು ಯಾವಾಗ ಯೂನಿವರ್ಸಿಟಿಗಳು ಹೆಚ್ಚಿಗೆ ಬೆಳೆಯತಕ್ಕ ಯೋಚನೆ ಮಾಡುವಂತಹ ಅಗತ್ಯವಿರುವಾಗ, ಇದನ್ನು ನೀವು ಏಕೆ ವಿಚಾರ ಮಾಡಬೇಕು? ಇನ್ನು ತಮ್ಮ ಎದುರಿಗೆ ಪ್ರೊಛಾನ್ಸಲರ್ ಇಬ್ಬರು ಇರುವುದು ಬೇಡ ಅದನ್ನು ಬದಲಾವಣೆ ಮಾಡಿ, ಆದನ್ನೂ ಛಾನ್ಸಲರಿಗೆ ಕೊಡಿ ಎಂದು ಹೇಳಿದರೆ, ಆ ವಿಚಾರವನ್ನು ಸರ್ಕಾರದ ಮುಂದೆ ಇಡೋಣವೆಂದು ನಾನು ಹೇಳುತ್ತೇನೆ. ಅದಕ್ಕೆ ನನ್ನ ಅಭ್ಯಂತರವಿಲ್ಲ. ನಾನು ಈ ವಿಚಾರದಲ್ಲಿ ಸರ್ಕಾರದಲ್ಲಿ ಯಾವ ರೀತಿಯಾದ ಒಂದು ನಿರ್ಣಯ ಬರುತ್ತದೋ ಆ ಒಂದು ನಿರ್ಣಯವನ್ನು ಪಾಲನೆ ಮಾಡುವುದಕ್ಕೆ ನಾನು ಸಮರ್ಥನಿದ್ದೇನೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಈಗಿನ ಯೂನಿವರ್ಸಿಟಿಯ ಹೊಸ ಕಾಯಿದೆಯಲ್ಲಿ ಯೂನಿವರ್ಸಿಟಿಯಲ್ಲಿ ಕೆಲಸ ಮಾಡುವ ಅಧಿಕಾರವರ್ಗದ ರೂಪುರೇಖೆಗಳನ್ನು ಹೆಚ್ಚು ಬಲವತ್ತರಗೊಳಿಸಲಾಗಿದೆ.

5-00 P.M.

ಈ ಮಸೂದೆಯ ಬಗ್ಗೆ ವೈಸ್‌ಛಾನ್ಸಲರಾಗಿ ಎಲ್ಲಾ ಅಧಿಕಾರಿಗಳೂ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿದ್ದಾರೆ. ಇಂಥ ಮಹತ್ವದ ಒಂದು ಮಸೂದೆಯನ್ನು ಈ ಮಹಾಸದನದವರು ಒಂದೇ ದಿನದಲ್ಲಿ ಒಪ್ಪಬಹುದಾಗಿತ್ತು. ಆದರೆ ಈಗಲೂ ಸಹಿತ ವೇಳೆ ಮೀರಿಲ್ಲ. ಇದನ್ನು ವಿಚಾರ ಮಾಡುವುದು ಅನಂತರ ಅನುಮೋದಿಸತಕ್ಕದ್ದು ಇನ್ನೂ ಉತ್ತಮವಾದದ್ದು. ನಾನು ಈಗ ಈ ಬಿಲ್ಲನ್ನು ಈ ಸದನದ ಎಲ್ಲ ಸದಸ್ಯರ ಮುಂದೂ ಮಂಡನೆ ಮಾಡುತ್ತಿದ್ದೇನೆ. ಈ ಮಸೂದೆಯನ್ನು ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನವರ ಮಾರ್ಗದರ್ಶನದಲ್ಲಿ ಇದನ್ನು ನಡೆಸುತ್ತಿದ್ದೇವೆ. ನಮ್ಮ ದೇಶದಲ್ಲಿ ರೈತರಿಗೆ ಇನ್ನೂ ನಾವು ಇಲ್ಲಿಯತನಕ ಆಧುನಿಕ ಮಟ್ಟದ ಸಲಕರಣೆ

(ಶ್ರೀ ಕೆ. ಹೆಚ್. ಪಾಟೀಲ್)

ಗಳನ್ನು ಒದಗಿಸುವುದಕ್ಕಾಗಿಲ್ಲ. ರೈತರಿಗೆ ಆಧುನಿಕ ಸಲಕರಣೆಗಳನ್ನು ಒದಗಿಸ ಬೇಕು. ನಮ್ಮಲ್ಲಿ ಈ ಉತ್ಪನ್ನ ಆದಷ್ಟು ಬೇಗನೆ ಒಂದಕ್ಕೆ ನಾಲ್ಕರಷ್ಟು ಹೆಚ್ಚ ಬೇಕಾಗಿದೆ. ಇಷ್ಟೆಲ್ಲಾ ಉದ್ದೇಶಗಳನ್ನು ಇಟ್ಟುಕೊಂಡು ನಾನು ಇದನ್ನು ಮಾಡುತ್ತಿದ್ದೇನೆ. ಆದರೆ ಒಂದು ಅನಿವಾರ್ಯಕ್ಕಾಗಿ ಈ ದಿವಸ ಈ ಯೂನಿ ವರ್ಸಿಟಿ ಧಾರವಾಡದಲ್ಲಿ ಸ್ಥಾಪನೆಯಾಗಬೇಕಾಗಿದೆ. ಅದಕ್ಕೆ ಕಾರಣ ಅಲ್ಲಿ ಈ ಯೂನಿವರ್ಸಿಟಿಗೆ ಅಗತ್ಯವಾಗಿ ಬೇಕಾದ ಅನೇಕ ಸಲಕರಣೆಗಳು ಸಾಮಾನುಗಳು ಅಲ್ಲಿವೆ. ಇದರಿಂದ ಸರ್ಕಾರಕ್ಕೆ ಬಹಳ ಕಡಮೆ ಖರ್ಚು ಬರುತ್ತದೆ. ನಮಗೆ ಅಲ್ಲಿ ಇದನ್ನು ಸ್ಥಾಪನೆಗೆ ಮಾಡುವುದ್ಧರಿಂದ ಅಂದಾಜು 4.49 ಲಕ್ಷ ರೂಪಾಯಿಗಳ ಖರ್ಚು ಬರುತ್ತೆಂದು ನಿರೀಕ್ಷಿಸಲಾಗಿದೆ. ಮುಂದೆ ಇನ್ನೂ ರಾಜ್ಯದಲ್ಲಿ ಇಂಥ ಯೂನಿವರ್ಸಿಟಿಗಳನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ತೆರೆಯಬೇಕಾದ ಅವಶ್ಯಕತೆ ಬರಬಹುದು, ಆಗ ಮಂಗಳೂರಲ್ಲಿ ಒಂದು– ಗುಲ್ಬರ್ಗಾದಲ್ಲಿ ಒಂದು ಹೀಗೆ ತೆರೆಯಬಹುದು. ಹೀಗೆ ಇನ್ನು ಮುಂದೆ ಮಂಜೂರಾಗತಕ್ಕ ಯೂನಿವರ್ಸಿಟಿಗಳು ಎಲ್ಲಿಗಾದರೂ ಹೋಗಬಹುದು. ಈಗ ಇದು ಸಾಕಷ್ಟು ಪ್ರಗತಿಯನ್ನು ಮುಟ್ಟಿರು ವಾಗ ಇದಕ್ಕೆ ಯಾರೂ ದಯವಿಟ್ಟು ಅಡ್ಡ ಬರಬಾರದು; ಎಂದು ತಮ್ಮೆಲ್ಲ ರಲ್ಲೂ ಬಹಳ ನಮ್ರಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ರಾಜ್ಯದಲ್ಲಿ ಯಾವುದೇ ಒಂದು ಅಭಿವೃದ್ಧಿ ಕಾರ್ಯವಾಗಲಿ – ಅದು ವಿದ್ಯೆಯೇ ಆಗಲಿ, ವ್ಯವಸಾಯದಲ್ಲಾಗಲೀ ಒಂದು ಔದ್ಯೋಗಿಕ ರಂಗದಲ್ಲಾಗಲೀ....ಹೀಗೆ ಯಾವುದೇ ಬರಲಿ ನಾವೆಲ್ಲರೂ ಒಂದುಗೂಡಿ ರಾಜ್ಯದ ಪ್ರಗತಿಯನ್ನು ಸಾಧಿ ಸೋಣ. ಇಂದು ನಮಗೆ ಒಂದು ಒಳ್ಳೆಯ ಸಮಯ ಕೂಡಿ ಬಂದಿದೆ. ಇಂಥ ಸಮಯವನ್ನು ಕಳೆದುಕೊಂಡ ನಂತರ ಇಂಥಾ ಒಂದು ಅನುಕೂಲ ನಮಗೆ ದೊರೆಯಲಿಲ್ಲವಲ್ಲಾ ಎಂದು ಅನಂತರ ಯಾರೂ ಮರುಗುವುದು ಬೇಡ ಧಾರ ವಾಡದಲ್ಲಿ ಅಲ್ಲಿಯ ಯೂನಿವರ್ಸಿಟಿಯ ಬೆಳ್ಳಿ ಹಬ್ಬಕ್ಕೆ ಬಂದಿದ್ದ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನವರು ಅಲ್ಲಿನ ಅನುಕೂಲತೆಗಳನ್ನು ನೋಡಿ ಅಲ್ಲಿ ಈ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದಕ್ಕೆ ಅವರಾಗಿ ಅವರೇ ಉತ್ತೇಜನ ಕೊಟ್ಟರು. ಅದೇ ರೀತಿ ಆ ಐ. ಸಿ. ಆರ್. ನವರೂ ಕೂಡ ನಮಗೆ ಬಹಳ ಉತ್ತೇಜನಕರವಾಗತಕ್ಕ ರೀತಿಯಲ್ಲಿ ಬರೆದಿದ್ದಾರೆ. ಶ್ರೀ ಆರ್ಮುಗಂರವರು ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನವರಿಂದ ನಾವು ಗ್ರಾಂಟನ್ನು ಏಕೆ ಪಡೆಯ ಲಿಲ್ಲ ಎಂದು ಕೇಳಿದ್ದಾರೆ. ಆದರೆ ಹಾಗೆ ಗ್ರಾಂಟನ್ನು ಪಡೆಯತಕ್ಕ ಪ್ರಶ್ನೆ ನಾವು ಇಲ್ಲಿ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಿದ ಮೇಲೆ ಉದ್ಭವವಾಗುತ್ತದೆಯೇ ವಿನಾ ಅದಕ್ಕೆ ಮೊದಲು ಆ ಪ್ರಶ್ನೆ ಬರುವುದಿಲ್ಲ. ನಮಗೆ ಈಗ ಇದಕ್ಕೆ ಐ.ಸಿ.ಆರ್ ನವರಿಂದ ಗ್ರಾಂಟ್ ಸಿಕ್ಕುತ್ತದೆ. ಈಗ ನಾವು ಇದನ್ನು ಮಾಡದೆ ಕೈಬಿಟ್ಟರೆ ಮುಂದು ಗ್ರಾಂಟನ್ನು ಕ್ಲೈಂ ಮಾಡುವುದಕ್ಕೆ ಬರುವುದಿಲ್ಲ. ನಾವು ಈ ದಿವಸ

ಇದನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಇದನ್ನು ಪ್ರಾರಂಭ ಮಾಡುವುದಕ್ಕೆ ಒಂದು ವರ್ಷದ ಮೇಲೆ ಹಿಡಿಯುತ್ತದೆ. ಅಂದಾಗ ಈಗ ಈ ಮಸೂದೆಗೆ ಅಡೆತಡೆಗಳನ್ನು ಉಂಟು ಮಾಡುವುದು ಸಾಧುವಾದುದ್ದೇ ಅನ್ನುವುದನ್ನು ಮಾನ್ಯ ಸದಸ್ಯರೇ ಆಲೋಚಿಸಬೇಕು. ಆದರೆ ನನ್ನ ಉದ್ದೇಶ ನಾಳೆಗೆ ಬರುವುದು ಇಂದೇ ಬರಲಿ—ಅನ್ನುವುದು. ನಮಗೆ ಬಹಳ ಕಾಲದವರೆಗೆ ಈ ಐ. ಸಿ. ಆರ್. ಮತ್ತು ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನವರಿಂದ ನಮ್ಮ ಅಭಿವೃದ್ಧಿ ಸಾಧನೆಗೆ ಬೇಕಾದ ಸಹಾಯ ಸಹಕಾರಗಳು ದೊರೆಯಲಾರವು. ಅಂದಾಗ ಅವು ಸಿಕ್ಕಾಗ ನಾವೇಕೆ ಬಿಡಬೇಕು? ಮತ್ತು ಇಲ್ಲಿ ಈ ಯೂನಿವರ್ಸಿಟಿಯನ್ನು ಸ್ಥಾಪಿಸುವುದರಿಂದ ಇಲ್ಲಿ ಅನೇಕ ಬಾಬುಗಳ ಹೈಯರ್ ಎಜುಕೇಶನ್ನನ್ನು ಪ್ರಾರಂಭಮಾಡುವುದಕ್ಕೆ ಸಾಧ್ಯವಾಗುತ್ತದೆ. ಡೈರಿ ರಿಸರ್ಚಿಗೂ ಅನುಕೂಲವಾಗುತ್ತದೆ. ಈ ನಾನಾ ಕಾರಣಗಳಿಂದ ನಾನು ವಿರೋಧಪಕ್ಷದ ನಾಯಕರ ಹಾಗೂ ಈ ಮಾನ್ಯ ಸಭೆಯ ಎಲ್ಲಾ ಸದಸ್ಯರ ಅಂತಃಕರಣಪೂರ್ವಕವಾದ ಸಹಕಾರ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಇಂಥ ಒಂದು ಯೂನಿವರ್ಸಿಟಿ ಸ್ಥಾಪನೆಯಾಗುವುದರಲ್ಲಿ ಅನೇಕ ಕಾರಣಗಳಿಂದ ನಿಧಾನವಾಗಿರಬಹುದು. ಅದಕ್ಕೆ ನನ್ನಲ್ಲೇ ಅನೇಕ ಲೋಪದೋಷಗಳಿರಬಹುದು. ಅದನ್ನು ತಾವೆಲ್ಲರೂ ಮನ್ನಿಸಿ ಇದಕ್ಕೆ ಅನುಮತಿ ಕೊಡಬೇಕಾಗಿದೆ. ಈ ದೊಡ್ಡ ಸದನಕ್ಕೆ ಈ ಕಾರ್ಯವಾದರೂ ಬಹಳ ಸಣ್ಣದು. ಆದಾಗ್ಯೂ ಇದು ರಾಜ್ಯದಲ್ಲಿ ಬಹಳಕಾಲ ಉಳಿಯತಕ್ಕದ್ದಾಗಿದೆ. ಆದುದರಿಂದ ಇದಕ್ಕೆ ಎಲ್ಲರೂ ಬೆಂಬಲ ನೀಡಬೇಕೇ ವಿನಾ ಇದಕ್ಕೆ ಅಡ್ಡಗಾಲನ್ನು ಕೊಡಬಾರದು. ಆದರೆ ಇಂದು ಕರ್ನಾಟಕ ರಾಜ್ಯದಲ್ಲಿ ಧಾರವಾಡ ಯೂನಿವರ್ಸಿಟಿ ಗಳಿಸುತ್ತಿರುವ ಪ್ರಗತಿಯನ್ನು ತಡೆಯುವುದಕ್ಕೆ ನಮ್ಮಗಳ್ಯಾರಿಂದಲೂ ಸಾಧ್ಯವಿಲ್ಲ. ಅಲ್ಲಿಯ ಪ್ರಗತಿ ಅದು ಆಗಲೇಬೇಕು. ಅದೇ ಆಗುತ್ತದೆ. ಈ ವಿಷಯವನ್ನು ನಾನು ತಮ್ಮಲ್ಲಿ ಬಹಳ ನಮ್ರತೆಯಿಂದ ಹೇಳುತ್ತಿದ್ದೇನೆ ಇಂಥ ಒಂದು ಶುಭ ಮುಹೂರ್ತದಲ್ಲಿ ಮಂಗಳ ಹಾಡತಕ್ಕ ಕಾಲದಲ್ಲಿ ಯಾರೂ ಇದಕ್ಕೆ ಅಮಂಗಳ ಹಾಡಬಾರದೆಂದು ನನ್ನ ಪ್ರಾರ್ಥನೆ. ತಮ್ಮೆಲ್ಲರ ವಿವರಣೆಗಳು ಬಂದ ನಂತರ ನಾನು ಇದಕ್ಕೆ ಸುಧೀರ್ಘವಾದ ಉತ್ತರವನ್ನು ಕೊಡುತ್ತೇನೆ ತಾವು ಈ ಮಸೂದೆಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿ ನನಗೆ ತಿದ್ದಿಕೊಳ್ಳುವುದಕ್ಕೆ ಅವಕಾಶಮಾಡಿಕೊಡಿ. ಇದು ಲಾ ಇಲಾಖೆಯಿಂದ ಪರಿಶೋಧಿಸಲ್ಪಟ್ಟು ಅನಂತರ ಇಲ್ಲಿ ಬಂದಿದೆ ಲಾ ಇಲಾಖೆ ಮಂತ್ರಿಗಳಿಗೆ ಆರೋಗ್ಯ ಸರಿಯಾಗಿಲ್ಲದೆ ಅವರು ಬಾರದೆ ಇದ್ದುದರಿಂದ ಈ ಬಿಲ್ಲನ್ನು ಇಲ್ಲಿ ತರಲು ಒಂದು ಒಂದೂವರೆ ತಿಂಗಳ ತಡವಾಯಿತು. ಈ ಅಧಿವೇಶನದ ಪ್ರಾರಂಭದಲ್ಲೇ ಬರಬೇಕಾಗಿದ್ದ ಬಿಲ್ಲು ಈಗ ಬಂದಿದೆ. ಇದು ವ್ಯಸನಕರವಾದ ವಿಷಯ. ತೀವ್ರವಾಗಿ ಈ ವಿಧೇಯಕವನ್ನು ಪಾಸು ಮಾಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

(Madam Speaker in the Chair)

ಶ್ರೀ ವಾಟಾಳ್ ನಾಗರಾಜ್ :—ಒಂದು ಸುದ್ದಿ ಬಂದಿದೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಶ್ರೀ ಕಿತ್ತೂರ್‌ರವರು ರಾಜೀನಾಮೆ ಕೊಟ್ಟಿದ್ದಾರೆಂಬ ಸುದ್ದಿ ಬಂದಿದೆ.

ಅಧ್ಯಕ್ಷರು :—ಅದು ನನಗೆ ಗೊತ್ತಿಲ್ಲ. ಇದೇ ಉದ್ಯೋಗ ಬೆಳಗಿನಿಂದ ಸಂಜೆವರೆಗೆ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :—ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆಂದು ಹೇಳುವಾಗ ಹೀಗೆ ಹೇಳಿದರೆ ಹೇಗೆ? ಮುಖ್ಯ ಮಂತ್ರಿಗಳ ಕೈಗೆ ಅವರು ರೆಸಿಗ್‌ನೇಷನ್ ಲೆಟರ್ ಕೊಟ್ಟಿದ್ದಾರೆ.

ಅಧ್ಯಕ್ಷರು :—ಮುಖ್ಯ ಮಂತ್ರಿಗಳು ನಾಳೆ ಹೇಳುವರು.

ಶ್ರೀ ಎಚ್. ಡಿ ದೇವೇಗೌಡ :—ಅವರು ಒಂದು ವೇಳೆ ರಾಜೀನಾಮೆ ಕೊಟ್ಟರೆ ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ :—ಮುಖ್ಯ ಮಂತ್ರಿಗಳಿಗೆ ಬೇಜಾರಾಗಿ ಅವರೂ ರಾಜೀನಾಮೆ ಕೊಟ್ಟಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಈ ವಿಷಯವನ್ನು ನಾವು ಲಘುವಾಗಿ ಹೇಳುತ್ತಿಲ್ಲ.

ಶ್ರೀ ಎಸ್. ಹಮೀದ್‌ಷಾ :—ಪೇಪರಿನಲ್ಲಿ ಸುದ್ದಿ ಬರಲಿ ಎಂದು ಅವರು ಹೀಗೆಲ್ಲಾ ಹೇಳುತ್ತಿದ್ದಾರೆ, ಇನ್ನೇನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :—ಪಕ್ಷದಲ್ಲಿ ಮುಖ್ಯ ಮಂತ್ರಿಗಳು ಅಡ್ಜಸ್ಟ್ ಮಾಡಿದ್ದಾರೆ, ಅವರಿಗೆ ರೆಸಿಗ್‌ನೇಷನ್ ಲೆಟರ್ ಕಳಿಸಿದ್ದಾರೆ ಎಂದು ನನಗೆ ತಿಳಿದು ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಿಣಿಯವರೇ, ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಅಗ್ರಿಕಲ್ಚರಲ್ ಯೂನಿವರ್ಸಿಟಿ ಬಿಲ್ 1973 ಏನಿದೆ ಅದನ್ನು ಪರಿಶೀಲನೆಗೆ ಸಭೆಯು ಮುಂದಿಡುವಾಗ ಅವರ ಪ್ರಾಸಂಗಿಕವಾದ ಭಾಷಣವನ್ನು ನಾನು ಕೇಳಿದೆ. ಅವರು ಈ ಬಿಲ್ಲಿಗೆ ತ್ವರಿತವಾಗಿ ಮಂಜೂರಾತಿ ಕೊಡಬೇಕು, ಈ ರಾಜ್ಯಕ್ಕೆ ಮತ್ತೊಂದು ವ್ಯವಸಾಯ ವಿಶ್ವವಿದ್ಯಾನಿಲಯವನ್ನು ತರುವ ದೃಷ್ಟಿಯಿಂದ ಈ ಒಂದು ವಿಧೇಯಕವನ್ನು ತಂದಿದೆ, ಇದಕ್ಕೆ ಯಾವುದೇ ಎಡೆತಡೆಯಿಲ್ಲದೆ ಅನುಮತಿ ಕೊಡುವುದರಿಂದ ವ್ಯವಸಾಯದ ಪ್ರಗತಿಯಾಗುವುದು, ನಿಧಾನವಾದರೆ ಪ್ರಗತಿಗೆ ವಿಳಂಬವಾಗುವುದು,

ಅದನ್ನು ತಡೆಗಟ್ಟಲು ಇಂಧ್ದೇ ಇದಕ್ಕೆ ಮಂಜೂರಾತಿ ಕೊಡಬೇಕು ಎಂದು ಮಂತ್ರಿಗಳು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದರು. ಅವರು ಹಾಗೆ ಹೇಳತಕ್ಕ ಕಾಲದಲ್ಲಿ ಒಂದು ಮಾತನ್ನು ಹೇಳಿದರು. ಯಾರೇ ವಿರೋಧ ಮಾಡಲಿ ಧಾರವಾಡದಲ್ಲಿ ಈ ವಿಶ್ವವಿದ್ಯಾನಿಲಯ ಬಂದೇ ಬರುತ್ತದೆ ಎಂದು ಹೇಳಿದರು. ಇಲ್ಲಿ ಯಾರು ವಿರೋಧಿಸುವರು ಎಂಬುದೇ ಗೊತ್ತಾಗಿಲ್ಲ. ರಾಜ್ಯದ ಪ್ರಗತಿಗೆ ಮತ್ತೊಂದು ವಿಶ್ವವಿದ್ಯಾನಿಲಯವನ್ನು ತರುವಾಗ ಅದನ್ನು ವಿರೋಧಿಸುವ ಪ್ರವೃತ್ತಿ ವಿರೋಧ ಪಕ್ಷಕ್ಕಿಲ್ಲ. ಈ ಭಾವನೆ ನಮ್ಮಲ್ಲಿ ಬೆಳೆಯುವುದು ಬೇಡ. ಧಾರವಾಡದ ಪ್ರದೇಶದಲ್ಲಿರುವ, ಮುಂಬಯಿ ಮತ್ತು ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿರುವ ಜನರ ಕಲ್ಯಾಣಕ್ಕೆ ಮತ್ತೊಂದು ವಿಶ್ವವಿದ್ಯಾನಿಯವನ್ನು ಅನುಷ್ಠಾನಕ್ಕೆ ಅತಿ ಜಾಗ್ರತೆ ತರುವಾಗ ಅದಕ್ಕೆ ಧಕ್ಕೆ ಬರುವ ರೀತಿಯಲ್ಲಿ ಯಾರೂ ವಿರೋಧ ಮಾಡಬೇಕಾದ ಅವಶ್ಯಕತೆಯಿಲ್ಲ. ಈ ದಿವಸ ಇದನ್ನು ವಿರೋಧಿಸುವುದು ಕೇವಲ ಇದರಲ್ಲಿ ಕೆಲವು ಅಧಿಕಾರಗಳನ್ನು ಪಡೆಯುವುದಕ್ಕೆ ಹೊರಟಿರುವುದರಿಂದ. ಈ ಹೊಸ ಮಸೂದೆಯಲ್ಲಿರುವ ಕೆಲವು ಕಲಮುಗಳನ್ನು ಸ್ವಲ್ಪ ಗಮನಿಸಬೇಕಾಗುವುದು. ಮತ್ತೊಂದು ಮಾತನ್ನು ಹೇಳಿದರು ಇವತ್ತು ಕೆ. ಎಚ್. ಪಾಟೀಲರೇ ಇರಲಿ, ಯಾರೇ ಇರಲಿ, ರಾಜ್ಯದ ಕಲ್ಯಾಣಕ್ಕಾಗಿ ಒಂದು ಮಸೂದೆಯನ್ನು ತರುವಾಗ ಇದಕ್ಕೆ ವಿರೋಧವಿರಬಾರದೆಂದು ಹೇಳಿದರು. ಇದು ಪ್ರಗತಿ ಪರವಾದ ಮಸೂದೆ ಎಂದು ಹೇಳಿದರು. ನಾನು ಅವರು ಹೇಳಿದ ಪ್ರತಿಯೊಂದು ಮಾತನ್ನೂ ಉಲ್ಲೇಖ ಮಾಡಬೇಕೆಂದಿಲ್ಲ ಕೆ. ಎಚ್. ಪಾಟೀಲರೇ, ಯಾರೇ ಇರಲಿ, ವಿಧೇಯಕಕ್ಕೆ ಅಡ್ಡಿ ಬರಬಾರದೆಂದು ಹೇಳಿದರು. ಅವರ ಪ್ರಾಮಾಣಿಕತೆ ಪ್ರಶ್ನೆ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಪ್ರೋಚಾನ್ಸಲರು ಹೆಚ್ಚು ಅಧಿಕಾರ ಪಡೆಯುವರು ಈ ವಿಧೇಯಕದ ಪ್ರಕಾರ. ಆದುದರಿಂದ ವಿರೋಧಿಸಿದಾಗ ಅನ್ಯಥಾ ಭಾವಿಸಬಾರದು. ಇದನ್ನು ಕಳೆದವಾರ ಮಂಡಿಸಲು ಪ್ರಯತ್ನ ಮಾಡಿದಾಗ ನಾನು ಸಭೆಯಲ್ಲಿರಲಿಲ್ಲ ಆಗ ಸ್ವಲ್ಪ ಪ್ರತಿಭಟನೆ ಬಂದ ವಿಚಾರ ಆಮೇಲೆ ನಾನು ತಿಳಿದುಕೊಂಡೆ. ಈ ಬಿಲ್ಲಿನ ಸ್ವರೂಪದ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ ಅಷ್ಟೇ ಇನ್ನೇನೂ ಇಲ್ಲ. ಮುಖ್ಯ ಮಂತ್ರಿಗಳು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಈ ಬಿಲ್ಲಿನ ಸ್ವರೂಪವನ್ನು ಬದಲಾಯಿಸುವುದಕ್ಕೆ ಸಿದ್ಧವಾಗಿರುವುದಾಗಿಯೂ, ವಿರೋಧ ಪಕ್ಷದ ಸಲಹೆ ಪಡೆದು ಜಂಟಿ ಸೆಲೆಕ್ಟ್ ಕಮಿಟಿ ಪರಿಶೀಲನೆಯಾದಮೇಲೆ ನಮ್ಮ ಅಭಿಪ್ರಾಯ ತೆಗೆದುಕೊಂಡು ಕೆಲವು ಬದಲಾವಣೆ ಮಾಡಲು ಸಿದ್ಧವಾಗಿರುವುದಾಗಿಯೂ ಹೇಳಿದ ಮೇಲೆ ನಾವು ಒಪ್ಪಿದೆವು. ಇದೊಂದು ಅಟಾನಮಸ್ ಬಾಡಿ ಎಂದು ಹೇಳಿದರು. ಇದು ಸಾಹಿತ್ಯ ಸಂಸ್ಥೆಯೇ ಎಂದು ನಾವು ಪ್ರಶ್ನೆಮಾಡುತ್ತೇನೆ. ಈ ದಿವಸ ಒಂದು ಯೂನಿವರ್ಸಿಟಿ ಮಾಡಬೇಕೆಂದು ಹೇಳುವಾಗ ಅದಕ್ಕಿರುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಪ್ರಯತ್ನ ನಡೆದಿದೆ. ಇದರ ಹಿನ್ನೆಲೆಯೇನು ಎಂದು ಕೇಳಬೇಕಾಗಿದೆ. ಹೀಗೆ

(ಶ್ರೀ ಹೆಚ್.ಡಿ. ದೇವೇಗೌಡ)

ಮಾಡಿದರೆ ಇದು ಸ್ವತಂತ್ರ ಸಂಸ್ಥೆಯಾಗಿ ಕೆಲಸಮಾಡುವುದಕ್ಕೆ ಸಾಧ್ಯವೇ ಎಂದು ಪ್ರಶ್ನೆಮಾಡುತ್ತೇನೆ.

5-30 P.M.

ಶ್ರೀ ಕೆ. ಎಚ್. ಪಾಟೀಲ್ :—ನಾನು ಆಗಲೇ ಹೇಳಿದೆ, ಈ ಸಲದ ಪ್ರೋಗ್ರಾಂ ಆಫ್ ವರ್ಕ್ಸ್ ಮತ್ತು ತಮಗೆ ಗೊತ್ತಿದ್ದಂತೆ ರಿಸರ್ಚ್ ಅಕ್ಟಿವಿಟೀಸನ್ನು ಸರ್ಕಾರದ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಿಂದ ಅಗ್ರಿಕಲ್ಚರಲ್ ಯೂನಿವರ್ಸಿಟಿ ಟ್ರಾನ್ಸ್ ಫರ್ ಮಾಡಿದ್ದೇವೆ. ಅಗ್ರಿಕಲ್ಚರಲ್ ಯುನಿವರ್ಸಿಟಿಯೊಳಗೆ ಯಾವ ಯಾವ ಕೆಲಸ ಎಲ್ಲೆಲ್ಲಿ ತೆಗೆದುಕೊಳ್ಳಬೇಕೆಂದು ಹೇಳದೇ ಹೋದರೆ ಹೇಗೆ ಮಾಡುತ್ತಾರೆ ಯಾರಿಗೆ ಆ ಅಧಿಕಾರ ಇರಬೇಕು ? ಗೌವರ್ನಮೆಂಟಿಗೆ ಇರಬೇಕೇ ಡೈರೆಕ್ಟರ್ ರವರಿಗೆ ಇರಬೇಕೇ ಎಂದು ಕೇಳುತ್ತೇನೆ. ?

ಶ್ರೀ ಎಚ್ ಡಿ. ದೇವೇಗೌಡ :—ಅಗ್ರಿಕಲ್ಚರಲ್ ಯುನಿವರ್ಸಿಟಿ ಪ್ರೋಗ್ರಾಂ ನಿರೂಪಣೆ ಮಾಡುವುದಕ್ಕೆ ರೀಸರ್ಚ್‌ಗೆ ಸಂಬಂಧ ಪಟ್ಟಹಾಗೆ, ಎಕ್ಸ್‌ಟೆಷನ್ನಿಗೆ ಸಂಬಂಧಪಟ್ಟ ಹಾಗೆ ಅವರು ಆಯಾಯಾ ವರ್ಷದ ಒಂದು ಪ್ರೋಗ್ರಾಂ ಮಾಡಿಕೊಳ್ಳುವುದಕ್ಕೆ ಬೋರ್ಡ್ ಆಫ್ ರೀಜಂಟ್ಸಗೆ ಸಾಕಷ್ಟು ವಿವೇಕ ವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ವಿವೇಕ ರಹಿತ ಜನ ಬೋರ್ಡ್ ಆಫ್ ರೀಜೆಂಟ್ಸ್‌ದಲ್ಲಿ ಕೆಲಸ ಮಾಡುತ್ತಾರೆ ಎಂದು ಹೇಳುವುದಕ್ಕೆ ನಾವು ತಯಾರು ಆಗಿಲ್ಲ. ನನ್ನ ಮಿತ್ರರು ಆದ ಹನುಮೇಗೌಡರವರು ಒಂದು ಪ್ರಶ್ನೆ ಎತ್ತಿದರು. ಸುಮಾರು 10 ಲಕ್ಷ ರೂಪಾಯಿ ಡೆವಲಪ್‌ಮೆಂಟ್ ಗ್ರಾಂಟ್ ಧಾರ ವಾಡ ಕಾಲೇಜಿಗೆ ಡೈವರ್ಟ್ ಮಾಡಬೇಕೆಂದು ತಾವು ಹೇಳಿದಿರಿ. ಇವತ್ತು ಈ ಒಂದು ಅಧಿಕಾರ ಪಡೆಯಲಿಕ್ಕೆ ಹೊರಟಿರತಕ್ಕ ಉದ್ದೇಶ, ಇವತ್ತು ಬೆಂಗಳೂರು ಯುನಿವರ್ಸಿಟಿಯಲ್ಲಿ ಏನು ಹಣವನು ಖರ್ಚು ಮಾಡುತ್ತಾರೆ. ಆ ಹಣವನ್ನು ಕಡಿಮೆ ಮಾಡಿ ಮತ್ತೊಂದು ಯೂನಿವರ್ಸಿಟಿ ಮಾಡುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದೀರಿ. ಅದಕ್ಕೆ ಉಪಯೋಗ ಮಾಡತಕ್ಕಂಥ ಒಂದು ನೀತಿ ಇದು ಎನ್ನು ವುದು ಸರ್ವ ವಿಧಿತವಾದದ್ದು ಅದರ ಬಗ್ಗೆ ಎಳ್ಳಷ್ಟೂ ಯಾರೂ ಸಂಶಯ ಪಡಬೇಕಾ ಗಿಲ್ಲ. ಕೇಂದ್ರದವರು ಇನ್ನೊಂದು ಕೃಷಿ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ಹಣ ಕೊಡುವುದಾದರೆ ಅದಕ್ಕೆ ಯಾರದೂ ಅಡ್ಡಿಯಿಲ್ಲ. ಬೆಂಗಳೂರು ಯೂನಿವರ್ಸಿ ಟಿಗೆ ಖರ್ಚು ಮಾಡುವ ಹಣವನ್ನು ಮೊಟಕು ಮಾಡಿ ಮತ್ತೊಂದು ಕಡೆ ಒಯ್ಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯು ಹಣವನ್ನು ಮತ್ತೊಂದು ಯೂನಿವರ್ಸಿಟಿಗೆ ತೆಗೆದುಕೊಂಡು ಹಾಕುವ ಅಧಿಕಾರ ಏನು ಇದೆ ಅದನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಉದ್ದೇಶ ಏನು ಇದೆ ಅದು ಹೇಯ ವಾದದ್ದು ಎಂದು ಹೇಳುತ್ತೇನೆ. ಅದರ ಜೊತೆಗೆ ಬೋರ್ಡ್ ಆಫ್ ರೀಜೆಂಟ್ಸಿಗೆ

ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಅವಕಾಶವನ್ನು ಈ ವಿಧೇಯಕದಿಂದ ಕಸಿದುಕೊಳ್ಳುವುದಕ್ಕೆ ಹೊರಟಿದ್ದೀರಿ, ಅದು ಯೋಗ್ಯವಾದದ್ದು ಅಲ್ಲ ಆ ಅಧಿಕಾರ ಯೂನಿವರ್ಸಿಟಿಗೆ ಬಿಡಬೇಕು, ಯೂನಿವರ್ಸಿಟಿಗಳು ಸ್ವಂತವಾಗಿ ತಮಗೆ ಇದ್ದಂಥ ಶಕ್ತಿಯಿಂದ ಯಾರ ಹಸ್ತಕ್ಷೇಪವೂ ಇಲ್ಲದೆ ಕೆಲಸ ಮಾಡುವುದಕ್ಕೆ ನಾವು ಅವರಿಗೆ ಅವಕಾಶ ಮಾಡಿಕೊಡಬೇಕು. ಇನ್ನು ಒಂದು ಮಾತು ಹೇಳುತ್ತೇನೆ. ಇದನ್ನು ಯೂನಿವರ್ಸಿಟಿ ಎಂದು ಕರೆಯಬೇಕಾಗಿಲ್ಲ.

You call it a Government institution. I do not mind if you want to take all these powers. But if you suspect the bonofides of this board or if you suspect the bonafides of the syndicate, you call it a Government institution instead of an University. Is it an autonomous body. It cannot be an autonomous body in this present way in which the Minister has brought this Bill.

ಇವತ್ತು ಇದರ ಸ್ವರೂಪ ಹಾಗೆ ಇದೆ. ಸೆಕ್ಷನ್ 12 (2) ರಲ್ಲಿ ಹೀಗೆ ಹೇಳಿದೆ.

* "Section 12 (2). The Vice Chancellor shall be appointed by the Chancellor in consultation with the Pro-Chancellor".

In the Present Act :

From a panel of three persons recommended by a committee of experts" ಎಂದು ಇದೆ.

ಶ್ರೀ ಕೆ. ಎಚ್. ಪಾಟೀಲ್.—ಮೊದಲು ಪ್ರೋ ಚಾನ್ಸಲರ್ ಪ್ರಿಸೈಡ್ ಮಾಡಬೇಕಿತ್ತು ಅವರು ಕಳುಹಿಸಿದಂಥ ಪ್ರೊಸೀಡಿಂಗ್ಸ್ ನೋಡಿ ಚಾನ್ಸಲರ್ ನೇಮಕ ಮಾಡುತ್ತಿದ್ದರು. ಅವರು ರೆಕಮೆಂಡೇಷನ್ ಕೇಳುತ್ತಾರೆ. ಇದರೊಳಗೆ ಅದು ಸಹ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಇದರ ಅರ್ಥ ಏನು ಆಗುತ್ತದೆಂದರೆ ಪ್ರೋ ಚಾನ್ಸಲರ್ ಅಧಿಕಾರ ಏನು ಇದೆ ಅದು ಪ್ರಿವೇಲ್ ಆಗುತ್ತದೆ. ನನ್ನ ಒಂದು ಅಭಿಪ್ರಾಯ, ತಮ್ಮ ಪ್ರಭಾವವನ್ನು ಆ ಕಮಿಟಿಯ ಮೇಲೆ ಬೀರತಕ್ಕದ್ದಕ್ಕೆ ಅವಕಾಶ ಆಗಬಾರದು.

ಶ್ರೀ ಕೆ. ಎಚ್ ಪಾಟೀಲ್. —ವೈಸ್ ಚಾನ್ಸಲರ್ ಅಪಾಯಿಂಟ್‌ಮೆಂಟ್ ಪ್ರೋ ಚಾನ್ಸಲರ್, ಗೌರ್ನಮೆಂಟ್ ಕೇಳದೇ ನೇಮಕ ಮಾಡಬೇಕೆಂದು ನಿಮ್ಮ ಅಭಿಪ್ರಾಯವೇ ?

ಶ್ರೀ ಎಚ್. ಡಿ. ದೇವೇಗೌಡ.—ಕೇಳದೇ ಮಾಡಬೇಕಾಗಿಲ್ಲ, ಎಕ್ಸ್‌ಪರ್ಟ್ಸ್ ಕಮಿಟಿ ಏನು ಇದ್ದಾರೆ ಅವರಿಗೆ ಇಂಡಿಪೆಂಡೆಂಟ್ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಬಿಡಬೇಕು. ಎಕ್ಸ್‌ಪರ್ಟ್ಸ್ ಕಮಿಟಿ ಕೊಟ್ಟ ತೀರ್ಮಾನವನ್ನು ಕೂಡ ಚಾನ್ಸಲರ್ ಒಪ್ಪತಕ್ಕದ್ದು ಅಥವಾ ಅದರಿಂದ ಡಿಫರ್ ಆಗತಕ್ಕದ್ದು ಮತ್ತು ರಾಜ್ಯ ಸರಕಾರದವರು ತಿಳಿಸತಕ್ಕ ಅಭಿಪ್ರಾಯ ಏನು ಇದೆ ಅದನ್ನು ಚಾನ್ಸಲರ್ ಒಪ್ಪಬೇಕೇ ಅಥವಾ ಬೇಡವೇ ಎನ್ನುವುದು ಅವರಿಗೆ ಸಂಬಂಧಪಟ್ಟಂಥ ವಿಷಯ. It is only advisory in nature. In cannot be binding on Chancellor to appoint Vice Chancellor on the recommendation of the Pro-Chancellor. It should be only in the form of advisory in nature. The Chancellor must have freedom to select the best man out of the panel.

ಇದು ಇರಬೇಕೇ ಪರಂತು it cannot be binding. I am not going to concede such a proposal. Recommendation to the Government ಎಂದು ಹಳೇ ಆಕ್ಟಿನಲ್ಲಿದೆ ತಾವು ಏನು ಮಾಡಿದಿರಿ ಅದನ್ನು ಪ್ರೋ ಚಾನ್ಸಲರ್‌ಗೆ ಹಾಕಿಕೊಂಡಿದ್ದೀರಿ, ಅದು ಕೂಡ ಸರಿಯಾದ್ದು ಅಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದನ್ನು ಆಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

Sub-section (೬) ಹೀಗೆ ಹೇಳಿದೆ "Emoluments and other service conditions of the Vice-Chancellor shall be such as may be determined by the Pro-Chancellor".

It should not be with the Pro-Chancellor ಅದೂ ಸರಿಯಾದುದು ಅಲ್ಲ you go to Section 13 (7).

ಶ್ರೀ ಕೆ. ಎಚ್. ಪಾಟೀಲ್.- ಬೋರ್ಡಿನವರು ಮಾಡಬೇಕಾದರೆ ತಡವಾಗುತ್ತದೆ. ಆದುದರಿಂದ Pro-Chancellor may take a decession ಎಂದು ಇರುವುದು ವಾಡಿಕೆ.

H. D. DEVEGOWDA.—You want to snatch away that power also.

ಕೇವಲ ಪ್ರೋಚಾನ್ಸಲರ್ ಪವರ್ಸ್ ತೆಗೆದುಕೊಳ್ಳತಕ್ಕದ್ದು ಒಂದೇ ಅಲ್ಲ ಪ್ರತಿ ಹೆಜ್ಜೆಯಲ್ಲಿಯೂ, ಪ್ರತಿ ಹಂತದಲ್ಲಿಯೂ ನಿಮ್ಮ ಹೊಣೆಯಿದ್ದು ಇವತ್ತು ಯೂನಿವರ್ಸಿಟಿಯು ಕೆಲಸ ಮಾಡಬೇಕಾಗಿದೆ. ಇದನ್ನು ನಾವುಗಳು ವಿರೋಧ ಮಾಡಿದರೆ, ನಾವು ರೀ-ಆಕ್ಷನರೀಸ್ಸ್ ಎಂದು ಕರೆಯುವುದಕ್ಕೆ ಹೋಗಬೇಡಿ. ತಾವು ಇದನ್ನು ಪ್ರೋಗ್ರೆಸ್ಸೀವ್ ಲೆಜಿಸ್ಲೇಷನ್ ಎಂದು ಬೆನ್ನು ತಟ್ಟಿಕೊಂಡು ಮಾತನಾಡಿದಿರಿ. ತಮ್ಮ ಒಂದು ಹಿಡಿತದಲ್ಲಿ ಅಧಿಕಾರವನ್ನು ತೆಗೆದುಕೊಳ್ಳತಕ್ಕದ್ದು ಪ್ರೊಗ್ರೆಸ್ಸೀವ್ ಲೆಜಿಸ್ಲೇಷನ್ನೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಹೇಳಿದಿರಿ, ಒಕ್ಕಲತನದ ಖಾತೆ ಅಭಿವೃದ್ಧಿಗಾಗಿ ಅಂಥ ಒಂದು ಅಧಿಕಾರವನ್ನು ಪ್ರೋಚಾನ್ಸಲರ್ ಪಡೆಯುವುದರಿಂದ ಒಕ್ಕಲುತನದ ಖಾತೆ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಒಕ್ಕಲು ತನದ ಖಾತೆಯ ಅಭಿವೃದ್ಧಿ, ಒಬ್ಬ ವ್ಯಕ್ತಿಯಲ್ಲಿ ಅಧಿಕಾರ ವನ್ನು ಸಂಗ್ರಹಣೆ ಮಾಡಿ, ಒಬ್ಬ ಮಂತ್ರಿಯ ಕೈಯಲ್ಲಿ ಅಧಿಕಾರವನ್ನು ಕೇಂದ್ರೀಕೃತ ಮಾಡುವುದರಿಂದ, ಆಗುತ್ತದೆಯೇ ? ಈ ಒಂದು ಪ್ರಿಅಂಬಲ್‌ನಲ್ಲಿ ನಾನು ಕೆಲವು ವಿಷಯಗಳನ್ನು ಪ್ರಸ್ತಾಪಮಾಡುತ್ತಾ ಇದ್ದೇನೆ. ತಾವು ಈ ಒಂದು ದೃಷ್ಟಿ ಕೋನದಿಂದ ಈ ಬಿಲ್ಲಿಗೆ ಒಪ್ಪಿಗೆಯನ್ನು ಪಡೆಯುವುದಕ್ಕೆ ಪ್ರಯತ್ನಪಡಬಾರದು. ತಮ್ಮಲ್ಲಿ ಈ ಒಂದು ಅಧಿಕಾರ ಕೇಂದ್ರಿಕೃತವಾದರೆ ಒಕ್ಕಲುತನ ಖಾತೆಯು ಅಬಿವೃದ್ಧಿ ಆಗುತ್ತದೆಯೇ ? ಇಂಥ ಒಂದು ಭಾವನೆಯನ್ನು ತಾವು ತಳೆದಿರುವುದು ಸರಿಯಾದುದು ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರಾಜ್ಯದ ಕಲ್ಯಾಣಕ್ಕೋಸ್ಕರ ಸರ್ಕಾರಕ್ಕೆ ಎಷ್ಟು ಕಾತುರತೆ ಇದೆಯೋ ಅಷ್ಟೆ ಕಾತುರತೆ ವಿರೋಧ ಪಕ್ಷಗಳಿಗೂ ಇದೆ ಎಂಬುದನ್ನು ತಾವು ಮರೆಯಬಾರದು. ಈ ದಿಸೆಯಲ್ಲಿ ಯಾವುದೇ ಒಂದು ಕಾರ್ಯ ಹಿಂದೆ ಬಿದ್ದು ಹೋಗುವುದಿಲ್ಲ. ಎಂಬು ದನ್ನು ತಾವು ಅರಿಯಬೇಕಾಗುತ್ತದೆ. ಇವತ್ತು ಈ ಯೂನಿವರ್ಸಿಟಿಯಲ್ಲಿ ಅಡ್ಮಿಷನ್ ಬಗ್ಗೆ ಏನು ಗೊಂದಲ ಇದೆ ಅದನ್ನು ನಿವಾರಣೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೀರಿ ಎಂದು ತಿಳಿಸಿದಿರಿ, ನಾನು ಕೇಳುತ್ತೇನೆ. ಅಡ್ಮಿಷನ್‌ಲ್ಲಿ ಕ್ಲಾಜ್ 5, ಅದಕ್ಕೆ ಕಂಪ್ಯಾರೇಟಿವ್ ಫಿಗರ್ಸ್ ಕೊಡುವುದಕ್ಕೆ ಹೋಗುವುದಿಲ್ಲ. ಸಬ್ ಸೆಕ್ಷನ್ 2 ರಲ್ಲಿ Subject to the provisions to sub-section (1), the State Government may direct that the Uuiversity shall reserve in college seats for women, the Scheduled Castes and the Scheduled Tribes, and such socially and educationally backward classes of citizenes as may be declared by the State Government in this behalf, and where such direction has been given, the University shall make the reservation accordingly ಎಂದು ಇದೆ. ಕಳೆದ ಸಾರಿ ಏನು ಹೇಳಿದ್ದೀರಿ ಎಂದರೆ, ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ಮಕ್ಕಳಿಗೆ ಮೆರಿಟ್‌ನ ಆಧಾರದ ಮೇಲೆ ಸೀಟು ನಿರ್ಣಯ ಮಾಡುವುದು ಸರಿಯಲ್ಲ, ಸಾಮಾಜಿಕ ನ್ಯಾಯ ದೊರಕಿಸಬೇಕಾದರೆ ಅಂಕಗಳ ಆಧಾರದ ಮೇಲೆ ತೀರ್ಮಾನ ಕೈಗೊಳ್ಳ

(ಶ್ರೀ. ಹೆಚ್ ಡಿ. ದೇವೇಗೌಡ)

ತಕ್ಕದ್ದು ಸರಿಯಲ್ಲ ಎನ್ನುವ ಮಾತನ್ನು ಹೇಳಿದ್ದಿರಿ. ಇವತ್ತು ನಾನು ಕೇಳು ತ್ತೇನೆ, ಈ ಆಕ್ಟಿನಲ್ಲಿ ಕ್ಲಾಜ್ 5(1) ಸೆಕ್ಷನ್ ಏನು ಇದೆ, ಸಬ್ ಸೆಕ್ಷನ್ 2 ಏನು ಇದೆ ಇದರ ಬಗ್ಗೆ ತಾವು ಸ್ಪಷ್ಟೀಕರಣ ಮಾಡಬೇಕು ಎಂದು. ಮತ್ತು ವ್ಯವಸಾಯಗಾರರ ಮಕ್ಕಳಿಗೆ ಸೀಟು ಕೊಡುವಾಗ ವ್ಯವಸಾಯದಲ್ಲಿ ವಿದ್ಯಾರ್ಥಿಗಳಿಗೆ ಇರುವ ಅನುಭವ, ವಿದ್ಯಾರ್ಹತೆ ಇವುಗಳನ್ನು ಪರಿಗಣಿಸಬೇಕು ಎಂದು ಇದೆ. ಸಬ್ ಸೆಕ್ಷನ್ 2, ಹಳೆಯ ಆಕ್ಟನಲ್ಲ ಇದರ ಬಗ್ಗ ಪ್ರಾವಿಷನ್ ಮಾಡಿಕೊಳ್ಳುವುದಕ್ಕೆ ಈ ಸಭೆ ಮಂಜೂರಾತಿ ಕೊಟ್ಟಿದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ಒಂದು ಹೊಸ ವಾಕ್ಯ ಈ ಬಿಲ್‌ನಲ್ಲಿ ಬೇಕಾಗಿಲ್ಲ. ಹಳೆಯ ಆಕ್ಟ್ ಏನು ಇದೆ ಅದರ ಕಕ್ಷೆಯೊಳಗೆ ಇದನ್ನು ತರುವುದಕ್ಕೆ ಸಾಧ್ಯವಿದೆ ಎಂದು ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ನನ್ನ ಭಾಷಣವನ್ನು ಆರು ಗಂಟೆಯಾಗುವುದರೊಳಗೆ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಆದ್ದರಿಂದ ನಾನು ಈ ಪ್ರೋಚಾನ್ಸಲರ್ ಪಾಯಿಂಟಿಗೆ ನೇರವಾಗಿ ಬರುತ್ತೇನೆ. ಆಗಲೇ ನಾನು ಹೇಳಿದೆ, ಅಲ್ಲಿ ಪ್ರೋಚಾನ್ಸಲರ್ ಅನ್ನು ಗವರ್ನರ್ ಎಂದು ಹಾಕಬಹುದು ಎಂದು ಮೊದಲು ಇದ್ದಂಥ ಚಾನ್ಸಲರ್ ಇರಲಿ ಮಹಾರಾಷ್ಟ್ರ ಯೂನಿವರ್ಸಿಟಿಯೊಳಗೆ ಸಹ ಪ್ರೋಚಾನ್ಸಲರ್‌ಗೆ ಏನು ಪ್ರಾವಿಷನ್ ಕೊಟ್ಟಿದ್ದಾರೆ ? ಅಲ್ಲೂ ಆ ಬೇಸಿಸ್ ಮೇಲೆ ಮಾಡಿದ್ದಾರೆ.

SRI K. H. PATIL ; I am not keen to retain that power, that Pro-Chancellorship, I make it most clear to you that I may accept that suggestion. Please tell me with what authority you want to vest this with ?

ಶ್ರೀ ಎಚ್. ಡಿ. ದೇವೇಗೌಡ : ಇವತ್ತು ಮಂತ್ರಿಗಳು ಏನು ಒಂದು ಗೆಶ್ಚರ್ ತೋರಿಸಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸರಕಾರ ವಿರೋಧಪಕ್ಷದವರು ಕೊಡತಕ್ಕ ಅಭಿಪ್ರಾಯವನ್ನು ಒಪ್ಪುವುದಕ್ಕೆ ಸಿದ್ಧವಿದೆ ಎನ್ನು ವುದನ್ನು ನಾನು ಸ್ವಾಗತ ಮಾಡುತ್ತೇನೆ. ಪ್ರೋಚಾನ್ಸಲರ್ ಶ್ರೀ ಕೆ. ಎಚ್. ಪಾಟೀಲರು ಎಂದು ತಿಳಿದುಕೊಂಡು ನಾನು ಹೇಳುತ್ತಾ ಇಲ್ಲ, ಇವತ್ತು ನೀವು ಇರುತ್ತೀರಿ, ನಾಳೆ ಇನ್ನೊಬ್ಬರು ಬರುತ್ತಾರೆ, ಈ ಒಂದು ವಿಧೇಯಕಕ್ಕೆ ಈ ಸಭೆ ಮಂಜೂರಾತಿ ಕೊಟ್ಟ ಮೇಲೆ, ಈ ವಿಧೇಯಕದಿಂದ ಒಂದು ಅಘಾತ ವಾಗತಕ್ಕ ಪರಿಸ್ಥಿತಿಯನ್ನುಂಟುಮಾಡಬಾರದು ಎನ್ನುವ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. 1963ರ ಯೂನಿವರ್ಸಿಟಿ ಆಕ್ಟಿಗೂ, 1973ರ ಆಕ್ಟಿಗೂ ಇರುವ ವ್ಯತ್ಯಾಸವನ್ನು ಈ ಸಭೆಯ ಗಮನಕ್ಕ ತರುತ್ತೇನೆ. ಇದನ್ನು ಜಾಯಿಂಟ್

ಸೆಲೆಕ್ಟ್ ಸಮಿತಿಯವರು ಪರಿಶೀಲನೆ ಮಾಡುವುದು ಉಚಿತ ಮತ್ತು ಯೋಗ್ಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಸೆಕ್ಷನ್ 11(3)ರಲ್ಲಿ The Pro-Chancellor may call for his information any papers relating to the administration of the affairs of the University from any officer of the University other than the Chancellor and such requistion shall be complied with ... such officer. The Pro-chancellor after perusing the papers so called for may give such directions in respect of any proceeding of the Universitiy to the administration of the affairs of the University other than the academic affairs which is not in conformity with the Act, the Statutes, and regulations, as he deems necessary and such directions shall be complied with' ಎಂದು ಇದೆ. ಬಹುಶಃ ಇವತ್ತು ಇದರ ಬಗ್ಗೆ ನಾನು ಒಂದು ಮಾತನ್ನು ಹೇಳುವುದಾದರೆ, ಪ್ರೋಚಾನ್ಸಲರ್ ಪವರ್ ಏನಾಗುತ್ತದೆ ಎಂದರೆ, ಎಲ್ಲಾ ದೃಷ್ಟಿಯಿಂದಲೂ ನೋಡಿದರೆ ಅವರು ಡಿಕ್ಟೇಟರ್ ಎಂದು ಹೇಳಬಹುದು. ಯಾರೂ ಅವರನ್ನು ಪ್ರಶ್ನಿಸಲಾರದಂಥ ಸರ್ವಾಧಿಕಾರಿ. ಅವರು ಏನು ಬೇಕಾದರೂ ಮಾಡಬಹುದು. ವೈಸ್ ಚಾನ್ಸಲರ್ ಅವರಿಗೆ ಪ್ರೈಮರಿಸ್ಕೂಲ್ ಮಾಡುವುದಕ್ಕೆ ಪವರ್ಸ್ ಕೊಡಿ, ನನ್ನದೂ ಏನೂ ವಿರೋಧವಿಲ್ಲ. ಅವರು ಪ್ರೈಮರಿ ಸ್ಕೂಲು ಮಾಡಿದರೆ ಏನಾಯಿತು ? ಎಂದು ಹೇಳಿದರೆ, ಅವರಿಗೂ ಸ್ವಲ್ಪ ಗೌರವ ಇದೆ. ಇದಕ್ಕಿಂತ ಕೆಳಮಟ್ಟದ ಕೆಲಸವನ್ನು ಈ ಪರಿಸ್ಥಿತಿಯಲ್ಲಿ ಅವರು ಮಾಡಬೇಕು. ಪ್ರೋಚಾನ್ಸಲರ್‌ಗೆ ಜೋ ಹುಕುಂ ಎಂದು ನಮಸ್ಕಾರ ಮಾಡಿಕೊಂಡು, ಅವರ ಮನಸ್ಸಿಗೆ, ಅವರ ಇಚ್ಛೆಗೆ ಅನುಸಾರವಾಗಿ ನಡೆಯತಕ್ಕ ರೀತಿಯಲ್ಲಿ ನಡೆಯಬೇಕು. ಚಾನ್ಸಲರ್‌ಗೆ ಇರುವ ಪವರ್ಸ್ ಅನ್ನು ಕಿತ್ತು ಹಾಕಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, "The annual programme of work of the University shall be referred to the Pro-Chancellor" ಎಂದು ಹೇಳಿದ್ದಾರೆ. ಇದು ಹಿಂದಿನ ಆಕ್ಟಿನಲ್ಲಿ ಇಲ್ಲ. ಇನ್ನೂ ಎಲ್ಲಿಯವರೆಗೆ ಹೋಗಿದ್ದಾರೆ. ಎಂದರೆ ಯೂನಿವರ್ಸಿಟಿ ಬೋರ್ಡ್ ಆಫ್ ರಿಜೆಂಟ್ಸ್ ಅನ್ನು ಕೂಡ ಕಥಂ ಮಾಡುವುದಕ್ಕೆ ಹೊರಟಿದ್ದಾರೆ. ಬೋರ್ಡ್ ಆಫ್ ರಿಜೆಂಟ್ಸ್ ಗೆ ಸಭೆಯನ್ನು ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಸಭೆಯ ಬೇರೆ ಬೇರೆ ಅಂಗಗಳಲ್ಲಿ ಇವರಿಗೆ ಏನು ಒಂದು ಅಧಿಕಾರ ಇದೆ ಅದಕ್ಕೂ ಕತ್ತರಿ ಪ್ರಯೋಗ ಮಾಡಿದ್ದಾರೆ.

By this legislative measure the Government wants to take away the power of the Chancellor. The Chancellor can give an independent judgment. There are instances where the Chancellor has turned down the proposal of the

(ಶ್ರೀ ಎಚ್. ಡಿ. ದೇವೇಗೌಡ)

Syndicate. The Syndicate is not a supreme body. It can commit mistakes and if such mistakes are pointed out to the Chancellor by the aggrieved person, he can consider them and take an independent decision. So, it is not correct to give this power to the Pro-Chancellor.

ಆ ಮೇಲೆ ಹೀಗೆಯೇ ಸಬ್ ಕ್ಲಾಸ್ (9) ರಲ್ಲಿ ಪ್ರೊ-ಛಾನ್ಸಲರ್ ಪವರನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಛಾನ್ಸಲರ್ ಬದಲಿಗೆ ಪ್ರೊ-ಛಾನ್ಸಲರ್ ಹಾಕಿದ್ದಾರೆ. ಮಾನ್ಯ ಕೆ. ಎಚ್. ಪಾಟೀಲರು ಛಾನ್ಸಲರನ್ನು ಮರೆತ ಹಾಗಿದೆ. ಸಬ್ ಸೆಕ್ಷನ್ 9ನ್ನು ಡಿಲೀಟ್‌ಮಾಡಿ ಛಾನ್ಸಲರಿಗೆ ಪವರ್ ಇರತಕ್ಕದ್ದು ಒಳ್ಳೆಯದು.

Sub-clause (11) of clause 13 provides :

> "The *vice*-Chancellor shall be responsible for the proper administration of the University and for a close co-ordination and integration of teaching, research and extension education and shall act according to the direction given by the Chancellor or the Pro-Chancellor".

Why do you add the words 'or the Pro-Chancellor'?

SRI K. H. PATIL.—It is not an academic subject

SRI H. D. DEVE GOWDA.—What is the depth of knowledge of a legislator in regard to research activities?

SRI K. H. PATIL.—What is the meaning of knowledge?

ಶ್ರೀ ಎಚ್. ಡಿ. ದೇವೇಗೌಡ.—ನಾಲೆಡ್ಜ್ ಎನ್ನುವ ಬಗ್ಗೆ ಆಕ್ಸ್‌ಫರ್ಡ್ ಡಿಕ್ಷನರಿ ತೆಗೆದು ನೋಡಿ. ರಿಸರ್ಚ್ ಆಕ್ಟಿವಿಟಿ ಅಥವಾ ವಿದ್ಯಾ ಅರ್ಹತೆ ಮೇಲೆ ಪ್ರೋಚಾನ್ಸಲರ್ ಅಥವಾ ಮಂತ್ರಿಗಳನ್ನು ನೇಮಕ ಮಾಡುವುದಿಲ್ಲ.

ಶ್ರೀ ಕೆ. ಎಚ್ ಪಾಟೀಲ್.—ಅದನ್ನು ಹೇಳುವುದಾದರೆ, ಛಾನ್ಸಲರ್‌ನ್ನು ಅದೇ ಆಧಾರದ ಮೇಲೆ ನೇಮಿಸುತ್ತಿರಾ? ಅನೇಕ ಜನ ನಾನ್‌ಕ್ವಾಲಿಫೈಡ್ ಜನರನ್ನು ನೇಮಿಸಿದ ಉದಾಹರಣೆ ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಏನು ಪ್ರಶ್ನೆ ಕೇಳಿದಿರಿ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ವಿದ್ಯಾರ್ಹತೆ ಇಟ್ಟುಕೊಳ್ಳದೆ ಛಾನ್ಸಲರ್ ನೇಮಕಮಾಡತಕ್ಕದು ನನ್ನ ನೋಟೀಸಿಗೆ ಬಂದಿಲ್ಲ. ಯಾರಾದರೂ ಪ್ರೈಮರಿ ಸ್ಕೂಲ್ ಓದಿದಂಥ ಗವರ್ನರ್‌ನ್ನು ಛಾನ್ಸಲರ್ ಮಾಡಿದ್ದಾರೆಯೇ ?.

ಶ್ರೀ ಕೆ. ಎಚ್. ಪಾಟೀಲ್.—ನಾಹು ರೀಸರ್ಚ್ ಬಗ್ಗೆ ಮಾತನಾಡುತ್ತಾ ಇರುವುದು.

ಶ್ರೀ ಎಚ್. ಡಿ. ದೇವೇಗೌಡ.—ಗವರ್ನರುಗಳನ್ನು ರಾಷ್ಟ್ರದಲ್ಲಿ ನೇಮಕ ಮಾಡುವಾಗ ಸಾಕಷ್ಟು ಅರ್ಹತೆ ಇರತಕ್ಕವರನ್ನು ನೇಮಕ ಮಾಡುತ್ತಾರೆ ಎಂದು ತಿಳಿದುಕೊಳ್ಳುತ್ತೇನೆ. ಒಂದು ವೇಳೆ ರಾಜಕೀಯ ಒತ್ತಡದಲ್ಲಿ ಯಾರಾದರೂ ಪ್ರೈಮರಿ ಸ್ಕೂಲ್ ಓದಿದವರನ್ನು ಗವರ್ನರ್ ಮಾಡಿದ್ದರೆ, ಅದಕ್ಕೆ ವಿಷಾದ ಪಡಬೇಕಾಗಿದೆ. ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಪಕ್ಷದ ಅಧಿಕಾರ ಅಥವಾ ಬೇರೆ ಯಾವುದೇ ಆಗಲಿ ಅದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ. The Minister will act as a Pro-Chancellor. ವಿದ್ಯಾರ್ಹತೆ ಪ್ರಶ್ನೆ ಮುಖ್ಯವಲ್ಲ. ಮಂತ್ರಿಯಾಗುವುದಕ್ಕೆ ಅನೇಕ ಕಾರಣಗಳಿವೆ. ಆ ಒಂದು ಸನ್ನಿವೇಶದಲ್ಲಿ ನೋಡುವುದಾದರೆ ರೀಸರ್ಚ್ ಆಕ್ಟಿವಿಟೀಸ್ ಬಗ್ಗೆ ನಿರ್ಧಾರವನ್ನು ಕೊಡತಕ್ಕದ್ದಕ್ಕೆ ಪ್ರೊಛಾನ್ಸಲರ್‌ಗೆ ಕಷ್ಟ ಆಗಬಹುದು. ಶ್ರೀ ಕೆ. ಎಚ್. ಪಾಟೀಲರಿಗೆ ಹೆಚ್ಚಿಗೆ ಮಾಹಿತಿ ಇರಬಹುದು. ಡಬಲ್ ಡಿಗ್ರಿ ತೆಗೆದು ಕೊಂಡಿರುವವರು ಎಲ್ಲಾ ಮಹಾ ಬುದ್ಧಿವಂತರು ಎಂದು ನಾನು ವಾದ ಮಾಡಲಿಲ್ಲ. ಹೆಚ್ಚಿಗೆ ಜ್ಞಾನ, ಅನುಭವ ಇರಬೇಕು. ಅನುಭವ ಪಡೆದಿರುವವರು ಎಲ್ಲಾ ಕಾಲದಲ್ಲೂ ವ್ಯವಸಾಯ ಮಂತ್ರಿಗಳಾಗಲೂ ಸಾಧ್ಯವಿಲ್ಲ. ಆದುದರಿಂದ ಇಂಥ ಒಂದು ಅಧಿಕಾರವನ್ನು ನೀವು ತೆಗೆದುಕೊಳ್ಳಲಿಕ್ಕೆ ಹೊರಟಿರತಕ್ಕದ್ದು ಉಚಿತ ವಲ್ಲ. ರೀಸರ್ಚ್ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು ಆಗಲೀ ಮತ್ತೆ ಯೂನಿವರ್ಸಿಟಿ ಒಳ ವ್ಯವಹಾರದಲ್ಲಿ ಯಾವುದೇ ಒಂದು ನಿರ್ಣಯ ತೆಗೆದುಕೊಳ್ಳುವುದಾಗಲೀ ಅದಕ್ಕೆ ಛಾನ್ಸಲರ್ ಮತ್ತು ಬೋರ್ಡ್ ಆಫ್‌ರೀಜಂಟ್ಸ್‌ನ್ನು ಬದ್ಧ ಮಾಡೋಣ. ಬೋರ್ಡ್ ಅಫ್‌ರೀಜಂಟ್ಸ್ ಒಂದು ವೇಳೆ ಅನ್ಯಾಯ ಮಾಡಿದರೆ ಅಂಥ ಅನ್ಯಾಯವನ್ನು ಸರಿಪಡಿಸಲಿಕ್ಕೆ ವೈಸ್—ಛಾನ್ಸಲರಿಗೆ ಆಗಲೀ, ಛಾನ್ಸಲರಿಗಾಗಲೀ ಬಿಡೋಣ. ನೀವು ಕೈ ಹಾಕಲಿಕ್ಕೆ ಹೋಗುವಂಥಾದ್ದು ಯೋಗ್ಯವಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆ ಪಡುತ್ತೇನೆ ಮುಂದು ಹೋಗಿ ಡೀನ್ ವ್ಯವಹಾರದಲ್ಲಿ ಕೂಡ ಕೈ ಹಾಕಲು ಪ್ರಯತ್ನ ಪಟ್ಟಿದ್ದೀರಿ.

> "The Dean shall be a whole time officer by the University and shall be appointed by the Pro-Chancellor in consultation with the *vice*-Chancellor":

(ಶ್ರೀ ಎಚ್. ಡಿ. ದೇವೇಗೌಡ)

Again, the words 'Pro-Chancellor' have been inserted here. ಇಲ್ಲ ಚಾನ್ಸಲ್ಲರ್ ಹೆಸರೇ ಇಲ್ಲ. ಕಾನ್‌ವೊಕೇಷನ್‌ಗೆ ದಿನಾ ಹೋಗಿ ಕರೀಗೌನ್ ಹಾಕಿಕೊಂಡು ಕೂತುಕೊಳ್ಳುವುದು ಮಾತ್ರ ಛಾನ್ಸಲರ್ ಕೆಲಸವೋ, ಏನೋ ಗೊತ್ತಿಲ್ಲ. ಇಲ್ಲಿ ಛಾನ್ಸಲರ್ ಪ್ರಶ್ನೆಯೇ ಇಲ್ಲ. ಎಲ್ಲಾ ಪ್ರೋ ಛಾನ್ಸಲರ್. ನಾನು ಮೊದಲೇ ಹೇಳಿದ್ದೇನೆ. ಇವತ್ತು ಕೆ. ಎಚ್. ಪಾಟೀಲರು ಇರಬಹುದು, ಹೋಗಬಹುದು. ಅದೇ ದೃಷ್ಟಿಯಿಂದ ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಇದಕ್ಕಾಗಿ ಇವತ್ತು ತಮ್ಮ ಒಂದು ಔದಾರ್ಯಕ್ಕೆ ನಾವು ಸ್ವಾಗತ ಮಾಡುತ್ತೇವೆ. ಹಾಗೆ ಇವತ್ತು ಸೆಕ್ಷನ್ 15ರಲ್ಲಿ ಕೂಡ ಅಧಿಕಾರವನ್ನು ನಿಮ್ಮ ಕೈಯ್ಯಲ್ಲಿ ತೆಗೆದುಕೊಂಡಿದ್ದೀರಿ. ರಿಜಿಸ್ಟ್ರಾರ್ ಅಪಾಯಿಂಟ್‌ಮೆಂಟಿನಲ್ಲಿ ಕೂಡ ಪ್ರೊಛಾನ್ಸಲರ್ ಮಾಡಬೇಕು. ಇದರ ಬಗ್ಗೆ ಹೆಚ್ಚು ಹೇಳುವುದು ಬೇಡ. ಮುಖ್ಯ ಮಂತ್ರಿಗಳು ಇದನ್ನು ಪುನಃ ಪರಿಶೀಲನೆ ಮಾಡಿ ಕೆಲವು ತಿದ್ದುಪಡಿಗಳನ್ನು ತರೋಣ ಎಂದು ಹೇಳಿರುವುದರಿಂದ ಇದು ಸರಿಯಾದುದಲ್ಲ ಎಂದು ಹೇಳಿ ಮುಂದಕ್ಕೆ ಹೋಗುತ್ತೇನೆ. ಇವತ್ತು ಬೋರ್ಡ್ ಆಫ್ ರಿಜಂಟ್ಸ್ ಏನು ಇದ್ದಾರೆ, ಆ ಬೋರ್ಡ್ ಆಫ್ ರಿಜಂಟ್ಸನ್ನು ತಾವು ರೀಕಾನ್‌ಸ್ಟಿಟ್ಯೂಟ್ ಮಾಡಲಿಕ್ಕೆ ಹೊರಟಿದ್ದೀರಿ. ಅಲ್ಲಿ ಇರತಕ್ಕ ಸಂಖ್ಯಾ ಬಲವನ್ನು ಹೆಚ್ಚು ಮಾಡಲಿಕ್ಕೆ ಹೊರಟಿದ್ದೀರಿ.

Clause 15 also provides for appointment of the Registrar by the Pro-Chancellor in consultation with the Vice-Chancellor. ಇಲ್ಲಿ ಏನಾಗುತ್ತದೆ ಅಂದರೆ ಒಂದು ಕಹಿ ಅನುಭವ ಬಂದಿದೆ. ಸರ್ಕಾರಿ ಅಧಿಕಾರಿಗಳ ಲೆಕ್ಕ ಹಿಡಿದರೆ, ಪುನಃ 3 ಜನ ಹೆಚ್ಚು ಮಾಡುವುದಕ್ಕೆ ಹೊರಟಿದ್ದೀರಿ. ಸರ್ಕಾರಿ ಅಧಿಕಾರಿಗಳು ಪ್ರೊ ಛಾನ್ಸಲರ್ ಯಾವ ನಿರ್ದೇಶನ ಕೊಡುತ್ತಾರೆ, ಆ ನಿರ್ದೇಶನಕ್ಕೆ ತಕ್ಕಂತೆ ತೆಗೆದುಕೊಳ್ಳುವ ಸನ್ನಿವೇಶ ಬರುತ್ತದೆ.

Then again in Clause 25 (B) (i) five members not being Government servants are to be nominated by the Chancellor on the recommendation of the Pro-Chancellor from among progressive farmers. It will thus be seen that the Board of Regents cannot function independently without fear or favour. This is the crux of the problem. In the Housing Board affair the Minister prevailed upon some officers to toe his line or to resign. Why does Government want to increase the strength of officials in the Board of Regents?

ನೀವು ಬೋರ್ಡ್ ಆಫ್ ರಿಜಂಟ್ಸ್ ಕಂಟ್ರೋಲ್ ಮಾಡಬೇಕು, ತಾವು ಹೇಳಿದ ಹಾಗೆ ಕೆಲಸ ನಡೆಯಬೇಕು, ಮಂತ್ರಿಗಳ ಅಭಿಪ್ರಾಯದಂತೆ ಕೆಲಸ ನಡೆಯಬೇಕು, ಆ ಹಿನ್ನಲೆಯಿಂದ ಸಂಖ್ಯಾಬಲವನ್ನು ಹೆಚ್ಚಿಸುವುದಕ್ಕೆ ಹೊರಟಿದ್ದೀರಿ.

ಶ್ರೀ ಕೆ ಎಚ್. ಪಾಟೀಲ್.—ಈಗ ಇದ್ದ ಬೋರ್ಡ್ ಆಫ್ ರಿಜೆಂಟ್ಸ್‌ನಲ್ಲಿ ಅಗ್ರಿಕಲ್ಚರಲ್ ರೆಪ್ರಸೆಂಟೆಟೀವ್ಸ್‌ಗೆ ಪ್ರಾತಿನಿಧ್ಯತೆ ಇದೆಯೇ? ಅಲ್ಲಿ ಅಗ್ರಿ ಕಲ್ಚರಿಸ್ಟ್ ರೆಪ್ರಸೆಂಟೆಟೀವ್ಸ್ ಒಬ್ಬರಾದರೂ ಇರುವುದಕ್ಕೆ ಅವಕಾಶ ಇದೆಯೇ? ಹಾಗಾದರೆ ಅಗ್ರಿಕಲ್ಚರ್ ಯೂನಿವರ್ಸಿಟಿಗಳಲ್ಲಿ ಅಗ್ರಿಕಲ್ಚರಿಸ್ಟ್ ಇರಬಾರದು ಎಂದು ತಮ್ಮ ಅಭಿಪ್ರಾಯವೇ? ಅಗ್ರಿಕಲ್ಚರಿಸ್ಟ್ ಇರಬೇಕು ಎಂದರೆ ಯಾವ ಮಾರ್ಗದಿಂದ ಅವರು ಬರಬೇಕು? ಈಗ ಇರುವ ಅಗ್ರಿಕಲ್ಚರ್ ಆಕ್ಟ್ ಪ್ರಕಾರ ಪ್ರೊಛಾನ್ಸಲರ್ ರೆಕಮಂಡೇಷನ್ ಇಲ್ಲದೆ ಅಪಾಯಿಂಟ್ ಮಾಡುತ್ತಾರೆಯೇ?

ಶ್ರೀ ಎಚ್. ಡಿ ದೇವೇಗೌಡ.— ಈ ಬೋರ್ಡ್ ಆಫ್ ರೀಜೆಂಟ್ಸ್‌ನಲ್ಲಿ ವ್ಯವಸಾಯಗಾರನಿಗೆ ಪ್ರಾತಿನಿಧ್ಯ ಕೊಡುವುದಾದರೆ ನಾನು ಸ್ವಾಗತ ಮಾಡುತ್ತೇನೆ. ಡೀನ್ ಆಫ್ ಯೂನಿವರ್ಸಿಟಿ, ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಚೀಫ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್, ಈ ಅಧಿಕಾರಿಗಳು ವ್ಯವಸಾಯಗಾರರೇ? ಬೇಕಾಗಿದ್ದರೆ ಈ ಅಧಿಕಾರಿಗಳ ಬದಲು ಇನ್ನೂ 3-4 ಜನರನ್ನು ವ್ಯವಸಾಯ ಗಾರರಾಗಿರುವಂಥಾವರನ್ನೇ ಅಪಾಯಿಂಟ್ ಮಾಡಿ. ಅದಕ್ಕೆ ನನ್ನ ಅಭ್ಯಂತರ ವೇನೂ ಇಲ್ಲ. ಹೆಚ್ಚು ಹೆಚ್ಚಾಗಿ ಈ ಅಧಿಕಾರಿ ವರ್ಗದವರನ್ನು ಮತ್ತು ವ್ಯವ ಸಾಯಗಾರರಲ್ಲದವರನ್ನು ಅಪಾಯಿಂಟ್ ಮಾಡುವುದು ಸರಿಯಲ್ಲ. ಆದುದರಿಂದ ವೈಯಕ್ತಿಕವಾಗಿ ನೀವು ತಂದಿರತಕ್ಕಂಥ ಪ್ರಪೋಸಲ್ಸ್ ಏನು ಇದೆಯೋ ಅದು ಸರಿಯಾಗಿಲ್ಲ ಎಂದು ನನ್ನ ವೈಯುಕ್ತಿಕ ಅಭಿಪ್ರಾಯವನ್ನು ತಿಳಿಸುತ್ತೇನೆ.

ಇನ್ನು ಇದರಲ್ಲಿ ಪ್ರೋಛಾನ್ಸಲರ್ ಎಂದು ಏನು ಹೇಳಿದ್ದೀರೋ ಅದಕ್ಕೆ ಆನ್ ದಿ ರೆಕಮೆಂಡೇಷನ್ ಆಫ್ ದಿ ಗೌರ್ನಮೆಂಟ್ ಎಂದು ಇಟ್ಟುಕೊಳ್ಳಿ. ಏತಕ್ಕೆಂದರೆ ಇದರಲ್ಲಿ ಕಾಂಟ್ರವರ್ಸಿ ಬರುತ್ತದೆ. ಪ್ರೋಛಾನ್ಸಲರ್‌ಗೆ ಅಧಿಕಾರ ಇದ್ದರೆ ಒಂದೊಂದು ಸಂದರ್ಭದಲ್ಲಿ ಅವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬಹುದು. ಆದುದರಿಂದ ಗೌರ್ನಮೆಂಟ್ ಅಂತ ಇದ್ದರೆ ಅದು ಸರ್ಕಾರದ ಮೇಲೆ ಜವಾಬ್ದಾರಿ ಇರುತ್ತದೆ. ಆ ರೀತಿ ಸರ್ಕಾರದ ಮೇಲೆ ಜವಾಬ್ದಾರಿ ಇದ್ದರೆ ಒಳ್ಳೆಯದು. ಈ ತರಹದಲ್ಲಿ ಮಾರ್ಪಾಡು ಮಾಡಿಕೊಳ್ಳ ಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ.

(ಶ್ರೀ ಎಚ್. ಡಿ. ದೇವೇಗೌಡ)

ಇನ್ನು ಸೆಕ್ಷನ್ 32ರಲ್ಲಿ ಪೆನ್‌ಷನ್ ಪ್ರಾವಿಡೆಂಟ್ ಫಂಡ್ ಇದನ್ನು ಡಿಲೀಟ್ ಮಾಡಿದ್ದೀರ. ಅದರ ಉದ್ದೇಶ ಏನು ಎಂದು ನಾನು ಕೇಳುತ್ತೇನೆ. ಇವತ್ತು ಇದರಲ್ಲಿರತಕ್ಕಂಥ ಪೆನ್‌ಷನ್ ಅಂಡ್ ಪ್ರಾವಿಡೆಂಟ್ ಫಂಡನ್ನು ಕಿತ್ತುಹಾಕುವುದು ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ಸೆಕ್ಷನ್ (38)ರಲ್ಲಿ ಆನ್ಯುಯಲ್ ರಿಪೋರ್ಟನ್ನು ಈ ಸಭೆಯಲ್ಲಿ ಇಡುವುದಕ್ಕೆ ಪ್ರಯತ್ನ ಮಾಡಿದ್ದೀರ. ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ, ಎಂದು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ.

In sub-section (6) of section 40 it is stated that :

> "40. (6) A new Statute or addition to the Statute or any amendment or repeal of a Statute shall require the previous approval of Pro-Chancellor who may sanction, disallow or remit it for further consideration." ಇದು ಬಹಳ ಕಷ್ಟಕ್ಕೆ ಬಂದು ಹೋಯಿತು. ಅದರ ಪ್ರಕಾರ ಈ ವನ್ ಸ್ಟ್ಯಾಟ್ಯೂಟ್ಸ್ ಅಮೆಂಡ್‌ಮೆಂಟ್ ರಿಪೀಲ್ ಆಗಬೇಕಾದರೂ ಸಹ ಪ್ರೋ ಛಾನ್ಸಲರ್‌ರವರ ಪ್ರೀವಿಯಸ್ ಅಪ್ರೂವಲ್ ಬೇಕು ಎಂದು ಹೇಳಿದ್ದೀರಾ ಅದು ಸರಿಯಾದುದಲ್ಲ. ಈ ಅಧಿಕಾರ ಲೆಜಿಸ್ಲೇಚರ್‌ಗೆ ಇರಬೇಕಾದ್ದು. Indirectly it means that even if the Legislature wants to amend the statute the prior approval of the Pro-Chancellor should be there. If he does not agree then there is no scope for any amendment. The way in which the Bill is drafted conveys that meaning and hence it is not correct.

SRI K. H. PATIL : Statute will have the value of an Act. It will be considered an Act itself. ಆದಕಾರಣ ಪ್ರೀವಿಯಸ್ ಅಪ್ರೂವಲ್ ಪಡೆದುಕೊಳ್ಳುವುದು ಉತ್ತಮ ಎಂದು ನಾವು ಅಭಿಪ್ರಾಯಪಟ್ಟುಕೊಂಡಿದ್ದೇವೆ.

SRI H. D. DEVE GOWDA : Let it come before the Legislature if any amendment is necessary.

SRI K H. PATIL : I hope the hon. Member would agree that any statute either of a University or of a Corporation does not come before the Legislature since the time of the Legislature is so precious that it cannot go into those things. It will only be laid before the House.

SRI H. D. DEVE GOWDA : The House has got every right to question even the validity of the rules. Nobody can question that. I want that the Pro-Chancellor should have no authority whatsoever.

SRI K. H. PATIL : The statute framing right has been vested in the Board of Regeants. But they have to take the prior approval of the Pro-Chancellor.

SRI H. D. DEVE GOWDA : If there is any lacuna in the enactment let it come before the Legislature. The House should have the final say in the matter.

Then I come to section 45 which says :

> "45. Disputes as to constitution of University Authorities. — If any question arises regarding the interpretation of any provision of this Act, or of any Statute or Regulation, or as to whether a person has been duly appointed as, or is entitled to be a member of any authority of the University, the matter may be referred to the Pro-Chancellor and shall be so referred to him if six members of the Board so require. The Pro-Chancellor shall, after taking such advice as he deems necessary, decide the question; and his decision shall be final".

SRI K. H. PATIL : The framers intention is that the elected men should have a right and if you say that the Chancellor has the right I have already said we will

(ಶ್ರೀ ಕೆ. ಎಚ್. ಪಾಟೀಲ್)

consider it. Whatever rights vested in the Chancellor have been vested in the Pro-Chancellor. Are there any new sections introduced there ?

ಶ್ರೀ ಎಚ್. ಡಿ. ದೇವೇಗೌಡ : ಇದರಲ್ಲಿ ಯಾವ ಹೊಸ ಸೆಕ್ಷನ್ ಇಲ್ಲದೇ ಇದ್ದರೂ ಸಹ ಈ ಆಕ್ಟಿನಲ್ಲಿರುವ ಅಧಿಕಾರವನ್ನು ಪ್ರೋ ಛಾನ್ಸಲರ್ ಕೈಗೆ ಕೊಟ್ಟಿರುವುದು ಸರಿಯಲ್ಲ. ಇದನ್ನು ನೋಡಿ.

> "Interpretation of any provision of this Act, or of any Statute or Regulation, or as to whether a person has been duly appointed."

So, even in the appointments, the matter has to be referred to the Pro-Chancellor.

MADAM SPEAKER :—How much time still the hon. member requires ?

SRI H. D. DEVE GOWDA :—I will take another 10 or 15 minutes.

MADAM SPEAKER :—The hon. member may continue tomorrow. The House now stands adjourned, to meet again at 1-00 P.M. tomorrow.

The House adjourned at Six of the Clock to meet again at One of the Clock on Friday, the 25th May, 1973.

WD 145—GEPC—550—13 2-74

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 25th Mav 1973/Jaishta 4, 1895 S. E.

The House met in the Assembly Chamber, Vidhana Soudha, at One of the Clock.

MADAM SPEAKER (Smt. K. S. NAGARATHNAMMA) in the Chair.

STARRED QUESTIONS

(to which oral answers were given)

DISTRIBUTION OF SITE OUT OF GOVERNMENT AND PRIVATE LANDS

355. SRI H. D. DEVEGOWDA (Holenarasipura).—

Will the Minister for Municipal Administration be pleased to state :—

(*a*) the number of sites distributed for construction of House in the State so far ;

(*b*) out of the persons who have been allotted the sites. the number of persons without sites and any kind of land ;

(*c*) out of the persons who have obtained the sites, the number of persons with insufficient site or House ;

(SRI H. D. DEVEGOWDA)

(*d*) the number of sites distributed out of Government Gomal or Government lands and the expenditure incurred therefor;

(*e*) the number of sites distributed by acquiring the private lands and the expenditure incurred therefor;

(*f*) the financial assistance received from Government of India in this behalf upto 31st December 1972?

SRI B. BASAVALINGAPPA.—(Minister for Municipal Administration.)

(*a*) 2,35,268 upto 15th March 1973

(*b*) 2,12,840 (upto 31st December 1972)

(*c*) 7872 (upto 31st December 1972)

(*d*) 2,03,619 sites. Expenditure incurred Rs. 7,44,151 (upto 31st December 1972.

(*e*) 17,103—Rs. 6000 (upto 31st December 1972)

(*f*) Rs 59.84 lakhs.

ಶ್ರೀ ಎಚ್. ಡಿ. ದೇವೇಗೌಡ :- ಮಾನ್ಯ ಮಂತ್ರಿಯವರು ಉತ್ತರದಲ್ಲಿ ನಾಲ್ಕು ಲಕ್ಷದ 47 ಸಾವಿರ ಸೈಟುಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಾನು ಕೇಳಿದ ಪ್ರಶ್ನೆಗಳಿಗೆ ಸಂಗ್ರಹಿಸಿದ ಅಂಕಿ ಅಂಶಗಳು ಸರಿಯಿರದೆ ವ್ಯತ್ಯಾಸ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

*ಶ್ರೀ ಬಿ. ಬಸವಲಿಂಗಪ್ಪ :- ಈ ಸ್ಟೇಟ್‌ಮೆಂಟನ್ನು ಬೇರೆ ಬೇರೆ ಜಿಲ್ಲಾಧಿಕಾರಿಗಳಿಂದ ತರಿಸಿ ಅದರ ಪ್ರಕಾರ ಕೊಟ್ಟಿದ್ದೇವೆ. ತಾವು ಅದರಲ್ಲಿ ತಪ್ಪು ಇದೆಯೆಂದು ಹೇಳುವುದಾದರೆ ಅವನ್ನು ಸರಿಪಡಿಸಿಕೊಳ್ಳುತ್ತೇವೆ.

---

*Asterisk indicate that remarks or speeches have not been revised by the member concerned.

ಶ್ರೀ ಎಚ್. ಡಿ. ದೇವೇಗೌಡ : ಈಗ ಹಂಚಿರತಕ್ಕಂತಹ ಸೈಟುಗಳಲ್ಲಿ 2 ಲಕ್ಷ ಚಿಲ್ಲರೆ ಸೈಟುಗಳು ಗೋಮಾಳ ಜಮೀನುಗಳು. ಇದಕ್ಕೆ 7 ಲಕ್ಷ 46 ರೂಪಾಯಿ ಏಕೆ ಖರ್ಚಾಯಿತು ?

ಶ್ರೀ ಬಿ. ಬಸವಲಿಂಗಪ್ಪ : ಈ ವಿಚಾರದಲ್ಲಿ ನಾನು ಹಿಂದೆಯೇ ಹೇಳಿದ್ದೇನೆ. ನಮ್ಮ ಸರ್ಕಾರೀ ಜಮೀನಾದರೂ ಕೂಡ ಒಂದು ನಿವೇಶನವನ್ನು ಅಭಿವೃದ್ಧಿ ಮಾಡುವುದಕ್ಕೆ 150 ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಅಲ್ಲಿ ರಸ್ತೆ, ಸುತ್ತುಮುತ್ತಲೂ ಚರಂಡಿ ಇತ್ಯಾದಿಗಳನ್ನು ಮಾಡುವುದಕ್ಕೆ ಕೇಂದ್ರಸರ್ಕಾರದವರು 150 ರೂಪಾಯಿ ಎಂದು ನಿಗದಿ ಮಾಡಿದ್ದಾರೆ. ಅದರ ಪ್ರಕಾರ ಮಾಡುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ : ಒಂದು ನಿವೇಶನಕ್ಕೆ 150 ರೂಪಾಯಿ ಖರ್ಚಾಗುತ್ತದೆ ಎಂದು ಹೇಳುತ್ತಿದ್ದೀರಿ. ನಾನು ಹಲವು ಕಡೆ ತಿರುಗಿ ನೋಡಿರುವ ಹಾಗೆ ಅಲ್ಲ ಒಂದು 60-40 ರ ಸೈಟು ಮಾಡಿ ನಾಲ್ಕು ಮೂಲೆಗಳಲ್ಲಿ ಒಂದೊಂದು ಸೈಸ್ ಕಲ್ಲುಗಳನ್ನು ಹಾಕಿದ್ದಾರೆ ಅಷ್ಟೇ. ಇದಕ್ಕೆ 7 ಲಕ್ಷ 46 ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ಅವಕಾಶ ಎಲ್ಲಿದೆ ? ಒಂದು ವೇಳೆ ರಸ್ತೆ ಬಾವಿ ಮಾಡಬೇಕಾದರೆ ಖರ್ಚು ಇದೆ. ಆದ್ದರಿಂದ ಇದರಲ್ಲಿ ದುರುಪಯೋಗವಾಗುವುದಕ್ಕೆ ಅವಕಾಶ ಇದೆ. ಹಾಗಿರುವುದರಿಂದ ಇದರ ಬಗ್ಗೆ ಕೂಲಂಕಷವಾದ ಪರಿಶೀಲನೆ ಮಾಡಿಸುತ್ತೀರಾ ?

ಶ್ರೀ ಬಸವಲಿಂಗಪ್ಪ : ಯಾರು ತಪ್ಪು ಮಾಡುತ್ತಾರೆ, ಅವರ ಬಗ್ಗೆ ತನಿಖೆ ಮಾಡೋಣ. ಆದರೆ ನಾವು ಕೇಂದ್ರಸರ್ಕಾರಕ್ಕೆ 14 ಪ್ರೊಜೆಕ್ಟುಗಳನ್ನು ಕಳಿಸಿದ್ದೆವು. ಒಂದು ಸೈಟಿಗೆ 150 ರೂಪಾಯಿ ಪ್ರಕಾರ ಅವರಿಂದ ಹಣ ಬರಬೇಕಾಗಿತ್ತು. ಅದರ 25 ಭಾಗ ಹಣವನ್ನು ನಮಗೆ ಅವರು ಕೊಟ್ಟಿದ್ದಾರೆ. ಇದರಲ್ಲಿ ಮೊದಲು ಏನು ಹಣ ನಮಗೆ ಬಂತು ಅದರ ಪ್ರಕಾರ ಒಂದೊಂದು ತಾಲ್ಲೂಕಿಗೆ 25 ಸಾವಿರ ರೂಪಾಯಿಯಂತೆ ಹಂಚಿದ್ದೇವೆ. ಬಾಕಿ ಹಣವನ್ನು ಹಂಚಿಲ್ಲ ಕೆಲವು ಸ್ಥಳಗಳಲ್ಲಿ ಕಲ್ಲು ಹಾಕಿದ್ದನ್ನು ನೋಡಿದ್ದೇನೆ ಮತ್ತು ರಸ್ತೆಗಳನ್ನು ಮಾಡದಿದ್ದುದನ್ನು ಸಹ ನೋಡಿದ್ದೇನೆ. ಅಲ್ಲಿ ಹಣವನ್ನು ಖರ್ಚು ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಈಗತಾನೆ ಕಾರವಾರದ ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿದ್ದೇನೆ. ಅವರು ಸಹ ಹಣ ಕಳಿಸಿ ಕೊಡಿ ಎಂದು

(ಶ್ರೀ ಬಸವಲಿಂಗಪ್ಪ)

ಹೇಳಿದ್ದಾರೆ. ಬಾಕಿ ಹಣ ಇನ್ನೂ ಬಂದಿಲ್ಲ. ಬಂದ ಮೇಲೆ ಅವು ಸರಿಯಾಗಿ ಖರ್ಚಾಗುವಂತೆ ನೋಡಿಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ :—ಇಲ್ಲಿ 7 ಲಕ್ಷ 46 ಸಾವಿರ ಖರ್ಚಾಗಿದೆ ಎಂದು ಅರ್ಥವಾಗುತ್ತದೆ. ನಿಮ್ಮ ಲೆವೆಲಿನಲ್ಲಿ ಹಣ ರಿಲೀಸ್ ಆಗಲಿಲ್ಲವೆಂದು ಹೇಳುವ ವಿಚಾರ ಬೇರೆ.

The actual amount spent so far is 7,44,154. I want to know whether it is actually spent. According to the scheme, that is now enunciated, 150 rupees per site has been fixed. It is not actually spent

ಸುಮ್ಮನೆ ಡಿಮಾರ್ಕೇಶನ್ ಮಾತ್ರ ಮಾಡಿದ್ದಾರೆ. ಆದ್ದರಿಂದ ಇದರಲ್ಲಿ ಹಣ ದುರುಪಯೋಗವಾಗುವ ಅವಕಾಶ ಇದ್ದುದರಿಂದ ತನಿಖೆ ಮಾಡುವುದಕ್ಕೆ ಏಕೆ ಪ್ರಯತ್ನ ಮಾಡಬಾರದು ?

ಶ್ರೀ ಬಿ. ಬಸವಲಿಂಗಪ್ಪ : 2 ಲಕ್ಷ 35 ಸಾವಿರ ಸೈಟುಗಳನ್ನು ಅಭಿವೃದ್ಧಿ ಮಾಡಬೇಕಾದರೆ ಸುಮಾರು 3-4 ಕೋಟಿ ರೂಪಾಯಿ ಬೇಕಾಗುತ್ತದೆ. ಕೆಲವು ಊರುಗಳನ್ನು ಮಾಡಿದ್ದೇವೆ. ಇನ್ನೂ ಕೆಲವು ಊರುಗಳನ್ನು ಮಾಡಿಲ್ಲ. ಬಾವಿ, ರಸ್ತೆ, ಚರಂಡಿ ಇತ್ಯಾದಿಗಳನ್ನು ಇನ್ನೂ ಕೆಲವು ಕಡೆ ಮಾಡಿಲ್ಲ. ದುರುಪಯೋಗ ಎಲ್ಲಿಯಾದರೂ ಆಗಿದ್ದರೆ, ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

SRI J. P. SARWESH.—The expenditure incurred in acquiring private sites is very much less. It is only Rs. 6,000 will the Government take some measures to acquire private lands in the shortest possible time ?

Sri B. BASAVALINGAPPA. The hon. Member knows that the House has passed the Land Acquisition Act. As soon as assent is received from the President, we are going to acquire large extent of land from the private parties, wherever the people need it.

ಶ್ರೀ ಕೆ. ಎಂ. ನಾಗಣ್ಣ : ತಾವು (ಡಿ)ಗೆ ಉತ್ತರವಾಗಿ ಎರಡು ಲಕ್ಷ 35 ಸಾವಿರ ಚಿಲ್ಲರೆ ಸೈಟುಗಳನ್ನು ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಇದಕ್ಕೆ

ನೀವು ಹೇಳಿದಹಾಗೆ 150 ರೂಪಾಯಿ ಖರ್ಚು ಮಾಡಿದರೆ 7 ಲಕ್ಷ ಆಗುವುದಕ್ಕೆ ಕಾರಣವೇನು ?

ಶ್ರೀ ಬಿ. ಬಸವಲಿಂಗಪ್ಪ : ಅವೆಲ್ಲವುಗಳಿಗೆ ಒಟ್ಟು ಖರ್ಚು 3-4 ಕೋಟಿ ರೂಪಾಯಿಯಾಗುತ್ತದೆ

SRI B. B. SAYANAK:— In Belgaum, that is at Anugod, Government had given 5 acres of Gomal land to the Harijans for construction of houses. Government has not spent a single pie for the last four years. I wish to know whether the expenditure of Rs. 7,44,154 incurred for distribution of Gomal and Government lands, has anything to do with the Anugod sites.

SRI B. BASAVALINGAPPA.— My hon. friend says that his question pertains to a land which was acquired four years ago. That has nothing to do with the land acquired for the last one year.

ಶ್ರೀ ಬಾಪೂಗೌಡ ರಾಯಪ್ಪ.— ತಾವು 2 ಲಕ್ಷ 35 ಸಾವಿರ ಚಿಲ್ಲರೆ ನಿವೇಶನಗಳನ್ನು ಹಂಚಿದ್ದೀರಿ ಎಂದು ಹೇಳಿದೆ. ಆ ಸೈಟುಗಳ ಪೈಕಿ ಸರ್ಕಾರದ ಜಾಗದಲ್ಲಿರುವ ಸೈಟುಗಳೆಷ್ಟು, ಖಾಸಗೀ ಜನಗಳಿಂದ ತೆಗೆದುಕೊಂಡ ಸೈಟುಗಳು ಎಷ್ಟು? ತಾವು ಖಾಸಗೀ ಜನಗಳಿಂದ ತೆಗೆದುಕೊಂಡ ಸೈಟುಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ? ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಿದ್ದೀರಿ

ಶ್ರೀ ಬಿ. ಬಸವಲಿಂಗಪ್ಪ.— ಅದಕ್ಕೆ ಉತ್ತರ (ಸಿ) ಭಾಗದಲ್ಲಿದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ಈ ಸೈಟುಗಳನ್ನು ಬಡವರಿಗೆ ಹಂಚಬೇಕೆಂದು ತೆಗೆದುಕೊಂಡಿರುವಾಗ, ಈಗ ಕೆಲವು ಲೋಕಲ್ ಎಂ. ಎಲ್. ಎ. ಗಳು ಹಾಗೂ ಕೆಲವರು ಮಂತ್ರಿಗಳು ಮನೆ ಇಲ್ಲದವರು ಕೇಳಿರುವುದರಿಂದ, ಅವನ್ನು ಹಂಚುವಾಗ ಇತರ ಎಂ. ಎಲ್. ಎ. ಅವರನ್ನು ಕೇಳಿ ಹಂಚುತ್ತೀರಾ ?

SRI B. BASAVALINGAPPA.— We have a Trust Board and the Trust Board is manned by nominated members.

ಶ್ರೀ ಟಿ. ಎಂ. ಮಂಜುನಾಥ.— ಈಗ ನಿವೇಶನಗಳನ್ನು ಹಂಚುವುದಕ್ಕೆ ಪಂಚಾಯತಿದಾರರಿಗೆ ಪರ್ಮಿಷನ್ ಕೊಟ್ಟಿದ್ದೀರಿ. ಇದರಲ್ಲಿ ಹರಿಜನರಿಗೆ ಕೊಟ್ಟಿರುವುದು ಎಷ್ಟು, ಅವರಲ್ಲಿ ಅನೇಕರು ಅರ್ಜಿಗಳನ್ನು ಹಾಕಿ ಮೂರು ನಾಲ್ಕು ವರ್ಷಗಳಾಗಿವೆ. ಅವರಿಗೆ ಈ ಸ್ಕೀಮು ಪ್ರಕಾರ ಬರುವುದಿಲ್ಲ. ಹರಿಜನರ ಮನೆಯ ಪಕ್ಕದಲ್ಲಿರುವ ನಿವೇಶನಗಳನ್ನು ಪಂಚಾಯತಿ ಚೇರ್‌ಮೆನ್ ಅವರು ಇನ್ನೂ ಹಂಚಿಲ್ಲ. ಅವರೂ ಸಹ ಬಿ. ಡಿ ಓ, ತಹಸೀಲ್ದಾರ್, ಡೆಪ್ಯುಟಿ ಕಮಿಷನರ್ ಅವರ ಜೊತೆಯಲ್ಲಿ ಸೇರಿಕೊಂಡಿದ್ದಾರೆ. 3-4 ವರ್ಷಗಳಿಂದಲೂ ಅವರ ಹತ್ತಿರ ಅವರು ಓಡಾಡುತ್ತಿದ್ದರೂ ಇದುವರೆಗೆ ಅವರಿಗೆ ಒಂದು ಪರಿಹಾರವೂ ಸಿಗದೇ ಇರುವುದರಿಂದ ಪಂಚಾಯಿತಿಯವರನ್ನು ಬಿಟ್ಟು ಬೇರೆ ಇನ್ನಾವುದಾದರೂ ಅತಾರಿಟಿಯಿಂದ ಈ ಕೆಲಸವನ್ನು ಮಾಡಿಸುತ್ತೀರಾ ? ಯಾರು ಅವರಿಗೆ ಸೈಟು ಕೊಡಬೇಕೆಂಬುದನ್ನು ಯೋಚನೆ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ. — ಪಂಚಾಯಿತಿಗೂ ಮತ್ತು ನಿವೇಶನಗಳನ್ನು ಅವರಿಗೆ ಹಂಚುವುದಕ್ಕೂ ಸಂಬಂಧವಿಲ್ಲ ಇವೆಲ್ಲ ಬಿ. ಡಿ. ಓ., ತಹಸೀಲ್ದಾರ್, ಡೆಪ್ಯುಟಿ ಕಮಿಷನರ್ ಮಾಡತಕ್ಕ ಕೆಲಸ. ಅದರ ಬಗ್ಗೆ ತಮಗೆಲ್ಲರಿಗೂ ಪುಸ್ತಕವನ್ನು ಪ್ರಿಂಟ್ ಮಾಡಿಕೊಡುತ್ತೇನೆ ಯಾವ ರೀತಿಯಲ್ಲಿ ಈ ವಿಚಾರದಲ್ಲಿ ಸರ್ಕಾರದ ಹುಕುಂ ಆಗಿದೆಯೋ ಆ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ. ವಿಲೇಜ್ ಪಂಚಾಯಿತಿಯವರಿಗೆ ಇದರ ಬಗ್ಗೆ ಹಕ್ಕು ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ :— ಈ ಸೈಟುಗಳನ್ನು ಸರಿಪಡಿಸುವುದಕ್ಕೆ ನಾಲ್ಕು ವರ್ಷಗಳು ಬೇಕಾಗುತ್ತದೆಂದು ಹೇಳಿದ್ದೀರಿ ಈ ಸ್ಕೀಂ ಪ್ರಕಾರ 5 ಕೋಟಿ ರೂಪಾಯಿಗಳಲ್ಲಿ ಸಣ್ಣ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳುತ್ತೀರಿ. ಮೊದಲು ಸೈಟುಗಳನ್ನು ಸರಿಪಡಿಸದೆ ಮನೆಗಳನ್ನು ಕಟ್ಟಿಸುವುದಕ್ಕಾಗುವುದಿಲ್ಲ. ಅದಕ್ಕಾಗಿ 4 ಕೋಟಿ ರೂಪಾಯಿಗಳನ್ನು ಮೊದಲು ಖರ್ಚು ಮಾಡಿ ಸೈಟುಗಳನ್ನು ಸರಿಮಾಡಿ, ರಸ್ತೆ ಮಾಡಿ ಮನೆಗಳನ್ನು ಕಟ್ಟಿಸಬೇಕು. ಆದ್ದರಿಂದ ಈ 5 ಕೋಟಿ ರೂಪಾಯಿಗಳ ಜೊತೆಗೆ ಇನ್ನೂ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ತೀರ್ಮಾನವನ್ನು ತೆಗೆದುಕೊಂಡು ಸೈಟುಗಳನ್ನು ಸರಿ ಮಾಡಿಸುವುದು ಮತ್ತು ಮನೆಗಳನ್ನು ಕಟ್ಟಿಸುವುದು — ಈ ಎರಡು ಕೆಲಸಗಳನ್ನೂ ಜಾಗ್ರತೆಯಾಗಿ ಮಾಡುತ್ತೀರಾ?.

ಶ್ರೀ ಬಿ. ಬಸವಲಿಂಗಪ್ಪ :— ಸೈಟು ಕೊಡುವ ಯೋಜನೆ ಏನಿದೆಯೋ ಅದು ಕೇಂದ್ರ ಸರ್ಕಾರದ್ದು. ನಮಗೂ ಅದಕ್ಕೂ ಏನೂ ಸಂಬಂಧವಿಲ್ಲ. ಅವರು ಎಷ್ಟಾದರೂ ಹಣವನ್ನು ನಮಗೆ ಒದಗಿಸುವುದಕ್ಕೆ ತಯಾರಾಗಿದ್ದಾರೆ. ಅದನ್ನು ಸರಿಪಡಿಸುತ್ತೇವೆ. ನಿವೇಶನಗಳನ್ನು ಅಭಿವೃದ್ಧಿ ಮಾಡುತ್ತೇವೆ. ಈ ವರ್ಷ 5

ಕೋಟಿ ರೂಪಾಯಿಗಳು ಅಷ್ಟೇ ಅಲ್ಲ. ಇನ್ನೂ ಹೆಚ್ಚಿಗೆ ಬೇಕಾಗುತ್ತದೆ. ಆದರ ಪ್ರಕಾರ 20 ಸಾವಿರ ಮನೆಗಳು ಆಗುತ್ತವೆ. ಅಂದಾಜು ಆಗಿರುವುದು ಈ ವರ್ಷದಲ್ಲಿ 50 ಸಾವಿರ ಮನೆಗಳನ್ನು ಕಟ್ಟಬೇಕೆಂಬುದು. ಇದು ಯಶಸ್ವಿ ಯಾಗುತ್ತದೆಂದು ನನಗೆ ಪೂರ್ಣ ನಂಬಿಕೆ ಇದೆ. ನನ್ನ ಈ ಒಂದು ಹೇಳಿಕೆಯಿಂದ ಮಾನ್ಯ ಸದಸ್ಯರು ಸಂತೃಪ್ತರಾಗುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಪಿ. ಎಂ. ಬಂಗಿ :— ಸೈಟುಗಳನ್ನು ಹಂಚುವ ವಿಷಯದಲ್ಲಿ ತಮ್ಮ ಯೋಚನೆ ಹರಿಜನರ ಹಾಗೂ ಗಿರಿಜನರ ಕಡೆಗೆ ಹೋಗಬೇಕೆಂದು ಹೇಳಿದ್ದಾರೆ. ಆ ಪ್ರಕಾರ ಸೈಟುಗಳು ಅಲಾಟ್ ಆಗಿರುವುದು ಹರಿಜನರಿಗೇ ಅಲ್ಲ, ಬೇರೆಯ ವರಿಗೂ ಅಲಾಟ್ ಮಾಡಿದ್ದಾರೆ. ಆ ಕಡೆ ತಮ್ಮ ಗಮನ ಹೋಗುವಂತಹ ಧೋರಣೆಯನ್ನು ಅನುಸರಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :— ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆ ಪ್ರಕಾರ ಎಲ್ಲಾದರೂ ನ್ಯೂನತೆ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ತಯಾರಾಗಿ ದ್ದೇವೆ. ಮಾನ್ಯ ಸದಸ್ಯರು ಅಂಥಾದ್ದನ್ನು ಗಮನಕ್ಕೆ ತಂದರೆ, ಯಾವ ಅಧಿ ಕಾರಿ ಈ ಸರ್ಕಾರದ ನಿರ್ದೇಶನವನ್ನು ಉಲ್ಲಂಘನೆ ಮಾಡಿದ್ದಾನೋ ಅವನ ಮೇಲೆ ಸರಿಯಾದಂಥ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದಕ್ಕೆ ನಾನು ಹಿಂಜರಿಯುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :— (ಅ) ಗೆ ಉತ್ತರವಾಗಿ ತಾವು ಅಂಕಿ ಅಂಶಗಳನ್ನು ಕೊಡುತ್ತಾ 2 ಲಕ್ಷ 35 ಸಾವಿರ ಚಿಲ್ಲರೆ ಸೈಟುಗಳನ್ನು ಹಂಚ ಲಾಗಿದೆಯೆಂದು ಹೇಳಿದೆ. (ಅ) ಗೆ ಉತ್ತರವಾಗಿ ಮತ್ತೆ 2 ಲಕ್ಷ 12 ಸಾವಿರ ಜನ ರಿಗೆ ನಿವೇಶನ ಇಲ್ಲವೆಂದು ಹೇಳಿದ್ದೀರಿ. ಅಂದ ಮೇಲೆ 23 ಸಾವಿರ ಜನರು ಸೈಟುಗಳನ್ನು ಹೊಂದಿದ್ದರೂ ಅಂತಹವರಿಗೆ ನಿವೇಶನಗಳನ್ನು ಕೊಟ್ಟಿದೆ ಎಂಬ ಅರ್ಥ ಬರುತ್ತದೆ. ಆದ್ದರಿಂದ ಈಗ ಸೈಟು ಇರುವವರಿಗೇ ಮತ್ತೆ ಸೈಟು ಗಳನ್ನು ಕೊಡುವುದು ಸರ್ಕಾರದ ಧೋರಣೆಯೇ ?

ಶ್ರೀ ಬಿ. ಬಸವಲಿಂಗಪ್ಪ :— ಯಾರ್ಯಾರಿಗೆ ಜಮೀನು ಇಲ್ಲವೋ ಅಂತಹ ವರಿಗೆ ಸೈಟುಗಳನ್ನು ಕೊಟ್ಟಿದ್ದೇವೆ. ಮತ್ತೆ ಸ್ಮಾಲ್ ಹೋಲ್ಡರ್ಸ್ ಅಂದರೆ, ಕೇವಲ ಒಂದು ಎಕರೆ, ಎರಡು ಎಕರೆ ಇರತಕ್ಕ ಬಡವರಿಗೆ ಇನ್ನೂ ಸ್ವಲ್ಪ ಜಮೀನು ಬೇಕೆಂದು ಕೇಳಿದ ಪಕ್ಷದಲ್ಲಿ ಅಂತಹವರಿಗೂ ಸ್ವಲ್ಪ ಜಮೀನು ಕೊಡಬೇಕೆಂಬ ಯೋಜನೆಯನ್ನು ನಾವು ಈಗ ಹಾಕಿಕೊಂಡಿದ್ದೇವೆ. ಶ್ರೀಮಂತರಿಗೆ ಅವನ್ನು ಕೊಡಬೇಕೆಂಬ ಉದ್ದೇಶವಿಲ್ಲ. ಖಾಸಗಿ ಜನಗಳಿಗೆ ಅವನ್ನು ತೆಗೆದುಕೊಳುವುದಕ್ಕೆ ಅಕ್ಷಿ ಇರುತ್ತದೆ. ಅಂತಹವರಿಗೆ ಸಹಾಯ ಮಾಡುವುದು ಅನಾವಶ್ಯಕ.

REPAIR WORK OF B. R. B. C. DAM

874. SRI. HANJI SHIVANNA.—(Tarikere).—

Will the Minister of State for Major Irrigation be pleased to state:—

(*a*) the number of years ago, the B.R.B.C. Dam was constructed;

(*b*) the number of years ago, the Kannambadi Dam was constructed;

(*c*) whether it has come to the notice of the Government that water is leaking due to the crack in the B. R. B. C. Dam;

(*d*) when the repair work of this Dam would be taken up;

(*e*) as the sugarcane and garden crops which come under this project would be damaged if the said repair work is to be taken up before March, whether the work would be taken up after the said period?

SRI H. N. NANJE GOWDA.—(MINISTER OF STATE FOR MAJOR IRRIGATION)

(*a*) There is no B.R.R.B.C. Anicut but there is a reservoir constructed acrose Bhadra River.

(*b*) About 10 years

(*c*) There is no crack but water is coming through masonry joints, in the left bank sluice well.

(*d*) It is proposed to take up the repairs from April to June 1973.

(*e*) Yes.

ಶ್ರೀ ಹಂಜಿ ಶಿವಣ್ಣ.—(ಇ)ಗೆ ಉತ್ತರವಾಗಿ ಆ ಅಣೆಕಟ್ಟಿನಲ್ಲಿ ನೀರು ಸೋರುತ್ತಿರುವುದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದಕ್ಕೆ ಎಡದಂಡೆ ತೂಬು ಬಾವಿಯು ಈ ಕಲ್ಕಟ್ಟಣೆಯ ಜೋಡಣೆಯಿಂದ ಮಾತ್ರ ನೀರು ಬರುತ್ತಿದೆಯೆಂದು ಹೇಳಿದ್ದೀರಿ. ತೂಬು ಹತ್ತಿರ ಮೇಲಕ್ಕೆ ಈ ವರ್ಷ ಪೈರನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಇದುವರೆಗೆ ನೀರು ಅಲ್ಲಿ ಸೋರುತ್ತಿದ್ದರೂ ಪೈರು ಬೆಳೆಯುವುದಕ್ಕೂ ಕೂಡ ಅಲ್ಲಿನ ಅಧಿಕಾರಿಗಳು ಅನಾನುಕೂಲ ಮಾಡಿದ್ದಾರೆಂಬುದು ನಿಜವೇ ?

ಶ್ರೀ. ಎಚ್. ಎನ್. ನಂಜೇಗೌಡ.— ಶಾಸಕರು ಬಂದು ಹೇಳಿದ್ದಾರೆ. ಯಾವಾಗ ನೀರು ಬಿಡದೇಕೋ ಅಲ್ಲಿ ಅದನ್ನು ಬಿಡಿಸಿದ್ದೇವೆ. ಮಾನ್ಯ ಸದಸ್ಯರು ಈಗ ಹೊಸ ವಿಷಯವನ್ನು ಹೇಳುತ್ತಾ ಇದ್ದಾರೆ. ಅದನ್ನು ನೋಡುತ್ತೇನೆ.

ಶ್ರೀ. ಹಂಜಿ ಶಿವಣ್ಣ : ಹಿಂದೆ ಕೆಲವರು ಅಲ್ಲಿ ಬತ್ತದ ಬೆಳೆ ಹಾಕಬೇಕೆಂದರೆ ನೀರು ಕೊಡುವುದಿಲ್ಲವೆಂದು ಹೇಳುತಾರೆ. ಕೆಲವರಿಗೆ ಪೈರು ಹಾಕುವುದಕ್ಕೂ ಅನಾನುಕೂಲ ಮಾಡಿದ್ದಾರೆ. ಇಷ್ಟೊಂದು ಬೆಳೆಯಾಗತಕ್ಕ ಪ್ರದೇಶದಲ್ಲಿ ನೀರನ್ನು ಸಾಕಷ್ಟು ಒದಗಿಸದೇ ಹೋದರೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ?

ಶ್ರೀ. ಎಚ್. ಎನ್. ನಂಜೇಗೌಡ.—ಆ ವಿವರಗಳು ಕನ್ಸಲ್ಟೇಟಿವ್ ಕಮಿಟಿಯಲ್ಲಿರುತ್ತದೆ. ಅವರ ಜೊತೆಯಲ್ಲಿ ನಾನು ಮಾತನಾಡಿ, ಅವರ ಅನುಮತಿ ಪಡೆದು ಎಲ್ಲ ಸೌಕರ್ಯಗಳನ್ನು ಕೊಡಲಾಗುತ್ತದೆ. ನೀರನ್ನು ಯಾವಾಗ ಬಿಡುತ್ತಾರೆಂದು ಹೊಸ ವಿಷಯವನ್ನು ಕೇಳುತ್ತಿದ್ದಾರೆ. ಆ ವಿವರಗಳು ನನ್ನಲ್ಲಿಲ್ಲ.

ಶ್ರೀ ಹಂಜಿ ಶಿವಣ್ಣ.—ಈಗ ತಪ್ಪಾಗಿದೆ. ಆ ತಪ್ಪನ್ನು ತಾವು ವಿಚಾರ ಮಾಡಿ ಇದರ ಬಗ್ಗೆ ಮುಂದೆ ಎಲ್ಲ ಸೌಕರ್ಯಗಳನ್ನು ಅವರಿಗೆ ಕೊಡುವ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ : ಏನೇನು ನ್ಯೂನತೆಗಳಿವೆಯೋ ಅವನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ನೀರು ಬಿಡುವುದಿಲ್ಲವೆಂದು ಹೇಳಿದ್ದರಿಂದ, ಅಲ್ಲಿ ಬತ್ತ ಬೆಳೆಯತಕ್ಕ ಅನೇಕ ಜಮೀನುಗಳಲ್ಲಿ ರಾಗಿ ಪೈರು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ. ಎಚ್. ಎನ್. ನಂಜೇಗೌಡ.—ಅನೇಕ ಕಡೆಗಳಲ್ಲಿ ಈಗಾಗಲೇ ರಿಪೇರಿ ಕಾಮಗಾರಿ ನಡೆಯುತ್ತಿವೆ. ಆದ್ದರಿಂದ ಮಾನ್ಯ ಸದಸ್ಯರ ಬಾಕಿ ಪ್ರಶ್ನೆಗಳಿಗೂ ಇದಕ್ಕೂ ಏನೂ ಸಂಬಂಧವಿಲ್ಲ.

REPAIRS TO TANKS OF ANKOLA TALUK

929. SMT. RADHA BHAT (Ankola).—

Will the Minister for Community Development and Social Welfare be pleased to state :—

The number of tanks repaired by the Ankola Taluk Development Board of North Kanara District since last two years and the expenditure incurred thereon ?

SRI M. MALLIKARJUNA SWAMY—(Minister for Community Developments and Social Welfare.)

The Ankola Taluk Development Board has not spent any amount from its fund for repairing the tanks during 1971-72 and 1972-73. Out of 18 tanks proposed to be taken up for repairs from 44 INED funds during 1971-72 repair works in respect of 8 tanks costing Rs. 3,500 have been completed during 1972-73.

ಶ್ರೀಮತಿ ರಾಧಾ ಭಟ್.—ಇಲ್ಲ ನನ್ನ ಪ್ರಶ್ನೆಗೆ ಉತ್ತರವಾಗಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಯವರು ಅವರ ನಿಧಿಯಿಂದ ಹಣವನ್ನು ಖರ್ಚು ಮಾಡಿಲ್ಲ ಎಂದು ಹೇಳಲಾಗಿದೆ. ಅಂದರೆ ಅವರಲ್ಲಿ ಹಣವಿರಲಿಲ್ಲವೇ ? ಅಥವಾ ಇದ್ದರೂ ಅವರು ಖರ್ಚು ಮಾಡಲಿಲ್ಲವೋ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇಲ್ಲಿ ತಾಲ್ಲೂಕು ಬೋರ್ಡಿನವರು ಕಳೆದ 2 ವರ್ಷಗಳಲ್ಲಿ 35 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಅವರ ಹಣದಲ್ಲಿ ಮೂರು ಸಾವಿರ ರೂಪಾಯಿಗಳನ್ನು ಈ ಕೆರೆ ಮತ್ತು ಬಂಡಾರಗಳ ರಿಪೇರಿಗಾಗಿ ಖರ್ಚು ಮಾಡಿದ್ದಾರೆ.

ಶ್ರೀಮತಿ ರಾಧಾ ಭಟ್.—ಈ ಐನ್. ಇ. ಡಿ. ನಿಧಿಯಿಂದ 18 ಕೆರೆಗಳನ್ನು ದುರಸ್ತಿ ಮಾಡಬೇಕೆಂದು ತೀರ್ಮಾನವಾಗಿದ್ದರೂ ಇಲ್ಲಿ ಏಕೆ 8 ಕೆರೆಗಳನ್ನು ಮಾತ್ರ ರಿಪೇರಿ ಮಾಡಿ ಇನ್ನು 10 ಕೆರೆಗಳ ಕೆಲಸವನ್ನು ಹಾಗೆ ಕೈಬಿಟ್ಟಿದ್ದಾರೆ?

ಶ್ರೀ. ಎಂ. ಮಲ್ಲಿಕಾರ್ಜುನ ಸ್ವಾಮಿ.—ಆದಕ್ಕೆ ಕಾರಣ ಹಣದ ಅಭಾವ,

ಶ್ರೀಮತಿ ರಾಧಾ ಭಟ್.—ಈ ಕೆರೆಗಳನ್ನು ಇನ್ನಾದರೂ ಬೇಗ ದುರಸ್ತಿ ಮಾಡಿಸಿ ಕೊಡುತ್ತೀರಾ?

ಶ್ರೀ. ಎಂ. ಮಲ್ಲಿಕಾರ್ಜುನ ಸ್ವಾಮಿ.—ಅಲ್ಲಿ ಈಗಾಗಲೇ ಕೈಗೊಂಡಿರತಕ್ಕ ಕರೆ ಮತ್ತು ಬಂಡಾರಗಳ ಕೆಲಸ ಪೂರ್ತಿಯಾದ ಮೇಲೆ ಉಳಿದ ಕರೆಗಳ ಕೆಲಸವನ್ನೂ ತೆಗೆದುಕೊಳ್ಳಲೇಬೇಕು–ತೆಗೆದುಕೊಳ್ಳುತ್ತೇವೆ. ಆದಷ್ಟು ಜಾಗ್ರತೆ ಅವುಗಳನ್ನೂ ರಿಪೇರಿ ಮಾಡಿಸಿ ಕೊಡುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

ಶ್ರೀ. ಜಿ. ಪುಟ್ಟಸ್ವಾಮಿ.—ಅವರು ತಮ್ಮ ಗಮನ ಸೆಳೆಯತಕ್ಕ ಮೋಷನ್ನನ್ನು ಮಂಡಿಸಬಹುದು.

QUESTIONS FOR ANSWERS ON THE DAY
(BUT NOT TAKEN UP)

MISUSE OF PANCHAYAT FUND BY CHAIRMAN OF MARCHANAHALLY GROUP VILLAGE PANCHAYAT, CHANNAPATNA TALUK

538 SRI T. V. KRISHNAPPA (Channapatna).—

Will the Minister for Community Development and Social Welfare be pleased to state :—

(*a*) the name of the Chairman of Marchanahally Group Village Panchayat, Channapatna Taluk;

(*b*) whether the Government is aware that the above Chairman is indulging in mis-use and misappropriation of Panchayat funds and collecting monies from Harijans on the plea of distribution of lands (acquired) to Harijans and further indulging in falsification of records;

(*c*) if so, the action the Government proposes to take against the above Chairman?

SRI M. MALLIKARJUNASWAMY, (Minister for Community Development and Social Welfare)

(*a*) Sri Linge Gowda

(*b*) Instances have come to notice where the Chairman has mis-used Panchayat funds. But the fact of his collecting money from Harijans on the plea of distribution of lands acquired for Harijans and indulging in falsification of records has not come to notice of Government.

(*c*) The matter is being enquired into by the Assistant Commissioner, Ramanagaram Sub-Division.

DEFAULTERS OF T. NARASIPUR T. A. P. C. M. SOCIETY

569 SRI K. MADE GOWDA (Bannur) :—

Will the Minister for Co-operation be pleased to state:

(*a*) the number of Khatedars of T. Narasipur Taluk Agricultural Produce Marketing Society who have become defaulters;

(*b*) since how many years the defaulters continue to be the Khatedars of the society;

(*c*) the number of defaulters against whom action has been taken;

(*d*) the reasons for not taking action against the remaining defaulters ?

SRI A. SHANKARA AL A (Minister for Co-operation).—

(*a*) In all nine members of this Society have become defaulters. Out of them, six are 'A' class members and three are 'B' class members.

(*b*) Two 'A' class members from 1969-70, four 'A' class members from 1971-72; one 'B' class member from 1968-69 and two 'B' class members from 1971-72 have become defaulters.

(*c*) A case was filed against two 'A' class members and the decree has been obtained.

(*d*) The society has to adjust the accounts of four 'A' class members. and two 'B' members. Therefore, no action has been taken against them.

CALLING ATTENTION TO MATTERS OF URGENT PUBLIC IMPORTANCE

Re : *Government refusal to allot excess sufficient grants to Mallegowda, General Hospital, Chickamagalur.*

SRI G. PUTTASWAMY Mudigere :—I call the attention of the Hon. Minister for Health to the situation that has arisen due to the Government's refusal to allot sufficient/excess grants to Mallegowda General Hospital, Chikkamagalur.

SRI H. SIDDAVEERAPPA, (Minister for Health) :—I wish to make the following statement :—

Statement showing the Budget allotments sanctioned to the District Hospital, Chickamagalur and actual expenditure incurred in respect of Hospital necessaries (for the purchase of drugs and medicines etc.) for the last four years *i.e.*, from 1969-70 to 1972-73 is enclosed.

2. The District Surgeon, Chickamagalur in his letter dated 22-11-1972 has requested to sanction an additional grant of Rs. 40,00, under Hospital necessaries. Government have already enhanced the provision for supply of Medicines and Drugs to all Hospitals in

(SRI SIDDAVEERAPPA)

G. O. No. HMA 289 PTD 72 dated 2-3-1973. A provision of Rs. one lakh has been made for this hospital.

3. Further a sum of Rs. 25,000 has already been sanctioned to the District Surgeon to settle the pending bills on 5-2-1973.

4. Now the bills to the extent of Rs. 27,000 are received for payment. The same is under consideration and sanction will be accorded to clear the pending bills.

Budget grants sanctioned and actual expenditure incurred in respect of District Hospital, Chickamagalur for the last four years are indicated below towards supply of drugs, medicines, etc.

Year 1	Budget Allotment 2	Actual Expenditure 3	Remarks 4
	Rs.	Rs.	
1969-70	60,000 +80,000 1,40,000	1,39,864=13	
1970-71	60,000 +1,09,700 1,69,700	1,69,377=37	
1971-72	60,000 + 1,18,000 1,78,000	1,77,425=22	

1	2	3	4
1972-73	60,000 *	1,00,849=99*	
	+ 1,00,000	99,872=40	
		27,000=00	
	1,60,000		
	+ 27,000 @	2,27,722=39	
	1,87,000	@ Bills pending to be settled now is under issue	
	40,850 *		
	2,27,850	* Excess already incurred.	

ಶ್ರೀ ಜಿ. ಪುಟ್ಟಸ್ವಾಮಿ ; ಈ ಆಸ್ಪತ್ರೆಯಲ್ಲಿದ್ದ ಇ ಜಿ ಸಿ ಮೆಷೀನ್ ಕೆಟ್ಟು ಹೋಗಿ ಬಹಳ ದಿನಗಳಾದವು. ಅಲ್ಲಿಗೆ ಒಂದು ಹೊಸ ಮೆಷೀನನ್ನು ಕೊಂಡು ಕೊಳ್ಳಲು ಏಕೆ ಆರ್ಡರ್ ಮಾಡಬಾರದು ?

ಶ್ರೀ ಎಚ್. ಸಿದ್ಧವೀರಪ್ಪ : ಈಗ ಸರ್ಕಾರದವರು ಕೆಲವು ಆ ಮೆಷೀನರಿಗಳನ್ನು ಕೊಳ್ಳುವುದಕ್ಕೆ ಆರ್ಡರನ್ನು ಪ್ಲೇಸ್ ಮಾಡಿದ್ದಾರೆ, ಅವು ಬಂದ ಕೂಡಲೆ ಅವುಗಳಲ್ಲಿ ಒಂದನ್ನು ಮಾನ್ಯ ಸದಸ್ಯರು ಕೇಳತಕ್ಕ ಆಸ್ಪತ್ರೆಗೆ ಕೊಡಲಾಗುತ್ತದೆ.

(ii) Re: Acute scarcity of Jowar in Muddebihal Taluks.

SRI M. M. SAJJAN (Muddebihal) : Madam Speaker, I call the attention of the Minister of State for Food and Civil Supplies to the acute scarcity of Jowar in Muddebihal taluk.

SMT. E. E. VAZ (Minister of State for Food and Civil Supplies):-- I vish to make the following statement.

Bijapur District is one of the Districts affected by acute scarcity conditions in the State. Jowar is the staple food of the people of this District. Consequent to the failure of both khariff and rabi jowar crops during

(SMT. E. E. VAZ)

the current crop year, Government do not have stocks of jowar at their disposal. The requirements of the scarcity affected districts are being met by pumping in more wheat allotted by the Government of India. The allotment of foodgrains to the district for the months from January to May, 1973 is given below .—

(in tonnes)

Month	Rice	Wheat	other foodgarins
January, 1973	250	1,000	1,200
February, 1973	250	1,000	1,000
March, 1973	300	1,000	1,500
April, 1973	800	1,400	1,500
May, 1973	300	2,600	3,000

The rise in prices of jowar in Muddebihal Taluk is not solely due to the transport of jowar to Hutti Gold Mines, but it is a common feature all over the State at present. The price of jowar in Muddebihal Taluk is reported to be ranging from Rs 135-00 to Rs. 140-00 per quintal. However, it has been reported that transport of food grains from Muddebihal to Hutti Gold Mines has been completely stopped.

SRI M. M. SAJJAN :—From the last sentence of your statement, does it mean that jowar was being transported from Bijapur to Raichur District for Hatti Gold Mines area and whether Government is able to find out cases of that kind?

SMT. E. E. VAZ :—Government have not transported. But there being sizeable labour population in Hatti Gold Mines area, merchants were taking it and supplying to those areas.

SRI M. M. SAJJAN :—Is there no inter-district ban on movement of Jowar and if Jowar was being taken from Bijapur to Raichur, was it not illegal?

SMT. E. E. VAZ :—I do not think there is any restriction on the movement of Jowar within the State.

SRI. M. M. SAJJAN :—I hasten to bring to your kind notice that there is a ban on inter-district movement of Jowar.

SMT. E. E. VAZ :—There is no restriction on the movement of jowar. Only regarding rice, certain districts have been permitted by the Deputy Commissioners to transport rice from surplus areas to deficit areas within the State.

1-30 P. M.

iii) Re : Clash between two groups of people on Holi day at Gulbarga.

SRI B. B. SAYANAK (Belgaum) : Madam, I call the attention of the Chief Minister to the clash between two groups of people that took place on Holi day at Gulbarga.

SRI H. M. CHANNABASAPPA (Minister for Public Works and Electricity) : In reply to the calling attention notice, I wish to make the following statement :

On 18-3-1973 Holi celebrations started in Gulbarga Town as usual with the throwing of colours The members of public. participated in the celebrations. In the afternoon, the carts carrying coloured water drums passed through the main streets without any trouble.

2. At about 7 P.M., when the procession came near a place of worship in Mominpura, some persons started shouting that colour was thrown on them. The shouts were followed by stone throwing. The police chased away the miscreants and advised the people to remain peaceful. The crowd dispersed.

3. In the meantime, when another procession with a cart came to Roza area, somebody pelted stones on a

(SRI H. M. CANNABASAPPA)

pot kept near a hotel. Slongans were shouted and the shouts were again followed by stone pelting. Due to pelting of stones one Sub-Inspector and a few Police Constables received injuries. The Police warned the crowd to disperse. but in vain. Two tear gas shells and four grenades were burst to disperse the mob.

4. At about 8-30 P.M. one person of Ankalgi village who was going in a cycle Rickshaw near Danka Cross was assaulted and his rickshaw was also taken away. At about 9 P.M, some miscreants stopped another person who was going near Danka Cross and snatched away his cycle, wrist watch and cash of Rs. 200/-. When the police party reached the spot, the miscreants ran away

5. At about 10 P.M.. the Police seized 31 Soda water bottles from a certain individual. Action has been taken against him under the Mysore Police Act.

6. At about 10-30P.M.,a crowd gathered near Mominnpura Danka Cross and started pelting stones. Inspite of warning given by the Senior Police Officers, the mob did not disperse. As there was heavy pelting of stones, the Superintendent of Police warned the crowd and ordered a Police Constable to open fire. Accordingly, one round was fired in the air and the crowd dispersed.

7. The Holi celebration countinued on 19-3-1973. At about 7 P.M.: there was some stone throwing in Roza area and the Police chased away the miscreants. At about 9-20 P.M., stone throwing incidents were reported near Sandal Galli in Roza area and one M. S. R. P. Constable was injured. The Police burst 5 tear gas shells and two grenades. The Superintendent of Police, Special Investigating Agency fired three rounds in the air from his pistol. Thereafter the entire crowd dispersed.

8. Again at about 10 P.M., there was stone throwing in Roza area and two rounds were fired in the air to

disperse the mob. Some urchins attempted to set fire to a shop by pouring kerosene and the Police extinguished the fire and prevented the damage.

9. Due to the elaborate Police arrangements, the situation was dealt with very effectively. The incidents were localised to certain areas only and normal life prevailed in the remaining parts of the City. In addition to pickets, foot patrols were organised both during day and night to prevent looting, arson and mischief.

10. In all, 13 cases of rioting have been registered by the Police. The District Magistrate, Gulbarga District has ordered 14 persons to be detained under the Maintenance of Internal Security Act and 13 of them have now been detained in the Central Jail, Bellary. One person is still at large.

11. As a result of the disturbance which occured on 18th and 19th March 1973, 19 persons were injured and one of them by name Jagannath s/o Shivasharanappa, aged about 10 years who was operated on 22-3-1973 died at about 5 P.M. on that day. One Police Sub-Inspector and one Assistant Sub-Inspector and 9 Policemen also sustained injuries during the disturbance.

12. The Inspector General of Police visited the affected areas on 20-3-1973 and studied the situation.

13. The situation is reported to be normal.

SRI B. B. SAYANAK.—Two years ago there was arson and looting in Gulbarga. So, why has the Government not taken precaution before the Holi celebration day? When this Jagannath was seriously injured, the news was spread that he had died and there was commotion as a result of that and the people took the law in their hands.

SRI H. M. CHANNABASAPPA.—It is because the Police was vigilant and took all necessary action a serious situation was prevented.

ಶ್ರೀ ಎಂ. ಎಸ್. ಕೃಷ್ಣನ್. –ಜಗನ್ನಾಥ್–ಎನ್ನುವವರು ಫೈರಿಂಗ್‌ನಿಂದ ಸತ್ತರೇ ಅಥವ ಬೇರೆ ಯಾವ ಕಾರಣದಿಂದ ಸತ್ತರು ? 13 ಜನರನ್ನು ಮೈನ್‌ಟೆನೆನ್ಸ್ ಆಫ್ ಇಂಟರ್ನಲ್ ಸೆಕ್ಯೂರಿಟಿ ಅಕ್ಟ್ ಪ್ರಕಾರ ಡೀಟೈನ್ ಮಾಡಿದ್ದೀರಿ. ಈ ಗಾಗಲೇ 2 ತಿಂಗಳಾಗಿದೆ, ಪರಿಸ್ಥಿತಿ ಈಗ ಶಾಂತವಾಗಿದೆಯೆಂದು ಹೇಳುವುದರಿಂದ ಅವರನ್ನು ಬಿಡುಗಡೆ ಮಾಡುವಿರಾ ?

SRI H. M. CHANNABASAPPA.—If the Hon. Member desires the detail, it will be ascertained and given.

ಶ್ರೀ ಬಿ.ವಿ.ಕಕ್ಕಿಲಾಯ.–13 ಜನರನ್ನು ಡಿಟೆನ್‌ಷನ್‌ನಲ್ಲಿಟ್ಟಿದ್ದೀರಿ, ಅವರನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲು ಯೋಚನೆ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಪರಿಶೀಲಿಸಿ ಅವಶ್ಯಕತೆ ಕಂಡುಬಂದರೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ.

SRI J. P. SARWESH. — May I know whether the anti-social elements of Gulbarga City were arrested and detained before the Holi festival on the 18th March ?

SRI H. M. CHANNABASAPPA.—From the statement I have made, it is clear that nobody was detained beforehand. In thss case, there was no need for detaining any people beforehand and that is why they were not detained.

PAPERS LAID ON THE TABLE

SRI AZEEZ SAIT (Minister for Labour) : —

Madam, I lay on the table of the House the accounts of the Mysore Dasara Festivities 1972.

* MADAM SPEAKER : The accounts of the Mysore Dasara Festivities 1972 are laid on the table of the House.

---

* Vide Library No 61 dated 13-9-1973

THIRTEENTH REPORT OF THE COMMITTEE ON PRIVATE MEMBERS' BILLS AND RESOLUTIONS PRESENTATION.

SMT. RADHA .... BHAT (Ankola) :- Madam, I present the Thirteenth Report of the Committee on Private Members' Bills and Resolutions.

SMT. NAGAMMA C. KESHAVAMURTHY :— Madam, I move "II" that this Assemly agrees with the 13th report of the committee on Private Members' Bills and Resolutions

MADAM SPEAKER :— The question is :

"That this Assembly agrees with the 13th Repoat of the committee on Private Members' Bills and Resolutions"

The motion was adopted

INSISTING THE C. M. TO MAKE THE PROMISED STATEMENT ABOUT NEWS ITEM ON THE BEHAVIOUR OF A MINISTER OF STATE

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ) .—ಅಧ್ಯಕ್ಷರೇ, ನಿನ್ನೆ ದಿವಸ ಮುಖ್ಯಮಂತ್ರಿಗಳು ರಾಜ್ಯ ಸಚಿವರೊಬ್ಬರ ಬಗ್ಗೆ ನಡೆದಿರುವ ಪ್ರಕರಣದ ಬಗ್ಗೆ ಹೇಳಿಕೆ ಕೊಡುವುದಾಗಿ ತಿಳಿಸಿದರು. ಅದಕ್ಕಾಗಿ ಕಾತುರತೆಯಿಂದ ನಾವು ಕಾದಿದ್ದೇವೆ.

ಅಧ್ಯಕ್ಷರು .—ಮುಖ್ಯಮಂತ್ರಿಗಳು ಬಂದು ಹೇಳುತ್ತಾರೆ

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) .—ಈ ವಿಚಾರದಲ್ಲಿ ಜನರು ಕಾತುರರಾಗಿದ್ದಾರೆ. ರಾಜ್ಯದ ಜನತೆಗೆ ಸಮಾಧಾನವಾಗಬೇಕಾದರೆ ಬೇಗನೆ ಹೇಳಿಕೆ ಕೊಡಬೇಕು. ತಡಮಾಡುವುದರಿಂದ ಬಹಳ ಜನರ ಕಾತುರತೆಯನ್ನು ತಡೆಹಿಡಿದಂತಾಗುವುದು.

ಶ್ರೀ ವಾಟಾಳ್ ನಾಗರಾಜ್ .—ಈಗ ತಕ್ಷಣ ಮುಖ್ಯಮಂತ್ರಿಗಳು ಬಂದು ಜವಾಬ್ದಾರಿಯುತವಾದ ಹೇಳಿಕೆ ಕೊಡಬೇಕು. ಅವರ ಹೇಳಿಕೆಗಾಗಿ ನಾವು ಕಾತುರತೆಯಿಂದಿದೇವೆ.

Sri H. M. Channabasappa (Minister for Public Works and Electricity):— The Chief Minister did assure the House that he would make a statement to-day in this behalf and the Chief Minisiter will make a statement. I would therefore request the Hon. Members to exercise a little patience.

Sri H. D. Devegowda, (Holenarsipur): We are not prepared to hear anything else except the statement from the Chief Minister.

ಅಧ್ಯಕ್ಷರು.—ಒಂದು ಗಂಟೆಯಿಂದ ಎರಡು ಗಂಟೆಯವರೆಗೆ ಪ್ರಶ್ನೋತ್ತರ ಗಳ ವೇಳೆ ಇರಬೇಕಾಗಿತ್ತು. ಸದಸ್ಯರು ಬಾರದೆ ಇದ್ದರೆ ಚೀಫ್‌ಮಿನಿಸ್ಟರದು ತಪ್ಪಲ್ಲ, ನನ್ನ ತಪ್ಪು ಅಂತೂ ಅಲ್ಲವೇ ಅಲ್ಲ.

ಶ್ರೀ ವಾಟಾಳ್ ನಾಗರಾಜ.—ನಿಮ್ಮ ಮೇಲೆ ಒಬ್ಬರೂ ಆ ಪದವನ್ನು ಉಪಯೋಗಿಸುವುದಿಲ್ಲ.

ಅಧ್ಯಕ್ಷರು.—ಎರಡು ಗಂಟೆಯವರೆಗೆ ಪ್ರಶ್ನೋತ್ತರ ವೇಳೆ ನಡೆಯ ಬೇಕಾಗಿತ್ತು, ಆಮೇಲೆ ಕಾಲಿಂಗ್ ಅಟೆನ್‌ಷನ್ ಬಾಕಿ ಪೇಪರ್ಸ್ ಇತ್ತು' ಅದಕ್ಕೋಸ್ಕರ ಅವರು ಬಹುಶಃ ಎರಡೂವರೆ ಗಂಟೆ ಸಮಯಕ್ಕೆ ಬರಬಹುದು ಎನ್ನುವ ನಿರೀಕ್ಷಣೆ ಇದೆ. ಅವರು ಬಂದು ಹೇಳುವುದಿಲ್ಲ ಎಂದರೆ, ನೀವು ಮಾತನಾಡುವುದು ಸರಿ ಇತ್ತು, ಬರುವವರೆಗೆ ನಿರೀಕ್ಷಣೆ ಮಾಡಿ ಸ್ವಲ್ಪ ಸಮಾಧಾನವಾಗಿರಿ.

ಶ್ರೀ ವಾಟಾಳ್ ನಾಗರಾಜ್.—ಇದಕ್ಕಿಂತ ಪ್ರಾಮುಖ್ಯವಾದ ವಿಷಯವಿಲ್ಲ, ನಾವು ಪ್ರಶ್ನೋತ್ತರ ಕಾಲವೇ ಬೇಡ ಎಂದು ಇದ್ದೆವು, ಇದರಿಂದ ತೊಂದರೆ ಯಾಗುತ್ತದೆ, ಪ್ರಶ್ನೋತ್ತರ ಆದನಂತರ ಇದನ್ನು ಎತ್ತಬೇಕು ಎಂದು ಮಾಡಿದ್ದೆವು, ದಯವಿಟ್ಟು ಮುಖ್ಯಮಂತ್ರಿಗಳು ಎಷ್ಟು ಹೊತ್ತಿಗೆ ಬರುತ್ತಾರೋ, ಬರಲಿ, ಅಲ್ಲಿಯವರೆಗೆ ಈ ಸದನದ ಕಾರ್ಯಕಲಾಪಗಳನ್ನು ಮುಂದೂಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾರ್ಯಕ್ರಮದ ಪ್ರಕಾರ ಲೆಜಿಸ್ಲೇಟಿವ್ ವರ್ಕ್ ಪ್ರಾರಂಭ ಮಾಡಿದ ಮೇಲೆ ಮಧ್ಯದಲ್ಲಿ ಗ್ಯಾಪ್ ಇರುವುದು ಸರಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಎಷ್ಟು ಸಾರಿ ಆ ರೀತಿ ಮಾಡಿಲ್ಲ, ನಿಮಗೆ ಅನುಕೂಲವಾಗುವ ಹಾಗೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.— ಸರ್ವೇ ಸಾಧಾರಣವಾದ ವಿಚಾರವಾಗಿದ್ದರೆ, ನೀವು ಹೇಳುವ ಮಾತನ್ನು ಒಪ್ಪಿಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:— ವಿಧಾನ ಸಭೆಯ ಹೊರಗಡೆ ನೋಡಿದರೆ, ಇವತ್ತು ಬೆಂಗಳೂರು ನಗರದಲ್ಲಿ ಎಷ್ಟೋ ಜನ ಈ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಕಾದು ಕೂತಿದ್ದಾರೆ. ಅನೇಕ ಜನರು ಏನಾಯಿತು ಎಂದು ನಮ್ಮನ್ನು ಕೇಳುತ್ತಾ ಇದ್ದಾರೆ. ಇದು ರಾಜ್ಯ ಸರ್ಕಾರದ ಗೌರವ ಮತ್ತು ಪ್ರತಿಷ್ಠೆಯ ಪ್ರಶ್ನೆ ಈ ಪ್ರತಿಷ್ಠೆಯ ಪ್ರಶ್ನೆಯನ್ನು ಹೇಗೆ ರಕ್ಷಣೆ ಮಾಡಿಕೊಳ್ಳುತ್ತಿದ್ದೀರಿ, ಈ ಸಂದರ್ಭದಲ್ಲಿ ಸರ್ಕಾರ ಹೇಗೆ ನಡೆದುಕೊಳ್ಳುತ್ತದೆ ಎನ್ನುವುದನ್ನು ತಿಳಿಯಬೇಕು.

ಅಧ್ಯಕ್ಷರು:— ಫೋನ್ ಮಾಡಿದ್ದಾರೆ, ಚೀಫ್ ಮಿನಿಸ್ಟರು ಅಲ್ಲಿಂದ ಹೊರಟಿದ್ದಾರೆ.

SRI H. M. CHANNABASAPPA :- This is rather too much, I would like to appeal to the Hon. Members ....

ಶ್ರೀ ಎಚ್. ಎಸ್. ಸಿದ್ದಪ್ಪ, (ಅರಸೀಕೆರೆ)— ಏತಕ್ಕೆ ಕಾತುರತೆ ಎಂದರೆ ಬೆಂಗಳೂರು ನಗರದಲ್ಲಿ ಆ ಹೆಣ್ಣು ಮಗಳನ್ನು ಹರಿಶ್ಚಂದ್ರ ಘಾಟಿನಲ್ಲಿ ಪೋಲೀಸಿನವರು ಸುಟ್ಟು ಹಾಕಿದ್ದಾರೆ ಎನ್ನುವ ಬೊಬ್ಬೆ ಎದ್ದಿದೆ. ಬೊಬ್ಬೆ ಏಳುವುದಕ್ಕೆ ಕಾರಣ ಪ್ರಬಲವಾಗಿದೆ, ಜನರಲ್ಲಿ ಗಾಬರಿಯಾಗಿದೆ, ಇದರ ಬಗ್ಗೆ ಜನಕ್ಕೆ ಕಾತುರತೆಯಾಗಿದೆ, ನಾವೂ ನಿರೀಕ್ಷಣೆ ಮಾಡುತ್ತಾ ಇದ್ದೇವೆ. ಸರಕಾರದಿಂದ ನಿರ್ದಿಷ್ಟವಾದ ಹೇಳಿಕೆ ಬೇಕು.

SRI H. M. CHANNABASAPPA :— This is too much, There is a way of putting things I am assuring the House that the Chief Minister will be here and he will be making a statement I cannot understand the post-haste enthusiasm.

SRI H. SIDDAVEERAPPA, (Minister for Health):— This is imagination running riot. There is no other explanation.

ಶ್ರೀ ಎಚ್. ಎಸ್. ಸಿದ್ದಪ್ಪ :— ಬೆಂಗಳೂರಿನಲ್ಲಿ ತಿರುಗಾಡಿಕೊಂಡು ಬಂದರೆ ಇಮ್ಯಾಜಿನೇಷನ್ ಅಲ್ಲ ಎನ್ನುವುದು ಗೊತ್ತಾಗುತ್ತದೆ.

SRI AZEEZ SAIT (Minister for Labour).—Is it not imagination ? You are contradicting your own statement.

SRI H. S. SIDDAPPA.—The entire city of Bangalore is saying that the body of that lady was burnt on Tuesday morning.

SRI C. M. ARUMUGHAM (K.G.F).—Whether the matter is serious or not, you will kindly note that the Chief Minister has promised to make a statement. Therefore, we on this side, are not in a mood to take up other business in the Agenda unless we hear the statement. I want to make one point clear. The allegation that has been made has been basically accepted by the Government, both inside and outside the House. Therefore, the statement is expected. How for the statement is going to be in favour of the allegation, we will come to know only after it is made. Unless statement is made, we want to make it clear, that we are not in a mood to discuss any other business in the Agenda. What would be our attitude, would be known after hearing the statement.

SRI H SIDDAVEERAPPA.-Would the busine s of the House depend on the mood of any person here ?

ಅಧ್ಯಕ್ಷರು.—ನಿಮ್ಮ ಮೂಡ್‌ಮೇಲೆ ಬಿಸಿನೆಸ್ ಅನ್ನು ನಡೆಸುವುದಕ್ಕೆ ಆಗುತ್ತದೆಯೋ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಡೀ ಪ್ರಪಂಚವೇ ಕಾತುರವಾಗಿ ನೋಡುತ್ತಿದೆ.

ಅಧ್ಯಕ್ಷರು.—ಹೌದು, ಹೌದು.

SRI C. M. ARUMUGHAM.—It is important. We are submitting to you that what would be our attitude wou'd be known after hearing the statement. That is different

matter. But what we are saying for the time being is, unless we hear the statement, we beg of you, to adjourn the House as we are not in a mood to discuss others business.

SRI H. M. CHANNABASAPPA.—It is not possible. The business of the House should go on according to the Rules of Procedure and not according to the whims and fancy of any person.

HON. MEMBERS : No, not possible

ಅಧ್ಯಕ್ಷರು.—ಏನ್ರಿ ಇದು ?

ಶ್ರೀ ವಾಟಾಳ್ ನಾಗರಾಜ್ :—ಇಂಗ್ಲೆಂಡಿನಲ್ಲಿ ಇಂಥ ಸುದ್ದಿ ಬಂದ ತಕ್ಷಣ ರಾಜೀನಾಮೆ ಕೊಟ್ಟಿರುವುದನ್ನು ನಾವು ಕೇಳಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಬರುವವರೆಗೆ ಈ ಸದನದ ಬೇರೆ ವ್ಯವಹಾರ ಯಾವುದನ್ನೂ ನಡೆಸ ಬಾರದು.

SRI AZEEZ SAIT.—Those who are not in a mood to take part in the discussion, can go out and have a little coffee in the lobby.

(SRI C. M. ARUMUGHAM.—He is taking things very lightly without knowing the implications.

ಶ್ರೀ ವಾಟಾಳ್ ನಾಗರಾಜ.—ಮಂತ್ರಿಗಳಾದವರು ಈ ವಿಷಯವನ್ನು ಲಘುವಾಗಿ ತಿಳಿದುಕೊಂಡು ಮಾತನಾಡತಕ್ಕದ್ದು ಸರಿಯಲ್ಲ. ಇದರ ಬಗ್ಗೆ ರಾಜ್ಯದ ಜನತೆ ಕಾತುರತೆಯಿಂದ ಇದ್ದಾರೆ. ವಿದೇಶಿಯರು ಅನೇಕರು ಇಲ್ಲಿಗೆ ಬಂದಿದ್ದಾರೆ. ಅವರೂ ಸಹ ಇದರ ಬಗ್ಗೆ ಕಾತುರತೆಯಿಂದ ಇದ್ದಾರೆ, ಇದನ್ನು ನಾವು ಲಘುವಾಗಿ ಕಾಣುವುದಾದರೆ ಸರ್ಕಾರ ಇದೆಯೇ ಎಂದು ನಾನು ಕೇಳುತ್ತೇನೆ ನಮ್ಮಲ್ಲಿ ಸರ್ಕಾರ ಇಲ್ಲ, ಇದು ಕರಾಳ ಸರ್ಕಾರ ಎಂದು ಹೇಳಬಹುದು. ನೀವು ದಕ್ಷತೆಯಿಂದ ನಡೆಸುತ್ತೇವೆ ಎನ್ನುವುದಾದರೆ ತಕ್ಷಣ ಬಂದು ಸ್ಟೇಟ್‌ಮೆಂಟ್ ಕೊಡಬೇಕು.

ಶ್ರೀ. ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರಾದ ಸಿದ್ದವೀರಪ್ಪನವರು, ' ಇಮ್ಯಾಜಿನೇಷನ್ ರನ್ನಿಂಗ್ ರಯಟ್ ' ಎಂದು ಹೇಳಿದರು. ಊಹಾಪೋಹ

(ಶ್ರೀ ಎಂ. ಎಸ್. ಕೃಷ್ಣನ್)

ಗಳನ್ನು ಅವರೇ ಮೊದಲು ಮಾಡುತ್ತಿದ್ದಾರೆ. ನಿನ್ನೆ ಬೆಳಿಗ್ಗೆ ಶ್ರೀಮಾನ್ ಚೆನ್ನ ಬಸಪ್ಪನವರು ಸಬ್‌ಸ್ಟ್ಯಾನ್ಷಿಯಲ್ಲಿ ಕರೆಕ್ಟ್ ಎಂದು ಪಾರ್ಟಿ ಮೀಟಿಂಗಿನಲ್ಲಿ ಹೇಳಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.....ಪಾರ್ಟಿ ಮೀಟಿಂಗ್‌ನಲ್ಲಿ ನೀವು ಇದ್ದಿರಾ?

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).— ಪತ್ರಿಕೆಯಲ್ಲಿ ಬಂದಿದ್ದು ಕಾಂಟ್ರಡಿಕ್ಟ್ ಮಾಡಿದ್ದೇನೆ, ಅಥವಾ ಇಲ್ಲ ಎಂದು ಹೇಳಲಿಲ್ಲ. ಹಾಗೆ ಆಗುವುದಕ್ಕೆ ಸಾಧ್ಯವೇ ಎಂದು ನುಣುಚಿಕೊಳ್ಳುವ ರೀತಿಯಲ್ಲಿ ರಕ್ಷಣೆ ಕೊಡುವ ರೀತಿಯಲ್ಲಿ ದೇವರಾಜ್ ಅರಸ್‌ರವರು ಮಾತನಾಡಿರುವುದು ಇಂದು ಪತ್ರಿಕೆಯಲ್ಲಿ ಬಂದಿದೆ. ಮಾನ್ಯ ಸಿದ್ದಪ್ಪನವರು ಹರಿಶ್ಚಂದ್ರಘಾಟಿನಲ್ಲಿ ಸುಟ್ಟು ಹಾಕಿರಬಹುದು ಎಂದು 3 ದಿವಸಗಳ ಮುಂಚೆ ಹೇಳಿಕೆ ಕೊಟ್ಟಿದ್ದರೆ ಆ ಊಹೆಗೆ ಅವಕಾಶವಿರಲಿಲ್ಲ. ಸರ್ಕಾರವಿದೆಯೋ; ಪೋಲೀಸ್ ಇಲಾಖೆ ಇದೆಯೋ ಎಂದು ಕೇಳಬೇಕಾಗಿದೆ. ನೀವು ಇಬ್ಬರೂ ಪೋಲೀಸ್ ಮಂತ್ರಿಗಳಾಗಿದ್ದೀರಿ. ಒಂದೇ ದಿವಸಕ್ಕೆ ಸ್ಟೇಟ್‌ಮೆಂಟ್ ಕೊಡುತ್ತಿದ್ದೀರಿ. ಈಗ ಅವರನ್ನು ಶೀಲ್ಡ್ ಮಾಡುವುದಕ್ಕೆ ರಕ್ಷಣೆ ಕೊಡುವುದಕ್ಕೆ ಹೊರಟಿದ್ದೀರಿ.

Sri AZEEZ SAIT.—Why do you presume things? Why don't you have a little patience?

Sri M. S KRISHNAN:—What about the Chief Minister's statement ?

Sri AZEEZ SAIT :—It is only a time-killing factor that they are adopting.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದರಲ್ಲಿ ಕಾತುರತೆ ಇದೆ. ಈ ವಿಷಯದಲ್ಲಿ ಎಲ್ಲರೂ ಮಾತನಾಡಿಕೊಳ್ಳುತ್ತಿದ್ದಾರೆ, ಆದರೆ ನಿಮಗೆ ಮಾತ್ರ ಕಾತುರತೆ ಇಲ್ಲ ಎಂದು ಕಾಣುತ್ತದೆ. ಕಾತುರತೆ ಇದ್ದಿದ್ದರೆ The Chief Minister should have been the first person to come to the Assembly today. Assembly begins at 1-00 P. M. and he is also expected to came at 1-00 P. M. (The C. M. entered the chambers).

Sri H. SIDDAVEERAPPA :—The Chief Minister has some other functions to do also along with this. He had to inaugurate an All-India Conference and he had to go there. He has to perform so many duties.

ಶ್ರೀ ಎಂ. ಎಸ್. ಕೃಷ್ಣನ್ —ಈಗ ಮುಖ್ಯ ಮಂತ್ರಿಗಳು ಬಂದರು. ರಿಪ್ಲೈ ಮಾಡಿದರೆ ಸಂತೋಷ.

SRI D. DEVARAJ URS (Chief Minister):—Madam Speaker, I just want to know whether the Question Hour is over.

Madam SPEAKER:—It is over

SRI D. DEVARAJ URS:—I said yesterday that I will make a statement today. I am making the statement in the course of the day.

ಶ್ರೀ ವಾಟಾಳ್ ನಾಗರಾಜ್.—ಈಗ ಸ್ಟೇಟ್‌ಮೆಂಟ್ ಮಾಡುವುದು ಒಳ್ಳೆಯದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

SRI D. DEVARAJ URS:—What is this? I cannot understand this kind of a demand. I have not stated that I would make the statement at such and such an hour or minute. I stated yesterday: 'I will make the statement tomorrow'. It takes some more time. I am not prepared to enter into argument with the hon. member. It is left to the Government to make a statement as and when it wants.

ಶ್ರೀ ವಾಟಾಳ್ ನಾಗರಾಜ್.—ಸ್ಟೇಟ್‌ಮೆಂಟ್ ಮಾಡುವುದರಲ್ಲಿ ಈಗಾಗಲೇ 4 ದಿವಸ ನಿಧಾನ ಆಗಿದೆ.

SRI D. DEVARAJ URS:—Should I not prepare myself to make the statement? I cannot understand the argument of the hon. member Sri Nagaraj. ನಾಗರಾಜ್‌ರಷ್ಟು ಸೂಕ್ಷ್ಮ ಬುದ್ಧಿ ನಮಗೆ ಇಲ್ಲದೇ ಇರಬಹುದು.

ಶ್ರೀ ವಾಟಾಳ್ ನಾಗರಾಜ್.—ನೀವು ಬುದ್ಧಿವಂತರು ಇರುವುದರಿಂದಲೇ ಮುಖ್ಯ ಮಂತ್ರಿಗಳು ಆಗಿದ್ದೀರಿ. ತಮ್ಮ ಬುದ್ಧಿವಂತಿಕೆಯನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಬುದ್ಧಿವಂತರು ಇರಬಹುದು ಒಪ್ಪಿಕೊಳ್ಳೋಣ.

SRI C. M. ARUMUGHAM :— Madam Speaker, The Chief Minister said that he will make the statement in the course of the day. Our understanding was that he will make the statement after the Question Hour. The issue is very serious.

SRI D. DEVARAJ URS :—It may be serious. Mere seriousness of the issue does not take away my right to choose my time to make my statement.

SRI C. M. ARUMUGHAM ;—You are changing your prior decision.

SRI D. DEVARAJ URS :— If I were to change the decision to the day I have fixed, let the hon. member take objection. I said I will make a statement. How is it they are not prepared to allow one or two hours more for me ? What is it that is going to happen in between two hours ?

SRI C. M. ARUMUGHUM :— Let the Hon'ble Chief Minister say whether it is not a serious and important matter and whether his making a statement need top priority. If he were to say that it is not so, we agree. It is a very serious and important matter which requires top priority over all other business.

SRI D. DEVARAJ URS :—This is not an adjournment motion. Therefore it does not require top priority.

ಶ್ರೀ ವಿ. ಎನ್ ಪಾಟೀಲ್.—ಹೆಣ್ಣು ಮಗಳು ಜೀವಂತ ಇದ್ದಾರೆಯೇ? ಅದರ ಬಗ್ಗೆ ಆದರೂ ಅಶ್ಯೂರೆನ್ಸ್ ಕೊಟ್ಟರೆ ಸಾಕು, ಅವರು ಜೀವಂತವಾಗಿದ್ದಾರೆ ಅಂತ ಹೇಳಿದರೆ ಸಾಕು.

SRI D. DEVARAJ URS :—Has the hon. member received a complaint and a report to that effect ?

SRI V. N. PATIL :—We are eager to know whether that lady is alive or not.

SRI D. DEVARAJ URS :—I would like to know whether the hon. member knows anything about it ?

SRI V. N. PATIL.—We are entitled to ask

SRI C. M. ARUMUGHAM.—The news has appeared in the Press. When we make an allegation, it would be a correct thing on the part of the Government to come before the House and make a statement and clear the doubts.

MADAM SPEAKER.—The Hon'ble Chief Minister has promised to make the statement in the course of the day.

ಶ್ರೀ ಟಿ. ಎಂ. ಮಂಜುನಾಥ್.—ಮುಖ್ಯ ಮಂತ್ರಿಗಳು ಬರುತ್ತಾರೆ ಬಂದ ತಕ್ಷಣ ಹೇಳಿಕೆ ಕೊಡುತ್ತಾರೆ ಎಂದು ಹೇಳಿದಿರಿ.

ಅಧ್ಯಕ್ಷರು.—ಕೊಡುವುದಿಲ್ಲ ಅಂತ ಹೇಳಲಿಲ್ಲ. ಕೊಡುತ್ತೇವೆ ಅಂತ ಹೇಳುತ್ತಿದ್ದಾರೆ.

SRI D. DEVARAJ URS.—I am going to make the statement at about 4-00 P. M.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಪ್ರಕರಣದಲ್ಲಿ ಅನೇಕ ಮಂತ್ರಿಗಳು ಒಳಗಾಗಿದ್ದಾರೆ.

SRI D. DEVARAJ URS.—I protest for what the hon. member says. He cannot say like that. It is an irresponsible way of talking. Let him say if he has any evidence to that effect. What does he mean by that.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ಮುಖ್ಯ ಮಂತ್ರಿಗಳು ಇವತ್ತಿನ ದಿವಸ ಸಭೆ ಮುಕ್ತಾಯ ಆಗುವುದರೊಳಗಾಗಿ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ. ನಮ್ಮ ಒತ್ತಾಯ ಇಷ್ಟೆ. ಒಂದು ವಿಶೇಷ ಪರಿಸ್ಥಿತಿಯಲ್ಲಿ ಹೇಳಿಕೆಯನ್ನು ಮುಖ್ಯ ಮಂತ್ರಿಗಳು ಮಾಡುತ್ತಿದ್ದಾರೆ. ಸರ್ಕಾರ ಅಥವಾ ಸರ್ಕಾರದ ವತಿಯಿಂದ ಮಂತ್ರಿಗಳು ಆಗಲೀ, ಮುಖ್ಯ

(ಶ್ರೀ ಹೆಚ್. ಡಿ. ದೇವೇಗೌಡ. —)

ಮಂತ್ರಿಗಳು ಆಗಲೀ ಒಂದು ಹೇಳಿಕೆಯನ್ನು ಮಾಡತಕ್ಕದ್ದಕ್ಕೆ ಸಭೆಯ ನಿಯಮಾವಳಿಗನುಸಾರವಾಗಿ ಅಧ್ಯಕ್ಷರ ಅನುಮತಿ ಪಡೆದು ಯಾವಾಗ ಬೇಕಾದರೂ ಮಾಡಬಹುದು, ಇಲ್ಲ ಎಂದು ಹೇಳುವುದಿಲ್ಲ. ಇವತ್ತು ತಮ್ಮ ಹೇಳಿಕೆ ಅಡ್ಜರನ್ ಮೋಷನ್ ಆಗಲೀ ಅಥವಾ ಯಾವುದೇ ಮೋಷನ್ ಆಗಲಿ ಸಭೆಯ ಮುಂದೆ ಮಂಡಿಸಲ್ಪಟ್ಟು ಅದಕ್ಕೆ ಅನುಗುಣವಾಗಿ ಮಾಡತಕ್ಕ ಹೇಳಿಕೆಯಲ್ಲ. ಒಂದು ವಿಶೇಷ ಪರಿಸ್ಥಿತಿಯಿಂದ ಉದ್ಭವಿಸಿರತಕ್ಕ ಸಮಸ್ಯೆ ಮೇಲೆ ಕೊಡತಕ್ಕ ಹೇಳಿಕೆ. ತಾವು ಹೇಳಿಕೆಯನ್ನು ಕೊಟ್ಟ ಮೇಲೆ ಅದರಿಂದ ಉದ್ಭವಿಸಬಹುದಾದಂಥ ಹಲವಾರು ವಿಷಯಗಳ ಮೇಲೆ ಸಭೆಯಲ್ಲಿ ನಮ್ಮ ಅಭಿಪ್ರಾಯ ವ್ಯಕ್ತಪಡಿಸಬೇಕಾಗುತ್ತದೆ. ಆದುದರಿಂದ ಈಗ ಪ್ರಶ್ನೋತ್ತರ ವೇಳೆಯಾದ ಮೇಲೆ ಹೇಳಿಕೆ ಮಾಡಬೇಕೆಂದು ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

2.00 P. M.

ಏತಕ್ಕೆಂದರೆ, ಫ್ಯಾಗ್ ಎಂಡ್ ಆಫ್ ದಿ ಡೇ ನಲ್ಲಿ ಸ್ಟೇಟ್‌ಮೆಂಟ್ ಮಾಡುವುದಾದರೆ, ಅದರ ಬಗ್ಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದಕ್ಕೆ ನಮಗೆ ಅವಕಾಶ ಬೇಕಾಗುತ್ತದೆ. ಬೇರೆ ಕಾರ್ಯಕಲಾಪಗಳಿಗೆ ಅಡಚಣೆ ಮಾಡಬೇಕು ಎನ್ನುವ ದೃಷ್ಟಿಕೋನವಿಲ್ಲ. ಅದನ್ನು ತಾವು ಒಪ್ಪಿಕೊಳ್ಳುತ್ತೀರಿ. ಸರ್ಕಾರದವರು ವಿರೋಧ ಪಕ್ಷಗಳ ಸಹಕಾರ ಕೊಡಬೇಕು ಎಂದು ಕೇಳಿದ ಎಲ್ಲಾ ಸಂದರ್ಭಗಳಲ್ಲೂ ನಾವು ಸಹಕಾರಗಳನ್ನು ಕೊಟ್ಟಿದ್ದೇವೆ. ವಿರೋಧ ಪಕ್ಷದವರು ಸಹಕಾರ ಕೊಟ್ಟಿಲ್ಲ ಎಂದು ಮುಖ್ಯಮಂತ್ರಿಗಳೂ ಸಹ ಹೇಳಲಾರರು. ಅಜೆಂಡಾದಲ್ಲಿ ಹಲವಾರು ಸಾರಿ ಕಾರ್ಯಕ್ರಮಗಳನ್ನು ಸರ್ಕಾರದ ಕೋರಿಕೆಯ ಮೇರೆ ವ್ಯಾಪಾರ್ಡು ಮಾಡಿದ್ದೇವೆ, ಈ ಒಂದು ಸನ್ನಿವೇಶದಲ್ಲಿ ದಯಮಾಡಿ ಹೇಳಿಕೆಯನ್ನು ಕೊಡಬೇಕು. ನನ್ನ ಮಿತ್ರರಾದ ಪುಟ್ಟಸ್ವಾಮಯ್ಯನವರು ಆವೇಶದ ಭರದಲ್ಲಿ ಹೇಳಿರುವುದನ್ನು ಪ್ರತಿಭಟನೆ ಮಾಡಿದ್ದೀರಿ. ನಿಮ್ಮ ಹೇಳಿಕೆ ಹೊರಬಂದ ಹೊರತು ಸತ್ಯಾಂಶ ಗೊತ್ತಾಗುವುದಿಲ್ಲ. ಊಹಾಪೋಹದ ಮೇಲೆ ಯಾರ ಹೆಸರನ್ನೂ ಡ್ರ್ಯಾಗ್ ಮಾಡುವುದು ಮುಖ್ಯವಲ್ಲ. ಸರ್ಕಾರದ ಯಂತ್ರದಿಂದ ಕ್ರೋಢೀಕರಿಸತಕ್ಕ ವಿಚಾರ ಏನು ಇದೆ, ಹೋಂ ಡಿಪಾರ್ಟ್‌ಮೆಂಟ್, ಸಿ. ಐ. ಡಿ. ಡಿಪಾರ್ಟ್‌ಮೆಂಟ್‌ನಿಂದ ಏನೇನು ವಿಷಯ ತರಿಸುತ್ತೀರಿ, ಅದನ್ನು ಈ ಸಭೆಯ ಮುಂದೆ ಇಟ್ಟ ಮೇಲೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಸಾಧ್ಯವಿದೆ. ಪ್ರೀಕನ್ ಕೂಡೆಡ್ ಐಡಿಯಾ ಮೇಲೆ ಏನು ಹೇಳುವುದಕ್ಕೂ ತಯಾರಿಲ್ಲ. ದಯಮಾಡಿ ಈ ಸಭೆಯಲ್ಲಿ ಹೇಳಿಕೆಯನ್ನು ಕೊಡುವುದರಿಂದ ನಮ್ಮ ವಿರೋಧ ಪಕ್ಷದ ವತಿಯಿಂದ ತಾವು ಕೊಟ್ಟ ಹೇಳಿಕೆ ಸತ್ಯಾಂಶದಿಂದ ಕೂಡಿದೆಯೋ, ಇಲ್ಲವೇ ಎನ್ನುವ ಬಗ್ಗೆ ಅಭಿಪ್ರಾಯ ಬರುವುದಕ್ಕೆ ಅವಕಾಶವಾಗುತ್ತದೆ.

(Departmental Library)
...ಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
Accession No. 6012
ದಿನಾಂಕ Date..........

ವಿರೋಧ ಪಕ್ಷ ಕೂಡ ತನ್ನಲ್ಲಿರತಕ್ಕ ಮಾಹಿತಿಯನ್ನು ಕೊಟ್ಟಂಥ ಆಧಾರದ ಮೇಲೆ ನೀವು ಹೇಳಿಕೆಯನ್ನು ಕೊಡುವುದರಿಂದ ಒಂದು ತಿಳಿ ವಾತಾವರಣ ಉಂಟುಮಾಡಲು ಸಾಧ್ಯವಿದೆ. ಇಂದು ದೇಶದಲ್ಲಿ ಕಳಂಕ ಏನಿದೆ, ಕಳವಳ ಏನು ಇದೆ, ಅದನ್ನು ಹೋಗಲಾಡಿಸಲು ಒಳ್ಳೆಯ ವಾತಾವರಣವನ್ನು ನಿರ್ಮಾಣಮಾಡತಕ್ಕದ್ದು, ರಾಜ್ಯದಲ್ಲಿ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಇಬ್ಬರ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ದಯಮಾಡಿ ಈ ವಿಷಯದಲ್ಲಿ ಹೇಳಿಕೆ ಕೊಡಬೇಕು. ತಾವು ದಯಮಾಡಿ ಅನಾವಶ್ಯಕವಾಗಿ ತಪ್ಪು ತಿಳಿದುಕೊಳ್ಳುವುದು ಬೇಡ. ಹೇಳಿಕೆ ಕೊಟ್ಟ ಮೇಲೆ ಮುಂದಿನ ಕಾರ್ಯಕಲಾಪ ಮಾಡೋಣ.

ಶ್ರೀ ಡಿ. ದೇವರಾಜ್ ಅರಸ್.---ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಕೇಳಿದ್ದೇನೆ. ಅವರಿಗೆ ಎಷ್ಟು ಕಾತುರತೆ ಇದೆ ಎಂದು ಹೇಳಿದ್ದಾರೆ. ಅವರಿಗೆ ಅವಕಾಶ ಇರಬೇಕು ಎಂದು ಹೇಳಿದ್ದಾರೆ. ನಾನು ಹೇಳಿದ್ದೇನೆ, 4 ಗಂಟೆಗೆ ಹೇಳುತ್ತೇನೆ ಎಂದು. ಆಮೇಲೆ 2 ಗಂಟೆ ಕಾಲಾವಕಾಶ ಇರುತ್ತದೆ. ಏನಾದರೂ ಹೇಳುವುದು ಇದ್ದರೆ, ಅವರು ಹೇಳಬೇಕೇ, ಬಿಡಬೇಕೇ ಎನ್ನುವುದು ಅವರಿಗೆ ಬಿಟ್ಟಿದ್ದು. ನನಗೆ ಅದು ಹೇಳುವುದಕ್ಕೆ ಬರುವುದಿಲ್ಲ. 4 ಗಂಟೆಗೆ ಸ್ಟೇಟ್‌ಮೆಂಟ್ ಕೊಡುತ್ತೇನೆ ಎಂದು ಹೇಳಿದ್ದೇನೆ. ವಿರೋಧ ಪಕ್ಷದ ನಾಯಕರು ನಾನು ಸ್ಟೇಟ್‌ಮೆಂಟ್ ಕೊಡದೇ ಹೋದರೆ ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಆ ರೀತಿ ಮನಸ್ಸಿನಲ್ಲಿ ಉದ್ದೇಶಪಟ್ಟುಕೊಂಡು ಬಂದಿಲ್ಲ ಎಂದು ನಂಬುತ್ತೇನೆ. Unless it is proved to the contrary that he is guilty, I cannot conclude that he is guilty. I never for a moment imagine why the Hon. Leader of the Opposition to insisting for a statement here and now.

ಶ್ರೀ ಎಚ್. ಡಿ. ದೇವೇಗೌಡ.---ನೀವು ಹೇಳಿಕೆ ಕೊಡುವುದಿಲ್ಲ ಎಂದು ಸಂಶಯ ಬಂದಿತ್ತು. ನೀವು ಬಂದ ಮೇಲೆ ಸ್ಟೇಟ್‌ಮೆಂಟ್ ಕೊಡುತ್ತೀರಿ ಎಂದು ಗೊತ್ತಾಯಿತು.

SRI DEVARAJ URS.---When I am standing here in flesh and blood and saying that I will make a statement at 4 O' clock today, what is the point in insisting for making a statement here and now. I do not think that such a thing has happened anywhere.

ಶ್ರೀ ವಾಟಾಳ್ ನಾಗರಾಜ್.---ವಿರೋಧ ಪಕ್ಷದ ನಾಯಕರಲ್ಲಿ ಒಂದು ಮನವಿ ಮಾಡುತ್ತೇನೆ. ಮುಖ್ಯಮಂತ್ರಿಗಳು 4 ಗಂಟೆಗೆ ಹೇಳಿಕೆ ಕೊಡುವುದರಿಂದ ಅಲ್ಲಿಯವರೆಗೆ ನಾವು ಹೊರಗಡೆ ಇರೋಣ.

SRI D. DEVARAJ URS.—ಅದು ತಮಗೆ ಬಿಟ್ಟಿದ್ದು. That is a different matter. I still believe the opposition is responsible and responsive too. If I have gone out of the way; if I have violated any rule, then they have got every right to point out to me. I am just exercising my right as the Leader of the House to choose the time as to when I should make a statement. Yesterday I have stated that I would make a statement tomorrow. But I have not committed to a particular hour. If I have committed to make a statement at a particular hour today, then the opposition is perfectly right in pointing out that I am not sticking on to my word. I did say that I would make a statement today at 4 P.M. Now I find that it requires a little more time to finalise the statement. If that were to upset the opposition, I I am really unable to understand what is the motive behind in getting upset, I cannot understand.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೆ. ಬಹುಶಃ ಈ ಸದನದಲ್ಲಿ ಮತ್ತು ಸದನದ ಹೊರಗಡೆ ಇರತಕ್ಕ ಜನರ ಕುತೂಹಲವನ್ನು ಅರ್ಥಮಾಡಿಕೊಂಡಿದ್ದೀರಾ ? ಅರ್ಥಮಾಡಿಕೊಂಡಿದ್ದರೆ ನಾಲ್ಕು ಗಂಟೆಯವರೆಗೆ ಹೇಳಿಕೆ ನೀಡುವುದಕ್ಕೆ ಸಮಯ ಕೇಳುತ್ತಾ ಇರಲಿಲ್ಲ.

ಅಧ್ಯಕ್ಷರು.—ನೀವು ನಾಲ್ಕು ಗಂಟೆಗೆ ಎಲ್ಲಾದರೂ ಹೋಗಬೇಕೇ ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಹೋಗತಕ್ಕದ್ದಲ್ಲ.

SRI D. DEVARAJ URS.—I hope the Hon. Leader of the opposition and other members have given a holiday today for their reasoning.

ಶ್ರೀ ಎಚ್. ಡಿ. ದೇವೇಗೌಡ.—ವಿರೋಧ ಪಕ್ಷದವರು ಸರ್ಕಾರದ ಜೊತೆ ಅಸಹಕಾರ ಮಾಡಬೇಕು ಎಂದು ಅಲ್ಲ. ಈ ಸಮಸ್ಯೆ ಸರ್ಕಾರದ ದೃಷ್ಟಿಕೋನದಲ್ಲಿ ಅಂತಹ ಪ್ರಮುಖ್ಯವಾದ ಸಮಸ್ಯೆ ಅಲ್ಲದೆ ಇರಬಹುದು. ಸರ್ಕಾರದ ಅಭಿಪ್ರಾಯ ಆ ರೀತಿ ಇದೆ ಎಂದು ಹೇಳುವುದಕ್ಕೆ ತಯಾರಿಲ್ಲ. ನಿಮ್ಮ ಭಾವನೆ ಹಾಗೆ

(ಶ್ರೀ. ಹೆಚ್. ಬಿ. ದೇವೇಗೌಡ.)—

ಇರಬಹುದು. ನಮ್ಮ ಭಾಷಣೆಯೋ ಅದಕ್ಕಿಂತ ಪ್ರಾಮುಖ್ಯವಾದ ಪ್ರಶ್ನೆ ಮತ್ತೊಂದಿಲ್ಲ ಎನ್ನತಕ್ಕದ್ದನ್ನು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಇದನ್ನು ಮಾನ್ಯ ಸಿದ್ದವೀರಪ್ಪನವರೂ ಒಪ್ಪಿಕೊಳ್ಳುತ್ತಾರೆ, ಮುಖ್ಯ ಮಂತ್ರಿಗಳೂ ಒಪ್ಪಿ ಕೊಳ್ಳುತ್ತಾರೆ. ಏಕೆಂದರೆ, ಇಂತಹ ಪ್ರಕರಣಗಳಲ್ಲಿ ಅನೇಕ ಸರ್ಕಾರಗಳು ಮುಳುಗಿ ತೇಲಿ ಹೋಗಿವೆ. ಇದು ಸಾಮಾನ್ಯವಾದ ಪ್ರಕರಣ ಅಂತ ತಿಳಿದು ಕೊಂಡಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಈ ಸಭೆಯಲ್ಲಿ ಕಾರ್ಯಕಲಾಪ ನಡೆಸತಕ್ಕದ್ದನ್ನು ತಡೆಹಿಡಿಯಬೇಕು ಎಂದು ಬಂದಿಲ್ಲ. ಪ್ರಶ್ನೋತ್ತರವೇಳೆ ಮುಗಿದ ಮೇಲೆ ಮುಖ್ಯ ಮಂತ್ರಿಗಳ ಹೇಳಿಕೆ ಮಾಡುತ್ತಾರೆ ಎಂದು ತಿಳಿದಿದ್ದೆವು. ಈಗ 4 ಗಂಟೆಯವರೆಗೆ ಕಾಲ ಕೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ನಾನು ಈ ಸಭೆ ಹೊರಗಡೆ ಕುಳಿತು ನಿದ್ರಾವಸ್ಥೆಯಲ್ಲಿ ಇರಬೇಕು ಎಂದು ಬಂದಿಲ್ಲ. ಕೆಲಸಮಾಡುವುದಕ್ಕೆ ಬುದ್ಧಿಯನ್ನು ಚುರುಕು ಮಾಡಿಕೊಂಡು ಬಂದಿದ್ದೇವೆ. ಇಷ್ಟು ಮಾತ್ರ ಹೇಳುತ್ತೇನೆ. ಇವತ್ತು ಒಂದು ಸ್ಟೇಟ್‌ಮೆಂಟ್ ಆಗುವವರೆಗೆ ಬೇರೆ ಕಾರ್ಯಕಲಾಪದಲ್ಲಿ ಭಾಗವಹಿಸುವುದಕ್ಕೆ ತಯಾರಿಲ್ಲ. ದಯಮಾಡಿ ಕ್ಷಮಿಸಬೇಕು. ವಿಶೇಷ ಪರಿಸ್ಥಿತಿಯಲ್ಲಿ ಈ ಸಮಸ್ಯೆ ಉದ್ಭವವಾಗಿರುವುದರಿಂದ, ನಾವು ಸಹಕಾರ ಕೊಡುವುದಕ್ಕೆ ಸಿದ್ಧವಿಲ್ಲ.

Sri M. S. KRISHNAN.—I also want to strongly protest against what the Hon. Chief Minister said. He says, I hope the Leader of the opposition and other members have given a holiday for their reasoning. I hope they have not given a holiday for their reasoning. I am really surprised that the Chief Minister should have spoken like this. He is not aware of what has happened in the House for the past three days as he was absent. The statement of the Government should have come two days earlier.

Sri D. DEVARAJ URS.—The matter is not so simple as you try to make out.

Sri M. S. KRISHNAN.—We are prepared to bear with you. That is another matter. We do not expect the Chief Minister to say to the opposition in the manner in which he has remarked. He took objection to the remark of the hon. member Sri Puttaswamiah. I prefectly agree with him that the remark was out of tume. According

(SRI M. S. KRISHNAN).—
to the rules of Procedure, you have got the libertly to make a statement at any time you want. I am not questioning that right ; but you must also understand the seriousness of the situation that has developed and the way in which the members of the opposition as well as your own partymen are feeling for the past two days. They are very serious about this particular matter and they are agitated about it. The entire State is very much agitated about this incident.

SRI D. DEVARAJ URS :—I do not think the Hon. Member has thrown any extra light for the information of the House. I am within my bounds to make remarks and its perfectly parliamentary.

SRI M. S. KRISHNAN :—It is an uncalled for remark a stirring remark against the opposition.

SRI D. DEVARAJ URS :—The way in which you conduct yourself is also uncalled for.

MADAM SPEAKER :—Let us do some business.

SRI H. D. DEVEGOWDA :—It is not an ordinary matter. Unless it comes from the mouth of the Hon. Chief Minister that he is going to make a statement on this issue right now, we are not going to co-operate.

ಅಧ್ಯಕ್ಷರು :— ಈಗ ನಿನ್ನೆ ದಿವಸ ಈವೊತ್ತು ಸ್ಟೇಟ್‌ಮೆಂಟ್ ಮಾಡುತ್ತೇವೆ ಎಂದು ಹೇಳಿರುವುದು ರಿಕಾರ್ಡ್‌ನಲ್ಲಿ ಇದೆ ಮತ್ತು ಈವೊತ್ತು ಸ್ಟೇಟ್‌ಮೆಂಟ್ ಮಾಡುತ್ತೇವೆ ಎಂದು ಒಪ್ಪಿಕೊಂಡಿರುವುದು ಅದೂ ಕೂಡ ರಿಕಾರ್ಡ್‌ನಲ್ಲಿ ಇದೆ. ಅವರು ಮಾಡದೇ ಹೋದ ಪಕ್ಷದಲ್ಲಿ ನಾವು ಏನಾದರೂ ಹೇಳಬಹುದು. ಈಗ 4 ಗಂಟೆಗೆ ಸ್ಟೇಟ್‌ಮೆಂಟ್ ಮಾಡುತ್ತೇವೆ. ಸ್ವಲ್ಪ ಪ್ರಿಪೇರ್ ಮಾಡಿಕೊಳ್ಳಬೇಕು ಎಂದು ಹೇಳಿರುವಾಗ ಈಗಲೇ, ಈ ಸೆಕೆಂಡ್‌ನಲ್ಲೇ, ಈ ನಿಮಿಷದಲ್ಲೇ ಈ ಗಳಿಗೆಯಲ್ಲೇ ಈ ಸಭೆಯ ಮುಂದೆ ಸ್ಟೇಟ್‌ಮೆಂಟ್ ಮಾಡಿ ಎಂದು ಹೇಳುವುದು ಅಪೋಸಿಷನ್‌ಗೆ ತರವಲ್ಲ. ಅದುದರಿಂದ (Let us do some business). 4 ಗಂಟೆಗೆ ಸ್ಟೇಟ್‌ಮೆಂಟ್ ಮಾಡುವವರು ಇದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ:—ಈ ವಿಷಯದ ಮೇಲೆ ಪುನಃ ಪುನಃ ಮಾತನಾಡುವುದಕ್ಕೆ ನನಗೆ ಆಸಕ್ತಿ ಇಲ್ಲ. ದಯಮಾಡಿ ನಾನು ತಮ್ಮಲ್ಲಿ ಕಳ ಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳಿಗೆ ಸಾಕಷ್ಟು ಕಾಲಾವಕಾಶವನ್ನು ಈಗಾಗಲೇ ಕೊಟ್ಟಿದ್ದೇವೆ. ವಿರೋಧ ಪಕ್ಷದವರು ಈ ವಿಷಯ ವನ್ನು ಎತ್ತಿದ ದಿವಸವೇ ಈ ಸಭೆಯಲ್ಲಿ ಅವರು ಹೇಳಿಕೆ ಕೊಡಬೇಕು ಎಂದು ಒತ್ತಾಯ ಮಾಡಲಿಲ್ಲ ಇದನ್ನೂ ಬಹುಶಃ ಮುಖ್ಯ ಮಂತ್ರಿಗಳೂ ಕೂಡ ಒಪ್ಪಿಕೊಳ್ಳುತ್ತಾರೆ. ಆದುದರಿಂದ ಪುನಃ 2 ಗಂಟೆ ಕಾಲಾವಕಾಶಬೇಕು ಎಂದು ಹೇಳುವುದು ಸರಿಯಲ್ಲ. ನಾವು ಈಗಾಗಲೇ ಎಷ್ಟೋ ಕಾಲಾವಕಾಶ ವನ್ನು ಕೊಟ್ಟಿದ್ದೇವೆ. ಆದುದರಿಂದ ಈಗ ನಾವು ಬೇರೆ ವಿಷಯದಲ್ಲಿ ಮಾತ ನಾಡಲಿಕ್ಕೆ ತಯಾರಿಲ್ಲ, ನಾವು ಈ ವಿಷಯವನ್ನು ಬಹಳ ಸೌಮ್ಯದಿಂದಲೇ ಹೇಳಿ ದ್ದೇವೆ. ಈವೊತ್ತು ರಾಜ್ಯದ ರಕ್ಷಣಾ ಜವಾಬ್ದಾರಿಯನ್ನು ಹೊತ್ತಂತಹ ಒಬ್ಬ ಸಚಿವರ ಮೇಲೆ ಆರೋಪಣೆ ಇರುವುದು It is not an ordirnary matter. ರಾಜ್ಯದ ಜನತೆಯ ಮಾನಮರ್ಯಾದೆಯ ರಕ್ಷಣೆಯನ್ನು ಹೊತ್ತಂತಹ ಸಚಿವರ ಮೇಲೆ ಆರೋಪಣೆ ಸರಿ ಇದೆಯೋ ಇಲ್ಲವೋ ಗೊತ್ತಿಲ್ಲ. ಈ ಮಾತು ಅವರ ಬಾಯಿಂದಲೇ ಬರಬೇಕು.

ಅಧ್ಯಕ್ಷರು :—ಅದು ನಿಮ್ಮ ಅಭಿಪ್ರಾಯ. ಅವರು 4 ಗಂಟೆಗೆ ಸ್ಟೇಟ್ ಮೆಂಟ್ ಹೇಳುತ್ತೇವೆ ಎಂದು ಹೇಳಿದ್ದಾರೆ. ಅಷ್ಟರ ವರೆಗೆ ಯೂನಿವರ್ಸಿಟಿ ಬಿಲ್ಲಿನ ಮೇಲೆ ಚರ್ಚೆ ಮಾಡೋಣ.

ಶ್ರೀ ಹೆಚ್. ಡಿ. ದೇವೇಗೌಡ :— ನಾವು ಯೂನಿವರ್ಸಿಟಿ ಬಿಲ್ ಮೇಲೆ ಮಾತನಾಡುವುದಕ್ಕೆ ತಯಾರಿದ್ದೇವೆ. ಅದರ ಮೇಲೆ ಅಸಡ್ಡೆಯಾಗಲಿ, ಅನಾಶಕ್ತಿ ಯಾಗಲಿ ಇದೆ ಎಂತಲ್ಲ. ಮೊದಲು ಈ ವಿಷಯವನ್ನು ಡಿಸ್‌ಪೋಸ್ ಮಾಡ ಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು : ಇದು ರೂಲ್ಸಿಗೇನೂ ವಿರುದ್ಧವಾಗಿಲ್ಲ. ಅವರು 4 ಗಂಟೆಗೆ ಹೇಳಿಕೆ ಕೊಡುತ್ತೇವೆ ಎಂದು ಹೇಳಿದ್ದಾರೆ

ಶ್ರೀ ಹೆಚ್. ಡಿ. ದೇವೇಗೌಡ : ಈವೊತ್ತು ಬಹುಶಃ ವಿರೋಧಪಕ್ಷದಲ್ಲಿ ಸಾಕಷ್ಟು ಬಲ ಇಲ್ಲ ಎನ್ನುವ ಭಾವನೆ ಬೇಡ. ಶ್ರೀಮಾನ್ ಹೆಚ್. ಸಿದ್ದವೀರಪ್ಪ ನವರು ಈ ಜಾಗದಲ್ಲಿ ಆವಾಗ ಕೂತುಕೊಂಡಿದ್ದಾಗ ಈ ಸಭೆಯು ಒಂದು ಅಜೆಂಡಾ ಬದಲಾವಣೆ ವಿಷಯದಲ್ಲಿ 4 ದಿನಗಳ ಕಾಲ ಚರ್ಚೆಮಾಡಿ ಮಾತನಾಡಿದ್ದನ್ನು ಈ ಸಂದರ್ಭದಲ್ಲಿ ನಾನು ಜ್ಞಾಪಕಕ್ಕೆ ತರುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ : ಆಗ ಆ ಸರ್ಕಾರದವರು ತಪ್ಪು ಮಾಡಿದರು, ಅದಕ್ಕೆ ಹಾಗೆ ಮಾಡಿದೆವು. ಈವಾಗ ತಪ್ಪು ಮಾಡಿಲ್ಲ.

ಶ್ರೀ ಡಿ. ದೇವರಾಜ ಅರಸ್ : 4 ಗಂಟೆಗೆ ಸ್ಟೇಟ್‌ಮೆಂಟ್ ಕೊಡುತ್ತೇವೆ ಅಂದಮೇಲೆ ಅದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ ?

ಶ್ರೀ ಹೆಚ್. ಡಿ. ದೇವೇಗೌಡ : ಇದು ಎಲ್ಲಕ್ಕಿಂತಲೂ ಗಹನವಾದ ವಿಷಯ ಆದುದರಿಂದ ಇದನ್ನು ಮೊದಲು ಪಿಕ್ ಮಾಡಬೇಕು.

SRI D. DEVARAJ URS : That is in your opinion. But in the opinion of the House, it is something different. You can express your opinion and you have already expressed it.

SRI H. D. DEVE GOWDA : We are not prepared to sit here unless you make a statement now.

SRI D. DEVARAJ URS : I am going to make a statement at 4 'O' Clock.

ಶ್ರೀಮಾನ್ ಸಿದ್ದವೀರಪ್ಪನವರು ಏನು ಹೇಳಿದ್ದಾರೆ. ಅದನ್ನೇ ನೀವೂ ಫಾಲೋ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ :—ಅದನ್ನೇ ಫಾಲೋ ಮಾಡಬೇಕು ಅಂತಲ್ಲ ಇದಕ್ಕಿಂತ ಗಹನವಾದ ವಿಷಯ ಮತ್ತಾವುದೂ ಇಲ್ಲ.

ಶ್ರೀ ಡಿ. ದೇವರಾಜ್ ಅರಸ್ :—ಈ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತೇನೆ, ಎಂದು ನಾನೇ ವಾಲೆಂಟರಿಯಾಗಿ ಹೇಳಿದ್ದು. ಆದುದರಿಂದ ಈಗಲೇ ಕೊಡಲೇ ಬೇಕು ಎಂದು ಹೇಳಿದರೆ ಅದು ಸರಿಯಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :—ನಾವು ಹಾಗೆ ಹೇಳಲಿಲ್ಲಾ.

ಶ್ರೀ ಡಿ. ದೇವರಾಜ್ ಅರಸ್ :—ಈ ಸ್ಟೇಟ್‌ಮೆಂಟನ್ನು ಕೊಡುವುದು ಬಿಡುವುದು ಸರ್ಕಾರಕ್ಕೆ ಬಿಟ್ಟಿದ್ದು. ನಾನೇ ಈ ಬಗ್ಗೆ ಒಂದು ಸಾರಿ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :—ನಮ್ಮ ಕಾತುರತೆ ಬಗ್ಗೆ ತಾವು ಅರ್ಥ ಮಾಡಿಕೊಳ್ಳಲಿಲ್ಲ ಎಂದು ಕಾಣುತ್ತದೆ. ಈವೊತ್ತು ಇರತಕ್ಕಂಥ ಯಾವ ಜಿಲ್ಲೆಗಳಿಗೂ ಕೂಡ ಇಷ್ಟು ಕಾತುರತೆ ಇಲ್ಲ ಎಂದು ನನ್ನ ತೀರ್ಮಾನ.

ಶ್ರೀ ಹೆಚ್. ಡಿ. ದೇವೇಗೌಡ :—ಮುಖ್ಯ ಮಂತ್ರಿಗಳು ಹೇಳುವುದನ್ನು ನೋಡಿದರೆ ಏನೋ ಒಂದು ಔದಾರ್ಯ ತೋರಿಸಿದ ಹಾಗೆ ಕಾಣುತ್ತದೆ.

SRI D. DEVARJ URS :—ಇದು ಔದಾರ್ಯದ ಪ್ರಶ್ನೆಯಿಲ್ಲ. I cannot be forced to make a statement now only. Neverthless I have promised to make a statement to-day and I am going to make it at 4' O 'Clock.

SRI C. M. ARUMUGHAM :—The Chief Minister will agree with the opposition that the Government is in trouble. According to us a Junior Minister is involved and charges have been levelled against him. So far the Chief Minister or any one of the Ministers have not cleared the charges made against him. Even the Junior Minister is Member of the Government. The charges are very grave charges. Unless you clear them it is difficult for us to Co-operate with the Government. The statement should be made immediately without losing any more time. I need not recall what has happend in United Kingdom on an episode of this nature.

SRI K. H. PATIL :--The Hon. Member Sri Arumugam is a good parliamentarian and he has got praise from the Chief Minister. Let him understand that.

SRI C. M. ARUMUGAM :—You do well if you make a statement now only. It is a matter touching the prestige of the Government since it is involved in this episode. You are landed in trouble and you have got to clear out from the trouble. We have every right to demand you to make a statement and you will have no right to function any further unless you make a statement now.

The statement requires top priority

SRI D. DEVARAJ URS :—I really think Mr. Arumugham is a man of some experience and he has knowledge of procedure and practice of Parliamentary affairs. I do not

(SRI D. DEVARAJ URS.)—

know why he is trying to betray his ignorance of certain matters. I do not like it being said that Mr. Arumugham is not a good parliamentarian. If he is a parliamentarian. he should keep to the rules, traditions and regularions. It is rather surprising that he should speak like this. He says that Government has no right to transact any business and that it has no right to sit here unless the statement is made and everything is cleared. Then, what right Government had all these four days, to sit here? Why did he raise it to-day? Perhaps it dawned on him to-day. He said there are serious charges. I want to know which hon. Member has made any charge. He said that there are some serious charges. What are they? The charges supposed to have been made are all from the press. What has appeared in the press is being brought before the House by the hon. Members. Beyond that, there is no specific charge made as per the Rules of Procedure, nor is there an Adjournment Motion, nor is there any kind of motion moved. When I say: 'wait for two more hours,' they are saying:' here and now you should make a statement'. I think they are emotionally worked up. That is why they are not able to see reason. Let me assure the hon. Members that in this two hours' time I am not going to make any JADU here to protect this man or shield that man. Please have the patience. Please, for Heaven's sake, come down from your emotions for a while and be reasonable and rational. This is my appeal.

ಶ್ರೀ ಎಚ್.ಡಿ. ದೇವೇಗೌಡ :—ಮುಖ್ಯ ಮಂತ್ರಿಗಳು ನಮಗೆ ರೀಸನೇಬಲ್ ಆಗಿರಬೇಕೆಂದು ಹೇಳಿದರು. ನಾಲ್ಕು ದಿವಸ ಅವಕಾಶ ಕೊಟ್ಟದ್ದು ಅನ್‌ರೀಸನಬಲ್ಲೇ? ಇದರ ಜೊತೆಗೆ ಅವರು ಆಜರ್ನ್‌ಮೆಂಟ್ ಮೋಷನ್ ಅಥವಾ ಬೇರೆ ಯಾವುದೇ ಮೋಷನ್ ತಂದಿಲ್ಲವೆಂದು ಹೇಳಿದರು. ಬಹುಶಃ ಆಜರ್ನ್‌ಮೆಂಟ್ ಮೋಷನ್ ತಂದು ಇಂಥ ವಿಷಯಗಳನ್ನು ಚರ್ಚೆ ಮಾಡಬೇಕಾದ್ದಿಲ್ಲ. ಯಾವುದೇ ವಿಷಯ ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲದೆ ಇದ್ದರೂ ಹೆಚ್ಚು ಗಹನವಾದ ವಿಷಯ ಎಂದು ಅಧ್ಯಕ್ಷರ ಅನುಮತಿಯನ್ನು ಪಡೆದು ಪ್ರಸ್ತಾಪ ಮಾಡಬಹುದು.

ಈ ವಿಷಯದ ಬಗ್ಗೆ ಪತ್ರಿಕೆಗಳಲ್ಲಿ ಬಂದ ವರದಿಯ ಆಧಾರದ ಮೇಲೆ ನಾವು ವಿಷಯ ಪ್ರಸ್ತಾಪ ಮಾಡಿದಾಗ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದು, ಈಗ ಅಜರ್ನ್‌ಮೆಂಟ್ ಮೋಷನ್ ತರಬೇಕು ಎಂದು ಹೇಳುವುದಾದರೆ...........

ಶ್ರೀ ಡಿ. ದೇವರಾಜ ಅರಸ್ :—ಈಗಲೇ ಹೇಳಬೇಕು ಎಂದು ಕೇಳಿದ್ದಕ್ಕೆ ನಾನು ಆ ಮಾತು ಹೇಳಿದೆ.

SRI H. D. DEVE GOWDA ;—We have kept quiet for four long days.

SRI D. DEVARAJ URS :—Why not you keep quiet for another one-and-a-half hours?

ಶ್ರೀ ಎಚ್. ಡಿ. ದೇವೇಗೌಡ :—ಈ ವಿಷಯದಲ್ಲಿ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟ ಮೇಲೆ ಆ ಹೇಳಿಕ ಬಗ್ಗೆ ನಮ್ಮ ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸುವುದಕ್ಕೆ ಸಾಕಷ್ಟು ಕಾಲ ಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ :—ಸಾಕಷ್ಟು ಕಾಲ ಬೇಕೇ, ಬೇಡವೇ ಎನ್ನುವುದಕ್ಕೆ ಅಧ್ಯಕ್ಷರಿದ್ದಾರೆ; ಸಭೆ ಇದೆ. ನೀವು ಹೇಳಿದ ಹಾಗೆ ನಾನು ನಡೆಯುವುದಕ್ಕಾಗುವುದಿಲ್ಲ, ನಾನು ಹೇಳಿದ ಹಾಗೆ ನೀವು ನಡೆಯುವುದಕ್ಕಾಗು ವುದಿಲ್ಲ.

MADAM SPEAKER.—We will now take up the Agricultural University Bill.

ಶ್ರೀ ಎಚ್. ಡಿ. ದೇವೇಗೌಡ :—ದಯಮಾಡಿ ಕ್ಷಮಿಸಬೇಕು.

ಅಧ್ಯಕ್ಷರು :—ತಾವು ಆ ಮೇಲೆ ಮಾತನಾಡಬಹುದು

ಶ್ರೀ ಎಚ್ ಡಿ. ದೇವೇಗೌಡ :—ನಾನು ಮಾತನಾಡಬೇಕಾದ ಅವಶ್ಯಕತೆ ಇಲ್ಲ. ಸಭೆಯನ್ನು ನಡೆಸಿಕೊಳ್ಳಿ. ಮುಖ್ಯ ಮಂತ್ರಿಗಳು ಈ ಕಹಿ ವಾತಾವರಣ ವನ್ನು ತಿಳಿಯಾಗಿ ಮಾಡತಕ್ಕ ಕಾರ್ಯಕ್ಕೆ ಕೈ ಹಾಕುವವರೆಗೂ ನಾವು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಿಲ್ಲ. ನಾಲ್ಕು ಗಂಟೆಗೆ ತಾವು ಹೇಳಿ ಕಳುಹಿಸಿದರೆ ಸಭೆಗೆ ಬರುತ್ತೇವೆ ಇಲ್ಲದೆ ಇದ್ದರೆ ಇಲ್ಲ. (ವಿರೋಧ ಪಕ್ಷದ ಸದಸ್ಯರೆಲ್ಲ ಸಭೆಯಿಂದ ನಿರ್ಗಮಿಸಿದರು.)

Mysore Agricultural University Bill 1973
Motion to consider

(Debate Contd.)

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು (ಶಾಂತಿ ನಗರ): —ಮಾನ್ಯ ಅಧ್ಯಕ್ಷರೇ, ಮೈಸೂರು ಅಗ್ರಿಕಲ್ಚರಲ್ ಯೂನಿವರ್ಸಿಟಿ ಬಿಲ್ ಏನಿದೆ ಅದನ್ನು ಸ್ವಾಗತಿಸುತ್ತ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಸುಮಾರು 80 ಯೂನಿವರ್ಸಿಟಿಗಳಿವೆ. 30 ಲಕ್ಷ ಮಂದಿ ಆರ್ಟ್ಸ್ ಮತ್ತು ಸೈನ್ಸ್ ಪದವೀಧರರು ಪ್ರತಿ ವರ್ಷ ಹೊರ ಬರುತ್ತಿದ್ದಾರೆ, ಐದು ಲಕ್ಷ ಮಂದಿ ಟೆಕ್ನಿಕಲ್ ಪದವೀಧರರು ಹೊರ ಬರುತ್ತಿದ್ದಾರೆ. ಇವರ ನಿರುದ್ಯೋಗ ಸಮಸ್ಯೆ ಬಹಳ ದೊಡ್ಡದಾಗಿ ಇದೆ. ಆದುದರಿಂದ ಮತ್ತೊಂದು ಅಗ್ರಿಕಲ್ಚರಲ್ ಯೂನಿವರ್ಸಿಟಿ ಇರತಕ್ಕದು ಬಹಳ ಅವಶ್ಯಕವಿದೆ. ಇದರ ಸಂಬಂಧವಾಗಿ ಯೂನಿವರ್ಸಿಟಿ ಎಜುಕೇಶನ್ ಕಮಿಷನ್, ಕೊಠಾರಿ ಕಮಿಷನ್ ಹಾಗೂ 1962ರಲ್ಲಿ ಯು. ಎಸ್. ಎ. ಟೀಂ ರಾಜ್ಯದಲ್ಲಿ ಎರಡು ಅಗ್ರಿಕಲ್ಚರಲ್ ಯೂನಿವರ್ಸಿಟಿಗಳಿರಬೇಕು ಎಂದು ತೀರ್ಮಾನ ಮಾಡಿದೆ. ಇದಕ್ಕೆ ಕಾರಣ ಈಗಿನ ಯೂನಿವರ್ಸಿಟಿ ಎಜುಕೇಷನ್ ಮಾಸ್ ಎಜುಕೇಷನ್ ಆಗಿರಬಾರದು, ಪಿಕ್ಡ್ ಅಪ್ Pick up the Bunch ಕ್ಯಾಂಡಿಡೇಟ್ಸ್ ತೆಗೆದುಕೊಳ್ಳಬೇಕು, ಎಂದು ಅದಕ್ಕೋಸ್ಕರ Job oviented ಜಾಬ್ ಒರಿಯೆಂಟೆಡ್ ಎಜುಕೇಷನ್, ಆಗುವ ಹಾಗೆ ಅಗ್ರಿಕಲ್ಚರಲ್ ಯೂನಿವರ್ಸಿಟಿ ಸ್ಥಾಪನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಜೊತೆಗೆ ಇಂಡಿಯಾ ದೇಶ ಪ್ರಪಂಚದಲ್ಲಿಯೇ ದೊಡ್ಡ ವ್ಯವಸಾಯ ಮಾಡತಕ್ಕ ದೇಶ. ಆದರೂ ವ್ಯವಸಾಯದಲ್ಲಿ ನಾವು ಪೂರ್ವದಿಂದಲೂ, ಅಂದರೆ ಅನಾದಿಕಾಲದಿಂದಲೂ ಬಂದಿರತಕ್ಕ ರೀತಿ ನೀತಿಯನ್ನೇ ಅನುಸರಿಸುತ್ತಿದ್ದೇವೆ ಎಂದು ಪಾಶ್ಚಾತ್ಯ ಬರಹಗಾರರೊಬ್ಬರು ಹೇಳಿದ್ದಾರೆ.

We are still using rough and old crude rusted instruments in our agricultural operations. ಹೀಗಿರತಕ್ಕ ಕಾಲದಲ್ಲಿ ನಾವು ಭೂ ಸುಧಾರಣೆಯನ್ನು ಸಹ ತರುತ್ತಿದ್ದೇವೆ. ಇದರ ಹಿನ್ನಲೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಮತ್ತೊಂದು ಹೊಸ ಅಗ್ರಿಕಲ್ಚರಲ್ university ಇರ ತರತಕ್ಕದ್ದು ಅವಶ್ಯಕವಿದೆ ಎಂದು ಈ, ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಪಂಜಾಬಿನಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿ ಇದೆ. Prof. Ranadhawa (ಪ್ರೊಫೆಸರ್ ರಣಧ್ವ) ಅವರು ಅಲ್ಲಿನ ವೈಸ್ ಛಾನ್ಸಲರ್ ಆಗಿದ್ದಾರೆ. ಅಲ್ಲಿ ನೋಡಿದರೆ ಅಗ್ರಿಕಲ್ಚರಲ್ ಯೂನಿವರ್ಸಿಟಿ ಎಷ್ಟರಮಟ್ಟಿಗೆ ಕೆಲಸ ಮಾಡಬಲ್ಲದು ಎಂದು

ಚೆನ್ನಾಗಿ ಕಾಣುತ್ತದೆ. ಅಲ್ಲಿ ವ್ಯವಸಾಯಕ್ಕೆ ಬಹಳ ಸಹಾಯವಾಗುತ್ತಿದೆ. ಯೂನಿವರ್ಸಿಟಿಯಲ್ಲಿ ರೀಸರ್ಚ್ ಮಾಡುತ್ತಿದ್ದಾರೆ, ವ್ಯವಸಾಯದ ಸಮಸ್ಯೆಗಳ ಬಗ್ಗೆ ಸಂಶೋಧನೆ ಮಾಡಿ, ಚರ್ಚೆ ಮಾಡಿ, ಬೇಕಾದ ಸಲಹೆಗಳನ್ನು ರೈತರಿಗೆ ಕೊಡುತ್ತಿದ್ದಾರೆ. ಆ ತರಹ ಅಗ್ರಿಕಲ್ಚರಲ್ ಯೂನಿವರ್ಸಿಟಿ ನಮ್ಮಲ್ಲಿಯೂ ಇರುವುದು ಬಹಳ ಅವಶ್ಯಕತೆ ಇದೆ.

ಮೈಸೂರು ಸಂಸ್ಥಾನವನ್ನು ನಾವು ಮೂರು ಭಾಗವಾಗಿ ವಿಂಗಡಿಸಬಹುದು; ಮಲೆನಾಡು ಪ್ರದೇಶ, ಬ್ಲಾಕ್ ಕಾಟನ್ ಸಾಯಿಲ್ ಇರುವ ಪ್ರದೇಶ ಮತ್ತು ಮೈದಾನ ಪ್ರದೇಶ. ಮಲೆನಾಡು ಪ್ರದೇಶ ಮತ್ತು ಬ್ಲಾಕ್ ಕಾಟನ್ ಸಾಯಿಲ್ ಪ್ರದೇಶ ಏನಿದೆ ಈ ಪ್ರದೇಶದಲ್ಲಿ ಒಂದು ಯೂನಿವರ್ಸಿಟಿ ಇರತಕ್ಕದ್ದು ಸಹಜ ವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಕೊಡಗು, ಉತ್ತರ ಕರ್ನಾಟಕ, ದಕ್ಷಿಣ ಕನ್ನಡ ಜಿಲ್ಲೆ ಇಂಥ ಕಡೆ ರೀಸರ್ಚ್ ಆಗತಕ್ಕದ್ದು ಬಹಳ ಉತ್ತಮ ವಾದುದು.

2-30 P.M.

ಜೊತೆಗೆ ಕೆಲವು ಸಂದರ್ಭದಲ್ಲಿ ವೀಟ್, ಷುಗರ್ ಕೇನ್, ಕ್ಯಾಷ್ಯೂ ನಟ್ಸ್ ಇಂತಹ ಬೆಳೆಗಳ ಬಗ್ಗೆ ರೀಸರ್ಚ್ ನಡೆಸುವುದು ಅತ್ಯವಶ್ಯಕ. ನಮ್ಮಲ್ಲಿರುವ ಹೆಬ್ಬಾಳ್ ಫಾರಂನಲ್ಲಿ ಇಂಡೋ ಡೇನಿಷ್ ಪ್ರಾಜೆಕ್ಟ್‌ನಿಂದ ನಡೆಸುವ ಒಂದು ಫಾರಂ ಇದೆ. ಹಾಗೆಯೇ ಬೆಂಗಳೂರಿನಲ್ಲಿ ಒಂದು ರೀತಿಯಾಗಿ ಡೇರಿ ಫಾರಂ ಸಹ ಮಾಡ ಲಾಗಿದೆ. ಅದರಂತೆ ಇತರ ಕಡೆಗಳಲ್ಲೂ ಡ್ಯೆರಿ ಫಾರಂಗಳನ್ನು ಮಾಡಬೇಕು. ಇದರಲ್ಲಿ ಕ್ಯಾಟಲ್ ಡೆವಲಪ್‌ಮೆಂಟು ಸ್ಕೀಂಗಳು ಒಂದು ಹಾಕಿದ್ದಾರೆ. ಇದರಂತೆ ಇನ್ನೂ ಅನೇಕ ತರಹದ ಸ್ಕೀಂಗಳನ್ನು ಮಾಡಬೇಕಾದರೆ ಇಂತಹ ಕ್ಷೇತ್ರಗಳಲ್ಲಿ ಒಂದು ಅಗ್ರಿಕಲ್ಚರು ಯೂನಿವರ್ಸಿಟಿ ಇರಬೇಕಾದದ್ದು ಬಹಳ ಅವಶ್ಯವಾಗಿದೆ. 1950ರಲ್ಲೇ ಅಗ್ರಿಕಲ್ಚರು ಕಾಲೇಜು ಒಂದು ರಚನೆಯಾಗಿ ಇದರ ಮೂಲಕ ಕೆಲವು ಕಡೆ ಕಾಟನ್ ರೀಸರ್ಚ್ ಸ್ಕೀಂಸ್‌ಗಳು ಮಾಡುವುದು ಅವಶ್ಯಕ ಮತ್ತು ಇಂತಹ ಕಾಟನ್ ರೀಸರ್ಚ್ ಸ್ಟೇಷನುಗಳನ್ನು ಮಾಡಬೇಕು. ಅವಶ್ಯಕ ಇವನ್ನೆಲ್ಲಾ ಮಾಡಲು ಮತ್ತೊಂದು ಒಂದು ಕೇಂದ್ರಿಕೃತವಾದ ಸ್ಥಳ ಇರಬೇಕಾಗುತ್ತದೆ. ನಮ್ಮ ಬೆಂಗಳೂರು ಡ್ಯೆರಿಯಲ್ಲಿ ಯಾವ ರೀತಿಯಾಗಿ 'ವೈಟ್ ರೆವೆಲ್ಯೂಷನ್' ಮಾಡಿ ಯಾವ ರೀತಿ ಡೆವಲಪ್ ಮಾಡುತ್ತಿದ್ದಾರೋ ಅದೇ ರೀತಿ ಇಂತಹ ಇನ್ನೊಂದು ರೀಸರ್ಚು ಸೆಂಟರುಗಳನ್ನು ಮಾಡಲು ಅನುಕೂಲವಾಗುವಂತೆ ಇಲ್ಲೂ ಒಂದು ಅಗ್ರಿ ಲ್ಚರು ಯೂನಿವರ್ಸಿಟಿ ಇರಬೇಕು. ಇನ್ನೂ ನಮ್ಮ ದೇಶದಲ್ಲಿರುವ ಅಗ್ರಿ ಕಲ್ಚರು ಕಾಲೇಜುಗಳಿಂದ ಬಂದಿರುವ ಅಗ್ರಿಕಲ್ಚರು ಗ್ರಾಜ್ಯುಯೇಟರುಗಳು ಇಂದು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ. ಇದರ ಬಗ್ಗೆ ಕೆಲವು ಅಂಕಿ ಅಂಶಗಳನ್ನು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರಬೇಕಾಗಿದೆ.

(ಶ್ರೀ ಕೆ. ಆರ್. ಶ್ರೀನಿವಾಸಲು ನಾಡ್ಡು)

ನಮ್ಮಲ್ಲಿ ಯಾವ ರೀತಿ ಉದ್ಯೋಗಿಗಳಿದ್ದಾರೆ ಎಂದರೆ :

Unemployment of Agricultural Graduates including Horticulture :	— 3745
Agricultural Engineering Graduates :	— 975
Vetarinary and Animal Husbandry :	— 1050
Fisheries :	— 275
Rural House Science :	— 175

ಇದನ್ನು ಎಲ್ಲಾ ನೋಡಿದರೆ ನಮ್ಮ ರಾಜ್ಯದಲ್ಲಿ ಎಷ್ಟು ನಿರುದ್ಯೋಗಿಗಳಾಗಿದ್ದಾರೆನ್ನುವುದು ಇದರಿಂದ ಸಂಪೂರ್ಣವಾಗಿ ಅರ್ಥವಾಗುತ್ತದೆ, ನಮ್ಮ ರಾಜ್ಯದಲ್ಲಿ ಇರುವ ಅಗ್ರಿಕಲ್‌ಚರು ಗ್ರಾಜುಯೇಟರುಗಳಿಗೆ ಸರಿಯಾಗಿ ತರಬೇತಿ ಕೊಡಲು ತಕ್ಕ ಟ್ರೇನಿಂಗು ಸೆಂಟರುಗಳನ್ನು ಅಲ್ಲಲ್ಲಿ ಮಾಡಬೇಕು. ಈ ಟ್ರೇನಿಂಗ್‌ನಲ್ಲಿ ಎರಡು ವಿಭಾಗ ಮಾಡಬಹುದು. ಒಂದು ಪ್ರಾಕ್ಟಿಕಲ್ ಆಗಿರುವುದು ಇನ್ನೊಂದು ಆಕೆಡಮಿಕ್ ಮತ್ತು ಅಡ್ಮಿನಿಸ್ಟ್ರೇಟೀವ್ ಆಗಿರಬೇಕು. ಇದಕ್ಕಾಗಿ ಇಲ್ಲಿ ಒಂದು ಅಗ್ರಿಕಲ್‌ಚರು ಯೂನಿವರ್ಸಿಟಿ ಸ್ಥಾಪನೆ ಮಾಡುವುದರ ಅಗತ್ಯವಿದೆ. ಈಗೇನೋ ಯೂನಿವರ್ಸಿಟಿಗಳಲ್ಲಿ ಅಟಾನಮಿ ಇರಬೇಕೆಂದು ಹೇಳುತ್ತಾರೆ. ಹಾಗೆ ಅಟಾನಮಿ ಕೊಟ್ಟರೂ ಇವರ ಮೇಲೆ ಒಂದು ರೀತಿಯಾಗಿ, ಹಿಡಿತ ಇಟ್ಟುಕೊಳ್ಳಲು ಸರ್ಕಾರದ, ಕಂಟ್ರೋಲು ಇದರಲ್ಲಿರಬೇಕು. ಈಗೇನೋ ನಮ್ಮ ರಾಜ್ಯದಲ್ಲಿರುವ ಕಾಲೇಜುಗಳಿಂದ ಬರುತ್ತಿರುವ ಆರ್ಟ್ಸ್ ಹಾಗೂ ಸೈನ್ಸ್ ಗ್ರಾಜುಯೇಟರುಗಳೇ ಹೆಚ್ಚಾಗಿದ್ದಾರೆ, ಇವರಿಗೆಲ್ಲಾ ಉದ್ಯೋಗಗಳು ಸಿಗುತ್ತಿಲ್ಲ. ಇದಕ್ಕಾಗಿ ನಮ್ಮ ರಾಜ್ಯದಲ್ಲಿ ಒಂದು ಅಗ್ರಿಕಲ್‌ಚರು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದರ ಅವಶ್ಯಕತೆ ಹೆಚ್ಚಾಗಿದೆ. ಇಂತಹ ಯೂನಿವರ್ಸಿಟಿಯನ್ನು ಮಾಡಿ ಇದರಲ್ಲಿ ಎರಡು ಭಾಗವಾಗಿ ವಿಂಗಡಣೆ ಮಾಡಬಹುದು. ಒಂದು ಅಕಾಡಮಿಕ್ ಸೈಡ್‌ನಲ್ಲಿ ಇನ್ನೊಂದು ಅಡ್ಮಿನಿಸ್ಟ್ರೇಷನ್ ಸೈಡ್‌ನಲ್ಲಿ ಎಂದು ಎರಡು ರೀತಿಯಾಗಿ ವಿಂಗಡಣೆ ಮಾಡಬಹುದು. ಇದರ ಮೇಲೆ ಸರಕಾರದ ಕಂಟ್ರೋಲ್ ಕೂಡಾ ಇರುವಂತೆ ಮಾಡಬೇಕು. ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಸರಕಾರಕ್ಕೆ ಸೂಚನೆ ಮಾಡಬೇಕಾಗಿದೆ. ನಮ್ಮಲ್ಲಿ ಈಗ ತಂದಿರುವ ಅಗ್ರಿಕಲ್ಚರ್ ಯೂನಿವರ್ಸಿಟಿ ಬಿಲ್‌ನ ಚರ್ಚೆ ಇಲ್ಲಿ ನಡೆದು ಇದು ಪೂರ್ಣವಾಗಿ ಪಾಸಾಗುವವರೆಗೆ ಈಗಿರುವ ಅಗ್ರಿಕಲ್‌ಚರುಯೂನಿವರ್ಸಿಟಿಗಳಲ್ಲಿ ಯಾವ ರೀತಿಯಾದ ಹೊಸ ಅಪಾಯಿಂಟ್‌ಮೆಂಟುಗಳನ್ನು ಇಲ್ಲಿ ಮಾಡಕೂಡದು ಮತ್ತು ಹೊಸದಾಗಿ ಯಾವ ಉದ್ಯೋಗಗಳನ್ನು ಇಲ್ಲಿ ನಿರ್ಮಾಣ ಮಾಡಬಾರದು ? ಇದರ ಬಗೆ

ಸರಿಯಾದ ಸೂಚನೆಗಳನ್ನೂ ಯೂನಿವರ್ಸಿಟಿಗೆ ಕೊಡಬೇಕೆಂದು ತಮ್ಮ ಮೂಲಕ ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ನಮಗೆ ಈಗ ಬೇಕಾಗಿರುವುದು ಬ್ರಿಟಿಷರು ಇದ್ದಾಗ ಇದ್ದ ಇಂಪೀರಿಯಲಿಸ್ಟ್ ಪದ್ಧತಿ ನಮಗೆ ಬೇಡ. ಹಿಂದೆ ಅವರು ಬರೀ ಗುಮಾಸ್ತರುಗಳನ್ನು ಟ್ರೇನಿಂಗು ಕೊಡುತ್ತಿದ್ದರೇ ವಿನಹ ಏನೂ ಮಾಡಲಿಲ್ಲ. ನಮ್ಮ ದೇಶದಲ್ಲಿ ನೂರಕ್ಕೆ ಎಂಬತ್ತು ಭಾಗ ವ್ಯವಸಾಯದಿಂದಲೇ ಜೀವನ ಮಾಡುವ ಜನರು ಇದ್ದರೂ ಇನ್ನೂ ನಮ್ಮ ರಾಜ್ಯದಲ್ಲಿ ಜನಕ್ಕೆ ಎರಡು ಹೊತ್ತು ಅನ್ನ ಸರಿಯಾಗಿ ಸಿಗುತ್ತಿಲ್ಲ. ಬಾಯಲ್ಲೇನೋ Biggest Agricultural country under the Sun ಎಂದು ಹೇಳುತ್ತಾರೆ ಶೇಕಡಾ 80ರಷ್ಟು ಬೇಸಾಯ ಮಾಡುವ ಜನರೇ ಇದ್ದಾರೆಂದು ಹೇಳುತ್ತಾರೆ, ಆದರೆ ಅದೇ ಪರದೇಶಗಳಲ್ಲಿ ಕೇವಲ ಶೇಕಡ ಎರಡರಷ್ಟು ಬೇಸಾಯದಲ್ಲಿರುವ ಜನರು ವೈಜ್ಞಾನಿಕ ವ್ಯವಸಾಯ ಪದ್ಧತಿಗಳನ್ನು ಅನುಸರಿಸಿ ಹೆಚ್ಚಿನ ಬೆಳೆ ಬೆಳೆದು ಇತರ ದೇಶಗಳಿಗೂ ಹಂಚುತ್ತಿದ್ದಾರೆ, ಹಿಂದೆ ನಮ್ಮ ರಾಜ್ಯದಲ್ಲಿ ಸೆಂಟ್ರಲ್ ಗವರ್ನಮೆಂಟಿನವರು ಕೆಲವು ಕಮಿಷನ್‌ಗಳನ್ನು ಎಂದರೆ ರಾಧಾಕೃಷ್ಣನ್‌ರವರ ಕಮಿಷನ್ ಹಾಗೂ ಶ್ರೀ ಕೊಠಾರಿ ಕಮಿಷನ್ ಎಂದು ಮಾಡಿದ್ದರು. ಈ ಕಮಿಶನ್‌ನವರು ಆಗ್ರೋ ಇಂಡಸ್ಟ್ರೀಸ್‌ಗಳನ್ನು ಡೆವಲಪ್ ಮಾಡಬೇಕು. ಅಗ್ರಿಕಲ್ಚರಲ್ ಸೈನ್ಸ್ ರೀಸರ್ಚ್ ಮಾಡುವ ಸೆಂಟರುಗಳನ್ನು ಮಾಡಬೇಕು ಮತ್ತು ಇದಕ್ಕೆ ತಕ್ಕಂತೆ ಲ್ಯಾಬರೇಟರಿಗಳನ್ನು ಅಲ್ಲಲ್ಲಿ ಮಾಡಬೇಕಾಗುತ್ತದೆ ಮತ್ತು ಇದಕ್ಕೆ ತಕ್ಕಂತೆ ಅಗ್ರಿಕಲ್‌ಚರಲ್ ಇಂಡಸ್ಟ್ರೀಸ್‌ಗಳನ್ನು ಸಹ ಡೆವಲಪ್ ಮಾಡಬೇಕು ಎಂದು ಸಲಹೆ ಮಾಡಿದ್ದರು. ಆದರೆ ಇದುವರೆಗೂ ನಮ್ಮ ರಾಜ್ಯದಲ್ಲಿ ವ್ಯವಸಾಯ ಇನ್ನೂ ಹೆಚ್ಚಾಗಿ ಅಭಿವೃದ್ಧಿಯಾಗಿಲ್ಲ ಮತ್ತು ವ್ಯವಸಾಯವನ್ನು ಅಭಿವೃದ್ಧಿ ಮಾಡುವುದರ ಕಡೆಗೆ ಹೆಚ್ಚು ಆಸಕ್ತಿ ಸಹ ವಹಿಸುತ್ತಿಲ್ಲ. ಇದಕ್ಕಾಗಿ ನಮ್ಮ ರಾಜ್ಯದಲ್ಲಿ ಇನ್ನೂ ಒಂದೆರಡು ಅಗ್ರಿಕಲ್ಚರಲ್ ಯೂನಿವರ್ಸಿಟಿಗಳನ್ನೂ ಮಾಡುವುದು ಅತ್ಯಗತ್ಯ. ಒಂದು ಯೂನಿವರ್ಸಿಟಿಯಲ್ಲಿ ಒಳ್ಳೆಯ ತಜ್ಞರು, ಅಂದರೆ ಬಾಟನಿ ಹಾಗೂ ಜೂವಾಲಜಿ ಇಂತಹ ಫಾರಿನ್ ಡಿಗ್ರಿಗಳನ್ನು ಪಡೆದಿರುವಂತಹವರು ಒಂದು ಭಾಗದಲ್ಲಿದ್ದು ವ್ಯವಸಾಯದ ಬಗ್ಗೆ ಸರಿಯಾದ ಯೋಜನೆಗಳನ್ನು ಮಾಡಿ ಯೂನಿವರ್ಸಿಟಿಯವರಿಗೆ ಸಲಹೆಗಳನ್ನು ಕೊಡುತ್ತಾರೆ. ಈಗ ಯಾವ ಹೊಸ ಯುಗ ಆರಂಭವಾಗಿದೆ ಎಂದರೆ ಒಂದು ರೀತಿಯಾದ ಸ್ಪೆಷಲೈಸೇಷನ್ ಹಾಗೂ ಪ್ಲಾನಿಂಗು ನಡೆಯುತ್ತಿದೆ. ಇಂತಹ ಪ್ರಧಾನವಾದ ವ್ಯವಸಾಯದ ಬಗ್ಗೆ ಯುನಿವರ್ಸಿಟಿಗಳನ್ನು ಮಾಡಿ, ಇದರ ಮೂಲಕ ನಿರುದ್ಯೋಗಿಗಳಾಗಿರುವವರಿಗೆ ಕೆಲವು ಉದ್ಯೋಗಗಳನ್ನು ಮಾಡಲು ಅವಕಾಶವಾಗುತ್ತದೆ. ನಮ್ಮ ರಾಜ್ಯದಲ್ಲಿ ಇನ್ನೂ ಇಂತಹ ನಾಲ್ಕಾರು ಯುನಿವರ್ಸಿಟಿಗಳನ್ನು ಮಾಡಬಹುದು. ಒಂದು ಕಡೆ ಫಾರಸ್ಟು ರೀಸರ್ಚ್ ಮಾಡಬೇಕು. ಮತ್ತೊಂದು ಕಡೆ ಅಗ್ರಿಕಲ್‌ಚರು ಟೆಕ್ನಾಲಜಿ ಎಂದು ಅಭಿವೃದ್ಧಿ ಮಾಡಬಹುದು.

(ಶ್ರೀ ಕೆ. ಆರ್ ಶ್ರೀನಿವಾಸಲು ನಾಯ್ಡು)

ನಮ್ಮ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲೂ ಜೂನಿಯರು ಕಾಲೇಜುಗಳು ಎಂದು ಲಚ್ಚರ್ ಮಾಡುತ್ತಿದ್ದಾರೆ ಮತ್ತು ಇದರ ಬಗ್ಗೆ ಸ್ಟಾಂಡರ್ಡುಗಳು ಬಹು ಕಮ್ಮಿ ಎಂದೂ ಹೇಳುತ್ತಿದ್ದಾರೆ ಮತ್ತು ನಾವು ಇದನ್ನು ಆಲ್ ಇಂಡಿಯಾ ಲೆವಲ್‌ನವರಿಗೆ ಹೋಲಿಸಿ ನೋಡಿದರೆ ಅವರೂ ಇದನ್ನು ಒಪ್ಪುತ್ತಿಲ್ಲ.

This is an age of specialization and Planning. ಇದಕ್ಕಾಗಿ ಪ್ರತಿಯೊಂದು ಕಡೆಯಲ್ಲೂ ಹೆಚ್ಚು ಹೆಚ್ಚಾಗಿ ಅಗ್ರಿಕಲ್‌ಚರು ಇನ್‌ಸ್ಟಿಟ್ಯೂಷನ್‌ಗಳನ್ನು ಮಾಡಬೇಕು ಮತ್ತು ಯುನಿವರ್ಸಿಟಿ ಮಾಡಿದರೆ ಇದರಲ್ಲಿ ಒಳ್ಳೆಯ ಲ್ಯಾಬರೇಟರಿಗಳು ಹಾಗೂ ಲೈಬ್ರರಿಯನ್ನು ತೆಗೆಯಬೇಕು. ಇದಕ್ಕಾಗಿ ಅಗ್ರಿಕಲ್‌ಚರು ಯುನಿವರ್ಸಿಟಿಯನ್ನು ಮಾಡುವುದು ಅವಶ್ಯಕವಾಗಿದೆ. ಇಧಕ್ಕಾಗಿ ಹೆಚ್ಚು ಹೆಚ್ಚು ಅಗ್ರಿಕಲ್‌ಚರು ಇನ್‌ಸ್ಟಿಟ್ಯೂಟ್‌ಗಳು ಹಾಗೂ ಅಲ್ಲಲ್ಲಿ ಅಗ್ರಿಕಲ್‌ಚರು ತರಬೇತಿ ಕಾಲೇಜುಗಳನ್ನು ತೆರೆಯಬೇಕು ಮತ್ತು ಆಗಾಗ್ಗೆ ಅಗ್ರಿಕಲ್‌ಚರು ಸೆಮಿನಾರ್‌ಗಳನ್ನು ಅಲ್ಲಲ್ಲಿ ಏರ್ಪಾಡು ಮಾಡಿ ಜನರಿಗೆ ವ್ಯವಸಾಯದ ಬಗ್ಗೆ ಸರಿಯಾದ ತಿಳುವಳಿಕೆ ಕೊಡಬೇಕು. ಈಗ ನಮ್ಮ ವ್ಯವಸಾಯದಲ್ಲಿ ಹಿಂದೆ ಇದ್ದ ಒಂದು ರೀತಿಯ ಹಳೇ ಕಂದಾಚಾರದ ಪದ್ಧತಿಯೇ ಇನ್ನೂ ಮುಂದೆ ನಡೆದುಕೊಂಡು ಬರಬಾರದು, ಇನ್ನು ಮುಂದೆ ಇಂತಹ ಕ್ರೂಡ್ ಮೆಥಡ್ಸ್‌ಗಳನ್ನು ಬಿಟ್ಟು, ನೂತನವಾದ ರೀತಿಯಲ್ಲಿ ವ್ಯವಸಾಯ ಪದ್ಧತಿಗಳನ್ನು ಬದಲಾಯಿಸಿ, ಪರದೇಶಗಳಲ್ಲಿ ಅನುಸರಿಸುತ್ತಿರುವ ವೈಜ್ಞಾನಿಕ ಪದ್ಧತಿಗಳನ್ನು ಇಲ್ಲೂ ಅನುಸರಿಸಿಕೊಂಡು ಬರಬೇಕು. ಇದಕ್ಕಾಗಿ ಒಳ್ಳೆಯ ಸುಧಾರಿತವಾದ ಬೀಜಗಳು ಹಾಗೂ ಗೊಬ್ಬರವನ್ನು ಕೊಟ್ಟು, ವ್ಯವಸಾಯದ ಬಗ್ಗೆ ರೀಸರ್ಚ್ ಮಾಡಿ ಸಹಾಯ ಮಾಡಬೇಕಾದರೆ, ಇಲ್ಲಿ ಒಂದು ಅಗ್ರಿಕಲ್‌ಚರು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಬೇಕಾದ ಆಗತ್ಯವಿದೆ. ನಮ್ಮ ಪಂಜಾಬಿನಲ್ಲಿರುವ ಅಗ್ರಿಕಲ್‌ಚರು ಯೂನಿವರ್ಸಿಟಿಯಲ್ಲಿ ಪ್ರೊಫೆಸರಾಗಿರುವ ಶ್ರೀ ರಣದ್ವಾರವರು, ಸಣ್ಣ ಸಣ್ಣ ರೈತರುಗಳನ್ನು ಕೂಡಿಸಿಕೊಂಡು ಕೊಟ್ಟು ವ್ಯವಸಾಯದಲ್ಲಿ ಒಂದು ರೀತಿಯಾದ ರೆವಲ್ಯೂಷನ್ ಮಾಡಿ, ಇಲ್ಲಿ ಹೆಚ್ಚಾಗಿ ಗ್ರೀನ್ ರೆವಲ್ಯೂಷನ್ ಆಗಲು, ಬಹುವಾಗಿ ಶ್ರಮವಹಿಸಿದ್ದಾರೆ, ಇಲ್ಲಿರುವ ಅಗ್ರಿಕಲ್‌ಚರು ಯುನಿವರ್ಸಿಟಿಯವರಿಗೂ ಮತ್ತು ಚಿಕ್ಕ ಚಿಕ್ಕ ರೈತರುಗಳಿಗೂ ಬಹು ನಿಕಟವಾದ ಸಂಬಂಧವಿರಬೇಕು. ಇದಕ್ಕೆ ತಕ್ಕಂತೆ ಇಲ್ಲಿರುವ ಯೂನಿವರ್ಸಿಟಿಗೆ ಸೇರಿದಂತೆ ಅನಿಮಲ್ ಹಸ್‌ಬೆಂಡ್ರಿ, ಫೀಷ್‌ರೀಸ್ (Agriculture, Horticulture) ಹಾಗೂ ಅರಣ್ಯ ಅಭಿವೃದ್ಧಿ ಇವೆಲ್ಲವೂ ತಿಳುವಳಿಕೆ ಕೊಡಲು ಸೇರಿಕೊಂಡಿವೆ. ಇದನ್ನು ಅಭಿವೃದ್ಧಿ ಮಾಡುತ್ತಿದ್ದಾರೆ ಮತ್ತು ಇಲ್ಲಿರುವ ರೈತಾಪಿ ಜನರಿಗೆ ಸರಿಯಾದ ಟೆಕ್ನಿಕಲ್ ಕ್ವಾಲಿಫಿಕೇಷನ್ ಇರುವಂತಹ ತಜ್ಞರೂ ಇಲ್ಲಿ ಇದ್ದಾರೆ, ಈಗೇನೋ ನಮ್ಮ ಭಾಗದ ರೈತರಿಗೆ

ಸಹಾಯ ಮಾಡಬೇಕೆಂದು ಸರಕಾರ ಭೂ ಸುಧಾರಣೆ ತರುತ್ತಿದ್ದಾರೆ. ಇದಕ್ಕೆ ಅನುಕೂಲವಾಗುವಂತೆ ಅಲ್ಲಲ್ಲಿ ಅಗ್ರಿಕಲ್‌ಚರು ಯೂನಿವರ್ಸಿಟಿಗಳನ್ನು ಸ್ಥಾಪನೆ ಮಾಡಿದರೆ, ಇದರಿಂದ ರೈತರಿಗೆ ಹೆಚ್ಚು ಸಹಾಯವಾಗುತ್ತದೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿರುವ ಹಾರ್ಟಿಕಲ್‌ಚರು, ಫ್ರೂಟ್ ಕ್ಯಾನಿಂಗ್, ಅಗ್ರಿಕಲ್‌ಚರಲ್ ಇಂಜಿನೀಯರಿಂಗ್, ಇವುಗಳನ್ನೂ ಅಭಿವೃದ್ಧಿ ಮಾಡಲು ಇಂತಹ ಅಗ್ರಿಕಲ್‌ಚರು ಯೂನಿವರ್ಸಿಟಿಗಳಿಂದ ಸಹಾಯುವಾಗುತ್ತದೆ. ಇದರ ಬಗ್ಗೆ ಕೆಲವರು ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್‌ನವರ ಸಲಹೆಯನ್ನು ಏಕೆ ತೆಗೆದುಕೊಳ್ಳಲಿಲ್ಲ ಎಂದು ಕೆಲವರು ಇಲ್ಲಿ ತಿಳಿಸಿದರು. ಇದರಲ್ಲೇನೂ ಅಂತಹ ಸಲಹೆಗಳನ್ನು ಮಾಡಿಲ್ಲ. ಅಗ್ರಿಕಲ್‌ಚರು ಯೂನಿವರ್ಸಿಟಿ ಮಾಡಲು ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್‌ಚರಲ್ ರೀಸರ್ಚ್ ಹಾಗೂ ಸೆಂಟ್ರಲ್ ಗವರ್ನಮೆಂಟಿನ ಮತ್ತು ನ್ಯಾಷನಲೈಸ್ಡ್ ಬ್ಯಾಂಕುಗಳ ಸಹಾಯವನ್ನು ಪಡೆದು, ಹೆಚ್ಚಿನ ಉತ್ಪಾದನೆ ಮಾಡಬಹುದು, ನಮ್ಮಲ್ಲಿ ಎಲ್ಲರೂ ವ್ಯವಸಾಯ ಮಾಡುವ ರೈತರ ಬಗ್ಗೆ ನೇಗಿಲಯೋಗಿ ಹಾಗೂ ಅನ್ನದಾತಾ ಎಂದು ಬಾಯಿ ತುಂಬಾ ಹೇಳುತ್ತಿದ್ದಾರೆ ಮತ್ತು ಹೊಗಳುತ್ತಿದ್ದಾರೆ ಆದರೆ ಅವರ ಹಿತ ಸಂರಕ್ಷಣೆ ಬಗ್ಗೆ ಹೆಚ್ಚಿನ ಆಸಕ್ತಿ ಮಾತ್ರ ವಹಿಸುತ್ತಿಲ್ಲ ಮತ್ತು ಅಗ್ರಿಕಲ್‌ಚರು ಪ್ರೊಡಕ್ಷನ್ ಇನ್‌ಕ್ರೀಸು ಮಾಡುವುದರ ಬಗ್ಗೆ ಇನ್ನೂ ಹೆಚ್ಚಿನ ಸಹಾಯುಗಳನ್ನು ಮಾಡದೇ ಇರುವುದನ್ನು ನೋಡಿ ನಮಗೆ ತುಂಬಾ ಆಶ್ಚರ್ಯ ವಾಗುತ್ತಿದೆ. ಇನ್ನೂ ಕೂಡ ನಮ್ಮ ವ್ಯವಸಾಯದ ಪದ್ಧತಿಯಲ್ಲಿ ಹಳೇ ಕ್ರೂಡ್ ಪದ್ಧತಿಗಳನ್ನೇ ಅನುಸರಿಸುತ್ತಾ ಬರುತ್ತಿದ್ದೇವೆ. ಪಾಶ್ಚಿಮಾತ್ಯ ದೇಶಗಳಲ್ಲಿರುವಂತೆ ಆಧುನಿಕ ವ್ಯವಸಾಯ ಪದ್ಧತಿಗಳನ್ನು ಹೆಚ್ಚು ಹೆಚ್ಚಾಗಿ ಅನುಸರಿಸುತ್ತಿಲ್ಲ. ಇದರಲ್ಲಿ ಪ್ರೋಚಾನ್‌ಸಲರ್ ಆಗಿ ಶ್ರೀಮಾನ್ ಕೆ. ಹೆಚ್. ಪಾಟೀಲರು ಇರುವುದು ಸರಿಯಲ್ಲ ಎಂದು ಕೆಲವರು ಹೇಳಿದರು. ಇವೊತ್ತೇನೋ ಶ್ರೀ ಕೆ. ಹೆಚ್ ಪಾಟೀಲರು ಮಂತ್ರಿಗಳಾಗಿರಬಹುದು, ಮುಂದೆ ಬೇರೆಯವರು ಬರಬಹುದು. ಯೂನಿವರ್ಸಿಟಿ ಅಟಾನಮಸ್ ಬಾಡಿ ಎಂದು ಇರುವಾಗ ಇದರಲ್ಲಿ ಸರಕಾರದ ಅಡ್ಮಿನಿಸ್ಟ್ರೇಷನ್ ಕಂಟ್ರೋಲ್ ಇರುವುದು ಬೇಡ ಎಂದು ಸಲಹೆ ಮಾಡಿದರು. ಆದರೆ ಈಗಾಗಲೇ ನಮಗೆ ತಿಳಿದಿರುವಂತೆ ಕಾಲೇಜುಗಳಲ್ಲಿ ಕೊಡುತ್ತಿರುವ ವಿದ್ಯಾಭ್ಯಾಸದ ಸ್ಟಾಂಡರ್ಡ್ ಕೂಡ ಬಹು ಕಮ್ಮಿ ಇದೆ ಎಂದು ಕೇಳುತ್ತಿದ್ದೇವೆ. ಇದಕ್ಕಾಗಿ ಇಂದು ನಮ್ಮ ಎಜುಕೇಷನ್ ಲೆವಲ್, ನ್ಯಾಷನಲ್ ಲೆವಲ್‌ಗೆ ಬರುತ್ತಿಲ್ಲ. ಮತ್ತು ಆಲ್ ಇಂಡಿಯಾದಲ್ಲಿ ನಮ್ಮ ಡಿಗ್ರಿಗಳನ್ನು ರೆಕಗ್ನೈಸು ಸಹ ಮಾಡುತ್ತಿಲ್ಲ. ಈ ದೃಷ್ಟಿಯಿಂದ ಸರಕಾರದ ಒಂದು ಸ್ವಲ್ಪ ಕಂಟ್ರೋಲ್ ಇರಬೇಕೆಂದು ಇದರಲ್ಲಿ ಮಾಡಿರುವುದು ಸರಿಯಾಗಿದೆ. ಇಂದು ಶ್ರೀ ಪಾಟೀಲ್‌ರವರು ಪ್ರೋಚಾನ್‌ಸಲರ್ ಆಗಿರಬಹುದು ನಾಳೆ ಬೇರೆಯವರು ಬರಬಹುದು. ಇದರಲ್ಲಿ ಎಫಿಷೆನ್ಸಿ ಚೆನ್ನಾಗಿರಬೇಕೆಂದು ಸರಕಾರಕ್ಕೆ ಸ್ವಲ್ಪ ಹಿಡಿತ ಇಟ್ಟುಕೊಂಡಿದ್ದಾರೆ. ಇದು ಇರುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಇದರ ಜೊತೆಗೆ ನಾಲ್ಕಾರು

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಸೆಕ್ಷನ್‌ಗಳಲ್ಲಿ ಅಂದರೆ ಸೆಕ್ಷನ್ ಐದರಲ್ಲಿ ಅಡ್ಮಿನಿಸ್ಟ್ರೇಷನ್ ಬಗ್ಗೆ, ಅಡ್ಮಿಷನ್ ಬಗ್ಗೆ ಪವರುಗಳ ಬಗ್ಗೆ, ಕೆಲವಾರು ವಿವರಗಳನ್ನು ತಿಳಿಸಿದ್ದಾರೆ. ಪಂಜಾಬಿನಲ್ಲಿರುವಂತೆ ಇಲ್ಲಿಯೂ ಸ್ಮಾಲ್ ಫಾರ್ಮರ್ಸ್ ಅಸೋಸಿಯೇಷನ್ ಅವರ ಕಾಂಟ್ರಿಬ್ಯೂಷನ್‌ಗಳನ್ನು ಹೆಚ್ಚಾಗಿ ಪಡೆಯಬೇಕು. ನೂರಕ್ಕೆ ಎಂಬತ್ತು ಭಾಗ ವ್ಯವಸಾಯದಲ್ಲೇ ನಮ್ಮ ಜನ ಜೀವನ ಮಾಡುತ್ತಿರುವಾಗ ಇಂತಹ ಒಂದು ಅಗ್ರಿಕಲ್ಚರು ಯೂನಿವರ್ಸಿಟಿ ಮಾಡುವುದರಿಂದ ಈ ಚಿಕ್ಕ ರೈತರುಗಳಿಗೆ ಬಹಳ ಸಹಾಯವಾಗುತ್ತದೆ, ಇವರು ಅನುಸರಿಸುವ ಪದ್ಧತಿಗಳಿಂದ ಯಾವ ರೀತಿ ಉತ್ಪತ್ತಿ ಬರುತ್ತದೆ ಮತ್ತು ಯಾವ ರೀತಿ ಹೆಚ್ಚು ಬೆಳೆ ಮಾಡಲು ಸಹಾಯ ಮಾಡಬೇಕು ಎನ್ನುವುದರ ಬಗ್ಗೆ ಇಂತಹ ಒಂದು ಯೂನಿವರ್ಸಿಟಿ ಮಾಡಿದರೆ ರೈತಾಪಿ ಜನಕ್ಕೆ ಬಹಳ ಸಹಾಯವಾಗುತ್ತದೆ. ಇದಕ್ಕಾಗಿ ಈಗ ಭೂಸುಧಾರಣೆ ತರುತ್ತಿರುವುದರಿಂದ ರೈತರಿಗೆ ಹೆಚ್ಚು ಅನುಕೂಲವಾಗುವಂತೆ ಇಲ್ಲಿ ಒಂದು ಅಗ್ರಿಕಲ್‌ಚರು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಬೇಕು ಎಂದು ಇಲ್ಲಿ ಸಲಹೆ ಮಾಡುತ್ತೇನೆ.

ಯಾರು ಈ ದೇಶಕ್ಕಾಗಿ ದುಡಿದಂಥ ಪೊಲಿಟಿಕಲ್ ಸಫರರ್ಸ್ ಇದ್ದಾರೆ ಅವರನ್ನು ಸಹ ಇದರಲ್ಲಿ ಸೇರಿಸಬೇಕು, ಮೆಂಬರ್‌ಷಿಪ್ ಕೊಡಬೇಕು ಎಂದು ಹೇಳುತ್ತೇನೆ. ಇಂದು ದೇಶದಲ್ಲಿರುವ ಇತರೇ ವಿಶ್ವವಿದ್ಯಾನಿಲಯದವರು ತಯಾರು ಮಾಡುವ ಬಿ. ಎ., ಬಿ. ಎಸ್. ಸಿ. ಪದವೀಧರರು ಏನಿದ್ದಾರೆ, ಅವರಿಂದ ದೇಶಕ್ಕೆ ಹೆಚ್ಚಿನ ಅನುಕೂಲವೇನೂ ಆಗುವುದಿಲ್ಲ. ಆದರೆ ವ್ಯವಸಾಯ ವಿಶ್ವವಿದ್ಯಾನಿಲಯದವರು ತಯಾರು ಮಾಡುವ ಪದವೀಧರರಿಂದ ದೇಶಕ್ಕೆ ನಾನಾ ರೀತಿಯಿಂದ ಅನುಕೂಲವಿದೆ. ಈ ವ್ಯವಸಾಯ ವಿಶ್ವವಿದ್ಯಾನಿಲಯದ ಅಕ್ಯಾಡಮಿಕ್ ಕೌನ್ಸಿಲ್‌ನಲ್ಲಿ ವಿಧಾನಸಭೆಯಿಂದ 3 ಜನರು ಮತ್ತು ವಿಧಾನಪರಿಷತ್ತಿನಿಂದ ಒಬ್ಬರು ಭಾಗವಹಿಸುವುದಕ್ಕೆ ಅವಕಾಶ ಕಲ್ಪಿಸಿದ್ದೀರಿ. ಈ ಸಂಖ್ಯೆಯನ್ನು ಇನ್ನೂ ಹೆಚ್ಚು ಮಾಡಿದರೆ ತಪ್ಪಾಗಲಾರದು. 19 ಜಿಲ್ಲೆಗಳಿಗೆ ಪ್ರಾತಿನಿಧ್ಯವಿರುವಂತೆ ಜಿಲ್ಲೆಗೆ ಒಬ್ಬರಂತೆ ಇದ್ದರೆ ಇನ್ನೂ ಒಳ್ಳೆಯದು. ಏಕೆಂದರೆ ನಮ್ಮದು ವಿಶಾಲವಾದ ರಾಜ್ಯ. 3 ಕೋಟಿ ಪ್ರಜಾಸಂಖ್ಯೆ ಇದೆ. ಅದ್ದರಿಂದ ಜಿಲ್ಲೆಗೆ ಒಬ್ಬರಿಗೆ ಪ್ರಾತಿನಿಧ್ಯ ಕೊಟ್ಟರೆ, ಅವರುಗಳು ತಮ್ಮ ಜಿಲ್ಲೆಯ, ತಮ್ಮ ತಾಲ್ಲೂಕ್‌ಗಳ ವಿಷಯಗಳನ್ನು ಹೇಳಿ ಬೇಕಾದ ಅನುಕೂಲಗಳನ್ನು ಪಡೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಡಾ: ಕೋಲ್‌ಮನ್ ಅವರನ್ನು ಅಗ್ರಿಕಲ್ಚರಲ್ ಪಿತಾಮಹ ಎಂದು ಹೇಳಬಹುದು. ಇವರು ಸಹ ಒಂದು ವರದಿ ಕೊಟ್ಟಿದ್ದಾರೆ, ಅದೇ ರೀತಿ ಟಿ. ಜಿ. ರಾಮಯ್ಯರ್ ಎಂಬುವರು ಸಹ ಒಂದು ವರದಿ ಕೊಟ್ಟಿದ್ದಾರೆ. ಮೊದಲು ಹೆಬ್ಬಾಳದಲ್ಲಿ ಅಗ್ರಿಕಲ್ಚರಲ್ ಸ್ಕೂಲ್ ಇತ್ತು. ನಂತರ ಅದು ಅಗ್ರಿಕಲ್ಚರಲ್ ಸೈನ್ಸ್ ಕಾಲೇಜಾಯಿತು. ಈಗ ಅದು ಒಂದು ದೊಡ್ಡ ವಿಶ್ವವಿದ್ಯಾನಿಲಯವಾಗಿದೆ.

The USAID Team Report of 1962, which led to the establishment of the present Agricultural University at Hebbal, had recommended establishing two Agricultural Universities simultaneously, one at Hebbal and another at Dharwar, considering the needs of the State.

> "Still a further alternative would be the development simultaneously of two Rural Universities one at Hebbal and one at Dharwar. The last alternativs is attractice in that it would satisfy several immediate objectives."

ಇದನ್ನು ನಾನು ಏತಕ್ಕೆ ಹೇಳಿದೆನೆಂದರೆ, ವ್ಯವಸಾಯ ವಿಶ್ವವಿದ್ಯಾನಿಲಯಗಳ ಅವಶ್ಯಕತೆ ಎಷ್ಟಿದೆ ಎಂಬುದಕ್ಕೆ ಹೇಳಿದೆ. ಇಂದು ವ್ಯವಸಾಯ ಪದವೀಧರರು ಕೆಲಸವಿಲ್ಲದೆ ಇದ್ದಾರೆ. ಅವರಿಗೆ ಕೆಲಸ ಕೊಡುವುದಕ್ಕೋಸ್ಕರ ಈ ವಿಶ್ವವಿದ್ಯಾನಿಲಯದ ಅವಶ್ಯಕತೆ ಮತ್ತು ಪ್ರಾಮುಖ್ಯತೆ ಇದೆ. ಅಂಧರೆ ಫ್ರೂಟ್ ಕ್ಯಾನಿಂಗ್‌ನಲ್ಲಿ, ಆರ್ಟಿಕಲ್ಚರಲ್‌ನಲ್ಲಿ, ಕುರಿ ಮತ್ತು ಕೋಳಿ ಸಾಕಾಣಿಕೆ ವಿಚಾರದಲ್ಲಿ, ಮೀನು ಸಾಕಾಣಿಕೆ ವಿಚಾರದಲ್ಲಿ, ಡೈರಿಯಿಂಗ್‌ನಲ್ಲಿ ರೀಸರ್ಚ್ ಮಾಡಲು ಕೆಲಸ ಕೊಡುವುದಕ್ಕೆ ಸಹಾಯಕವಾಗುತ್ತದೆ. ಆದಕಾರಣ ನಮ್ಮ ಅರಣ್ಯ ಮತ್ತು ವ್ಯವಸಾಯ ಮಂತ್ರಿಗಳು ತಂದಿರತಕ್ಕ ಈ ಬಿಲ್ ಬಹಳ ಸ್ವಾಗತಾರ್ಹವಾದುದಾಗಿದೆ. ಇದಕ್ಕೆ ಎಲ್ಲರೂ ಬೆಂಬಲ ಕೊಡುತ್ತಾರೆಂದು ನಾನು ನಂಬಿದ್ದೇನೆ. ಪ್ರತಿಯೊಬ್ಬರೂ ಇದಕ್ಕೆ ಉತ್ತೇಜನ ಕೊಡುವುದರ ಮೂಲಕ ನಮ್ಮ ಮೈಸೂರು ಸಂಸ್ಥಾನ ವ್ಯವಸಾಯ ಕ್ಷೇತ್ರದಲ್ಲಿ ಹರಿಯಾಣ ಮತ್ತು ಪಂಜಾಬಿನ ರೀತಿಯಲ್ಲಿ ಹಸಿರು ಕ್ರಾಂತಿಯನ್ನು ಉಂಟುಮಾಡುವುದಕ್ಕೆ ಸಹಾಯ ಮಾಡಬೇಕು ಎಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್, (ಹೊಸನಗರ) : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಇವೊತ್ತು ಮಾನ್ಯ ಕೃಷಿಮಂತ್ರಿಯವರು ತಂದಿರತಕ್ಕಂಥ ವ್ಯವಸಾಯ ವಿಶ್ವವಿದ್ಯಾನಿಲಯದ ಬಿಲ್‌ನ ಬಗ್ಗೆ ನಾನು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಡಾಕ್ಟರ್ ಕೊಠಾರಿಯವರು ಏನು ಒಂದು ಕೂಲಂಕುಶವಾದ ವರದಿಯನ್ನು ಈ ವಿಚಾರದಲ್ಲಿ ಕೊಟ್ಟಿದ್ದರೋ, ಅದರ ಒಂದು ಆಧಾರದ ಮೇಲೆ ಈ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಬೇಕಾದ ಅವಶ್ಯಕತೆಯನ್ನು ನಾವು ಕಂಡುಕೊಂಡಿದ್ದೇವೆ. ಈ ಕೆಲಸ ಬಹಳ ಹಿಂದೆಯೇ ಆಗಬೇಕಾಗಿತ್ತು. ಇವೊತ್ತಾದರೂ ಇದನ್ನು ನಮ್ಮ ಸರ್ಕಾರ ಮಾಡುತ್ತಿರುವುದನ್ನು ನೋಡಿದರೆ, ಇದು ಒಂದು ಹೆಮ್ಮೆಯ ವಿಚಾರ ಎಂದು ಹೇಳಬಹುದು. ಇಂತಹ ಒಂದು ಮಸೂದೆ

(ಶ್ರೀ ಎನ್. ಎಂ. ಶೀರನಾಳಿ ಚಂದ್ರಶೇಖರ್)

ಬಂದಾಗ ಕಪ್ಪು ಮಸಿ ಹಿಡಿದು ಮಾತನಾಡುವ ಪ್ರವೃತ್ತಿ ವಿರೋಧ ಪಕ್ಷದವರಲ್ಲಿ ಬಂದಿದೆ. ಈ ಬಿಲ್‌ನಲ್ಲಿ ಕೆಲವಾರು ಕ್ಲಾಸಸ್‌ಗಳನ್ನು ಸೇರಿಸಿರುವುದು ಒಳ್ಳೆಯ ಉದ್ದೇಶದಿಂದ ಕೂಡಿದೆಯೋ ಅಥವಾ ಇಲ್ಲವೋ ಎಂಬುದನ್ನು ಯೋಚನೆ ಮಾಡದೆ, ಅದಕ್ಕೆ ಒಂದು ಲೇಬಲ್ ಹಚ್ಚಿ, ಒಂದು ಬಣ್ಣ ಹಚ್ಚಿ ಮುಖಕ್ಕೆ ಬಳಿಯುವ ಕೆಲಸ ವಿರೋಧ ಪಕ್ಷದವರಿಂದ ನಡೆದಿದೆ. ಪ್ರೊಛಾನ್ಸಲರ್ ಎಂಬ ಒಂದು ಕ್ಲಾಸನ್ನು ಇದರಲ್ಲಿ ಇಟ್ಟಿದ್ದಾರೆ, ಅದನ್ನೇ ಹಿಡಿದುಕೊಂಡು, ಇಡೀ ಬಿಲ್‌ನ ಮೂಲ ಉದ್ದೇಶವನ್ನು ಮರೆತು ಮಾತನಾಡುವ ಪ್ರವೃತ್ತಿಯನ್ನು ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಬೆಳೆಸಿಕೊಂಡಿದ್ದಾರೆ. ಇದು ನನಗಾದರೂ ಸಹ ಅರ್ಥವಾಗುವುದಿಲ್ಲ. ಈ ಪ್ರೊಛಾನ್ಸಲರ್ ಹುದ್ದೆ ಶ್ರೀಮಾನ್ ಕೆ. ಎಚ್. ಪಾಟೀಲರಿಗೆ ಖಾಯಂ ಆದ ಹುದ್ದೆಯೇನು ? ಅವರೇನು ವ್ಯವಸಾಯ ಮಂತ್ರಿಗಳಾಗಿ ಅಚಂದ್ರಾರ್ಕರಾಗಿ ಇರುತ್ತಾರೆಯೇನು ? ಯಾರು ವ್ಯವಸಾಯ ಮಂತ್ರಿಗಳಾಗಿರುತ್ತಾರೋ ಅವರು ಪ್ರೊಛಾನ್ಸಲರ್ ಆಗಿ ಇರುತ್ತಾರೆ. ಈ ಒಂದು ಹುದ್ದೆಯೇ ಬೇಕಾಗಿಲ್ಲ ಎಂಬ ವಾದವನ್ನು ನಮ್ಮ ಎದುರಿಗೆ ವಿರೋಧ ಪಕ್ಷದವರು ಇಟ್ಟಿದ್ದಾರೆ. ನಾವು ಒಂದು ಕಡೆ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತೇವೆ ಮತ್ತು ಪ್ರಜೆಗಳಿಂದ ಆಯ್ಕೆಯಾಗಿರುವಂತಹ ಈ ಸದನಕ್ಕೆ ವಿಶ್ವವಿದ್ಯಾನಿಲಯದ ಆಗುಹೋಗುಗಳ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಹಕ್ಕಿರಬೇಕೆಂದು ಹೇಳುತ್ತೇವೆ. ಅಂಥಾದ್ದಕ್ಕೆ ಇಲ್ಲಿ ಅವಕಾಶ ಮಾಡಿಕೊಟ್ಟಾಗ ಅದನ್ನು ವಿರೋಧ ಪಕ್ಷದವರು ವಿರೋಧ ಮಾಡುವುದೆಂದರೆ, ಅದು ವಿರೋಧಾಭಾಸವಲ್ಲವೇ ? ಒಂದು ಪಕ್ಷ ಆ ಒಂದು ಕ್ಲಾಸನ್ನು ತೆಗೆದು ಹಾಕಿಬಿಟ್ಟರೆ ಈ ಸದನಕ್ಕೆ ಆ ವಿಶ್ವವಿದ್ಯಾನಿಲಯದ ಮೇಲೆ ಏನು ಲಗಾಮು ಇರುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈ ವಿಶ್ವವಿದ್ಯಾನಿಲಯದಲ್ಲಿ ಏನಾದರೂ ಅವ್ಯವಹಾರ ನಡೆದರೆ, ಆ ಬಗ್ಗೆ ಜನತೆಯಿಂದ ಆಯ್ಕೆಯಾಗಿರುವಂತಹ ಜನ ನಾಯಕರು ಜನತೆಗೆ ತಕ್ಕ ಉತ್ತರ ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ, ಈ ವಿಶ್ವವಿದ್ಯಾನಿಲಯದ ಏಳಿಗೆಯ ಬಗ್ಗೆಯಾಗಲೀ, ಅಥವಾ ಏಳಿಗೆ ವಿಚಾರದಲ್ಲಿ ಕುಂಠಿತವಾಗುವ ಪರಿಸ್ಥಿತಿ ಇದ್ದರೆ, ಇಲ್ಲವೇ ತೊಂದರೆ ತಾಪತ್ರಯ ಇದ್ದರೆ, ಅದನ್ನೆಲ್ಲಾ ಆಗಾಗ್ಗೆ ಈ ಸದನಕ್ಕೆ ತಿಳಿಸಬೇಕಾಗುತ್ತದೆ. ಈ ರೀತಿ ತಿಳಿಸಬೇಕಾದರೆ ಪ್ರೊಛಾನ್ಸಲರ್ ಹುದ್ದೆ ಇರಬೇಕಾಗುತ್ತದೆ. ಈ ಒಂದು ಹುದ್ದೆ ಇಲ್ಲದೆ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಾದರೆ, ಈ ಸದನಕ್ಕೆ ಯಾವ ರೀತಿಯ ಸಮಾಚಾರಗಳು ತಿಳಿಯುವುದಿಲ್ಲ, ಮತ್ತು ಮೇಲ್ಮಟ್ಟದಲ್ಲಿ ಅಧಿಕಾರ ಚಲಾಯಿಸುವುದಕ್ಕೆ, ವಿಚಾರ ವಿನಿಮಯ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಈ ಒಂದು ಅಧಿಕಾರ ಈ ಸದನಕ್ಕೆ ಬರಬೇಕಾದರೆ ಪ್ರೊಛಾನ್ಸಲರ್ ಹುದ್ದೆ ಇರಬೇಕಾಗುತ್ತದೆಂದು ನಾನು ಭಾವಿಸುತ್ತೇನೆ. ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ

ನೋಡಿಕೊಂಡ ಎಂಬ ಗಾದೆ ಇದೆ. ಅದರಂತೆ ಪೂರ್ವಗ್ರಹಪೀಡಿತರಾಗಿ ಯಾವುದೋ ಒಂದು ವಿಚಾರವನ್ನು ಯೋಚನೆ ಮಾಡುತ್ತಾ ಹೋದರೆ ಒಳ್ಳೆಯ ದಾವುದೂ ಗಮನಕ್ಕೆ ಬರುವುದಿಲ್ಲ; ಕೇವಲ ಕೆಟ್ಟದ್ದು ಮಾತ್ರ ಗಮನಕ್ಕೆ ಬರುತ್ತದೆ. ಆದಕಾರಣ ಯಾರೇ ಆಗಲಿ, ತೆರೆದ ಮನಸ್ಸಿನಿಂದ ಈ ದೇಶಕ್ಕೆ ಒಳ್ಳೆಯ ಕೆಲಸ ಮಾಡಬೇಕು ಎನ್ನುವ ಪ್ರವೃತ್ತಿಯನ್ನು ಬೆಳೆಸಿಕೊಂಡರೆ, ಆಗ ಅದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ ಅಲ್ಲದೆ ಮುಂದಿನ ಪೀಳಿಗೆಗೂ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಇವೊತ್ತು ಈ ದೇಶದ ವ್ಯವಸಾಯ ಪರಿಸ್ಥಿತಿಯನ್ನು ಯೋಚನೆ ಮಾಡುವುದಾದರೆ, ವ್ಯವಸಾಯ ಅನ್ನತಕ್ಕಂಥದ್ದು ಈ ದೇಶದಲ್ಲಿ ಒಂದು ಕಾಲದಲ್ಲಿ ಇಡೀ ಪ್ರಪಂಚದಲ್ಲಿಯೇ ಅತ್ಯಂತ ಶ್ರೇಷ್ಠವಾದ ಬತ್ತವನ್ನು ಬೆಳೆಯುವ ಕಣಜ ಎಂದು ಹೇಳಿಸಿಕೊಂಡಿತ್ತು. ಆ ಒಂದು ಹೆಸರು ಹೋಗಿ, ಇಂದು ಭಿಕ್ಷಾಪಾತ್ರೆ ಹಿಡಿದುಕೊಂಡು ನಿಂತಿರುವ ದೇಶವಾಗಿದೆ. ಇದಕ್ಕೆ ಕಾರಣ ಹಳೆಯ ಕಾಲದ ವ್ಯವಸಾಯ ಪದ್ಧತಿಯನ್ನೇ ಅನುಜಾನವಾಗಿ ಬೆಳೆಸಿಕೊಂಡು ಬಂದು, ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡದಿರುವುದು. ಇದೇ ದೃಷ್ಟಿಯಿಂದ ವ್ಯವಸಾಯದ ಪ್ರಗತಿ ಕುಂಠಿತವಾಗಿದೆ ಎಂದು ಪರಿಣತರು ಒಪ್ಪಿಕೊಂಡಿದ್ದಾರೆ. ಇವೊತ್ತಿಗೂ ಕೂಡ ಹಳ್ಳಿಗಾಡಿಗೆ ಹೋದರೆ, ರೈತರಿಗೆ ಸೀಮೆಗೊಬ್ಬರ ಕೊಡುತ್ತೇವೆ, ಉಪಯೋಗ ಮಾಡಿ ಎಂದು ಹೇಳಿದರೆ, ಅದನ್ನು ಉಪಯೋಗ ಮಾಡಿದರೆ ಕಳೆ ಬರುತ್ತದೆ, ರೋಗ ಬರುತ್ತದೆ ಬೆಂಕಿರೋಗ ಬರುತ್ತದೆ, ದೆವ್ವ ಬರುತ್ತದೆ ಎಂದು ಹೇಳುವ ರೈತರು ಇಂದಿಗೂ ಸಹ ಇದ್ದಾರೆ. ಇಂತಹ ಒಂದು ಅಜ್ಞಾನ, ಅಂಧಕಾರ ರೈತರಲ್ಲಿ ಇಂದಿಗೂ ಸಹ ಇರುವುದಕ್ಕೆ ಕಾರಣವೆಂದರೆ, ವ್ಯವಸಾಯ ವಿಷಯದಲ್ಲಿ ಅಧ್ಯಯನ ಮಾಡದಿರುವುದು ಕಾರಣ ಎಂಬುದನ್ನು ಎಲ್ಲರೂ ಒಪ್ಪಬೇಕಾಗುತ್ತದೆ

ಇಂಥಾ ವಿಶ್ವವಿದ್ಯಾನಿಲಯಗಳ ಆವಶ್ಯಕತೆ ಬಹಳ ಹೆಚ್ಚಿದೆ. ಯಾವ ಗುರುತರವಾದ ಉದ್ದೇಶವನ್ನು ಇಟ್ಟುಕೊಂಡು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತಾರೆಯೋ ಆ ಉದ್ದೇಶ ಸಫಲವಾಗಲೇಬೇಕಾಗುತ್ತದೆ. ಕೇವಲ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿ ಅಲ್ಲಿ ಡಿಗ್ರಿ ಹೋಲ್ಡರುಗಳನ್ನು ಮ್ಯಾನುಫ್ಯಾಕ್ಚರ್ ಮಾಡತಕ್ಕ ಒಂದು ಕಾರ್ಖಾನೆಯನ್ನಾಗಿ ಪರಿವರ್ತನೆ ಮಾಡಿಕೊಂಡು ಸಾವಿರಗಟ್ಟಲೆ ಅಗ್ರಿಕಲ್‌ಚರಲ್ ನಿರುದ್ಯೋಗಿ ಪದವೀಧರರನ್ನು ನಿರ್ಮಾಣ ಮಾಡಿ ನಾಳೆ ಅವರು ಕೆಲಸಕ್ಕೆ ಅರ್ಜಿ ಹಾಕುವ ಜನಗಳನ್ನು ತಯಾರು ಮಾಡುವುದಾದರೆ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದ ಉದ್ದೇಶ ಸಫಲವಾಗುವುದಿಲ್ಲ. ಈ ಬಿಲ್ಲಿನ ಪ್ರಿಯಾಂಬಲ್‌ನಲ್ಲಿ ಏನು ಹೇಳಿದ್ದಾರೆ ಆ ಉದ್ದೇಶ ಸಫಲವಾದರೆ ನಿಜವಾಗಿಯೂ ವಿಶ್ವವಿದ್ಯಾನಿಲಯದ ಸ್ಥಾಪನೆ ಸಾರ್ಥಕವಾಗುತ್ತದೆ. ಓದಬೇಕು, ಜ್ಞಾನಾರ್ಜನೆ ಮಾಡಬೇಕು. ಜ್ಞಾನಾರ್ಜನೆಯನ್ನು ಮಾಡಿದ ನಂತರ ಹೆಚ್ಚಿನ ಜನ ತಮ್ಮ ಕಾಲಮೇಲೆ ನಿಂತುಕೊಂಡು ಜ್ಞಾನವನ್ನು ಉಪ

(ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್)

ಯೋಗ ಮಾಡಬೇಕು ; ಎನ್ನುವ ಪ್ರವೃತ್ತಿ ಕಡಿಮೆಯಾಗಿದೆ. ಓದಿದ ಮೇಲೆ ಯಾವುದಾದರೂ ಒಂದು ಕಾರಕೂನನ ಕೆಲಸವೋ, ಡಿಮಾನ್‌ಸ್ಟ್ರೇಟರೋ, ಅಥವಾ ರೀಡರ್ ಕೆಲಸ ಮಾಡುವುದಕ್ಕೋಸ್ಕರ ಓದುವ ಪ್ರವೃತ್ತಿ ಬೆಳೆದಿದೆ. ವಿದ್ಯಾರ್ಜನೆ ಮಾಡಿ ತನ್ನ ಕಾಲಮೇಲೆ ನಿಂತು ಸಮಾಜಕ್ಕೂ ಉಪಕಾರ ಮಾಡಿ ತನ್ನ ಏಳಿಗೆ ಯನ್ನು ಮಾಡಿಕೊಳ್ಳಬೇಕು ಎನ್ನು ಮನೋಭಾವನೆ ಬೆಳೆದಿಲ್ಲ. ಆ ರೀತಿ ಆಗುವುದಾದರೆ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದ ಉದ್ದೇಶ ಸಫಲ ವಾಗುವುದಿಲ್ಲ ಎಂದು ಹೇಳುವವರ ಬಗ್ಗೆ ನಾನೂ ಒಬ್ಬ. ಅದಕ್ಕೆ ಕಾರಣ ಇಷ್ಟೆ. ಇವೊತ್ತು ಬೇರೆ ವಿಶ್ವವಿದ್ಯಾನಿಲಯಗಳು ಏನಾಗಿವೆ ಎಂದರೆ ತನ್ನ ಹಣೆಯ ಮೇಲೆ ಹಚ್ಚಿಕೊಳ್ಳತಕ್ಕ ಡಿಗ್ರಿ ಹೋಲ್ಡರುಗಳನ್ನು ತಯಾರು ಮಾಡತಕ್ಕ ವಿಶ್ವವಿದ್ಯಾ ನಿಲಯಗಳಾಗಿವೆ. ಯಾವುದೇ ಒಂದು ಕಾರಕೂನನ ಕೆಲಸಕ್ಕೂ, ಉಪಾದ್ಯಾಯರ ಕೆಲಸಕ್ಕೋ ಬಿ. ಎ, ಬಿ. ಎಸ್. ಸಿ. ಮುಂತಾದ ಡಿಗ್ರಿ ಹೋಲ್ಡರುಗಳನ್ನು ತಯಾರು ಮಾಡತಕ್ಕ ವಿಶ್ವವಿದ್ಯಾನಿಲಯಗಳು ಬಹಳ ಇವೆ. ಆ ರೀತಿ ಆದರೆ ಉದ್ದೇಶ ಸಫಲವಾಗುವುದಿಲ್ಲ. ಇವೊತ್ತು ಅಗ್ರಿಕಲ್‌ಚರಲ್ ಕಾಲೇಜಿನಲ್ಲಿ ಬಿ. ಎಸ್. ಸಿ. ಎ. ಜಿ. ಡಿಗ್ರಿ ಪಡೆದುಕೊಂಡು ಬರುತ್ತಾನೆ, ಅವನು ಪಾಸು ಮಾಡುವುದಕ್ಕೆ ಎಷ್ಟು ಬೇಕೊ ಅಷ್ಟು ಮಾತ್ರ ಓದುತ್ತಾನೆ. ಅವರು ಪರ್ಮಿಟೇ ಷನ್ ಅಂಡ್ ಕಾಂಬಿನೇಷನ್ ಮೇಲೆ ಹೋಗುತ್ತಾರೆ. ಅದು ಅವರಿಗೆ ಕರತಲಾ ಮಲಕವಾಗಿದೆ. ಪ್ರಶ್ನೆಗಳನ್ನು ಊಹೆ ಮಾಡಿ ಇಂಥಾ ಪ್ರಶ್ನೆ ಬರುತ್ತದೆ, ಇಂಥಾ ಪ್ರಶ್ನೆ ಬರುವುದಿಲ್ಲ ಎಂದು ಬುದ್ಧಿವಂತಿಕೆಯಿಂದ ಪಾಸು ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟು ಓದಿ ಪಾಸು ಮಾಡಿರುತ್ತಾರೆ. ಆದ್ದರಿಂದ ಈ ವಿಶ್ವವಿದ್ಯಾ ನಿಲಯದಲ್ಲಿ ಅವರು ವ್ಯವಸಾಯದ ಬಗ್ಗೆಯಾಗಲೀ, ಅರಣ್ಯದ ಬಗ್ಗೆ ಆಗಲೀ ಪಶು ಸಂಗೋಪನಾ ವಿಚಾರವಾಗಲೀ, ಮೀನುಗಾರಿಕೆಯ ವಿಷಯವಾಗಲೀ ತಮಗೆ ಎರಡು ಅಕ್ಷರಗಳನ್ನು ಸೇರಿಸಿಕೊಳ್ಳುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಪಾಸು ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಓದಿ ಪಾಸು ಮಾಡಿರುತ್ತಾರೆ. ಆ ರೀತಿ ಆಗುವುದಾದರೆ ಇಂಥಾ ವಿಶ್ವವಿದ್ಯಾನಿಲಯಗಳಿಂದ ಯಾವ ಸಾರ್ಥಕ ವಾಗುವುದಿಲ್ಲ. ಕೇವಲ ದೇಶದ ಹಣ ಖರ್ಚಾಗುತ್ತದೆ ಅದರಿಂದ ಯಾವ ಉಪ ಯೋಗವೂ ಆಗುವುದಿಲ್ಲ ಈ ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಪುಸ್ತಕದ ಬದನೇಕಾಯಿಂದ ಉಪಯೋಗವಾಗುವುದಿಲ್ಲ. ಆದ್ದರಿಂದ ವಿದ್ಯಾರ್ಥಿ ಗಳಿಗೆ ಪ್ರಯೋಗಗಳ ಮುಖಾಂತರ ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಬೇಕು. ಮತ್ತು ಪ್ರಯೋಗಕ್ಕೆ ಹೆಚ್ಚಿನ ಅಂಕಗಳನ್ನು ಇಡಬೇಕು. ಇಲ್ಲದೇ ಹೋದರೆ ಈ ವಿಶ್ವವಿದ್ಯಾನಿಲಯದ ಸ್ಥಾಪನೆಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್:— ಈಗ ನಾವು ತಮಗೆ ಕೊಟ್ಟಿರತಕ್ಕ ವರ ದಿಯ 11ನೇ ಪುಟವನ್ನು ನೋಡಿದರೆ ಅದರಲ್ಲಿ ಈ ವಿಶ್ವವಿದ್ಯಾನಿಲಯದಲ್ಲಿ ಪ್ರಾಕ್ಟಿ

ಕಲ್ ಬಗ್ಗೆ ಕೊಟ್ಟಿರತಕ್ಕ ಸ್ಪಷ್ಟವಾದ ಅಭಿಪ್ರಾಯ ತಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ:— ನಾನು ಈ ವಿಷಯವನ್ನು ಮೊದಲೇ ಪ್ರಸ್ತಾಪ ಮಾಡಿದ್ದೇನೆ. ಈ ವಿದ್ಯಾಭ್ಯಾಸವನ್ನು ಟೆಕ್ನಿಕಲ್ ಕೋರ್ಸ್ ಎಂದು ಕರೆಯುವುದರಿಂದ ಇಂಥಾ ವಿದ್ಯಾಭ್ಯಾಸಕ್ಕೆ ಪ್ರಯೋಗಗಳಿಗೆ ಹೆಚ್ಚಿನ ಮಾನ್ಯತೆ ಕೊಡಬೇಕಾಗುತ್ತದೆ. ಇದರ ಜೊತೆಗೆ ಪ್ರಯೋಗಗಳಿಗೆ ಹೆಚ್ಚಿನ ಅಂಕಗಳನ್ನು ಇಡಬೇಕಾಗುತ್ತದೆ. ಅವನು ಅಗ್ರಿಕಲಚರಲ್ ಗ್ರ್ಯಾಜುಯೇಟ್ ಆಗಿ ಬಂದ ಮೇಲೆ ಅವನಿಂದ ಸಮಾಜ ಏನು ನಿರೀಕ್ಷಣೆ ಮಾಡುತ್ತಾರೆ ಅದನ್ನು ಅವನು ಸಮಾಜಕ್ಕೆ ಕೊಡುವಂತಹ ಒಂದು ಪ್ರಯತ್ನವನ್ನು ಮಾಡಬೇಕು. ಈಗ ರೈತ ತನ್ನ ಮಗನನ್ನು ಅಗ್ರಿಕಲಚರಲ್ ಕಾಲೇಜಿಗೆ ಕಳುಹಿಸಿ ಅವನು ಅಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಪದವೀಧರನಾಗಿ ಬಂದ ಮೇಲೆ ತನ್ನ ತಂದೆಯಾದ ರೈತನಿಗೆ ವ ವಸಾಯದ ಕಸುಬಿನಲ್ಲಿ ನೆರವಾಗಬೇಕು. ಅವನು ಆ ರೀತಿ ವ್ಯವಸಾಯದಲ್ಲಿ ಕಸುಬಿನಲ್ಲಿ ತನ್ನ ತಂದೆಗೆ ಹಾಗೂ ಸಮಾಜಕ್ಕೆ ನೆರವಾಗದೆ ಟೈಟ್‌ಪ್ಯಾಂಟ್ ಪ್ಯಾಂಟ್ ಹಾಕಿಕೊಂಡು ಎಲ್ಲೋ ಬೆಂಗಳೂರಿನಲ್ಲಿ ತಿರುಗಾಡಿಕೊಂಡಿದ್ದರೆ ಅದರಿಂದ ಏನು ಪ್ರಯೋಜನವಾಗುತ್ತದೆ. ಅವನು ಬಿ.ಎಸ್‌ಸಿ. ಎ. ಜಿ. ಮಾಡಿದ್ದಕ್ಕೆ ಏನು ಪ್ರಯೋಜನ? ನಾನು ನನ್ನ ಜಮೀನಿನ ಮಣ್ಣನ್ನು ಪರೀಕ್ಷೆ ಮಾಡುವುದಕ್ಕಾಗಿ ಮಣಿಪಾಲ್‌ನಲ್ಲಿರುವ ಅಗ್ರಿಕಲ್‌ಚರ್ ಪ್ರಯೋಗಶಾಲೆಗೆ ಕಳುಹಿಸಿ ಅನೇಕ ತಿಂಗಳಾಯಿತು. ಅಲ್ಲಿಂದ ನನಗೆ ಇನ್ನೂ ರಿಜಲ್ಟ್ ಬಂದಿಲ್ಲ ರಿಮೈಂಡರ್‌ಗಳನ್ನು ಕಳುಹಿಸಿದರೂ ಕೂಡ ಇನ್ನೂ ನನಗೆ ಉತ್ತರ ಬಂದಿಲ್ಲ. ಈ ರೀತಿ ಆದರೆ ಏನು ಪ್ರಯೋಜನ? ನನ್ನ ಜಮೀನಿಗೆ ಯಾವ ಗೊಬ್ಬರವನ್ನು ಹಾಕಬೇಕು ಎಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಮಣ್ಣನ್ನು ಪರೀಕ್ಷೆಗೆ ಕಳುಹಿಸಿಕೊಟ್ಟೆ. ಆದರೆ ಅದರ ರಿಜಲ್ಟ್ ಇನ್ನೂ ಬಂದಿಲ್ಲ. ಈ ರೀತಿ ಆಗಬಾರದು. ಟೈಮಿಗೆ ಸರಿಯಾಗಿ ಮಣ್ಣನ್ನು ಪರೀಕ್ಷೆ ಮಾಡಿ ಅದರ ರಿಜಲ್ಟ್ ಅನ್ನು ಕಳುಹಿಸದಿದ್ದರೆ ಊಟಕ್ಕಿಲ್ಲದ ಉಪ್ಪಿನ ಕಾಯಿ ಆದ ಹಾಗೆ ಆಗುತ್ತದೆ. ಯಾರೇ ಮಣ್ಣನ್ನು ಪ್ರಯೋಗ ಶಾಲೆಗೆ ಕಳುಹಿಸಿದರೆ ಅದನ್ನು ಟೈಮಿಗೆ ಸರಿಯಾಗಿ ಪರೀಕ್ಷೆ ಮಾಡಿ ಅದರ ರಿಜಲ್ಟ್ ಅನ್ನು ಬೇಗ ಕಳುಹಿಸಿದರೆ ಆಗ ಅವನು ಯಾವ ಗೊಬ್ಬರವನ್ನು ಉಪಯೋಗ ಮಾಡಬೇಕು ಎಂಬುದನ್ನು ತಿಳಿದುಕೊಂಡು ಅದರಂತೆ ಗೊಬ್ಬರವನ್ನು ಉಪಯೋಗ ಮಾಡಿ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗ ಸಾಯಿಲ್ ಟೆಸ್ಟ್ ಮಾಡುವುದಕ್ಕೆ ಪ್ರಯೋಗ ಶಾಲೆಗಳನ್ನು ಏನು ಇಟ್ಟಿದ್ದಾರೆ, ಅಲ್ಲಿರತಕ್ಕಂಥಾ ಸಮಿತಿಗಳಲ್ಲಿ ಶ್ರೀಮಾನ್ ಶ್ರೀನಿವಾಸ ನಾಯ್ಡು ಅವರು ಹೇಳಿದ ಹಾಗೆ ಪ್ರತಿಯೊಂದು ಜಿಲ್ಲೆಯ ಪ್ರತಿನಿಧಿಗಳನ್ನೂ ಆಯ್ಕೆ ಮಾಡಬೇಕು. ಆ ರೀತಿ ಮಾಡುವುದಾದರೆ ರೈತರು ಪ್ರಯೋಗ ಶಾಲೆಗಳಿಗೆ ಕಳುಹಿಸತಕ್ಕಂಥಾ ಮಣ್ಣಿನ ಪರೀಕ್ಷೆಯ ಬಗ್ಗೆ ರಿಜಲ್ಟ್ ಏನಾಯಿತು ಎಂದು ಕೇಳುವುದಕ್ಕೆ ಅವಕಾಶ ಇರುತ್ತದೆ. ಅಗ್ರಿಕಲ್‌ಚರಲ್

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ವಿಶ್ವ ವಿದ್ಯಾನಿಲಯದಲ್ಲಿ ಎಲ್ಲಿಯವರೆಗೆ ರೈತರಿಗೆ ಇನ್‌ವಾಲ್ವ್‌ಮೆಂಟ್ ಇರುವುದಿಲ್ಲ. ಅಲ್ಲಿಯವರೆಗೆ ಇಂಥಾ ವಿಶ್ವವಿದ್ಯಾನಿಲಯಗಳು ಬಂದರೂ ಪ್ರಯೋಜನವಾಗುವುದಿಲ್ಲ ಸರಕಾರದವರು ರೈತರಿಗೆ ಕೊಡತಕ್ಕ ರಾಸಾಯನಿಕ ಗೊಬ್ಬರವಾಗಲೀ, ಔಷಧಿಯಾಗಲೀ ಅಥವಾ ಬೀಜವಾಗಲೀ ಅದನ್ನು ಅವರು ಸರಿಯಾಗಿ ಉಪಯೋಗ ಮಾಡುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಗಮನಿಸಬೇಕು. 100 ಕ್ಕೆ 20 ಜನ ರೈತರು ವ್ಯವಸಾಯಕ್ಕಾಗಿ ಸರ್ಕಾರದವರು ಕೊಡತಕ್ಕ ರಾಸಾಯನಿಕ ಗೊಬ್ಬರ ಮತ್ತು ಔಷಧಿಯನ್ನು ಉಪಯೋಗಿಸಿ ವ್ಯವಸಾಯ ಮಾಡತಕ್ಕ ಪದ್ಧತಿಯನ್ನು ಕಲಿತುಕೊಂಡಿದ್ದಾರೆ. ಇನ್ನೂ ಬಹುತೇಕ ರೈತರು ಹಿಂದಿನ ಪದ್ಧತಿಯನ್ನೇ ಅನುಸರಿಸಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಎಷ್ಟೋ ಜನ ರೈತರಿಗೆ ಆಧುನಿಕ ವ್ಯವಸಾಯ ಪದ್ಧತಿಯೇ ಗೊತ್ತಿಲ್ಲ.

ಏನಾದರೂ ಹೊಲಕ್ಕೆ ರಾಸಾಯನಿಕ ಗೊಬ್ಬರ ಹಾಕಿದರೆ ಜಮೀನು ಪೂರಾ ಸುಟ್ಟು ಹೋಗುತ್ತದೆ ಎಂದು ಹೇಳುವವರೂ ಇದ್ದಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇಂಥ ವಿಶ್ವವಿದ್ಯಾನಿಲಯದ ಸಂಶೋಧನೆ ಮತ್ತು ಜ್ಞಾನವನ್ನು ಪ್ರತಿಯೊಬ್ಬ ರೈತನಿಗೂ ತಲಪುವಂತೆ ಮಾಡಿದರೆ ಇದರ ಉಪಯೋಗವಾದೀತು; ಇಲ್ಲದಿದ್ದರೆ ಖಂಡಿತಾ ಆಗುವುದಿಲ್ಲ ನಾನು ಸಹ ಪಾಶ್ಚಿಮಾತ್ಯ ದೇಶಗಳಿಗೆ ಹೋಗಿ ಬಂದಿದ್ದೇನೆ. ಅಲ್ಲಿ ವ್ಯವಸಾಯ ಮಾಡುವವರು ಕೇವಲ 10 ಪರ್‌ಸೆಂಟ್ ಸಹ ಇಲ್ಲ. ಆದರೆ ಅಷ್ಟು ಕಡಿಮೆ ಸಂಖ್ಯೆಯಲ್ಲಿ ವ್ಯವಸಾಯ ಮಾಡುವವರು ಇದ್ದರೂ ಸಹ ಇಡೀ ದೇಶಕ್ಕೆ ಅವರು ಆಹಾರವನ್ನು ಬೆಳೆದು ಕೊಡುತ್ತಾರೆ. ಅಷ್ಟೇ ಅಲ್ಲದೆ ಹೊರ ದೇಶಗಳಿಗೂ ಸಹ ರಫ್ತು ಮಾಡುತ್ತಾರೆ. ಕೇವಲ ಒಬ್ಬ ತಂದೆ, ಮಗ ಸೇರಿಕೊಂಡು ಎಲ್ಲವನ್ನೂ ಮೆಶಿನುಗಳ ಮುಖಾಂತರ ಮಾಡುತ್ತಿದ್ದಾರೆ. ಏರೋಪ್ಲೇನಿನಲ್ಲಿ ಔಷಧಿಗಳನ್ನು ಚುಮುಕಿಸುತ್ತಾರೆ, ಅಲ್ಲೇ ಟೆಸ್ಟ್ ಮಾಡುವ ಲ್ಯಾಬೋರೇಟರಿ ಇಟ್ಟುಕೊಂಡಿರುತ್ತಾರೆ. ಮತ್ತಿತರ ಸಾಧನಗಳನ್ನು ಸಹ ಇಟ್ಟುಕೊಂಡಿರುತ್ತಾರೆ. ಇಂಥ ಪರಿಜ್ಞಾನ ಇರತಕ್ಕಂತಹ 20ನೇ ಶತಮಾನದಲ್ಲಿ ನಾವು ಎಷ್ಟು ವೇಗವಾಗಿ ಹೋಗಬೇಕೆಂಬುದನ್ನು ನೋಡಿದಾಗ ಇಂಥ ವಿಶ್ವವಿದ್ಯಾನಿಲಯಗಳು ಅವಶ್ಯವಾಗಿ ಬೇಕಾಗುತ್ತವೆ. ವ್ಯವಸಾಯ ಪ್ರಧಾನವಾಗಿರುವ ನಮ್ಮ ದೇಶ ಎಲ್ಲಿಯವರೆಗೆ ಇದಕ್ಕೆ ಪ್ರಾಶಸ್ತ್ಯ ಕೊಡುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಆಹಾರ ಸಮಸ್ಯೆ ಹೋಗುವುದಿಲ್ಲ. ಇಷ್ಟು ಹೇಳಿ ಈ ಬಿಲ್ಲಿಗೆ ಸ್ವಾಗತವನ್ನು ಬಯಸಿ ಇದಕ್ಕೆ ಯಶಸ್ಸಾಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

3-00 P. M.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ) ;— ಸನ್ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಕೆ. ಎಚ್. ಪಾಟೀಲರು ತಂದಿರತಕ್ಕ ಬಿಲ್ಲನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇದಕ್ಕೆ ಕಾರಣ ಇಷ್ಟು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಏಕೆಂದರೆ ನಮ್ಮ ರಾಜ್ಯದಲ್ಲಿ ಶೇಕಡಾ 70-80ರಷ್ಟು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ. ಆದಾಗ್ಯೂ ಸಹ ನಮ್ಮಲ್ಲಿ ಆಹಾರದ ಅಭಾವ ಇದೆಯೆಂದು ಹೇಳುತ್ತಿದ್ದೇವೆ. ಇವತ್ತು ವ್ಯವಸಾಯವೆಂದರೆ, ಬರೀ ಆಹಾರ ಪದಾರ್ಥಗಳನ್ನು ಬೆಳೆಯತಕ್ಕದ್ದು ಮಾತ್ರವಲ್ಲ. ಇದರಲ್ಲಿ ಇತರ ಕೈಗಾರಿಕೆಗಳಿಗೆ ಒದಗಿಸತಕ್ಕಂತಹ ಕಚ್ಚಾ ಪದಾರ್ಥಗಳನ್ನು ಸಹ ಬೆಳೆಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು ಮೂರು ಕೋಟಿ ಜನರಿದ್ದಾರೆ. ಈಗ ಹೆಬ್ಬಾಳಿನಲ್ಲಿ ಒಂದು ವಿಶ್ವವಿದ್ಯಾನಿಲಯ ಇದೆ. ಆದರೆ ನಮ್ಮ ದೇಶದ ಜನಸಂಖ್ಯೆಗನುಗುಣವಾಗಿ ಅದು ಇಲ್ಲ. ಉತ್ತರ ಕರ್ನಾಟಕದಲ್ಲಿರುವ ಹವೆಗೆ ಮತ್ತು ಭೂಮಿಯ ಗುಣವನ್ನು ನೋಡಿದರೆ, ಅಲ್ಲಿ ಒಂದು ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡುವುದು ಯೋಗ್ಯವಾಗಿದೆ. ಅಲ್ಲದೆ ಉತ್ತರ ಕರ್ನಾಟಕ ಕೃಷಿ ಪ್ರಧಾನವಾದ ಕ್ಷೇತ್ರ. ಇವತ್ತು ನಮ್ಮ ದೇಶದಲ್ಲಿ ವ್ಯವಸಾಯ ಬುದ್ಧಿವಂತರ ಕೈಯಲ್ಲಿ ಇಲ್ಲ. ಅದು ದಡ್ಡರ ಕೈಯಲ್ಲಿ ಇದೆ ಶೇಕಡಾ 80ರಷ್ಟು ಜನ ವ್ಯವಸಾಯದಲ್ಲಿ ತೊಡಗಿದ್ದರೂ ಸಹ ನಮ್ಮಲ್ಲಿ ಆಹಾರದ ಅಭಾವ ಇದೆ. ಇದಕ್ಕೆ ಕಾರಣವೇನೆಂದರೆ, ನಮ್ಮ ರೈತರು ವೈಜ್ಞಾನಿಕವಾಗಿ ವ್ಯವಸಾಯವನ್ನು ಮಾಡದೆ ಇರುವುದು. ವೈಜ್ಞಾನಿಕವಾಗಿ ವ್ಯವಸಾಯವನ್ನು ಮಾಡಿದರೆ ನಮಗೆ ಹೆಚ್ಚು ಉತ್ಪತ್ತಿ ತೆಗೆಯುವುದಕ್ಕೆ ಅವಕಾಶವಾಗುತ್ತದೆ. ಎರಡನೆಯ ವಿಚಾರವೇನೆಂದರೆ, ನಮ್ಮ ದೇಶದಲ್ಲಿ ಜನಸಂಖ್ಯೆ ಬೆಳೆಯುತ್ತಾ ಇದೆ. ಆದರೆ ಭೂಮಿ ಬೆಳೆಯುವುದಿಲ್ಲ. ಆದ್ದರಿಂದ ಇರುವ ಭೂಮಿಯಲ್ಲಿ ಹೆಚ್ಚು ಉತ್ಪತ್ತಿ ತೆಗೆಯಬೇಕಾದರೆ, ಜನರಿಗೆ ಹೆಚ್ಚು ಪರಿಣತೆ ಇದರಲ್ಲಿ ಬೇಕಾಗುತ್ತದೆ. ಈ ಉದ್ದೇಶದಿಂದ ಧಾರವಾಡದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಮಾಡುವುದು ನ್ಯಾಯವಾಗಿದೆ. ಧಾರವಾಡದಲ್ಲಿ ಒಂದು ಕೃಷಿ ಸಂಶೋಧನೆಗೋಸ್ಕರ ಸಾವಿರಾರು ಎಕರೆ ಜಮೀನು ಸಹ ಸಿಗುತ್ತದೆ. ಆದ್ದರಿಂದ ಇದು ಎಲ್ಲಾ ದೃಷ್ಟಿಯಿಂದಲೂ ಯೋಗ್ಯವಾದ ಸ್ಥಳವೆಂದು ಹೇಳಬಹುದು. ಇದರಲ್ಲಿ ಕೆಲವು ಫೇಕಲ್ಟೀಸ್ ಸಹ ಮಾಡಬೇಕೆಂದು ಹೇಳಿದ್ದಾರೆ. ಅಗ್ರಿಕಲ್ಚರ್, ಹಾರ್ಟಿಕಲ್ಚರ್ ಅನಿಮಲ್ ಹಸ್ಬೆಂಡರಿ, ಫಾರೆಸ್ಟ್ರಿ, ಫಿಶರೀಸ್, ಅಗ್ರಿಕಲ್ಚರಲ್ ಇಂಜನೀಯರಿಂಗ್ ಇತ್ಯಾದಿಗಳನ್ನು ಮಾಡಬೇಕೆಂದು ಇದ್ದಾರೆ. ಆದರೆ ಇನ್ನೊಂದು ವಿಚಾರ ಮರೆತ ಹಾಗೆ ಇದೆ. ನಮ್ಮ ದೇಶದಲ್ಲಿ ಮುಖ್ಯವಾಗಿ ಭಾಗ ಮಲೆನಾಡು ಭಾಗ. ಅಲ್ಲಿ ಕಾಫಿ, ಏಲಕ್ಕಿ, ಟೀ ಮುಂತಾದ ಬೆಳೆಗಳು ಬೆಳೆಯುತ್ತವೆ, ಅಲ್ಲದೆ ಇವುಗಳಿಂದ ನಮ್ಮ ದೇಶಕ್ಕೆ ಫಾರಿನ್ ಎಕ್ಸ್‌ಚೇಂಜ್ ಸಹ ಬರುತ್ತದೆ. ಹೀಗೆ ಇದು ಪ್ಲಾಂಟೇಶನ್ ಇಂಡಸ್ಟ್ರಿ ಎಂದು

(ಶ್ರೀ ಕೆ. ಎಂ. ರುದ್ರಪ್ಪ)

ಪರಿಗಣಿಸಲ್ಪಟ್ಟಿದೆ. ಇಂಡಿಯಾ ದೇಶದ ಕಾಫಿ ಉತ್ಪತ್ತಿಯಲ್ಲಿ ಮೈಸೂರು ರಾಜ್ಯ 65 ಪರಸೆಂಟುಗಳಷ್ಟು ಉತ್ಪಾದನೆ ಮಾಡುತ್ತಿದೆ. ಸುಮಾರು ಮೂರು ವರೆ ಲಕ್ಷ ಎಕರೆಯಷ್ಟು ಕಾಫಿ ತೋಟಗಳು ನಮ್ಮಲ್ಲಿ ಇವೆ. ಇದರಲ್ಲಿ ಸುಮಾರು ಒಂದೂವರೆ ಲಕ್ಷ ಕೂಲಿಗಾರರು ಇದ್ದಾರೆ. ಇದರಿಂದ ಮೂರುವರೆ ಕೋಟಿ ರೂಪಾಯಿಗಳಷ್ಟು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬರುತ್ತಿದೆ, 7 ಲಕ್ಷದಷ್ಟು ಎಕ್ಸೈಸ್ ಡ್ಯೂಟಿ ಬರುತ್ತದೆ; 33 ಕೋಟಿಯಷ್ಟು ಫಾರಿನ್ ಎಕ್ಸ್‌ಚೇಂಜ್ ಗಳಿಸುತ್ತಿದ್ದೇವೆ ಆದ್ದರಿಂದ ತಾವು ಮಾಡಿದಂತಹ ಫೇಕಲ್ಟೀಸ್‌ನೊಳಗೆ ಈ ಪ್ಲಾಂಟೇಶನನ್ನು ಸಹ ಸೇರಿಸಬೇಕೆಂದು ಹೇಳುತ್ತೇನೆ. ಅದೇ ರೀತಿ ಏಲಕ್ಕಿಯು ಬೆಳೆಯಲ್ಲಿ ಸಹ ನಮ್ಮ ಮೈಸೂರು ರಾಜ್ಯದಲ್ಲಿ ಬೆಳೆಯುವಂತೆ ಏಲಕ್ಕಿ ಬಹಳ ಉತ್ತಮ ತರಗತಿಯದ್ದು. ಆದರಲ್ಲೂ ನನ್ನ ಕ್ಷೇತ್ರವಾದ ಸಕಲೇಶಪುರದಲ್ಲಿ ಬೆಳೆಯುವಂತಹ ಏಲಕ್ಕಿ ಬಹಳ ಸುವಾಸನೆಯುಳ್ಳದ್ದು ಅತೀ ಶ್ರೇಷ್ಠ ದರ್ಜೆಯದ್ದು. ಇವತ್ತು ಇದರ ಬೆಳೆ ಸಹ ಹೆಚ್ಚು ನಾಶವಾಗುತ್ತಿದೆ. ಆದ್ದರಿಂದ ಇದಕ್ಕೆ ತಗಲುವ ರೋಗವನ್ನು ಸರಿಯಾದ ರೀತಿಯಲ್ಲಿ ತಡೆಗಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಆ ಕಾರಣದಿಂದ ಈ ಯೂನಿವರ್ಸಿಟಿಯಲ್ಲಿ ಪ್ಲಾಂಟೇಶನ್ ಫೇಕಲ್ಟೀಸ್‌ನ್ನು ಸಹ ಸೇರಿಸಬೇಕು. ಸಾಧ್ಯವಾದರೆ ಮಲೆನಾಡು ಪ್ರದೇಶಕ್ಕೆ ಇನ್ನೊಂದು ಕೃಷಿ ವಿಶ್ವವಿದ್ಯಾನಿಲಯನ್ನು ಸ್ಥಾಪನೆ ಮಾಡಿದರೂ ಒಳ್ಳೆಯದೆಂದು ಹೇಳುತ್ತೇನೆ. ಇದು ಮಲೆನಾಡು ಅಭಿವೃದ್ಧಿಗೆ ಸಹ ಸಹಾಯಕವಾಗುತ್ತದೆ ಈ ಬೆಳೆಗಳಿಗೆ ವೈಜ್ಞಾನಿಕವಾಗಿ ಸ್ಪ್ರೇ ಮಾಡಿ ರಾಸಾಯನಿಕ ಗೊಬ್ಬರಗಳನ್ನು ಹಾಕಬೇಕು. ಈ ಬಾಳೆ ಹೊನ್ನೂರಿನಲ್ಲಿ ಒಂದು ಎಕ್ಸ್‌ಪರಿಮೆಂಟ್ ಫಾರ್ಮು ಇದೆ. ಅದರಿಂದ ಅನೇಕರಿಗೆ ಉಪಯೋಗವಾಗಿದೆ. ಇದು ಆದ ಮೇಲೆ ಹಿಂದೆ ಬೆಳೆಯುತ್ತಿದ್ದುದಕ್ಕಿಂತ ಬೆಳೆ ತೆಗೆದುದರೆ 8-10ರಷ್ಟು ಪಟ್ಟು ಹೆಚ್ಚು ತೆಗೆಯಲು ಸಹಾಯವಾಗಿದೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಪ್ಲಾಂಟೇಶನ್ ಫೇಕಲ್ಟೀಸನ್ನು ಸಹ ಅದರಲ್ಲಿ ಸೇರಿಸಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ಮಾನ್ಯ ವಿರೋಧಪಕ್ಷದ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಈ ಬಿಲ್ಲಿನಲ್ಲಿ ಒಂದು ಅಟಾನ್‌ಮಸ್ ಕ್ಯಾರೆಕ್ಟರ್ ಇದರಲ್ಲಿ ಇಲ್ಲವೆಂದು ಹೇಳುತ್ತಿದ್ದಾರೆ. ಪ್ರೋ ಚ್ಯಾನ್ಸಲರ್ ಹುದ್ದೆಯಲ್ಲಿ ಅವರಿಗೆ ಹೆಚ್ಚು ಅಧಿಕಾರ ಕೊಟ್ಟಿದ್ದಾರೆ, ಆದ್ದರಿಂದ ಇದರಿಂದ ಅಟಾನಮಸ್ ಕ್ಯಾರೆಕ್ಟರಿಗೆಲ್ಲ ಏನೂ ಧಕ್ಕೆ ಬಂದಿದೆ ಇದರಲ್ಲಿ ಸ್ವಲ್ಪಮಟ್ಟಿಗೆ ನಿಜ ಕಾಣಬಹುದು. ಆದರೆ ಈ ವಿಚಾರಗಳನ್ನು ನಾನು ಈ ಸಮಯದಲ್ಲಿ ಮಾನ್ಯ ಸಚಿವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಅದನ್ನು ಜಾಯಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ, ಆ ಅಂಶಗಳನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಯಾವ ಅಧಿಕಾರವನ್ನು ಬೋರ್ಡ್ ಆಫ್ ರೀಜೆಂಟ್ಸ್‌ಗೆ ಬೋರ್ಡ್ ಆಫ್ ಸ್ಟಡೀಸ್‌ಗೆ ಕೊಡಬೇಕು. ಯಾವ ಅಧಿಕಾರವನ್ನು ವೈಸ್ ಛಾನ್ಸಲರಿಗೆ ಕೊಡಬೇಕು ಎಂಬುದನ್ನು ವಿಚಾರ ಮಾಡಬೇಕು. ಆಗ ಯಾವ

ಯಾವ ಆ ಅಧಿಕಾರವನ್ನು ಛಾನ್ಸಲರ್ ಇಟ್ಟುಕೊಳ್ಳಬಹುದು ಹಾಗೂ ಪ್ರೊ ಛಾನ್ಸಲರ್ ಸಹ ಇಟ್ಟುಕೊಳ್ಳಬಹುದು. ಎಂಬುದಾಗಿ ನಿರ್ಧರಿಸಬಹುದು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಕೆಲವರಿಗೆ ಏನು ಎದ್ದು ಕಾಣುತ್ತಿದೆಯೆಂದರೆ ಪ್ರೊಛಾನ್ಸಲರ್ ಎಲ್ಲ ಅಧಿಕಾರವನ್ನೂ ಇಟ್ಟುಕೊಂಡಿದ್ದಾರೆಂದು ಹೇಳುತ್ತಾರೆ. ಕೆಲವು ಸಂಧರ್ಭಗಳಲ್ಲಿ ಸರ್ಕಾರದವರು ಅಡ್ಮಿನಿಸ್ಟ್ರೇಷನ್ನಿನ ಮೇಲ್ವಿಚಾರಣೆಯನ್ನು ಹೊಂದಬೇಕು. ಏಕೆಂದರೆ ದುರ್ಬಲವರ್ಗದವರಿಗೆ ಹಾಗೂ ರೈತಾಪಿ ವರ್ಗದವರಿಗೆ ಅಲ್ಲಿ ಅನುಕೂಲಗಳನ್ನು ಕೊಡಬೇಕಾದರೆ ಆಡಳಿತ ಕೆಟ್ಟುಹೋಗಿದ್ದರೆ ಸೋಷಿಯಲ್ ಜಸ್ಟೀಸ್ ನಾವು ಏನು ಮಾಡಬೇಕಾಗುತ್ತದೋ ಅದಕ್ಕೆ ಅನುಸಾರವಾಗಿ ಯೂನಿವರ್ಸಿಟಿಯವರು ನಡೆದುಕೊಳ್ಳದೇ ಹೋದರೆ ಅತಂಹ ಸಂದರ್ಭದಲ್ಲಿ ವಿಶೇಷವಾದಂಥ ಹತೋಟಿ ಇಟ್ಟುಕೊಂಡು ಅದನ್ನು ಸರಿಪಡಿಸಬೇಕು. ಬಹುಶಃ ಆ ಕಾರಣದಿಂದ ಪ್ರೊಛಾನ್ಸಲರಿಗೆ ಕೆಲವು ಅಧಿಕಾರಗಳನ್ನು ಬಿಲ್ಲಿನಲ್ಲಿ ಕೊಟ್ಟಿದ್ದೀರಿ. ಆದರೂ ಸಹ ಕೆಲವು ಅಧಿಕಾರಗಳು ಅಲ್ಲಿ ಜಾಸ್ತಿಯಾಗಿ ಕಾಣುತ್ತಿವೆ. ಅದನ್ನು ಪುನರ್ವಿಮರ್ಶೆ ಮಾಡುವುದು ಅಗತ್ಯವಿದೆ ಅದೇ ರೀತಿಯಲ್ಲಿ ವೈಸ್ ಛಾನ್ಸಲರ್ ಅಪಾಯಿಂಟ್‌ಮೆಂಟ್ ವಿಷಯವಾಗಿ ಹೇಳುವುದಾದರೆ, ಇಲ್ಲಿಯವರೆಗೆ ಒಂದು ಪ್ಯಾನಲ್‌ನಲ್ಲಿರತಕ್ಕ ಹೆಸರನ್ನು ತೆಗೆದುಕೊಂಡು ಸರ್ಕಾರದ ಸಲಹೆ ಮೇರೆಗ ರಾಜ್ಯಪಾಲರು ಛಾನ್ಸಲರನ್ನು ಅಪಾಯಿಂಟ್ ಮಾಡುತ್ತಿದ್ದರು. ಈಗ ಮಂತ್ರಿಮಂಡಲದ ಸಲಹೆ ಮೇರೆಗೆ ರಾಜ್ಯಪಾಲರು ಈ ಒಂದು ಅಧಿಕಾರವನ್ನು ಚಲಾವಣೆ ಮಾಡುತ್ತಾರೆ. ಅವರು ಸ್ವತಃ ಯಾವ ಅಧಿಕಾರವನ್ನೂ ಮಾಡುವುದಿಲ್ಲ. ಆದ್ದರಿಂದ ಚಾನ್ಸಲರಿಗೆ ಅಧಿಕಾರ ಕೊಟ್ಟರೆ ಸರ್ಕಾರಕ್ಕೆ ಅಧಿಕಾರ ಕೊಟ್ಟ ಹಾಗಾಗುತ್ತದೆ. ಅದಕ್ಕಾಗಿ ಚಾನ್ಸಲರ್ ಅಧಿಕಾರ ಹಾಗೂ ಪ್ರೊಚಾನ್ಸಲರ್ ಅಧಿಕಾರ ಎಷ್ಟೆಂಬುದನ್ನು ನಿರ್ಧಾರ ಮಾಡಬೇಕು. ಅದೇ ರೀತಿಯಲ್ಲಿ ವೈಸ್ ಚಾನ್ಸಲರ್ ಅವರ ವಯಸ್ಸು 60 ಇರಬೇಕೆಂದು ಮಸೂದೆಯಲ್ಲಿದೆ. ಹೇಳಬೇಕೆಂದರೆ ವಿದ್ಯಾಪರಿಣತರು ಹೆಚ್ಚಿಗೆ ವಯಸ್ಸಾಗಿದ್ದರೂ ಪರವಾ ಇಲ್ಲ. ಏಕೆಂದರೆ ಹೈಕೋರ್ಟ್ ಜಡ್ಜ್‌ಗಳು ಮತ್ತು ಸುಪ್ರೀಂ ಕೋರ್ಟ್ ಜಡ್ಜ್‌ಗಳ ವಯಸ್ಸು ಬಹಳ ಇದೆ. ವೈಸ್ ಛಾನ್ಸಲರದು 60ಕ್ಕೆ ಅವರ ವಯಸ್ಸಿನೊಳಗೆ ಮಿತಿ ಇರಬೇಕು. ಅಷ್ಟಕ್ಕೆ ನಿರ್ಗಮನ ಹೊಂದಬೇಕೆಂದು ಹೇಳಿದರೆ ಅದು ಸರಿ ಹೋಗುವುದಿಲ್ಲ. ಅದನ್ನು ಸಹ ಪುನರ್ವಿಮರ್ಶೆ ಮಾಡಬೇಕು. ಇವರು ಒಂದು ಹೆಚ್ಚಿನ ಹಾಗೂ ವಿಶೇಷ ಅರ್ಹತೆಯನ್ನು ಪಡೆದಿರುವರು. ಇಂತಹವರು ವೈಸ್ ಚಾನ್ಸಲರ್ ಆಗುವುದಕ್ಕೆ ಕಾನೂನು ಇದ್ದರೆ ಅದರಿಂದ ಸ್ವಲ್ಪ ತೊಂದರೆಯಾಗಬಹುದು ಆದ್ದರಿಂದ ಇದನ್ನೂ ಸಹ ಸೂಕ್ತವಾಗಿ ಮಾರ್ಪಾಡು ಮಾಡಬೇಕು. ಆದ್ದರಿಂದ ಹಿಂದಿನ ಆಕ್ಟ್ ತರಹ ಇಟ್ಟರೆ ಅದು ಸರಿ ಹೋಗುತ್ತದೆಂದು ನನ್ನ ಅಭಿಪ್ರಾಯ. ಬೋರ್ಡ್ ಆಫ್ ರೀಜೆಂಟ್ಸ್ ಅವರಿಗೆ ಹೆಚ್ಚಿಗೆ ಅಧಿಕಾರವನ್ನು ಕೊಡಬೇಕು. ಅಪಾಯಿಂಟ್‌ಮೆಂಟ್ಸ್ ಮತ್ತು ಪ್ರೊಮೋಷನ್ಸ್‌ನಲ್ಲಿ ಅವರಿಗೆ ಈ ಬಿಲ್ಲಿನಲ್ಲಿ ಅಧಿಕಾರವಿಲ್ಲ. ಅದು ಅವರಿಗೆ

(ಶ್ರೀ ಕೆ. ಎಂ. ರುದ್ರಪ್ಪ)

ಇರತಕ್ಕದ್ದು ಸೂಕ್ತವೆಂದು ನನ್ನ ಭಾವನೆ. ಅದನ್ನೂ ಸಹ ಸರ್ಕಾರದವರು ಪರಿಶೀಲಿಸಬಹುದು. ಅಥವಾ ಇದನ್ನೇನಾದರೂ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ, ಆ ಕಮಿಟಿಯವರು ಈ ವಿಚಾರವನ್ನು ಚೆನ್ನಾಗಿ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಸಂಸ್ಥಾನದಲ್ಲಿರತಕ್ಕ ಯು. ಜಿ. ಸಿ. ಮತ್ತು ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್—ಇವೆರಡು ಬಹಳ ಪ್ರಾಮುಖ್ಯವಾದಂಥ ಸಂಸ್ಥೆಗಳು. ಅವು ಸಹಾ ಈ ಮಾಸೂದೆಯ ಕೆಲವು ವಿಚಾರಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ನಿಮಗೆ ಹೆಚ್ಚಿನ ಗ್ರ್ಯಾಂಟ್ ಬೇಕಾದರೆ, ವಿಶ್ವವಿದ್ಯಾನಿಲಯಕ್ಕೆ ಏನಾದರೂ ಅನುಮತಿ ಕೊಡಬೇಕಾದರೆ ಅದನ್ನು ಅವರು ಸ್ಕ್ರೂಟಿನಿ ಮಾಡಿ ಒಪ್ಪಬೇಕಾಗುತ್ತದೆ. ಆದ್ದರಿಂದ ನಾವು ಈಗ ಮಾಡತಕ್ಕ ಕಾನೂನು ವಾಪಸ್ಸು ಆಗುವ ರೀತಿಯಲ್ಲಿ ಇರಬಾರದು. ನಮ್ಮ ಇಂಡಿಯಾ ದೇಶದಲ್ಲಿ ಇತರ ಕಡೆಗಳಲ್ಲಿರತಕ್ಕ ವಿಶ್ವವಿದ್ಯಾನಿಲಯಗಳು ಯಾವ ರೀತಿ ಮಾಡುತ್ತಿದ್ದಾರೋ ಅದೇ ರೀತಿಯಲ್ಲಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕಾನೂನುಗಳು ಹೆಚ್ಚಿಗೆ ಪ್ರಗತಿದಾಯಕವಾಗಿ ಹಾಗೂ ಬಹಳ ಎಫೆಕ್ಟಿವ್ ಆಗಿ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶವಿರುವಂಥ ಒಂದು ಕಾನೂನು ಆಗಿರಬೇಕು. ಈ ದೃಷ್ಟಿಯಿಂದ ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳಿಸುವುದು ಸೂಕ್ತವೆಂದು ನಾನು ಭಾವನೆ ಮಾಡುತ್ತೇನೆ. ಆಮೇಲೆ ಯಾವುದೇ ವಿಶ್ವವಿದ್ಯಾನಿಲಯ ಸರಿಯಾದ ರೀತಿಯಲ್ಲಿ ವ್ಯಾಪಕವಾದ ರೀತಿಯಲ್ಲಿ ಬೆಳೆಯಬೇಕಾದರೆ ಅದರ ಇಮೇಜ್ ಪ್ರಿಸ್ಟೇಜ್ ಚೆನ್ನಾಗಿ ಇರಬೇಕು. 1916ನೇ ಇಸವಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಸ್ಥಾಪನೆ ಮಾಡಿದರು. ಅವರು ವೈಸ್ ಚಾನ್ಸಲರನ್ನು ಬಹಳ ಅತ್ಯುತ್ತಮರಾದಂತಹವರನ್ನು ಹೊರಗಡೆಯಿಂದ ಕರೆಯಿಸುತ್ತಿದ್ದರು. ಬ್ರಿಜೇಂದ್ರನಾಥ್‌ಸೀಲ್ ಅವರು ಬಂಗಾಳದವರು. ಅವರು ವೈಸ್ ಚಾನ್ಸಲರ್ ಹುದ್ದೆಯನ್ನು ಅಲಂಕರಿಸಿ ಶ್ರಮಿಸಿದ್ದಾರೆ ಯಾವುದೇ ವಿಶ್ವವಿದ್ಯಾನಿಲಯ ಮುಂದುವರಿಯಬೇಕಾದರೆ ಬಹು ಮುಖ್ಯವಾಗಿ ಅಲ್ಲಿನ ವೈಸ್ ಚಾನ್ಸಲರ್ ಹೆಚ್ಚಿನ ವಿಶೇಷಾರ್ಹತೆ ಹೊಂದಿರಬೇಕು ಮತ್ತು ಇವರ ದೃಷ್ಟಿ ಒಂದು ನ್ಯಾಷನಲ್ ಡೆವಲಪ್‌ಮೆಂಟಿಗೆ ಅನುಗುಣವಾಗಿರಬೇಕು. ಅದರಲ್ಲಿಯೂ ಕೃಷಿ ವಿಶ್ವವಿದ್ಯಾನಿಲಯದಲ್ಲಿ ವೈಸ್‌ಚಾನ್ಸಲರ್ ಆಗಿರತಕ್ಕವರು ಹೆಚ್ಚಿನ ಪರಿಣತೆಯನ್ನು ಮಾತ್ರ ಪಡೆದಿದ್ದರೆ ಸಾಲದು. ದೇಶಕ್ಕೆ ಏನೇನು ಆಗಬೇಕು, ರೈತಾಪಿ ಜನರ ಅಭಿವೃದ್ಧಿ ಯಾವ ರೀತಿಯಲ್ಲಿ ಆಗಬೇಕು, ದೇಶದಲ್ಲಿ ಉತ್ಪತ್ತಿ ಯಾವ ರೀತಿಯಲ್ಲಿ ಆಗಬೇಕೆಂಬುದನ್ನು ಯೋಚನೆ ಮಾಡಬೇಕು. ಈ ದೇಶದ ಶಾಸಕರೆಲ್ಲರೂ ಹೇಳಿದಹಾಗೆ ಬೃಹದಾಕಾರವಾಗಿ ಜನಸಂಖ್ಯೆ ಬೆಳೆಯುತ್ತಿರುವ ಈ ದೇಶದಲ್ಲಿ ಜಮೀನು ಕಡಿಮೆ ಇರುವಾಗ ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವಿರಬೇಕು. ಅದಕ್ಕೆ ತಕ್ಕಂತೆ ಅವರು ಕೆಲಸವನ್ನು ಮಾಡಬೇಕು ಅದೇ ರೀತಿ

ಯಲ್ಲಿ ಪ್ರೊಫೆಸರ್ಸ್, ರೀಡರ್ಸ್, ಲೆಕ್ಚರರ್ಸ್ ಇರಬೇಕಾಗುತ್ತದೆ. ಆ ರೀತಿ ಇರತಕ್ಕ ವಿಶ್ವವಿದ್ಯಾನಿಲಯವನ್ನು ರಾಜ್ಯ ಸರ್ಕಾರದವರು ಸ್ಥಾಪನೆ ಮಾಡಿದರೆ ನಮ್ಮ ದೇಶಕ್ಕೆ ಕೀರ್ತಿ ಹೆಚ್ಚುತ್ತದೆ. ಒಂದು ಒಳ್ಳೆಯ ಎಫೆಕ್ಟ್ ಆಗುತ್ತದೆಂದು ನಾನು ತಿಳಿದಿದ್ದೇನೆ. ಈಗ ನಮ್ಮ ದೇಶದಲ್ಲಿ ಕಾಡು ಪ್ರದೇಶ ಬಹಳವಾಗಿ ನಶಿಸುತ್ತಿರುವುದರಿಂದ, ಇಂಡಿಯಾ ದೇಶದ ದೃಷ್ಟಿಯಲ್ಲಿ ತೆಗೆದುಕೊಂಡರೆ, ನಮ್ಮ ರಾಜ್ಯದ ಅರಣ್ಯ ಪ್ರದೇಶ ಶೇಕಡಾವಾರು ಬಹಳ ಕಡಿಮೆ ಇದೆ. ಈ ದೇಶದ ಜನಸಂಖ್ಯೆ ಬೆಳೆಯುತ್ತಿರುವಾಗ ಮರ ಮುಟ್ಟುಗಳಿಗೆ ಬೇಕಾದ ಸಾಮಾನುಗಳು ಅವಶ್ಯವಾಗಿ ಬೇಕಾಗುತ್ತದೆ. ಅದರಿಂದಾಗಿ ಅರಣ್ಯ ಹೆಚ್ಚಿಗೆ ಇರಬೇಕು. ಆದರೂ ಅರಣ್ಯ ಪ್ರದೇಶ ದಿವಸ ದಿವಸ ಬಹಳ ಕಡಿಮೆಯಾಗುತ್ತಿದೆ. ಯಾವ ರೀತಿಯಿಂದಲೂ ಅರಣ್ಯ ಪ್ರದೇಶವನ್ನು ವ್ಯವಸಾಯಕ್ಕೆ ಕೊಡುವುದು ಸೂಕ್ತವಲ್ಲ. ಈಗಿರತಕ್ಕ ಅರಣ್ಯ ಪ್ರದೇಶವನ್ನು ಹೆಚ್ಚು ಮಾಡಬೇಕಾಗಿದೆ. ಬಹಳವಾಗಿ ಈಗ ಕಾಡನ್ನು ಬೆಳಸಬೇಕು. ಈ ದೇಶದಲ್ಲಿ ಅರಣ್ಯ ಎಷ್ಟು ಇರಬೇಕೆಂಬುದನ್ನು ನಿಗದಿ ಮಾಡಿ ಅರಣ್ಯ ಪ್ರದೇಶವನ್ನು ಮಾನ್ಯ ಸಚಿವರು ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಯುವುದಕ್ಕೆ ಅವಕಾಶ ಕೊಡಬೇಕು. ನಷ್ಟವಾಗುವುದನ್ನು ತಡೆಗಟ್ಟಬೇಕು. ಈಗ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್‌ನವರು ಮಾಡಲ್ ಆಕ್ಟನ್ನು ತಯಾರು ಮಾಡಿದ್ದಾರೆ. ಅದನ್ನು ತರಿಸಿಕೊಂಡು ಅದಕ್ಕನುಗುಣವಾಗಿ ಇಲ್ಲಿಯೂ ಇರುವಂತೆ ಮಾಡಬೇಕು. ಅದನ್ನು ಕೂಡಲೇ ಧಾರವಾಡದಲ್ಲಿ ಎಸ್ಟಾಬ್ಲಿಷ್ ಆಗುವಂತೆ ಮಾಡುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಪ್ಲಾಂಟೇಷನ್ ಇಂಡಸ್ಟ್ರಿಯನ್ನು ಖಂಡಿತವಾಗಿ ಮರೆಯಬಾರದು. ಅದನ್ನು ಆ ಫ್ಯಾಕಲ್ಟಿಯಲ್ಲಿ ಖಂಡಿತವಾಗಿ ಸೇರಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡು ಈ ಕೃಷಿ ವಿಶ್ವವಿದ್ಯಾನಿಲಯ ಧಾರವಾಡದಲ್ಲಿ ಬೇಗನೆ ಸ್ಥಾಪನೆಯಾಗಲಿ ಎಂಬುದಾಗಿ ಹಾರೈಸಿ ಮಾನ್ಯ ಅಧ್ಯಕ್ಷಣಿಯವರು ಇಷ್ಟು ಮಾತನಾಡಲು ಅವಕಾಶ ಕೊಟ್ಟದಕ್ಕೆ ವಂದಿಪಿ ನನ್ನ ಮಾತನ್ನು ಮುಗಿಸುತ್ತೇನೆ.

SRI SUBHASH ASTURE (Bhalki).—Madam Speaker, while supporting the Mysore State Agricultural Universities Bill, 1973, presented by the Hon'ble Minister for Agriculture, I would like to say a few words with regard to the establishment of one more Agricultural University at Dharwar. In the Radhakrishnan's University Education Commission Report, it is clearly stated that much importance should be given to the Agricultural University, apart from the traditional Universities, for imparting education, carrying out research and taking agricultural science to the rural areas. In the Kothari

(SRI SUBHASH ASTURE)

Commission Report also an important recommendation has been made regarding polarising agricultural science in the rural areas and to educate the young farmers who are not in a position to obtain a degree in Agriculture. Keeping these recommendations in view, I feel that one more Agricultural University in the northern part of the State is essential. If we take the geographical conditions, crop pattern and rain-fall of our State into consideration, we can broadly classify our State into two zones, (1) southern zone and (2) northern zone, and the crops grown in these regions are quite different. In the southern region rice is commonly grown by irrigation sources and in some parts rain-fed crops are grown. In the northern region rain comes in the months of September and October which facilitates only kharif crops such as jowar and other dry crops. Taking this aspect also into consideration, one more Agricultural University specially in the northern region is essential to conduct research and extension of agricultural facilities to the people of north-karnatak areas.

It is my personal experience that when the Tungabhadra project was constructed and the people of that area got the facilities of canal water they were quite ignorant of making use of that water. This ignorance on the part of the people of that area resulted in huge migration of farmers from Andhra Pradesh, and today we see so many people who migrated from Andhra as permanent agriculturists in that area. In our State many big projects like Malaprabha, Ghataprabha, Krishna and other minor irrigation projects are coming up. Unless we train the people with regard to the use of these canal waters and educate the people by establishment research stations, it will not be beneficial to the people of that area. Keeping this aspect also in view, I feel that one more Agricultural University is very essential in some or the other part of north-Karnatak.

In Dharwar there is already one Agricultural College with all the facilities, equipment and huge land under its possession for conducting research and practical work on fields. As such if we have an Agricultural University at Dharwar by upgrading the existing College or converting the same into an University with additional facilities, it would benefit the farmers of the area to a great extent. The Hyderabad Karnatak area is quite backward in education, especially in agricultural sciences. Even after 25 years of independence; the agriculturists in those areas are used to the good old traditional methods, and the new techniques of agriculture and mechanism of agriculture has not touched these people. Ours is a drought affected area. There is no rain-fall since three years. If we take the data of rain-fall for the last 10 years in Bidar District, the rain-fall has come down to 8 to 10 inches from 41 inches in 1950, and the agriculturists are suffering a lot. Therefore it is very essential to teach them to make economic use of the available waters as also to change the crop pattern in the changing climatic conditions. I suggest that there is need for one more Agricultural University to be located in the northern area, one Agricultural College at Raichur, two Agricultural Schools in Gulbarga District, one Agricultural School in Bidar District and one more Agricultural School in Raichur District. I am sure the Hon'ble Minister for Agriculture who comes from that area will realise the need and he will be kind enough to upgrade the existing Agricultural School in Raichur into a full-fledged Agricultural College. Except a few industries in the State, our basic economy is based on agriculture and are agro-based industries in one or the other way, for instance cotton textiles, jute industry, canning of fruits, etc. In order to provide raw materials to these industries also, our agricultural system should be refashioned on modern lines based on climatic conditions, and for this research centres and colleges are essential.

The present Agricultural University situated at Bangalore has come to a saturation point, and it is very

(SRI SUBHASH ASTURE)

difficult to manage the existing research centres and colleges under this University. Therefore, there is need for one more Agricultural University.

MADAM SPEAKER:—The hon. member may continue his speech after recess.

The House will now rise and meet again after half-an-hour.

The House adjourned at thirty Minutes past three of the clock and reassembled at four of the clock.

Madam Speaker in the Chair

STATEMENT OF THE CHIEF-MINISTER

Re: The news-item on the behaviour of a Minister of State.

SRI D. DEVARAJ URS (Chief Minister): I wish to make the following statement.

On 18-5-1973, at about 11-30 A.M., the Hon'ble Minister of State for Home, Sri R. D. Kittur, telephoned to the Deputy Commissioner of Police, Law & Order, Bangalore City and requested him to meet him, at his residence. Accordingly, the Deputy Commissioner of Police proceeded to the residence of the Hon'ble Minister and met him there.

The Minister told the Deputy Commissioner that on his return from Delhi he had found one Miss Sumitra Desai, said to be from Bombay, staying in his house. The Minister told the Deputy Commissioner of Police that he understood from Miss Sumitra Desai that one Miss Padma

who was working in an institute for mentally retarded children in Bannerghatta was her friend. The Minister requested the Deputy Commissioner for assistance as he wanted Miss Sumitra Desai to be dropped at the residence of Miss Padma in the premises of the institute.

At the request of the Hon'ble Minister, the Deputy Commissioner instructed the Assistant Sub-Inspector of Munireddypalya Police Station to send a taxi to the Minister's residence. Since no taxi was available at Munireddypalya, the Assistant Sub-Inspector requested the Assistant Commissioner of Police, Malleswaram to send a taxi to Munireddypalya. Acting on the instructions of the Assistant Commissioner of Police, Malleswaram the Police Sub-Inspector of Malleswaram Police Station sent a taxi bearing No. MYD 1836 driven by one Sardar from the Malleswaram Taxi Stand to Munireddypalya Police Station. On arrival of the Taxi at Munireddypalya Police Station, since the driver did not know the residence of the Minister, a Constable who was in mufti was sent to show the house.

At about 2-00 P. M., when the taxi reached the residence of the Minister, Sri Renukappa, the Personal Assistant to the Minister brought a young lady from inside the house and made her sit in the taxi. It is reported that the lady was about 25 years of age, fair complexioned and was carrying a plastic hand-bag. Sri Renukappa asked the Police Constable also to go with them and directed the driver to proceed towards Bannerghatta road. According to the Constable, the lady, Miss Sumitra Desai, appeared to be a normal person and was talking during the journey with Sri Renukappa, sometimes in English and sometimes in Hindi. The Constable could not follow the conservation as he did not know these languages. On Bannerghatta Road, near the Ashrama of Shivabalayogi, Sri Renukappa directed the taxi to be driven to another building which had a board, "Asha Niketan".

(SRI D. DEVARAJ URS)

"Asha Niketan" is an institute for the mentally handicapped, managed by a Committee headed by Dr. Narayana Reddy of the Mental Hospital, Bangalore. The institute has 7 members of staff headed by one Sri John, who has been working there since October 1972. The institute has 13 inmates, all boys aged 17 years, mentally retarded, and admitted by their parents or guardians who also contribute according to their ability towards the cost of maintenance of the boys.

When the taxi arrived at the institute, at about 3-00 P. M. Sri Renukappa escorted Miss Sumitra Desai and met Sri John. Sri Renukappa introduced himself as the Personal Assistant to the Minister of State for Home and said that the Minister had directed that Miss Sumitra Desai should be admitted in the institute. While Sri John was explaining that the institute took in only mentally retarded young men aged 17 and over, another member of the staff, Miss D'Costa, who came there recognised Miss Desai as the person whom she had met in Panjim in Gao in January last wheh she had gone there on vacation. According to Miss D'Costa she met Sumitra Desai while waiting for a bus. They fell into conversation during the course of which Miss D'Costa had told Miss Desai that she was working in Bangalore.

Since Miss D'Costa recognised Miss Sumitra Desai, she was allowed to stay in one of the rooms of Ladies Staff Hostel. Thereafter, Sri Renukappa returned to Vidhana Soudha along with the Police Constable in the same taxi and further the Police Constable returned to Munireddypalya in it.

Next morning, *i. e.*, on 19-5-1973 by about 7-00 A.M. Miss Desai had bathed and was ready to leave the Ashram. Miss D' Costa states that Miss Sumitra Desai told her that she would either go to Goa or Bombay.

Sri John who had arrived at that time, offered to drop Miss Desai as he had to proceed to M/s. International Instruments Limited. Sri John and Miss Desai left in his van at about 9-30 A. M. Miss Desai got down at the Bannerghatta Circle and he proceeded to his destination. No further information is available regarding the movements or the whereabouts of Miss Sumitra Desai.

According to Miss D' Costa, Miss Sumitra Desai appeared to be normal though emotionally upset. It is also learnt that Miss Desai reportedly told Miss D' Costa when they met at Panjim that she was working for her Ph. D. in English literature. She had also told Miss D' Costa that her mother lived in Santa Cruz in Bombay. No cogent explanation as to why Miss Desai came to Bangalore is available.

Vigorous efforts are being made to locate Miss Sumitra Desai to enable further enquiries to be made.

I will also read the letter sent by the Minister concerned in this behalf :

"My dear Chief Minister,

Unfortunately there has been a lot of controversy both in the press and in the legislature regarding the lady by name Sumithra Desai who met me on 18-5-1973 at my residence. In this connection, I wish to inform you the relevant facts :

I returned from Delhi on 18-5-1973 and on reaching my residence at about 9 A.M. I was informed by my P. A. that a lady was waiting for an interview with me at my residence. I met this lady who introduced herself as Sumithra Desai and when the lady began to talk in an incoherent manner, I had no alternative but to inform the police to arrange to send her away.

(SRI D. DEVARAJ URS)

Unfortunately, this incident has developed into a controversy both in the press and legislature.

In these circumstances, I wish to avoid further embarassment and therefore, I feel that I should immediately resign from the Ministry in order to enable you to hold an enquiry into this matter so that the Government and the public may come to know the true facts.

I take this opportunity to thank you for all the consideration shown to me while in office".

The letter was sent to day by the Minister concerned. I have sent this letter of regsignation with my recommendation to the Governor to accept.

ಅಧ್ಯಕ್ಷರೇ. ಈ ಸಂದರ್ಭದಲ್ಲಿ ನಾನು ಈಗ ಮಂತ್ರಿಗಳಾಗಿದ್ದವರು ರಾಜೀನಾಮೆ ಕೊಟ್ಟಿರುವ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ.

ಈಗ ನಮ್ಮ ಪೋಲೀಸ್ ವರದಿ ಪ್ರಕಾರ ಏನು ನಡೆದಿದೆ ಎನ್ನುವುದನ್ನು ಈ ಸಭೆಯ ಮುಂದೆ ನಾನು ಯಾವುದೊಂದೂ ಮರೆ ಮಾಚದೆ ಇಟ್ಟಿದ್ದೇನೆ. ಇದಕ್ಕಿಂತ ಹೆಚ್ಚಿಗೆ ನನಗೆ ಅಧಿಕೃತವಾದ ಯಾವ ವರ್ತಮಾನವೂ ಸಿಕ್ಕಿಲ್ಲ. ಈಗಾಗಲೇ ಈ ವಿಷಯದ ಬಗ್ಗೆ ಹೇಳಿದ್ದೇನೆ. ನನ್ನ ಹೇಳಿಕೆಯ ಕೊನೆಯಲ್ಲಿ ಇದರ ಬಗ್ಗೆ ತೀವ್ರವಾಗಿ ಎನ್‌ಕ್ವೈರಿ ಮಾಡುತ್ತೇನೆ ಎಂದು ಹೇಳಿದ್ದೇನೆ. ಈ ಎನ್‌ಕ್ವೈರಿ ಪೂರ್ಣವಾಗಿ ಮಾಡಿ ಅದರಲ್ಲಿ ನಮಗೆ ಸಂಬಂಧಪಟ್ಟ ವಿಷಯಗಳು ಏನಾದರೂ ಇದೆಯೋ, ಇಲ್ಲವೇ ಎಂಬತಕ್ಕಂಥಾದ್ದೆಲ್ಲಾ ನಮ್ಮ ಸರಕಾರದ ಗಮನಕ್ಕೆ ಬರುವುದಕ್ಕೆ ಮುಂಚೆ ಈಗ ನನ್ನ ಮುಂದೆ ಇರತಕ್ಕಂಥ ವರದಿ ಏನು ಹೊರಬೀಳುತ್ತಾ ಇದೆ. ಇದೇ ಹಾಲಿ ನಮ್ಮ ಮುಂದೆ ಇರತಕ್ಕಂಥಾ ವರದಿ ಇದರಿಂದ ಏನು ಹೊರಬೀಳುತ್ತಿದೆ, ಏನು ಇನ್‌ಫರೆನ್ಸ್ ಮಾಡಬಹುದು ಎನ್ನುವ ವಿಚಾರದಲ್ಲಿ ನನಗೆ ದೊರೆಯತಕ್ಕಂಥಾದ್ದು ಮತ್ತು ಈಗ ನಮ್ಮ ಮುಂದೆ ಇರತಕ್ಕಂಥ ಅಧಿಕೃತ ವರದಿಯ ಆಧಾರದ ಮೇಲೆ ಮಿನಿಸ್ಟರ್ ಯಾವುದೇ ರೀತಿಯ ತಪ್ಪಿತಸ್ಥರು ಎಂದು ಹೇಳುವುದಕ್ಕೆ ಬರುವುದಿಲ್ಲ. ಹಾಗೂ ಯಾವುವೇ ರೀತಿಯಾಗಿ ಸಂಬಂಧಪಟ್ಟ ಮಿನಿಸ್ಟರ್ ಅವರ ಮಾರಲ್ ಟರ್ಪಿಟ್ಯೂಡ್ ಅಂದರೆ ನೈತಿಕ

ವಾದಂಥ ಅಸಭ್ಯ ವರ್ತನೆ ಏನಾದರೂ ಇವೆಯೇ ಎನ್ನುವುದೂ ಕೂಡ ಇದರಿಂದ ಏನೂ ಹೊರ ಬೀಳುವುದಿಲ್ಲ. ಮತ್ತೆ ಈ ಸಂದರ್ಭದಲ್ಲಿ ಹಿಂದೆ ಕೆಲವು ಘಟನೆಗಳು ಬೇರೆ ಕಡೆ ನಡೆದಿರತಕ್ಕಂಥಾದ್ದು ನಾವು ಸ್ವಲ್ಪ ಗಮನಕ್ಕೆ ತಂದುಕೊಂಡರೆ ಇಲ್ಲಿ ಸಭೆಯಲ್ಲಿ ಮಾತನಾಡುವಾಗ ಇಂಗ್ಲೆಂಡ್‌ನಲ್ಲಿ ನಡೆದಂಥ ಘಟನೆಯ ವಿಚಾರ ಹೇಳಿದರು. ಕ್ರಿಸ್ಟೈನ್ ಕೀಲರ್ ಮತ್ತು ಪ್ರಫ್ಯೂಮ ಬಗ್ಗೆ ನಡೆದಂಥ ಘಟನೆ ವಿಷಯ ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್ :—ಇನ್ನೂ ಎರಡು ಘಟನೆ ನಡೆದಿದೆ.

ಶ್ರೀ ಡಿ. ದೇವರಾಜ್ ಅರಸ್ :—ಆ ವಿಷಯಕ್ಕೂ ಬರುತ್ತೇನೆ. ಆ ಘಟನೆ ಏನು ಆಯಿತು ಎನ್ನುವುದು, ಅನೇಕ ಮಾನ್ಯ ಸದಸ್ಯರಿಗೆ ಅದರ ಪೂರ್ಣ ವಿವರ ಗೊತ್ತಿದೆ. ಕ್ರಿಸ್ಟೈನ್ ಕೀಲರ್ ಎನ್ನತಕ್ಕಂಥ ವ್ಯಕ್ತಿ ಪ್ರಾಸ್ಟಿಟ್ಯೂಟ್ ಅಗ್ಗಿ ಅವರ ಮನೆಗೆ ಒಬ್ಬ ರಷ್ಯನ್ ಡಿಪ್ಲಮೇಟ್ ಹೋಗುತ್ತಾ ಇದ್ದರೂ ಕೂಡ ಆಗಿಂದಾಗ್ಗೆ ಆಕೆಯ ಸಂಬಂಧವನ್ನು ಪ್ರಫ್ಯೂಮ ಎನ್ನತಕ್ಕ ಆಗಿನ ಕ್ಯಾಬಿನೆಟ್‌ನಲ್ಲಿದ್ದ ಡಿಫೆನ್ಸ್ ಮಿನಿಸ್ಟರ್‌ರವರು ಇಟ್ಟುಕೊಂಡು ಆಕೆಯ ಸ್ನೇಹ ಮಾಡಿದ್ದರು. ಅದು ಹೊರಬಿದ್ದಾಗ ಸರ್ಕಾರದ ದೃಷ್ಟಿಯಲ್ಲಿ, ಸಾರ್ವಜನಿಕ ದೃಷ್ಟಿಯಲ್ಲಿ ಅವೆಲ್ಲವೂ ಮೊರಲ್ ಟರ್ಪಿಟ್ಯೂಡ್ ಆಗುವುದರ ಜೊತೆಗೆ, ಸ್ಟೇಟ್ ಸೀಕ್ರೆಟ್ಸ್ ಏನಾದರೂ ಇದ್ದರೆ ಅಚಾತುರ್ಯದಿಂದ ಹೆಣ್ಣು ಮಕ್ಕಳ ಸ್ನೇಹದಿಂದ ಅವರಿಗೆ ಇವರು ಹೇಳಿಯಾಗಲಿ ಅಥವಾ ಇವರಿಂದ ಅವರು ಉಪಾಯದಿಂದ ಎಕ್ಸ್‌ಟ್ರಾಕ್ಟ್ ಮಾಡಿಯಾಗಲಿ ತಿಳಿದುಕೊಂಡು ಅದು ರಷ್ಯನ್ ಡಿಪ್ಲಮ್ಯಾಟ್‌ಗೆ ಕೊಡುವುದಕ್ಕೆ ಸಾಧ್ಯತೆ ಇರಬಹುದೇ ಎನ್ನುವ ಒಂದು ದೊಡ್ಡ ಅಪಾದನೆ ಬಂತು ಆ ಪ್ರಕರಣ ಏನು ಆಗಿದೆ ಎನ್ನುವುದು ನಮಗೆ ಗೊತ್ತು. ಅದಕ್ಕೆ ಅವರು ಆ ಸ್ಥಾನವನ್ನು ಬಿಡಬೇಕಾಗಿ ಬಂತು ಬಿಟ್ಟರು. ಮೊನ್ನೆತಾನೇ ಒಂದೆರಡು ಘಟನೆಗಳು ಬ್ರಿಟನ್‌ನಲ್ಲಿ ನಡೆದವು. ಅವೊತ್ತೇ ಅಲ್ಲಿ ಪತ್ರಿಕಾ ವರದಿ ಪ್ರಕಾರ ಸಂಬಂಧಪಟ್ಟ ಮಂತ್ರಿಗಳು ಕಾಲ್‌ಗರ್ಲ್ಸ್ ಜೊತೆಯಲ್ಲಿ ಒಂದು ರೀತಿಯಾದ ಸಂಪರ್ಕ ಇಟ್ಟುಕೊಂಡಿದ್ದರು. ಅದನ್ನು ಅವರೇ ಹೊರಗೆಡವಿದರು. ಅವರು ಪತ್ರಿಕಾ ವರದಿ ಪ್ರಕಾರ ಒಪ್ಪಿಕೊಂಡಿದ್ದಾರೆ, ಅವರು ರಿಸೈನ್ ಮಾಡಿದ್ದಾರೆ. ಅದನ್ನು ನಾನು ಹೇಳುವುದಕ್ಕೆ ಏತಕ್ಕೆ ಬಂತು ಎಂದರೆ ಈಗ ಬ್ರಿಟನ್‌ನಲ್ಲಿ ಮೊನ್ನೆ ನಡೆದ ಘಟನೆಗೂ, 10 ವರ್ಷದ ಹಿಂದೆ ನಡೆದ ಘಟನೆಗೂ ಈಗ ಪೂರ್ಣವಾಗಿ ನಮ್ಮ ಮುಂದೆ ಇರತಕ್ಕಂಥ ಘಟನೆಗೂ, ಎಲ್ಲಾ ರೀತಿಯಲ್ಲೂ ಅನ್ ಆಲ್ ಫೆವಾರ್ಸ್ ಎಂದು ನಾನು ಹೇಳುತ್ತೇನೆ—ಅದಕ್ಕೂ ಇದಕ್ಕೂ ಹೊಂದಾಣಿಕೆ ಬರುವುದಿಲ್ಲ. ಈಗತಾನೇ ಮಿನಿಸ್ಟರ್ ಅವರ ಸ್ಟೇಟ್‌ಮೆಂಟನ್ನು ಓದಿದೆ. ಅವರು ತಮಗೆ ಈ ವ್ಯಕ್ತಿಯ ಪರಿಚಯ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಮತ್ತೆ ಹೇಗೆ ನಡೆಯಿತು ಎಂದು ಪೋಲೀಸ್ ವರದಿಯೂ ಕೂಡ ಹೇಳಿದ್ದೇನೆ. ನಾನು ಅಂತ್ಯವಾಗಿ

(ಶ್ರೀ ಡಿ. ದೇವರಾಜ್ ಅರಸ್ :)

ಇದಕ್ಕಿಂತ ಹೆಚ್ಚಾಗಿ ಏನೂ ಇಲ್ಲ ಎಂದು ಹೇಳುತ್ತಾ ಇಲ್ಲ. ಹಾಗೆ ಹೇಳುವ ಪರಿಸ್ಥಿತಿಯಲ್ಲಿ ನಾನು ಇಲ್ಲ. ಈಗ ಹಾಗೆಂದ ಮಾತ್ರಕ್ಕೆ ಸಂಬಂಧಪಟ್ಟಿರತಕ್ಕಂಥ ಮಂತ್ರಿಗಳವರದ್ದು ಮಾರಲ್ ಟರ್ಪಿಟ್ಯೂಡ್ ಅಂದರೆ ಯಾವುದಾದರೂ ಒಂದು ರೀತಿಯ ಅಸಭ್ಯ ವರ್ತನೆ ನಡೆದಿದೆ ಎಂದು ಹೇಳುವುಕ್ಕೂ ಕೂಡ ಯಾವ ಅಧಾರವು ಇಷ್ಟರಿದಲೇ ನಮ್ಮ ಮುಂದೆ ಇಲ್ಲ. ಎಲ್ಲಿಯವರೆಗೆ ಏನು ಸರಿಯಾದಂಥ ಆಧಾರವು ಇಲ್ಲವೋ ಅಲ್ಲಿಯವರೆಗೆ ಸಂಬಂಧಪಟ್ಟ ವ್ಯಕ್ತಿ ಅವರು ನಿರಪರಾಧಿ ಅಂತಲೇ ನಾವು ಭಾವಿಸಬೇಕು. ಇದು ನೀತಿ, ನ್ಯಾಯ, ಧರ್ಮಕ್ಕೆ ಸಂಬಂಧಪಟ್ಟ ವಿಚಾರ. ಹಾಗಿದ್ದರೂ ಮತ್ತೆ ಏತಕ್ಕೆ ರಾಜೀನಾಮೆಕೊಟ್ಟಿದ್ದಾರೆ. ಮತ್ತೆ ನಾವು ಅದನ್ನು ಏತಕ್ಕೆ ಒಪ್ಪುತ್ತಿದ್ದೇವೆ ಎನ್ನತಕ್ಕ ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ. ನಿರಪರಾಧಿ ಎಂದು ಇಲ್ಲಿಯವರೆಗೆ ಸಾಬೀತು ಮಾಡಿಕೊಂಡಿದ್ದಾರೆ. ನಿರಪರಾಧಿ ಅಲ್ಲ. ಅಪರಾಧಿ ಎಂದು ತೀರ್ಮಾನವಾಗುವುದಕ್ಕಿಂತ ಮುಂಚಿತವಾಗಿ ಇವರು ರಾಜಿನಾಮೆ ಕೊಡಬೇಕಾದುದು ಏನು ಇದೆ ಅಥವಾ ನಾವು ಒಪ್ಪಬೇಕಾದುದೂ ಏನು ಇದೆ ಎಂಬತಕ್ಕ ಪ್ರಶ್ನೆಗಳು ಏಳುತ್ತವೆ. ಈಗ ನಾಲ್ಕಾರು ದಿವಸಗಳಿಂದ ಪತ್ರಿಕೆಯಲ್ಲಿ ಬಂದಂಥ ಈ ವರದಿಯನ್ನು ನೋಡಿರತಕ್ಕಂಥಾದ್ದು ಗೊತ್ತಿದೆ. ವರದಿ ಬಂತು, ನಾನಾ ರೀತಿಯಲ್ಲಿ ಹೀಗೆ ನಡೆಯಿತು ಹಾಗೆ ನಡೆಯಿತು ಎಂದು ಮತ್ತು ನಮ್ಮ ಅಸೆಂಬ್ಲಿಯಲ್ಲೂ ಕೂಡ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಇದು ಅನೇಕ ಊಹಾಪೋಹಗಳಿಗೆ ಎಡೆ ಕೊಟ್ಟಿದೆ. ಏನೇನು ತಿಳಿಯಬೇಕೋ ಅವುಗಳೆಲ್ಲವನ್ನೂ ಮಾನ್ಯ ಸದಸ್ಯರೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ಇಷ್ಟೆಲ್ಲಾ ಪ್ರಸ್ತಾಪ ನಡೆದು ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆಗಳಾಗಿ, ಪಬ್ಲಿಸಿಟಿ ಬಂದಾಗ ದೇಶದಲ್ಲೂ ಕೂಡ ಒಂದು ರೀತಿಯಾದ ಏನೋ ಒಂದು ಅಚಾತುರ್ಯ ಇರಬಹುದು ಎನ್ನತಕ್ಕ ಒಂದು ಅನುಮಾನ ಸ್ವಾಭಾವಿಕವಾಗಿ ಬರುತ್ತದೆ ಏನಾದರೂ ಅನುಮಾನ ಪಟ್ಟಿದ್ದರೆ ಅವರೆಲ್ಲಾ ದುರುದ್ದೇಶದಿಂದ ಅನುಮಾನಪಡುತ್ತಾರೆ ಎಂದು ಹೇಳುವುದು ಸರಿಯಾದುದೇನೂ ಅಲ್ಲ. ಇಂಥ ಸಂದರ್ಭಗಳಲ್ಲಿ ಅನುಮಾನ ಬಂದೇ ಬರುತ್ತದೆ. ಈ ರೀತಿಯಾಗಿ ಇಡೀ ವಾತಾವರಣವೆಲ್ಲ ಒಂದು ಅನುಮಾನದಿಂದ ಕೂಡಿರತಕ್ಕ ಸನ್ನಿವೇಶದಲ್ಲಿ, ಮಾನ್ಯ ಸದಸ್ಯರಿಗೆ ಕೂಡ ಒಂದು ಅನುಮಾನ ಬಂದಿರತಕ್ಕ ಸಂದರ್ಭದಲ್ಲಿ ಈ ಅನುಮಾನವನ್ನು ಹೋಗಲಾಡಿಸತಕ್ಕದ್ದು ಹೇಗೆ ? ಇದನ್ನು ಹೋಗಲಾಡಿಸಬೇಕಾದರೆ ಪೂರ್ಣವಾಗಿ ತನಿಖೆ ಮುಂದುವರಿಸಿ, ಏನ್‌ಕ್ವೈರಿ ಮಾಡಿ ಇದು ಏನು ಎಂದು ಇದರ ಸತ್ಯಾಸತ್ಯತೆಗಳನ್ನು ಕಂಡು ಹಿಡಿಯುತ್ತೇವೆ, ಅಲ್ಲಿಯವರೆಗೂ ಹೀಗೆಯೇ ಇರುವುದು, ಹೀಗೆಯೇ ಬಿಟ್ಟುಕೊಂಡಿರುವುದು ಯೋಗ್ಯವಲ್ಲ, ಅಲ್ಲಿಯವರೆಗೂ ಅವರು ಈ ಸ್ಥಾನದಲ್ಲಿ ಇರುವುದರಿಂದ ಬೇರೆಯವರ ಅಭಿಪ್ರಾಯದಲ್ಲಿ ಏನು ತಿಳಿಯುತ್ತಾರೆಯೋ ಏನೋ, ಒಂದು ಸ್ಥಾನಕ್ಕೆ ಅಂಟಿಕೊಂಡು ಕುಳಿತು

ಕೊಂಡಿದ್ದಾರೆ. ಇದನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಥವಾ ಅದನ್ನೆಲ್ಲ ಮುಚ್ಚುವುದಕ್ಕೆ ಅವರು, ಸರ್ಕಾರ, ಮುಖ್ಯಮಂತ್ರಿಗಳು ಪ್ರಯತ್ನ ಮಾಡುತ್ತಿದ್ದಾರೆ. ಎನ್ನತಕ್ಕ ಊಹಾಪೋಹಗಳಿಗೆ ಸಾಕಷ್ಟು ಎಡೆ ಕೊಡುತ್ತದೆ. ಆ ಕಾರಣದಿಂದ ಮಂತ್ರಿಗಳು ಕೂಡ ಈ ವಿಷಯಗಳನ್ನೆಲ್ಲ ಸೂಕ್ಷ್ಮವಾಗಿ ಅರ್ಥ ಮಾಡಿಕೊಂಡೇ ಅವರ ರಾಜಿನಾಮೆ ಕೊಟ್ಟಿದ್ದಾರೆ. ಅದರ ಜೊತೆಯಲ್ಲಿ ಮತ್ತೊಂದು ಏನು ಹೇಳಿದ್ದಾರೆಂದರೆ, ಕೊನೆಯದಾಗಿ ಇದರ ಬಗ್ಗೆ ಪೂರ್ಣವಾಗಿ ವಿಚಾರಣೆ ನಡೆಸಿ. ಎನ್‌ಕ್ವೈರಿ ಮಾಡಿಸಿ, ಎನ್‌ಕ್ವೈರಿಯಲ್ಲಿ 'ಏನು ಹೊರಬರುತ್ತದೆ. ಆ ನಿಜಾಂಶವನ್ನು ಹೊರಗೆಡಹಿ ಜನಗಳಿಗೂ ನಮಗೂ ಗೊತ್ತಾಗುವಂತೆ ಮಾಡತಕ್ಕದ್ದು ಸೂಕ್ತ, ವಿಚಾರಣೆ ಮಾಡುವುದಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ನಾನು ಆ ಸ್ಥಾನದಿಂದ ದೂರವಿರುತ್ತೇನೆ, ಸ್ಥಾನವನ್ನು ಬಿಡುತ್ತೇನೆ ಎಂದು ಹೇಳಿದ್ದಾರೆ. ಆದೇ ರೀತಿ ನಾನಾದರೂ ರಾಜಿನಾಮೆಯನ್ನು ಒಪ್ಪುವುದಕ್ಕೆ ಕಾರಣ, ನನ್ನ ಮನಸ್ಸಿಗೆ, ನಾನು ಮೊದಲೇ ಹೇಳಿದ ಹಾಗೆ, ಮತ್ತೆ ಮತ್ತೆ ಸ್ಪಷ್ಟಪಡಿಸಿ ಹೇಳುತ್ತಿದ್ದೇನೆ, ಶ್ರೀಮಾನ್ ಕಿತ್ತೂರ ಅವರು ಯಾವುದೋ ದೊಡ್ಡ ತಪ್ಪನ್ನು ಮಾಡಿದ್ದಾರೆ, ಆ ತಪ್ಪು ಮಾಡಿದ್ದರಿಂದ ಅವರು ರಾಜಿನಾಮೆಯನ್ನು ಒಪ್ಪಿ ಅವರನ್ನು ಕಳುಹಿಸಲೇಬೇಕು ಎನ್ನುವ ಉದ್ದೇಶದಿಂದ ನಾನು ರಾಜಿನಾಮೆಯನ್ನು ಒಪ್ಪುತ್ತಿಲ್ಲ. ಅವರು ಎಲ್ಲಿಯವರೆಗೆ ಉಚಿತವಾಗಿ ಅಪರಾಧಿಯಾಗತಕ್ಕ ಕೆಲಸ ಮಾಡಿದ್ದಾರೆ ಎಂದು ನಾವು ತಿಳಿಯುತ್ತೇವೆ, ಅಲ್ಲಿಯವರೆಗೂ ಅವರು ನಿರಪರಾಧಿ. ಹಾಗಾದರೆ ನಾನು ಏಕೆ ಅವರ ರಾಜಿನಾಮೆಯನ್ನು ಒಪ್ಪುತ್ತಿದ್ದೇನೆಂದರೆ ಇಂಗ್ಲೀಷಿನಲ್ಲಿ ಹೇಳಿರುವಂತೆ 'ಸೀಸರ್ಸ್ ವೈಫ್ ಮಸ್ಟ್ ಬಿ ಎಚ್ ಬೋವ್'. ಈ ರೀತಿಯ ಅನುಮಾನಗಳಿರುವಾಗ ನಾವು ಇದಕ್ಕೆ ಒಂದು ವಿರಾಮ ಕೊಡತಕ್ಕದ್ದು ಒಳ್ಳೆಯದು. ನಾವು ಇದನ್ನು ಒಪ್ಪುವುದರಿಂದ ನಮ್ಮ ಮೇಲೂ ಏನಾದರೂ ದೂರು ಮತ್ತೊಂದು ಬರಬಹುದು. ಸರ್ಕಾರದವರು ಇದನ್ನೆಲ್ಲ ಷೀಲ್ಡ್ ಮಾಡುವುದಕ್ಕೆ, ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಬರಬಹುದು. ಹಾಗೆ ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತಿಲ್ಲವೆನ್ನುವುದಕ್ಕೆ ಅವರ ರಾಜಿನಾಮೆಯನ್ನು ಒಪ್ಪಬೇಕು. ಎಂದು ತಿಳಿದು ರಾಜ್ಯಪಾಲರಿಗೆ ನನ್ನ ಶಿಫಾರಸ್ಸನ್ನು ಕಳುಹಿಸಿಕೊಟ್ಟಿದ್ದೇನೆ

ಶ್ರೀಮಾನ್ ಕಿತ್ತೂರ್ ಅವರು ಯುವಕರು, ಯೋಗ್ಯರು ಎಂದು ನನ್ನ ಭಾವನೆ ಮತ್ತು ರಾಜಕೀಯಕ್ಕೆ ಹೊಸದಾಗಿ ಬಂದಿರತಕ್ಕವರು. ಆದರೂ ಅವರಿಗೆ ನಾವು ಒಂದು ಜವಾಬ್ದಾರಿಯನ್ನು, ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಹೊಸದಾಗಿ ಬಂದಾಗಲೇ ಅವಕಾಶ ಮಾಡಿಕೊಟ್ಟಿದ್ದೆವು, ಅದನ್ನು ಅವರು ಚೆನ್ನಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ ಎಂದು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ. ಅವರ ಯೋಗ್ಯತೆಗನುಸಾರವಾಗಿ ಕೆಲಸವನ್ನು ಮಾಡಿದ್ದಾರೆ. ಈಗ ನನ್ನ ಮನಸ್ಸಿಗೆ ಒಂದು ರೀತಿಯಾದ ವ್ಯಥೆ ಇದೆ.

(ಶ್ರೀ ಡಿ. ದೇವರಾಜ್ ಅರಸ್)

ಒಂದೊಂದು ಸಂದರ್ಭದಲ್ಲಿ ರಾಜಕೀಯದಲ್ಲಿ ಕೆಲಸ ಮಾಡುವಾಗ—ಷೇಕ್ಸ್‌ಪಿಯರನ ನಾಟಕಗಳು ಜ್ಞಾಪಕಕ್ಕೆ ಬರುತ್ತವೆ. ಟ್ರಾಜೆಡಿ ನಾಟಕಗಳಲ್ಲಿ, ಅದನ್ನು ಓದಿದವರಿಗೆ ಗೊತ್ತಿದೆ, ಒಥೆಲೋ, ಹ್ಯಾಮ್ಲೆಟ್, ಕಿಂಗ್‌ಲೀಯರ್ ಇವುಗಳಲ್ಲಿ ಏನು ಬರುತ್ತದೆ ಎಂದರೆ ಮುಖ್ಯ ಪಾತ್ರದಾರಿಯಾಗಿ ಯಾರಿದ್ದಾರೆ ನಾಯಕ ಅಥವಾ ನಾಯಕಿ, ಒಥೆಲೋ ನಾಟಕದಲ್ಲಿ ನಾಯಕಿಯಾದ ಡೆಸ್ಡಿಮೋನ ಕೊಲೆ ಏಕೆ ಆಯಿತು? ಆಕೆ ಏನು ಅಪರಾಧ ಮಾಡಿದ್ದಳು ಎನ್ನುವುದು ಆ ನಾಟಕ ಓದಿರುವರಿಗೆಲ್ಲ ಗೊತ್ತಿದೆ. ಯಾರು ಎಷ್ಟೇ ಪ್ರಯತ್ನ ಮಾಡಿದರೂ ನೂಲಿನೆಯಷ್ಟು ಗಾತ್ರದ ಅಪರಾಧವನ್ನೂ ಕಂಡು ಹಿಡಿಯುವುದಕ್ಕಾಗುವುದಿಲ್ಲ. ಹಾಗಾದರೂ ಆಕೆ ತನ್ನ ಗಂಡನಿಂದಲೇ ತನ್ನ ಕತ್ತು ಹಿಸುಕಿಸಿಕೊಂಡು ಸಾಯುವುದಕ್ಕೆ ಅವಕಾಶವಾಯಿತು. ಆಕೆಯದು ಏನೇನೂ ಅಪರಾಧವಿಲ್ಲ ನನ್ನ ದೃಷ್ಟಿಯಲ್ಲಿ. ಇನ್ನೂ ದೊಡ್ಡ ದೊಡ್ಡ ಕ್ರಿಟಿಕ್ಸ್ ದೃಷ್ಟಿಯಲ್ಲಿ ಕೂಡಾ ಹಾಗೆಯೇ ಇರಬಹುದು. ಷೇಕ್ಸ್‌ಪಿಯರ್ ನಾಟಕದಲ್ಲಿನ ದೊಡ್ಡ ವಿಚಾರವೇನೆಂದರೆ "ಕ್ಯಾರೆಕ್ಟರ್ ಈಸ್ ಮ್ಯಾನ್ಸ್ ಫೇಟ್....ಮನುಷ್ಯನ ಅದೃಷ್ಟ ಅವನ ಗುಣದಿಂದಲೇ ಎಂದು. ಗುಣ ಎಂದರೆ ಅದು ಒಳ್ಳೆಯದಿರಬಹುದು, ಕೆಟ್ಟದ್ದಿರಬಹುದು. ಮುಗ್ಧತೆ (ಇನ್ನೊಸೆನ್ಸ್) ಎನ್ನುವುದು ಒಂದು ಗುಣ. ಮುಗ್ಧತೆ ಎನ್ನುವುದು ಒಳ್ಳೆಯ ಗುಣವೋ, ಕೆಟ್ಟ ಗುಣವೋ ಎಂದು ಸಾರ್ವತ್ರಿಕವಾಗಿ ಕೇಳಿ ನೋಡಿದಾಗ ಮುಗ್ಧತೆ ಕೆಟ್ಟ ಗುಣ ಎಂದು ಹೇಳುವುದಿಲ್ಲ, ಒಳ್ಳೆಯ ಗುಣದಲ್ಲಿ ಅದು ಸೇರುತ್ತದೆ. ಜನರಾಸಿಟಿ ಒಳ್ಳೆಯ ಗುಣ. ಆದರೂ ಮನುಷ್ಯ ಅನೇಕ ವೇಳೆ ಇಂಥ ಸುಳಿಗೆ ಸಿಕ್ಕಿ ಅದರಿಂದ ನೋವನ್ನು ಅನುಭವಿಸಬೇಕಾಗಿ ಬರುತ್ತದೆ. ಮುಗ್ಧತೆಯಿಂದ, ಜನರಾಸಿಟಿಯಿಂದ ಜನರು ದೊಡ್ಡ ದೊಡ್ಡ ಗಂಡಾಂತರಗಳಿಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. 'ಜನರಸ್ ಟು ಎ ಫಾಲ್ಟ್', ಎನ್ನುವ ಹಾಗೆ, ವಿಪರೀತವಾಗಿ ಒಂದು ಗುಣ ಮನುಷ್ಯನಲ್ಲಿ ಇದ್ದರೆ ಅದೇ ಅವನ ಅವನತಿಗೆ. ತೊಂದರೆಗೆ ಈಡಾಗುವುದಕ್ಕೆ ಕಾರಣವಾಗಿದೆ ಎನ್ನುವುದು ಅದರಿಂದ ಗೊತ್ತಾಗುತ್ತದೆ. ಅದೇ ರೀತಿ ನಾವು ನಡೆದಿರುವ ಹಾಗೆ ವಿಚಾರ ತೆಗೆದುಕೊಳ್ಳೋಣ. ಯಾರೋ ಒಬ್ಬರು ಮನೆಗೆ ಬಂದಿದ್ದಾರೆ, ಕೆಲವು ವಿಚಾರಗಳಲ್ಲಿ ಮಾತನಾಡುವಾಗ ಅವರು ಮಾತನಾಡಿದ ರೀತಿ ಸರಿಯಿಲ್ಲ ಎಂದು ಅವರನ್ನು ಕಳುಹಿಸಿದರು. ಅವರ ಜೊತೆಗೆ ಅವರ ಪರ್ಸನಲ್ ಅಸಿಸ್ಟೆಂಟನ್ನು ಕಳುಹಿಸಿಕೊಟ್ಟರು. ಅವರನ್ನು ಬಿಟ್ಟು ಬಂದರು. ಬೆಳಿಗ್ಗೆ ಎದ್ದು ಅವರು ಎಲ್ಲೋ ಹೋಗಿದ್ದಾರೆ. ಇಷ್ಟು ಮಾತ್ರದಿಂದಲೇ ಯಾರಿಗಾದರೂ ಅನ್ನಿಸುತ್ತದೆ, ನನಗೊಬ್ಬನಿಗೇ ಅಲ್ಲ, ಇದರಿಂದ ಏನು ಅಪರಾಧವಾಗಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಕೆಲವು ಊಹಾಪೋಹಗಳಿಗೆ ಎಡೆ ಕೊಡುವುದು, ಹೀಗಿರಬಹುದೋ ಏನೋ, ಹಾಗಿರಬಹುದೋ ಏನೊ ಎಂದು ಊಹೆ ಮಾಡಿಕೊಂಡು ಹೋಗುವುದು, ಖಚಿತವಾಗಿ ಹೀಗೆಯೇ ಸರಿ ಎಂದು ಹೇಳುವುದು ಕಷ್ಟ

ವಾಗುತ್ತದೆ. ಅದಕ್ಕೆ ನಾನು ವಿಚಾರಣೆಯಾಗಿ, ಸತ್ಯಾಂಶ ಹೊರಬೀಳುವ ವರೆಗೂ ಅವರು ಇನ್ನೊಸೆಂಟ್. ಈ ಸಂದರ್ಭದಲ್ಲಿ ಒಂದು ರೀತಿಯಲ್ಲಿ ನಾನು ಶ್ರೀ ಕಿತ್ತೂರರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ ಎಂದರೂ ಕೂಡ ತಪ್ಪಾಗಲಾರದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಪ್ರೇರಣೆಯಿಂದ ರಾಜಿನಾಮೆ ಕೊಡಲಿಲ್ಲ, ತಮ್ಮಂಥವರ ಒತ್ತಾಯದಿಂದ ಕೊಟ್ಟಿದ್ದಾರೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ನೀವು ತ್ರಿಕಾಲಜ್ಞಾನಿಗಳಾಗಿದ್ದೀರಿ. ಎಲ್ಲರ ಮನಸ್ಸನ್ನೂ ಹೊಕ್ಕು ಹೇಳುತ್ತೀರಿ. ಇದು ಸೌಜನ್ಯವಾದ ಮಾತಲ್ಲ.

ಮತ್ತೆ ಇನ್ನೊಂದು ವಿಚಾರವೇನೆಂದರೆ, ಇದರ ಬಗ್ಗೆ ಯಾರೂ ಕೂಡಾ ಎಲ್ಲಿಯೂ ಕಂಪ್ಲೇಂಟ್ ಕೊಟ್ಟಿಲ್ಲ, ಆಕೆಯೂ ಯಾರ ಮೇಲೆಯೂ ಎಲ್ಲಿಯೂ ಕಂಪ್ಲೇಂಟ್ ಕೊಟ್ಟಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾಡುವುದಕ್ಕೆ ಅವಕಾಶವಿದ್ದರೆ ತಾನೆ.

ಶ್ರೀ ಡಿ. ದೇವರಾಜ ಅರಸ್.—ಊಹಾ ಪ್ರಪಂಚದಲ್ಲಿರುವವರು ಏನು ಬೇಕಾದರೂ ಮಾತನಾಡಿಕೊಳ್ಳಬಹುದು.

4-30 P.M.

ಶ್ರೀ ವಾಟಾಳ್ ನಾಗರಾಜ್ :—(ಚಾಮರಾಜಪೇಟೆ)

ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ತೆಗೆದುಕೊಂಡಿರುವ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಒಂದು ದಿಟ್ಟವಾದ ನಿಲುವನ್ನು ಇದರ ಬಗ್ಗೆ ಅವರು ತೆಗೆದುಕೊಂಡಿದ್ದಾರೆ, ನಾಲ್ಕು ದಿನಗಳಿಂದಲೂ ನಾವು ಒತ್ತಾಯ ಮಾಡಿದನಂತರ ಅವರು ಇಂತಹ ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಹಿಂದೆ ಇದೇ ರಾಜ್ಯದಲ್ಲಿ ಶ್ರೀ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ ಶ್ರೀ ಟಿ. ಸಿದ್ದಲಿಂಗಯ್ಯನವರ ಪ್ರಕರಣ ನಡೆದು ಆಗ ಶ್ರೀ ಸಿದ್ದಲಿಂಗಯ್ಯನವರು ರಾಜೀನಾಮೆ ಕೊಟ್ಟರು. ಇದಾದ ನಂತರ ಇಂದು ನಡೆದಿರುವ ಇಪ್ಪತ್ತೈದು ವರ್ಷಗಳ ಇತಿಹಾಸದಲ್ಲಿ ಇಂತಹ ಒಂದು ಸ್ವಾಗತಾರ್ಹವಾದ ನಿರ್ಣಯವನ್ನು ಮಾಡಿರತಕ್ಕದ್ದು ಇದೇ ಮೊದಲು. ಇದರ ಬಗ್ಗೆ ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಮುಖ್ಯವಾಗಿ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದಾರೆ ಇದರಲ್ಲಿ ಯಾವ ಅನುಮಾನವೂ ನಮಗೆ ಇಲ್ಲ. ಆದರೆ ನಾವು ಸಲಹೆ ಮಾಡುವುದು ತನಿಖೆ ಮಾಡುವಾಗ ಇದು ನ್ಯಾಯೋಂಗ ತನಿಖೆಯಾಗಬೇಕು. ಇದಕ್ಕಾಗಿ ಒಂದು

(ಶ್ರೀ ವಾಟಾಳ್ ನಾಗರಾಜ್)

ಜುಡಿಷಿಯಲ್ ಎನ್‌ಕ್ವೈಯರಿಯಾಗಬೇಕೆಂದು ಸಲಹೆ ಮಾಡುತ್ತೇನೆ. ಇದರಲ್ಲಿ ನಾವು ಯಾರ ಪ್ರಭಾವಕ್ಕೂ ಈಡಾಗುವುದಿಲ್ಲ ಎನ್ನುವುದನ್ನು ಅವರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಜುಡಿಷಿಯಲ್ ಎನ್‌ಕ್ವೈರಿ ಎಂದು ಮಾಡಿದರೆ ಬಹುಶಃ ನನಗನಿಸುವುದು ಇದರಲ್ಲಿ ಅನೇಕ ಸತ್ಯಾಂಶಗಳು ಹೊರಬೀಳತಕ್ಕ ಸಂದರ್ಭಗಳು ಬರುತ್ತದೆ. ಇದಕ್ಕಾಗಿ ನಾನು ಸರಕಾರದಲ್ಲಿ ಸಲಹೆ ಮಾಡುವುದು ಒಬ್ಬರು ನಿವೃತ್ತ ಶ್ರೇಷ್ಠ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಇಲ್ಲವೇ ರಾಜ್ಯದಲ್ಲಿರುವ ಒಬ್ಬ ಶ್ರೇಷ್ಠ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ಜನರಿಗೆ ಇಂದು ಉಂಟಾಗಿರುವ ಅನೇಕ ಅನುಮಾನಗಳು ಪರಿಹಾರವಾಗಲು ಅವಕಾಶವಾಗುತ್ತವೆ. ಇದಕ್ಕಾಗಿ ಒಂದು ಜುಡಿಷಿಯಲ್ ಎನ್‌ಕ್ವೈರಿ ಆಗಲೇಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಹೇಳುವಾಗ ಆಶಾ ನಿಕೇತನದ ಹೆಸರನ್ನೂ ಹೇಳಿದರು. ಇದರಲ್ಲಿ ಮಿಸ್. ಡಿ ಕಾಸಾ ಅನ್ನುವವರಿಗೂ ಶ್ರೀಮತಿ ಸುಮಿತ್ರಾ ದೇಸಾಯಿಯವರಿಗೂ ಪರಿಚಯವಿದೆ ಎಂದು ಗೊತ್ತಾಗಿದೆ ಮತ್ತು ಈಗಾಗಲೇ ಎಲ್ಲರಿಗೂ ಗೊತ್ತಿರುವ ಹಾಗೆ ಸುಮಿತ್ರಾ ದೇಸಾಯಿಯವರನ್ನು ಗೋವಾದಲ್ಲಿ ಭೇಟಿ ಮಾಡಿ ಐದು ನಿಮಿಷಗಳ ಕಾಲ ಪರಿಚಯ ಇತ್ತು ಎಂದು ಹೇಳಿದರು. ಇಂತಹವರನ್ನು ಇಲ್ಲಿಗೆ ಬಂದಾಗ ಇವರನ್ನು ಆಶ್ರಮದಲ್ಲಿ ಟ್ಟುಕೊಳ್ಳಬೇಕಾದ ಪ್ರಮೇಯವಾದರೂ ಏನಿತ್ತು ? ಇದರಿಂದ ಇವರಿಗೆ ಸ್ನೇಹವಿತ್ತು ಎನ್ನುವುದು ಗೊತ್ತಾಗುತ್ತದೆ. ಇದರ ಬಗ್ಗೆ ಸರಿಯಾಗಿ ಪತ್ತೆ ಹಚ್ಚಿ ಸಮಗ್ರವಾದ ತನಿಖೆ ನಡೆಸಬೇಕಾದುದು ಸರಕಾರದ ಕರ್ತವ್ಯ. ಇನ್ನೊಂದು ಮಾತನ್ನು ಇಲ್ಲಿ ತಮ್ಮ ಗಮನಕ್ಕೆ ತರಬೇಕಾಗಿದೆ. ಶ್ರೀಮತಿ ಸುಮಿತ್ರಾ ದೇಸಾಯಿ ಎನ್ನುವವರು ಬೊಂಬಾಯಿಯಲ್ಲಿ ಸಂತಕ್ರೂಜ್‌ನಲ್ಲಿ ಅವರ ಸಂಬಂಧೀಕರ ಮನೆಯಲ್ಲಿದ್ದರು ಎನ್ನುವ ಒಂದು ಅಂಶ ಕೂಡ ಇದರಲ್ಲಿ ಬಂದಿದೆ. ಇದುವರೆಗೂ ಇಲ್ಲಿ ಇವರು ಇಲ್ಲ ಎಂದು ಹೇಳುತ್ತಿದ್ದಾರೆ. ನನಗೆ ಗೊತ್ತಿರುವ ಮಾಹಿತಿಗಳ ಪ್ರಕಾರ ಅವರು ಬೆಂಗಳೂರಿನಲ್ಲೇ ಇದ್ದಾರೆ ಮತ್ತು ಯಾವುದೋ ಜಾಗದಲ್ಲಿ ಮುಚ್ಚಿಟ್ಟಿದ್ದಾರೆ ಎಂದು ನನ್ನ ಭಾವನೆ. ಇದಕ್ಕಾಗಿ ನಾನು ತಮ್ಮ ಮುಂದೆ ಕೆಲವು ಅಂಶಗಳನ್ನು ಇಡಬೇಕಾಗಿದೆ. ಅವರು ಜೀವಂತವಾಗಿದ್ದಾರೋ ಇಲ್ಲವೋ ಅದನ್ನು ಈ ಸಭೆಗೆ ತಿಳಿಸಬೇಕು ಮತ್ತು ಇವರಿಗೆ ಯಾರಾದರೂ ನೆಂಟರಿದ್ದಾರೆಯೋ ? ಇವುಗಳ ಎಲ್ಲ ವಿವರಗಳನ್ನು ತಿಳಿಯಬೇಕಾದರೆ ಒಂದು ಜುಡಿಷಿಯಲ್ ಎನ್‌ಕ್ವೈರಿ ಎಂದು ಮಾಡಿದರೆ ಎಲ್ಲ ವಿವರಗಳೂ ಹೊರಬರಲು ಅವಕಾಶವಾಗುತ್ತದೆ. ಅದಕ್ಕಾಗಿ ನಾನು ಕಳಕಳಿಯಿಂದ ಮನವಿಮಾಡಿಕೊಳುವುದು ಒಂದು ನ್ಯಾಯಾಂಗ ವಿಚಾರಣೆಯನ್ನು ಇದರಲ್ಲಿ ಮಾಡಲೇಬೇಕು ಎಂದು. ಇನ್ನೊಂದು ವಿಚಾರ ತಮಗೆ ಹೇಳುವುದು ಕೆಲ ದಿನಗಳ

ಹಿಂದೆ ಪ್ರಪಂಚ ಎನ್ನುವ ಪತ್ರಿಕೆಯಲ್ಲಿ ಮಹಾರಾಷ್ಟ್ರ ಸರಕಾರದಿಂದ ನಮ್ಮ ರಾಜ್ಯದ ಮಂತ್ರಿಗಳೊಬ್ಬರ ಬಗ್ಗೆ ಈ ಸರಕಾರಕ್ಕೆ ಪತ್ರ ಬಂದಿತ್ತು ಎಂದು ಹೇಳಲಾಗಿತ್ತು. ಅಂಥಹ ಲೆಟರೇನಾದರೂ ಈ ಸರಕಾರಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ರತಕ್ಕ ಎಲ್ಲ ವಿಚಾರವನ್ನು ತಮಗೆ ತಿಳಿಸಿದ್ದೇನೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಬರೀ ಊಹೆಯಿಂದ ಹೇಳುತ್ತಿರುವ ಸುಳ್ಳು ಮಾತು ಅದು. You are wrongly quoting me.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ನಮಗೆ ಇದರಲ್ಲಿ ಬಂದಿರತಕ್ಕ ಕೆಲವು ಸಂಶಯಗಳನ್ನು ತಮ್ಮ ಮುಂದೆ ತಿಳಿಸುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಕೊಟ್ಟಿರುವ ಹೇಳಿಕೆಯ ಪ್ರಕಾರ ಇದರ ವಿಚಾರಣೆ ಇಲ್ಲಿಗೇ ಮುಕ್ತಾಯವಾಗಲಿಲ್ಲ. ಇದು ಈ ಘಟನೆಯ ಮೊದಲ ಮೆಟ್ಟಲು. ಇದರ ಎಲ್ಲ ಸತ್ಯಾಂಶಗಳನ್ನೂ ತಿಳಿಯಲು ಇದರ ಬಗ್ಗೆ ಪೂರ್ಣವಾಗಿ ವಿಚಾರಣೆ ಮಾಡುವುದು ಅಗತ್ಯ ಎಂದು ಮಾನ್ಯ ಮಂತ್ರಿಗಳೇ ಈಗ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು.—ಎಲ್ಲ ವಿಚಾರಗಳನ್ನೂ ಸರಕಾರದವರು ಈಗಾಗಲೇ ತಮಗೆ ಒದಗಿಸಿ ಕೊಟ್ಟಿದ್ದಾರೆ. ಇದರ ಮೇಲೆ ತಾವು ಮತ್ತೇನು ಹೇಳುವುದಿದೆ?

ಶ್ರೀ ಹೆಚ್. ಡಿ. ದೇವೇಗೌಡ.....ಮಾನ್ಯ ಮುಖ್ಯ ಮಂತ್ರಿಗಳು ಇದರಲ್ಲಿ ಯಾವ ರೀತಿ ಎನ್‌ಕ್ವೈರಿ ಮಾಡುತ್ತಾರೆ ಅದನ್ನು ನಮಗೆ ತಿಳಿಸಿದರೆ ಸಾಕು. ಪೋಲೀಸು ಎನ್‌ಕ್ವೈರಿ ಮಾಡುತ್ತಾರೆಯೋ ಇಲ್ಲವೇ ಬೇರೆ ಯಾವ ರೀತಿ ಎನ್‌ಕ್ವೈರಿ ಮಾಡುತ್ತಾರೆ ಅದನ್ನು ಸಭೆಗೆ ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ್.—ನಾನಾಗಲೇ ಹೇಳಿದೆ, ನನಗೆ ಎಲ್ಲ ಮಾಹಿತಿಗಳೂ ಇನ್ನೂ ದೊರೆತಿಲ್ಲ. ಇದಕ್ಕಾಗಿ ಮೊದಲು ಪೋಲೀಸ್ ಎನ್‌ಕ್ವೈರಿ ಮಾಡಿ ಅದರ ವರದಿಯನ್ನು ತರಿಸಿಕೊಂಡು ಅದರಿಂದ ನಮ್ಮ ಮನಸ್ಸಿಗೆ ಯಾವ ಯಾವ ವಿಚಾರಗಳು ತಿಳಿಯುತ್ತವೆ ಅದರ ಮೇಲೆ ಎನ್‌ಕ್ವೈರಿ ಮಾಡಬೇಕಾಗುತ್ತದೆ. ಯಾವ ರೀತಿ ಎನ್‌ಕ್ವೈರಿ ಮಾಡಬೇಕು ಎನ್ನುವುದನ್ನು ನಮಗೆ ಬಿಡಿ. ನಾವು ಎನ್‌ಕ್ವೈರಿ ಮಾಡಿಸುತ್ತೇವೆಂದು ಸ್ಪಷ್ಟವಾಗಿ ಅಲ್ಲಿ ತಿಳಿಸಿದ್ದೇನೆ. ಮಾನ್ಯ ಮಂತ್ರಿಗಳು ರಾಜೀನಾಮೆ ಕೊಟ್ಟಿರುವ ಪತ್ರದಲ್ಲೂ ಎನ್‌ಕ್ವೈರಿ ಮಾಡಬೇಕು ಎನ್ನುವ ಸೂಚನೆಯನ್ನೂ ಕೊಟ್ಟಿದ್ದಾರೆ. ಅವರ ದೃಷ್ಟಿಯಿಂದಲೂ ಇದನ್ನು ಎನ್‌ಕ್ವೈರಿ ಮಾಡಿಸಬೇಕಾಗುತ್ತದೆ. ಆದರೆ ಯಾವ ರೀತಿ ಎನ್‌ಕ್ವೈರಿ ಮಾಡಬೇಕು ಎನ್ನುವುದನ್ನು ಈಗಲೇ ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಶಯ ಇದರಲ್ಲಿ ಬರುವುದಕ್ಕೆ ಕಾರಣ ಪೋಲೀಸರ ಮುಖೇನ ವಿಚಾರಣೆ ನಡೆಸುವುದರಿಂದ ಇದರ ನಿಜವಾದ ಅಂಶ ಹೊರಬರಲಿಕ್ಕೆ ಸಾಧ್ಯವೇ ಇಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಾಗಲೇ ಶ್ರೀಮತಿ ಸುಮಿತ್ರಾ ದೇಸಾಯಿ ಎನ್ನುವವರು ಬೊಂಬಾಯಿಯಲ್ಲಿದ್ದಾರೆಂದು ತಮಗೆ ಗೊತ್ತಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—We do not know anything except that ಸಂತಾಕ್ರೂಜನಲ್ಲಿ ಅವರ ತಾಯಿ ಮನೆ ಇದೆ ಎಂದು ಹೇಳಿದ್ದಾರೆ. ಮುಂದೆ ನೋಡೋಣ.

ಶ್ರೀ ಕಾಗೋಡು ತಿಮ್ಮಪ.—ಸಾಕಷ್ಟು ವಿಚಾರಗಳು ಇಂದು ಬಂದಿರುವ ಹೇಳಿಕೆಯಲ್ಲಿ ಬಂದಿಲ್ಲ. ತನಿಖೆ ಮಾಡುತ್ತೇವೆಂದು ಮಾತ್ರ ಇದೆ. ಯಾವ ರೀತಿ ತನಿಖೆ ಮಾಡುತ್ತೇವೆ ಎಂದು ಹೇಳಲಿಲ್ಲ, ನಿಮ್ಮ ಕೈ ಕೆಳಗೆ ಇರುವ ಪೋಲೀಸು ಇಲಾಖೆಯವರ ಮೂಲಕ ಇವರೆಲ್ಲಿದ್ದಾರೆ ಎನ್ನುವುದನ್ನು ಪತ್ತೆ ಹಚ್ಚಬಹುದಾಗಿತ್ತು. ಇದನ್ನೇಕೆ ಮಾಡಲಿಲ್ಲ? ಇದು ಪೋಲೀಸು ಇಲಾಖೆಯ ಇನ್ ಎಫಿಷಿಯನ್ಸಿ ಅಲ್ಲವೇ?

SRI D. DEVERAJ URS.—I refute his statement. If he knows anything, let him give information. ಸುಮ್ಮನೆ ಇಲ್ಲಿ ಯಾವ ಯಾವುದನ್ನೂ ಹೇಳುವುದು ಬೇಡ. ಬೆಂಗಳೂರಿನಲ್ಲಿದ್ದಾರೋ ಇಲ್ಲವೇ ಬೇರೆ ಕಡೆಗೆ ಹೋಗಿದ್ದಾರೊ ಅದು ನಮಗೆ ಗೊತ್ತಿಲ್ಲ. ಆದುದರಿಂದ ತಾವು ಇಲ್ಲಿ ಹೇಗೆ ಅವರು ಬಾಂಬೆಗೆ ಹೋಗಿದ್ದಾರೆ, ಇಲ್ಲವೇ ಗೋವಾಕ್ಕೆ ಹೋಗಿದ್ದಾರೆಂದು ಹೇಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ನಮಗೆ ಇದು ಗೊತ್ತಿಲ್ಲ. ಆದಕಾಗಿ ತಮ್ಮಲ್ಲಿ ವಿವರಣೆ ಕೇಳುತ್ತಿರುವುದು.

ಶ್ರೀ ಡಿ. ದೇವರಾಜ್ ಅರಸ್.—ತನಿಖೆ ಮಾಡಬೇಕೆಂದರೆ ನಾನು ಮನೆ ಮನೆಗೂ ಹೋಗಿ ಹುಡುಕಲೇನು?

ಶ್ರೀ ಕಾಗೋಡು ತಿಮ್ಮಪ್ಪ.—ಪೋಲೀಸು ಇಲಾಖೆ ಮೂಲಕ ನೀವು ನೋಡಬಹುದು.

ಶ್ರೀ ಡಿ. ದೇವರಾಜ್ ಅರಸ್.—ಈಗಾಗಲೇ ನಾನು ಎಲ್ಲ ವಿವರಗಳನ್ನೂ ಹೇಳಿದ್ದೇನೆ

I appeal that there is no point in discussing these matters like this. I have categorically stated that we are taking vigours steps.

ಶ್ರೀ ಕಾಗೋಡು ತಿಮ್ಮಪ್ಪ.—ಈ ಹೆಣ್ಣುಮಗಳನ್ನು ಬೆಂಗಳೂರಿಗೆ ತರಬೇಕಾದರೆ ಇದರ ಹಿನ್ನೆಲೆ ಏನಿತ್ತು? ಇದುವರೆಗೂ ಈ ಹೆಣ್ಣುಮಗಳು ಎಲ್ಲಿದ್ದಾರೆನ್ನುವುದನ್ನು ಪತ್ತೆ ಹಚ್ಚಲಾಗಲಿಲ್ಲ, ಇಷ್ಟರೊಳಗೆ ಪತ್ತೆ ಮಾಡಬಹುದಾಗಿತ್ತು. ಇಂತಹ ಹೆಣ್ಣು ಮಗಳನ್ನು ಆಶ್ರಮಕ್ಕೆ ಏಕೆ ಕಳುಹಿಸಬೇಕಾಗಿತ್ತು ?

SRI D. DEVERAJ ARS.—I do not like this. Is it cross-examining? I again say that you leave it at that.

ಶ್ರೀ ಕಾಗೋಡು ತಿಮ್ಮಪ್ಪ :—ನಾನೇಕೆ ಇದರ ಬಗ್ಗೆ ಹೇಳುತ್ತೇನೆ ಎಂದರೆ ಇದರ ಬಗ್ಗೆ ಕೂಲಂಕಷವಾಗಿ ಒಂದು ನ್ಯಾಯಾಂಗ ವಿಚಾರಣೆ ಮಾಡಲೇಬೇಕು.

ಅಧ್ಯಕ್ಷರು :— ನಿಮಗೋಸ್ಕರ ಅಲ್ಲದಿದ್ದರೂ ಅವರಿಗೋಸ್ಕರವಾದರೂ ತನಿಖೆ ಮಾಡಿಸಲೇಬೇಕು.

SRI C. M. ARMUGHAM.—Madam Speaker, I want to submit one point. From the statement made by the Chief Minister it appears to me that Sri Kittoor is innocent and he is not involved in this affair. If that is so, why did he resign? That is the point over which we have to consider. If it going to be enquired by the Police, why did not the police take any written statement either from the Minister or the girl?

When a Minister makes a complaint to the police that a girl from Bombay has come and she should be removed, the police ought to have enquired who she was, how she came to Bangalore and then they should have sent her back to Bombay, her home town. These are the two points which the Hon. Chief Minister should consider.

The third point is it will become impossible for a politician who had lot of political enemies to survive in any post or appointment even as a Minister. If Mr. Kittoor is proved innocent then what is the alternative? Then is it a plot against him?

SRI D. DEVARAJ URS :—I may tell the House that I am as much interested as anybodyelse and I am also equally pained to accept the resignation of the person whose guilt is not yet proved. But I have explained the reasons and the circumstances under which I have accepted his resignation. But let me assure the House and the hon. Member Sri Arumugham that I am also very much interested to find out the verocity of reports and the propoganda that has been going on about this matter. I want to put an end to this. I am not going to sleep over the matter because I am primarily interested in that young gentleman not merely because he belongs to my party but because he has come to politics for the first time and it is not proper on the part of anybody to ruin the character of a young gentleman because of some political bias or prejudice. That is why, I am also equally keen and anxious to protect that young gentleman. Therefore, I said a virgorous enquiry will be made and I will not keep quiet till the truth of the matter is brought out.

SRI C. M. ARMUGHAM.—Therefore, Madám Speaker, if it is a plot his career is ruined. Already there were some demonstrations against him that he should be removed. But this has happened. To me when this question was raised I thought and I believed that he would have involved in this episode. But after hearing the statement there is no fact at all. Bnt then how is it he has resigned? We have no other documents except to believe the papers. From the papers I could see that Member of the House was sent to advise Mr. Kittoor to resign. Of course, nobody refuted that press report. Therefore is he involved in this episode or is it a plot? If it is a plot it is impossible for a man to survive who has got enemies in politics. Even Mahatma Gandhiji, Madam Speaker, had an enemy not to wound him but to shoot him to death. That is the position of the contry wherein we are living. Therefore tomorrow anybody say a lady may come to somebody's house and

it may appear in the press that so and so, a good looking girl, with curly hairs and a fine nose....

SRI D. DEVARAJ URS —Such a thing has happened in this country in some other connection.

SRI C. M. ARUMUGHAM.—Therefore, Madam, the man who is responsible for this political assasination should be hauled up otherewise, there would be nobody worth the name in politics and in public life. Then a word about press I would like to say. I have been seeing so many journals and weeklies. They give so much of news. Particularly the weeklies gives so many news items· Every week they say that Mr. Devaraj Urs Government will be toppled down or Mr. Channabasappa, or Mr. Azeez Sait or Mr. Basavalingappa will to be toppled down· They write so much and you are keeping quiet. What appears in the Press must be immediately attended to. But you are not doing it. But when a news appears like Deccan Herald, Indian Express, Prajavani, Hindu, etc , it has got some weight and immportance and immediately it should be acted upon. But that is not being done. This incidence has created lot of rumours, lot of news for the entire State and the Country and today you were the come and say he is innocent and has been asked to resign or somebody is sent to advise him to resign, it is not very correct. We are also not very happy about it. But I must compliment Mr. Kittoor for the very fact that the matter was raised in the Legislature and it appeared in the Press he has sent in in his resignation. But according to me he is innocent. He is an honourable man. But he has resigned saying that he is innocent asking for an enquiry. This is also a matter which needs immediate considera-tion. Now, finally I want to submit to you and to the House that mere police enquiry will not help the matter to be solved because the police are also party to it and they have not done their. duty. I don't know when a Minister reports to the police to take away the girl and it also appears in the press on the following day

(SRI C. M. ARUMUGHAM)

it is the duty of the Commissioner of Police who is sitting at Bangalore to inform the Chief Minister of the incident. But he has not done it. The Chief Minister having lot of work, bundles of ideas and filed alongwith other party affairs is very busy otherwise. The Chief Minister has been deprived of making the Statement on the very first day to this House. Therefore I submit that since you have dropped your colleague, a Minister who was working under you and you have complimented him for his service, you know him better than anybody else. When this matter was not informed to you then what about the fate of common man? He has resigned even without the motive and facts being proved. He has resigned just because it appeared in the press and the matter was raised in the Legislature. But the matter does not end there. We must go further into this episode and find how many more are involved in this. To find this out it is not sufficient if police are asked to enquire. We have been seeing that the police mentality has not changed. They have not yet become commoners. But when people go to police station they are kept under lock-up for days and weeks together. There are a number of such cases.

Therefore, I submit through you Madam Speaker, to the Government that there must be a judicial enquiry in regard to this issue. When the Hon'ble Chief Minister can afford to lose his colleague, there is no need for him to protect the Commissioner or the Deputy Commissioner of Police. It is a dot on the Cabinet of Sri Devaraj Urs. It is a matter touching the moral terpitude. The issue has embarrased the Chief Minister and caused inconvenience. Therefore, to clear all the doubts, there should be a judicial probe in the matter.

ಶ್ರೀ ಡಿ. ದೇವರಾಜ್ ಅರಸ್ :—ನಾನು 5 ಗಂಟೆಗೆ ಇನ್ನೊಂದು ಮನೆಗೆ ಹೋಗಬೇಕು. ಆದ್ದರಿಂದ I cannot be here for more than 5 to 6 minutes. As I have already said and my friend Sri

Arumugham put it, so many things come to my notice. But, I cannot disclose every thing. Even in this matter certain things have come to my notice. As I have already said, those are all matters which cannot be disclosed at this stage, because they are all yet hear-say. I have been trying my best to probe into it, get the persons to have their say and find out what exactly it is. I am at it and I would not get contented till I come to know to my satisfaction what the truth is. But, there is one point which I must mention, *viz.*, that there is a tendency on the part of some of our members too, who are gullible and who are prone to believe anything and every thing that is said on the earth. particularly about Ministers. There is one set of people who go on talking truth, untruth, good, bad and indifferent. There is another set of people who are prone to believe the atmosphere that is surcharged more because such irresponsible talks are a float in the air. That is why I thought that immediately there is no other way out to clear the atmosphere of doubt, except by way of accepting the resignation. I am not going to keep silent about this matter; I want to probe into the whole thing.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದನ್ನು ಕೇಳಿ ನನಗೆ ಸಂತೋಷವಾಯಿತು ಅವರು ಹೇಳಿದ ವಿಷಯದ ಬಗ್ಗೆ ನಾನು ಹೇಳುವುದಿಲ್ಲ. ಬೇರೆ ಒಂದೆರಡು ವಿಷಯಗಳನ್ನು ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು —ಮುಖ್ಯ ಮಂತ್ರಿಗಳು ಹೇಳಿದ ವಿಷಯದ ಮೇಲೆ ಮತ್ತೆ ಚರ್ಚೆ ಆಗಬೇಕು ಎಂದು ಹೇಳುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಿದರು. ಅದರ ಬಗ್ಗೆ ನಮಗೆ ಸಂದೇಹ ಬರುವಂತಹ ಅಂಶಗಳನ್ನು ಅವರ ಗಮನಕ್ಕೆ ತರಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ದಿಟ್ಟವಾದ ಹೆಜ್ಜೆಯನ್ನು ಇಟ್ಟಿದ್ದಾರೆ. ನನಗೆ ಸಂತೋಷವಾಗುತ್ತದೆ. ಶ್ರೀಮಾನ್ ಕಿತ್ತೂರ್ ಅವರ ರಾಜೀನಾಮೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಕ್ಕಾಗಿ ಅವರು ಅಭಿನಂದಾರ್ಹರು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಎಷ್ಟೋ ಊಹಾಪೋಹಗಳು ಬರುತ್ತವೆ. ಮಂತ್ರಿ

(ಶ್ರೀ ಎಂ. ಎಸ್. ಕೃಷ್ಣನ್)

ಗಳಾಗಲೀ, ರಾಜಕಾರಿಣಿಗಳಾಗಲೀ ಅಂಥವರ ಮೇಲೆ ಜನರು ಆಪಾದನೆಗಳನ್ನು ಹೊರಿಸುವುದು ಉಂಟು. ಅವು ನಿಜ ಆದರೆ ಅನೇಕ ಜನ ಮಾನ್ಯ ಸದಸ್ಯರು ಈ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಮಂತ್ರಿಗಳೂ ಕುಳಿತು ಕೊಳ್ಳುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಕೈಗೊಂಡ ಕ್ರಮ ಏನಿದೆ ಅದು ಸರಿಯಾದ ಕ್ರಮ ಮತ್ತು ನ್ಯಾಯವಾದ ಕ್ರಮ. ಅವರು ಶ್ರೀಮಾನ್ ಕಿತ್ತೂರ್ ಅವರ ರಾಜೀನಾಮೆಯನ್ನು ಒಪ್ಪಿಕೊಂಡಿದ್ದ ಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಶ್ರೀಮಾನ್ ಆರ್ಮುಗಂ ಅವರು ಹೇಳಿದ ಹಾಗೆ ರಾಜಕಾರಿಣಿಗಳ ಮೇಲೆ ಕೆಲವು ಅಪಾದನೆಗಳು ಡೆಕ್ಕನ್‌ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್ ಮುಂತಾದ ಡೈಲಿ ಪೇಪರಿನಲ್ಲಿಯೂ ಬರುತ್ತವೆ. ಮತ್ತು ವೀಕ್ಲಿ ಪೇಪರ್‌ಗಳಲ್ಲಿಯೂ ಬರುತ್ತವೆ. ಆದರೆ ಅವುಗಳನ್ನು ನಂಬಬೇಕೇ ಬೇಡವೇ ಎನ್ನುವ ಪ್ರಶ್ನೆ ಬರುತ್ತದೆ. ಅವು ಸಣ್ಣ ಪತ್ರಿಕೆಯಲ್ಲೇ ಬರಲಿ ಅಥವಾ ದೊಡ್ಡ ಪತ್ರಿಕೆಯಲ್ಲೇ ಬರಲಿ, ಅವುಗಳನ್ನು ನಾವು ಅಲ್ಲಗಳೆಯು ವಂತಿಲ್ಲ. ಜೊತೆಗೆ ಅವು ನಿಜವಾಗಿರಬಹುದು, ಅಥವಾ ಸುಳ್ಳಾಗಿರಬಹುದು. ಅದನ್ನು ಸ್ಪಷ್ಟವಾಗಿ ಇಷ್ಟೇ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಅದರ ಆಧಾರದ ಮೇಲೆ ನಾನು ಒಂದೆರಡು ವಿಷಯವನ್ನು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನಾನು ಬೆಲ್ ಮಾಡಿದ ಮೇಲೆ ತಮ್ಮ ಭಾಷಣವನ್ನು ನಿಲ್ಲಿಸಬೇಕು ಎಂದು ಅರ್ಥಮಾಡಿಕೊಳ್ಳಬೇಕು. ದಯವಿಟ್ಟು ಕುಳಿತುಕೊಳ್ಳಬೇಕು. ಇದುವರೆಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಏನು ಹೇಳಬೇಕೋ ಅದನ್ನೆಲ್ಲಾ ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಜುಡಿಷಿಯಲ್ ಪ್ರೋಬ್ ಮಾಡಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ಆದರೆ ಆ ರೀತಿ ಮಾಡಬೇಕು ಎಂದರೆ ಅದರಲ್ಲಿ ಒಂದು ಪ್ರೈಮಾಫೇಸಿ ಕೇಸು ಇರಬೇಕು.

ಅಧ್ಯಕ್ಷರು.—ಈಗ ಅದನ್ನು ಹೇಳುವುದಕ್ಕಾಗುವುದಿಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಹೇಳಿಕೆ ಪ್ರಕಾರ ನಮಗೆ ಸ್ವಲ್ಪ ಅನುಮಾನ ಬರುತ್ತದೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕಿತ್ತೂರ್ ಅವರು ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್ ಅವರಿಗೆ ಫೋನು ಮಾಡಿ ಅವರ ನೆರವು ಕೋರಿದರು. ಸಚಿವರ ಕೋರಿಕೆಯಂತೆ ಡೆಪ್ಯುಟಿ ಕಮಿಷನರ್ ಅವರು ಸಚಿವರ ಮನೆಗೆ ಒಂದು ಟ್ಯಾಕ್ಸಿ ಕಳುಹಿಸುವಂತೆ

ಮುನಿರೆಡ್ಡಿಪಾಳ್ಯದ ಪೋಲೀಸ್ ಸ್ಟೇಷನ್ನಿನ ಅಸಿಸ್ಟೆಂಟ್ ಸಬ್‌ಇನ್‌ಸ್ಪೆಕ್ಟರ್ ಅವರನ್ನು ಕೋರಿದರು, ಆಮೇಲೆ ಪೋಲೀಸ್ ಕಾನ್‌ಸ್ಟೇಬಲ್ ಟ್ಯಾಕ್ಸಿಯನ್ನು ತೆಗೆದುಕೊಂಡು ಬಂದರೆಂದು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಸ್ಟೇಟ್ ಮೆಂಟಿನಲ್ಲಿ ಹೇಳಿದರು. ಆದರೆ ನಮಗೆ ಬಂದಿರುವ ವರ್ತಮಾನದ ಪ್ರಕಾರ ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್ ಅವರಿಗೆ ಮಂತ್ರಿಗಳು ಫೋನ್ ಮಾಡಿದಾಗ ಅವರು ಅದಕ್ಕೆ ಗಮನ ಕೊಡುವುದಿಕ್ಕಾಗುವುದಿಲ್ಲ. ಅದನ್ನು ತೆಗೆದುಕೊಳ್ಳುವು ದಕ್ಕಾಗುವುದಿಲ್ಲ ಎಂದು ಹೇಳಿದರು ಎಂದು ಕಂಪ್ಲೇಂಟ್ ಇದೆ. ಇದು ಹೆಣ್ಣು ಮಗಳಿಗೆ ಸಂಬಂಧಪಟ್ಟ ವಿಷಯ. ಇದರಲ್ಲಿ ಪೋಲೀಸಿನವರು ಏತಕ್ಕೆ ಇಂಟರ್ ಫಿಯರ್ ಆದರು ? ಪೋಲೀಸ್ ಕಾನ್‌ಸ್ಟೇಬಲ್ ಟ್ಯಾಕ್ಸಿ ತೆಗೆದುಕೊಂಡು ಬಂದು ಆಕೆಯನ್ನು ಕರೆದುಕೊಂಡು ಹೋಗಿ ಆಶಾನಿಕೇತನಕ್ಕೆ ಕಳುಹಿಸಿ ಬಂದಿದ್ದಾರೆ. ಆದ್ದರಿಂದ ಇದು ಅನುಮಾನಕ್ಕೆ ಆಸ್ಪದವಾಗುತ್ತದೆ. ಇಂಥ ಒಂದು ಘಟನೆ ಯಾರೋ ಸಾಧಾರಣ ಮನುಷ್ಯರ ಮನೆಯಲ್ಲಿ ನಡೆದಿಲ್ಲ. ಇದು ಮಂತ್ರಿಗಳ ಮನೆಯಲ್ಲಿ ನಡೆದಿದೆ. ಮಂತ್ರಿಗಳು ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್ ಅವರಿಗೆ ಫೋನು ಮಾಡಿದ್ದು, ಮಂತ್ರಿಗಳ ಪಿ. ಎ. ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿದ್ದು, ಕಾನ್‌ಸ್ಟೇಬಲ್ ಆಕೆಯನ್ನು ಟ್ಯಾಕ್ಸಿಯಲ್ಲಿ ಆಶಾನಿಕೇತನಕ್ಕೆ ಕರೆದು ಕೊಂಡು ಹೋದದ್ದು ಇವೆಲ್ಲಾ ಅನುಮಾನಗಳಿಗೆ ಅವಕಾಶವನ್ನು ಕೊಡುತ್ತವೆ.

ಶ್ರೀ ಡಿ. ದೇವರಾಜ್ ಅರಸ್ :—ಆ ಬಗ್ಗೆ ಅನುಮಾನಗಳು ಏನಾದರೂ ಇದ್ದರೆ ಅವುಗಳನ್ನು ನನಗೆ ಕಳುಹಿಸಿ ಕೊಡಿ.

SRI M. S. KRISHNAN.—The Hon'ble Chief Minister said one thing, *i e.*, the Ministers and public people must be above suspicion. But there are many more things.

SRI D. DEVARAJ URS.—If the hon. member has many more things, we will meet and let him kindly let me know, and I will take cognisance of it.

SRI M. S. KRISHNAN.—Sir, it is necessary to have a judicial probe.

Sri D. DEVARAJ URS :—I request the hon. member to leave it at that. ಪತ್ರಿಕೆಯಲ್ಲಿ ಒಂದು ಬಂದಿದೆ ನೀವು ಒಂದು ಹೇಳಿದ್ದೀರಿ ಎಂದರೆ ನಾನು ಏನು ಹೇಳುವುದಕ್ಕಾಗುತ್ತದೆ. I presume I am supposed to make the statement and I also presume the

(SRI D. DEVARAJ URS)

House accepts it. Beyond that I do not want to say anything. If the members say something else, I cannot help it.

With the permission of the Chair, I am going to the other House.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಮೇಲ್ಮನೆಯಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿದೆ ಅದಕ್ಕೋಸ್ಕರ ಅವರು ಅಲ್ಲಿಗೆ ಹೋಗುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಮನೆಯಲ್ಲಿ ನಾವು ಒಂದು ಹೇಳಿಕೆಯನ್ನು ಕೊಡಬೇಕು ಎಂದು ಹಠ ಹಿಡಿದಂತೆ ಆ ಮನೆಯಲ್ಲಿಯೂ ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ಅವರು ಹಠ ಹಿಡಿದಿದ್ದರು. ಅದರಂತೆ 5 ಗಂಟೆಗೆ ಅಲ್ಲಿ ಸ್ಟೇಟ್‌ಮೆಂಟ್ ಕೊಡುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಸ್ಟೇಟ್‌ಮೆಂಟ್ ಕೊಡುವುದಕ್ಕೆ ಹೋಗಿದ್ದಾರೆ ಅದರ ಬಗ್ಗೆ ನಾನು ತಕರಾರು ಎತ್ತುವುದಿಲ್ಲ.

5-00 P. M.

ಇವತ್ತು ಈ ವಿಷಯದ ಬಗ್ಗೆ ಒಂದು ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕೆಂಬ ಒತ್ತಾಯವನ್ನು ಸರ್ಕಾರದ ಮುಂದೆ ತರುವುದಕ್ಕೆ ಹಲವಾರು ಕಾರಣಗಳು ಇವೆ. ಇವೊತ್ತಿನ ದಿವಸ ರಾಜಕೀಯ ಸ್ಥಾನದಲ್ಲಿ ಇರತಕ್ಕಂತಹ ಮಂತ್ರಿಯಾಗಲಿ, ಮುಖ್ಯಮಂತ್ರಿಯಾಗಲಿ ಅಥವಾ ಶಾಸಕನಾಗಲಿ—ಅವರ ವ್ಯಕ್ತಿ ಚಾರಿತ್ರ್ಯದ ಬಗ್ಗೆ ಸಂಶಯ ಬಂದಾಗ; ಅದರಿಂದ ವಿಮುಕ್ತಗೊಳಿಸಬೇಕಾದರೆ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕಾಗಿದೆ. ಮುಖ್ಯಮಂತ್ರಿಯವರು ಒಂದು ಹೆಜ್ಜೆ ಮುಂದೆ ಹೋಗಿ ಇಂಥ ಸತಸಂಪ್ರದಾಯವನ್ನು ಹಾಕುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ವಿಚಾರಣೆಯ ಘಟ್ಟದಲ್ಲಿರುವಾಗಲೇ ಅವರ ರಾಜೀನಾಮೆಯನ್ನು ಸ್ವೀಕಾರ ಮಾಡಿದ್ದೇನೆ ಎಂದು ಹೇಳಿದ್ದಾರೆ. ಈಗ ನಮ್ಮ ಮುಂದಿರತಕ್ಕಂತಹ ಪ್ರಶ್ನೆ ಏನೆಂದರೆ, ಇವತ್ತು ಉತ್ತಮ ರಾಜಕಾರಣಿಗಳಿಗೆ ರಕ್ಷಣೆ ಇರಬೇಕು. ಏಕೆಂದರೆ ನಾಳೆ ಯಾವಳಾದರೂ ಒಬ್ಬ ಹೆಂಗಸು ಬಂದು ಮಾನ್ಯ ಚನ್ನಬಸಪ್ಪನವರ ತೊಡೆಯ ಮೇಲೆ ಕುಳಿತರೆ ಏನು ಮಾಡುವುದು? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯ ಮಂತ್ರಿಯವರು, ಶ್ರೀಮಾನ್ ಕಿತ್ತೂರ್‌ರವರು ಬಹಳ ಯೋಗ್ಯವಾದ ಯುವಕ ರಾಜಕಾರಣಿ. ಆದರೆ ಸಂಶಯದ ಸುಳಿಯಲ್ಲಿ ಸಿಕ್ಕದೆ ಒಂದು ನಿಷ್ಪಕ್ಷಪಾತವಾದ ವಿಚಾರಣೆ ಮಾಡುವುದಕ್ಕೋಸ್ಕರ ರಾಜೀನಾಮೆ ಅಂಗೀಕಾರ ಮಾಡಿದ್ದೇನೆ ಎಂದು ಹೇಳಿದ್ದಾರೆ. ಅವರ ಹೇಳಿಕೆಯಲ್ಲಿ

ಉದ್ಭವಿಸಿರತಕ್ಕಂತಹ ಅನೇಕ ವಿಚಾರಗಳ ಬಗ್ಗೆ ಒಂದು ಇಂಪಾರ್ಷಿಯಲ್ ಜುಡಿಷಿಯಲ್ ಪ್ರೋಬ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಕೇಳುತ್ತೇನೆ. ಮುಖ್ಯ ಮಂತ್ರಿಯವರು ಒಂದು ಮಾತನ್ನು ಹೇಳಿದರು. 18 ನೇ ತಾರೀಖು 3 ಗಂಟೆಗೆ ಶ್ರೀಮಾನ್ ಕಿತ್ತೂರ್‌ರವರು ಪೋಲೀಸ್ ಡೆಪ್ಯುಟಿ ಕಮಿಷನರಿಗೆ ಫೋನ್ ಮಾಡಿದರು ಎಂದು ಹೇಳಿದರು. ಯಾವ ಒಬ್ಬ ನಾಗರೀಕನ ಮೇಲಾಗಲಿ ಅಥವಾ ಒಬ್ಬ ಯೋಗ್ಯ ಪ್ರಜೆಯ ಮೇಲಾಗಲೀ ಒಬ್ಬ ಹೆಂಗಸು ಬಲಾತ್ಕಾರವಾದ ಪ್ರಯೋಗ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಅಥವಾ ಅಸಭ್ಯ ರೀತಿಯಿಂದ ವರ್ತನೆ ಮಾಡಿದರೆ, ಅಂಥ ಹೆಂಗಸಿನ ಮೇಲೆ ಕಾನೂನು ಪ್ರಕಾರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಂಥ ವಿಷಯ ಡೆಪ್ಯುಟಿ ಕಮಿಷನರಿಗೆ ಫೋನ್ ಮಾಡಿ ತಿಳಿಸಿದಾಗ, ಡೆಪ್ಯುಟಿ ಕಮಿಷನರ್ ಅವಳ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದಾರೆಯೇ ? ನೀವು ಇವತ್ತಿನ ದಿವಸ ಇದನ್ನು ಅಷ್ಟು ಸುಲಭವಾಗಿ ಮುಚ್ಚುವುದಕ್ಕೆ ಸಾಧ್ಯವಾಗುವುದಿಲ್ಲ. ಅಧಿಕಾರ ಬಲದಿಂದ ಸ್ವಚ್ಛವಾಗಿದ್ದೇವೆ, ಯಾವುದೇ ಸಂಶಯದ ಸುಳಿಯಲ್ಲಿ ಸಿಕ್ಕಿಲ್ಲವೆಂದು ಹೇಳಿದರೆ ದೇಶದ ಜನ ನಂಬುವುದಿಲ್ಲ. ದೇಶದ ಜನ ನಂಬಬೇಕಾದರೆ ಇದರ ಬಗ್ಗೆ ಒಂದು ನಿಷ್ಪಕ್ಷವಾದ ಮತ್ತು ಪ್ರಾಮಾಣಿಕವಾದ ಎನ್‌ಕ್ವಾಯರಿ ಆಗಬೇಕು. ಅಸಭ್ಯ ರೀತಿಯಲ್ಲಿ ಒಬ್ಬ ಹೆಂಗಸು ವರ್ತನೆ ಮಾಡುವುದಕ್ಕೆ ಹೊರಟಾಗ ಅಂಥ ಹೆಂಗಸಿನ ಮೇಲೆ ಪೋಲೀಸರು ಕೇಸ್ ರಿಜಿಸ್ಟರು ಮಾಡಿದ್ದಾರೆಯೇ ? ಇವತ್ತು ಮೈಸೂರು ದೇಶದಲ್ಲಿ ಉತ್ತಮವಾದ ಪೋಲೀಸ್ ಅಧಿಕಾರಿಗಳೂ ಇದ್ದಾರೆ. ಅದರೆ ಇವತ್ತು ಪೋಲೀಸ್ ಅಧಿಕಾರಿಯಾದ ಐ. ಜಿ. ಪಿಯವರು ಕೊಟ್ಟಿರತಕ್ಕಂತಹ ವರದಿಯನ್ನು ಮುಚ್ಚಿಡುವುದಕ್ಕೆ ತಾವು ಪ್ರಯತ್ನ ಮಾಡಿದ್ದೀರಿ. ನಾನು ಹೇಳುವುದರಲ್ಲಿ ಏನಾದರೂ ಸುಳ್ಳು ಇದ್ದರೆ, ನಾನು ಅಪಾಲಜಿ ಕೇಳುವುದಕ್ಕೆ ತಯಾರಾಗಿದ್ದೇನೆ. ಪೋಲೀಸ್ ಅಧಿಕಾರಿ ಕಿತ್ತೂರ್‌ರವರ ಮೇಲೆ ಕೇಸ್ ರಿಜಿಸ್ಟರ್ ಮಾಡಬೇಕೆಂಬ ಪ್ರಶ್ನೆ ಬಂದಾಗ ಇದನ್ನು ಆ ರೀತಿ ಮಾಡಿದ್ದಾರೆಂದು ಕಾಣುತ್ತದೆ. ಒಬ್ಬ ಉತ್ತಮವಾದ ರಾಜಕಾರಣಿಯ ಮುಖಕ್ಕೆ ಯಾರಾದರೂ ಮಸಿಬಳೆಯುವುದಕ್ಕೆ ಪ್ರಯತ್ನ ಮಾಡಿದಾಗ ತಮ್ಮ ಸರ್ಕಾರದ ಪೋಲೀಸ್ ಅಧಿಕಾರಿಗಳು ಏಕೆ ಕೇಸ್ ರಿಜಿಸ್ಟರ್ ಮಾಡಿಲ್ಲ ? ದೇಶದಲ್ಲಿ ಯೋಗ್ಯ ರಾಜಕಾರಣಿಗಳಿಗೆ ಕೆಟ್ಟ ಹೆಸರು ಬರುವುದಕ್ಕೆ ಅವಕಾಶ ಕೊಡಬಾರದು. ಅವರಿಗೆ ತಾವು ರಕ್ಷಣೆ ಕೊಡಬೇಕು. ತಾವು ಕೊಟ್ಟಿರತಕ್ಕಂತಹ ವರದಿಯ ಮೇಲೆ ಆಶ್ರಮಕ್ಕೆ ಸೇರಿಸಿದಾಗ ಮಂತ್ರಿಯವರ ಪಿ. ಎ. ಅಲ್ಲಿಗೆ ಹೋಗಿದ್ದಾರೆ. ಆ ಹೆಂಗಸಿನ ಜೊತೆ ಪೋಲೀಸ್ ಅಧಿಕಾರಿ ಹೋಗಿರುವಾಗ ಮಂತ್ರಿಯವರ ಪಿ. ಎ. ಅಲ್ಲಿಯವರೆಗೆ ಏಕೆ ಹೋಗಿದ್ದಾರೆ?

ಶ್ರೀ ಎಚ್. ಸಿದ್ಧವೀರಪ್ಪ :—ನಾಳೆ ವಿಚಾರಣೆಯಾದಾಗ ಅವೆಲ್ಲವೂ ಬರುತ್ತವೆ.

ಶ್ರೀ ಹೆಚ್. ಡಿ. ದೇವೇಗೌಡ — ತಾವು ಇದರ ಬಗ್ಗೆ ಸುಲಭವಾದ ಹೇಳಿಕೆ ಕೊಟ್ಟು ಬಾಯಿ ಮುಚ್ಚಿಸುವುದಕ್ಕೆ ಪ್ರಯತ್ನ ಮಾಡಬಾರದು ಇವೊತ್ತಿನ ದಿವಸ ರಾಜ್ಯಕ್ಕೆ ಉತ್ತಮವಾದ ಆಡಳಿತವನ್ನು ದೊರಕಿಸಿಕೊಡುವುದಕ್ಕೆ ವಿರೋಧ ಪಕ್ಷದವರು ಸಹ ಅಷ್ಟೇ ಆಸಕ್ತರಾಗಿದ್ದಾರೆ. ಉತ್ತಮವಾದ ರಾಜಕೀಯ ವ್ಯಕ್ತಿಗಳ ಉತ್ತಮವಾದ ಜೀವನಕ್ಕೆ ಮಸಿ ಬಳಿಯುವುದಕ್ಕೆ ಯಾರಾದರೂ ಪ್ರಯತ್ನ ಮಾಡಿದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಒಬ್ಬ ನಾಗರೀಕ ಒಬ್ಬ ಮಹಿಳೆಯ ಮೇಲೆ ಅಥವಾ ಒಬ್ಬ ಮಹಿಳೆ ಒಬ್ಬ ನಾಗರೀಕನ ಮೇಲೆ ಅತ್ಯಾಚಾರ ಮಾಡಿದರೆ ಅದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವಿ. ಎನ್ ಪಾಟೀಲ್.—ಅತ್ಯಾಚಾರ ಮಿನಿಸ್ಟರ್ ಮೇಲೆ ಮಾಡಿದ್ದಾರೆಂದು ಕಂಪ್ಲೈಂಟ್ ಕೊಟ್ಟರೋ ?

ಶ್ರೀ ಎಚ್. ಡಿ. ದೇವೇಗೌಡ: ಆಶ್ರಮಕ್ಕೆ ಬುದ್ಧಿಭ್ರಮಣೆ ಇರುವುದರಿಂದ ಸೇರಿಸಿದ್ದು ಎಂದು ಹೇಳುತ್ತಿದ್ದಾರೆ. ಅವಳಿಗೆ ಬುದ್ಧಿ ಭ್ರಮಣೆ ಇಲ್ಲವೆಂದು ಅವರು ಟ್ಯಾಕ್ಸಿಯಲ್ಲಿ ಹೋಗುತ್ತಿದ್ದಾಗ ನಡೆಯುತ್ತಿದ್ದ ಮಾತುಕತೆಗಳಲ್ಲಿ ಗೊತ್ತಾಗುತ್ತಿತ್ತು. ಇದರ ಹಿನ್ನಲೆಯಾದರೂ ಏನು ? ಅಲ್ಲದೆ ಆಶ್ರಮದ ಮಿ. ಜಾನ್ ಮತ್ತು ಕುಮಾರಿ ಡಿಕಾಸ್ಟಾ ಬುದ್ಧಿಭ್ರಮಣೆ ಅವಳಿಗೆ ಇಲ್ಲ, ಒತ್ತಡ ಹಾಕಿ ತರಿಸಿಕೊಂಡಿದ್ದಾರೆಂದು ಹೇಳಿದ್ದಾರೆ.

SRI H. M. CHANNABASAPPA.—The Hon. Chief Minister has made a statement of facts as promised by him yesterday. Now, I would like to know if this statement is a subject matter for discussion and that has been allowed by the Hon. Speaker; and if so, under what Rules of procedure it has been allowed ?

ಶ್ರೀ ಎಚ್. ಡಿ. ದೇವೇಗೌಡ :.... ಈ ದೇಶದಲ್ಲಿ ಮಂತ್ರಿಗಳ ಮನೆಗೆ ಹೆಂಗಸರು ಹೋಗಿ ಇಂತಹ ವ್ಯವಹಾರ ಮಾಡುವುದು ಯಾವ ಕಾನೂನಿನಲ್ಲಿ ಬರೆದಿದೆ ? ಹೆಂಗಸರು ಮಂತ್ರಿಗಳ ನಾಜೋಕು ನೋಡಿ ಅವರ ಮೇಲೆ ಬಿದ್ದು ಈ ತರಹ ವ್ಯವಹಾರ ನಡೆಸಬಹುದೆಂದು ಈ ದೇಶದ ಕಾನೂನಿನಲ್ಲಿ ಯಾರು ಬರೆದಿದ್ದಾರೆ ? ನಿಮಗೆ ಅಧಿಕಾರವಿದೆಯೆಂದು ಈ ರೀತಿ ಮಾಡಬಾರದು. ಮಾನ್ಯ ಶ್ರೀ ಚನ್ನಬಸಪ್ಪನವರೇ. ನೀವು ಇಂತಹ ವಿಷಯಗಳ ಬಗ್ಗೆ ರಾಜಕಾರಣಗಳಾಗಿ ಸದಾ ಕಾಲದಲ್ಲಿಯೂ ಇದ್ದುಕೊಂಡು ಯಾರೋ ಒಬ್ಬರಿಗಾಗಿ ಇಷ್ಟ ಬಂದಹಾಗೆ ನಡೆಸಿಕೊಂಡು ಇರಲಾರಿರಿ. ಈ ದೇಶದಲ್ಲಿ ಒಳ್ಳೆಯ ಸಂಪ್ರದಾಯ ಬಿಟ್ಟು ಕೆಟ್ಟ ಸಂಪ್ರದಾಯವನ್ನು ಹಾಕುವುದಕ್ಕೆ ಅವಕಾಶಕೊಡಬೇಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ :— ನಾನು ಹೋಗುತ್ತೇನೆಂದು ಯಾರು ಹೇಳಿದರು ?

ಶ್ರೀ ಎಚ್. ಡಿ. ದೇವೇಗೌಡ :— ಆ ವಿಷಯವನ್ನು ಇಲ್ಲಿಗೇ ಬಿಡಲಿಕ್ಕೆ ನಾನು ತಯಾರು ಆಗಿಲ್ಲ. ನನ್ನ ಮೇಲೆ ವಿರೋಧ ಪಕ್ಷದ ನಾಯಕರು ಅಸಭ್ಯ ರೀತಿಯಲ್ಲಿ ಈ ಸಭೆಯಲ್ಲಿ ಮಾತನಾಡುತ್ತಿದ್ದಾರೆಂದು ಅಪಾದನೆ ಬಂದರೂ ಚಿಂತಿಲ್ಲ ಆದ್ದರಿಂದ ಈ ವಿಷಯವನ್ನು ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಬೇಕು. ನಿಮ್ಮನ್ನು ಯಾವರೀತಿ ಶಿಕ್ಷೆ ಮಾಡಿದರೂ ತಪ್ಪು ಇಲ್ಲ, ಈ ವಿಚಾರವನ್ನು ತೀರ್ಮಾನ ಮಾಡದೆ ಮತ್ತೆ ಬೇರೆ ವ್ಯವಹಾರ ಮಾಡಲಿಕ್ಕೆ ಬಿಡುವುದಿಲ್ಲ. ನೀವು ಏನು ಬೇಕಾದರೂ ಮಾಡಿ. ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗುತ್ತೇನೆ. ವಾರನೆಯ ದಿವಸ ಆ ಹೆಂಗಸು ಎಲ್ಲಿ ಹೋದಳು ಎಂಬುದು ಪತ್ತೆಯೇ ಇಲ್ಲವೆಂದು ಹೇಳಿದರೆ ಹೇಗೆ? ಈ ದೇಶದಲ್ಲಿ ಯಾರಿಗೆ ರಕ್ಷಣೆ ಇದೆ? ಇವತ್ತು ಒಬ್ಬ ಹೆಂಗಸಿನಿಂದ ಏನು ಆಗುತ್ತಿದೆಯೆಂದು ಕೇಳುವುದಕ್ಕೆ ಬದಲಾಗಿ ಕಾನೂನು ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಒಬ್ಬ ರಾಜ್ಯ ಸಚಿವರ ಮಾನ, ಮರ್ಯಾದೆ ಕಾಪಾಡತಕ್ಕ ಸನ್ನಿವೇಶದಲ್ಲಿ ಅವರ ಪ್ರಾಣ, ಮಾನ ಇವೆರಡಕ್ಕೂ ಧಕ್ಕೆ ಬಂದಿದೆ. ಈ ದೇಶದ ಯಾವ ಹೆಂಗಸೇ ಆಗಿರಲಿ, ಅವರು ಯಾವ ಜನಾಂಗಕ್ಕೆ ಸೇರಿದವರೇ ಆಗಿರಲಿ, ಅವರು ಯಾವ ಪ್ರಾಂತಕ್ಕೇ ಸೇರಿರಲಿ, ಅವಳು ಹೆಂಗಸೇ ಆಗಿರಲಿ, ಆ ಒಂದು ವ್ಯಕ್ತಿಯ ಮಾನ ಸಂರಕ್ಷಣೆ, ಪ್ರಾಣ ಸಂರಕ್ಷಣೆ ಮಾಡುವುದಕ್ಕೆ ಇಂತಹ ಪೋಲೀಸ್ ಅಧಿಕಾರಿಗಳ ತಂಡವನ್ನು ಇಟ್ಟುಕೊಂಡರೆ ಅದೇನೂ ಸಾಧ್ಯವಿಲ್ಲ. ಅಂತಹವರಿಂದ ಪೋಲೀಸ್ ಇಲಾಖೆಗೆ ಅಗೌರವವಾಗುತ್ತದೆ. ಪೋಲೀಸ್ ಇಲಾಖೆಯವರ ಒಂದು ಅಸಮರ್ಥತೆ ಪೋಲೀಸ್ ಇಲಾಖೆಗೆ ಕೊಟ್ಟಿರತಕ್ಕ ವರದಿಯನ್ನು ಮುಚ್ಚಿಡುವುದಕ್ಕೆ ಇದು ಸೃಷ್ಟೀಕರಣವಾಗುತ್ತದೆ. ಐ. ಜಿ. ಪಿ. ಯವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟನ್ನು ಈ ಸಭೆಯ ಮುಂದೆ ಇಟ್ಟರೆ ಮಾತ್ರ ಆಗ ಪೋಲೀಸ್ ಅಧಿಕಾರಿಗಳು ಯಾವರೀತಿ ಪ್ರಾಮಾಣಿಕತೆಯಿಂದ ಕ್ರಮವನ್ನು ತಗೆದುಕೊಂಡಿದ್ದಾರೆಂಬುದನ್ನು ತಿಳಿದುಕೊಳ್ಳಬಹುದು. ಇದರಲ್ಲಿ ಅವರ ಮಾನ, ಮರ್ಯಾದೆ, ಘನತೆಯ ಪ್ರಶ್ನೆಯ ಬಗ್ಗೆ ಶಿಫಾರಸು ಮಾಡುವುದರಿಂದ ನಿಮ್ಮ ಘನತೆಯೇನೂ ಹೆಚ್ಚಾಗುವುದಿಲ್ಲ, ಈ ದೇಶದ ಜನತೆಗೆ ಯಾವುದೇ ಕಾರಣದಿಂದ ಯಾರೇ ತಪ್ಪಿತಸ್ಥರೇ ಆಗಿರಲಿ, ಅದನ್ನು ವ್ಯಕ್ತಪಡಿಸಬೇಕಾದರೆ ಇದರ ಬಗ್ಗೆ ಜುಡಿಷಿಯಲ್ ಪ್ರೋಬ್ ಆಗಬೇಕು. ಇವತ್ತು ಮಾನ್ಯ ಶ್ರೀ ಕಿತ್ತೂರು ಅವರು ಒಬ್ಬ ವ್ಯಕ್ತಿ ಮಾತ್ರ ರಾಜೀನಾಮೆ ಕೊಟ್ಟಿದ್ದಾರೆಂದು ಕೇಳಿದ್ದೇನೆ ಇದರಲ್ಲಿ ಹಲವಾರು ರಾಜಕಾರಣಿಗಳು ಸೇರಿದ್ದಾರೆಂಬ ಆರೋಪಣೆಯನ್ನು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಈ ವಿಚಾರವಾಗಿ ಮಾತನಾಡಿದ ಮೇಲೆ ನಾನು ಮಾತನಾಡಬಾರದೆಂದು ಇದ್ದೆ. ಆದರೆ ಸುಮಾರು ಮೂರು ಜನರು ಈ ಒಂದು

(ಶ್ರೀ ಎಚ್. ಡಿ. ದೇವೇಗೌಡ)

ಪ್ರಕರಣದಲ್ಲಿ ಅದರಲ್ಲಿಯೂ ಕ್ಯಾಬಿನೆಟ್‌ನಲ್ಲಿರುವವರೇ ಸೇರಿದ್ದಾರೆ. ಮಾನ್ಯ ಶ್ರೀ ಕಿತ್ತೂರ್ ಅವರು ಇವತ್ತಿನ ಈ ಸಂದರ್ಭದ ಒಂದು ಯಜ್ಞಪಶುವಾಗಿದ್ದರೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ವಿಚಾರವನ್ನು ಮಾನ್ಯ ಶ್ರೀ ಹೆಗ್ಗಡೆಯವರು ಬೇರೆ ಹೇಳುತ್ತಾರೆ. ಇದರ ಬಗ್ಗೆ ಯಾವುದೇ ಮಾಹಿತಿಯನ್ನು ಮತ್ತು ಯಾವುದೇ ಸಾಕ್ಷಿ ಸಾಹಿತ್ಯವನ್ನು ಸಂಗ್ರಹಣೆ ಮಾಡಬೇಕಾದರೆ ಪೋಲೀಸ್ ಅಧಿಕಾರಿಗಳು ನಿಷ್ಪಕ್ಷಪಾತವಾದ ವಿಚಾರವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಒಂದು ಆರೋಪಣೆಯಿಂದ ವಿಮುಕ್ತರಾಗಬೇಕಾದರೆ,/ there must be an impartial enquiry...... ....

SRI B. BASAVALINGAPPA.— What is this simply going on discussing this subject violating the rules and regulations ?

ಶ್ರೀ ವಾಟಾಳ್ ನಾಗರಾಜ್ : ಜುಡಿಷಿಯಲ್ ವಿಚಾರಣೆ ಮಾಡಿದರೆ ಹಲವರು ಖಂಡಿತವಾಗಿ ಈಚೆಗೆ ಬರುತ್ತಾರೆ.

SRI B. BASAVALINGAPPA : I am worried about the procedure.

SRI H. D. DEVEGOWDA : Where is the procedure in this State? ಇವತ್ತು ನಮ್ಮಲ್ಲಿ ಗೌರವ, ಪ್ರತಿಷ್ಠೆ ಬರಬೇಕಾದರೆ ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಿ, ಇಲ್ಲದಿದ್ದರೆ ಆ ಹೆಂಗಸನ್ನು ಈ ಸಭೆಗೆ ಕರೆಸಿ ಈ ಸಭೆಯ ಮುಂದೆ ಹೇಳಿಕೆ ಮಾಡಿಸಿ ನಮಗೆ ಮಾನ್ಯ ಶ್ರೀ ಬಸವಲಿಂಗಪ್ಪನವರ ಆಕ್ರೋಶ ಬೇಕಾಗಿಲ್ಲ. ಇದೇನು ಪ್ರೊಸೀಜರ್ ?

SRI B. BASAVALINGAPPA : That is a different issue. If you want to take action against the officer for dereliction of duty, that is a different matter. Please have some patience.

SRI H. D. DEVEGOWDA : There should be a judicial enquiry. If the Government say that there will be a judicial enquiry, I will keep quite.

SRI H. SIDDAVEERAPPA : What is meant by judicial enquiry ?

SRI H. D. DEVE GOWDA: There must be an impartial enquiry.

SRI H. SIDDAVEERAPPA: Any enquiry must be judicious.

ಶ್ರೀ ಎಂ. ಎಸ್. ಕೃಷ್ಣನ್.— ನೀವು ಹೇಗೆ ಟ್ವಿಸ್ಟ್ ಮಾಡುತ್ತೀರಿ, ನೋಡಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಬುದ್ಧಿ ಭ್ರಮಣೆಯಾಗಿರತಕ್ಕ ಹೆಂಗಸನ್ನು ನಿಮ್ಮ ಹತ್ತಿರ ಕಳುಹಿಸಬೇಕು. ಅಂದಮೇಲೆ ಅವಳನ್ನು ಹೇಗೆ ಪೋಲೀಸ್ ಸ್ಟೇಷನ್ನಿಗೆ ಕಳುಹಿಸಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನನ್ನು ಏಕೆ ಮಾನ್ಯ ಶ್ರೀ ಕಿತ್ತೂರ್ ಅವರ ಜೊತೆಗೆ ಸೇರಿಸುತ್ತೀರಿ?

ಶ್ರೀ ಎಚ್. ಡಿ ದೇವೇಗೌಡ.—ಮಾನ್ಯ ಶ್ರೀ ಕಿತ್ತೂರ್ ಅವರ ಜೊತೆಗೆ ಬರುವವರು ಬಹಳ ಜನ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಆ ಹೆಂಗಸು ಪತ್ತೆಯಾದ ಕೂಡಲೇ ಬಹಳ ಜನ ಮಂತ್ರಿಗಳು ಮಾನ್ಯ ಶ್ರೀ ಕಿತ್ತೂರ್ ಅವರ ಹಾಗೆ ಹೊರಗೆ ಬರಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.— ಮಂತ್ರಿಮಂಡಲಕ್ಕೆ ಕಳಂಕ ತರುವ ಯೋಚನೆಯನ್ನು ಯಾರೂ ಮಾಡುವುದಿಲ್ಲ. ಮಾನ್ಯ ಶ್ರೀ ದೇವರಾಜ್ ಅರಸ್ ಅವರು ಇನ್ನು 4 ವರ್ಷಗಳವರೆಗೆ ಮುಖ್ಯ ಮಂತ್ರಿಯಾಗಿ 1977ನೇ ಮಹಾ ಚುನಾವಣೆಯಲ್ಲಿ ನಿಮ್ಮನ್ನು ನೋಡತಕ್ಕವರಿಗೆ ಪುನಃ ಓಟು ಕೊಡುವ ಹಾಗೆ ಒಳ್ಳೆಯ ಕೆಲಸವನ್ನು ಮಾಡಿ ಜನಾದರಣೆಯನ್ನು ಪಡೆಯಬೇಕು. ಆದರೆ ಇಲ್ಲಿಯವರೆಗೂ ನೀವು ನಡೆಸಿರತಕ್ಕ ರಾಜ್ಯಾಡಳಿತ ಕಾಲದಲ್ಲಿ ಉಂಟಾಗಿರುವ ಸಮಸ್ಯೆಗಳು ಬಹಳವಾಗಿವೆ. ನಿಮ್ಮ ರಾಜ್ಯಾಡಳಿತ ಕಾಲದಲ್ಲಿ ಬಹು ಮುಖ್ಯವಾಗಿ ಗೌರವಸ್ಥ ಮಹಿಳೆಯರಿಗೆ ಈ ರಾಜ್ಯದಲ್ಲಿ ರಕ್ಷಣೆ ಬೇಕು. ಹಿಂದೆ ಜಯಲಲಿತ ಪ್ರಕರಣ ಬೇರೆ ಬಂದಿದೆ. ಆ ವಿಷಯವಾಗಿ ನಾನು ಈಗ ಪೂರ್ತಿಯಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆಗಲೂ ಮಾನ್ಯ ಶ್ರೀ ಕಪೂರರಿಂದ ಪೋಲೀಸ್ ವಿಚಾರಣೆ ಆಯಿತು ಅದು ಪ್ರಪಂಚ ಎನ್ನುವ ಪತ್ರಿಕೆಯಲ್ಲಿಯೂ ಬಂದಿತ್ತು. ಒಟ್ಟಿನಲ್ಲಿ ಇದರ ಬಗ್ಗೆ ಜುಡಿಷಿಯಲ್ ಪ್ರೋಬ್ ಆಗಲೇ ಬೇಕು. ಆದರೆ ಹೊರಗೆ ನಿಮ್ಮ ಯಂತ್ರಗಳನ್ನು ಎಷ್ಟೇ ಪ್ರಯೋಗಮಾಡಿದರೂ ಇದರ ಬಗ್ಗೆ ಮತ್ತೆ ಮಾಹೀ

(ಶ್ರೀ ಎಚ್. ಡಿ. ದೇವೇಗೌಡ)

ಇಲ್ಲ. ಇಂಡಿಪೆಂಡೆಂಟ್ ಆಗಿ ವಿಚಾರಣೆ ಮಾಡುವುದಕ್ಕೆ ಸರ್ಕಾರ ಒಪ್ಪಬೇಕು. ಅಲ್ಲಿಯುವರೆಗೂ ಇದಕ್ಕೆ ನಾವು ಮಣಿಯುವುದಕ್ಕೆ ತಯಾರಾಗಿಲ್ಲ. Unless the Government categorically assures for an independent probe I am not prepared to concur with the Government views.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ನಾಯಕರು ಏನು ಹೇಳಿದ್ದಾರೆಂದರೆ ಇದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂಬುದು. ಇದರ ಬಗ್ಗೆ ನಾನು ಎರಡು ವಿಷಯಗಳನ್ನು ಹೇಳಬೇಕಾಗಿದೆ ನ್ಯಾಯಾಂಗ ವಿಚಾರಣೆಯಾಗಬೇಕಾದುದು. ಒಂದು. ಇನ್ನೊಂದು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು.

SRI H. M. CHANNABASAPPA:—I rise on a point of order. The Chief Minister has made a statement of fact and he has also assured that he would not rest till the enquiry is made and truth comes out. According to procedure we have got to function as per agenda. We have got to carry on the business with which we are entrusted to. Is this the subject matter for discussion? If you allow us like this what is the business to be transacted?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಪ್ರಪಂಚದಲ್ಲಿ ನಡೆಯುದೇ ಇರುವುದು ಈಗ ನಡೆದಿದೆ. ನಿಮ್ಮ ಪಾಯಿಂಟ್ ಆಫ್ ಆರ್ಡರ್ ಯಾರಿಗೆ ಬೇಕು?

ಶ್ರೀ ಕೋಣಂದೂರು ಲಿಂಗಪ್ಪ : ಅಧ್ಯಕ್ಷರೇ, ಇದೇ ವಿಚಾರದಲ್ಲಿ ನಾನು ತಮ್ಮ ಗಮನಕ್ಕೆ ಎರಡು ಹೊಸ ವಿಚಾರಗಳನ್ನು ತರಬೇಕಾಗಿದೆ.........

ಅಧ್ಯಕ್ಷರು : ಇದೇನು ಇದರ ಬಗ್ಗೆ ಒಂದು ದೊಡ್ಡ ಚರ್ಚೆ ನಡೆಯಬೇಕೆಂಬುದು ತಮ್ಮ ಉದ್ದೇಶವೇ ?

ಶ್ರೀ ಕೋಣಂದೂರು ಲಿಂಗಪ್ಪ · ಖಂಡಿತ ಅದು ನನ್ನ ಉದ್ದೇಶವಲ್ಲ. ಆದರೆ...........

ಶ್ರೀ ಎಚ್. ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ಕ್ಷಮಿಸಬೇಕು. ತಾವು ಈ ವಿಚಾರದಲ್ಲಿ ಒಂದು ರೂಲಿಂಗನ್ನು ಕೊಟ್ಟು ಅದನ್ನು

ವಿರೋಧಪಕ್ಷದವರು ಮಾನ್ಯತೆ ಮಾಡಲಿಲ್ಲ ಎಂಬ ಅಪವಾದಕ್ಕೆ ದಯಮಾಡಿ ನಮ್ಮನ್ನು ಗುರಿಮಾಡಬೇಡಿ. ಆದುದರಿಂದ ತಾವು ಇದರಲ್ಲಿ ಆತುರಾತುರದಿಂದ ರೂಲಿಂಗನ್ನು ಕೊಡಬಾರದೆಂದು ನನ್ನ ನಮ್ರತೆಯ ಪ್ರಾರ್ಥನೆ.

ರಾಜ್ಯದಲ್ಲಿ ಇಂಥ ಒಂದು ಏನು ಘಟನೆ ನಡೆದಿದೆ ಈ ದಿವಸ ಇದಕ್ಕಿಂತಲೂ ಒಂದು ಪ್ರಾಮುಖ್ಯವಾದ ಘಟನೆಯುಂಟೇ ? ಅಧ್ಯಕ್ಷರೇ ತಾವೇ ಹೇಳಿ ? ಪೋಲೀಸ್ ಅಧಿಕಾರಿಗಳು ಬರೆದಿದ್ದ ಡೈರಿಯನ್ನೆಲ್ಲಾ ತೆಗೆಸಿ ಅಲ್ಲಿ ಫ್ಯಾಬ್ರಿಕೇಟ್ ಮಾಡಿದ್ದಾರೆ. ಈ ವಿಚಾರದಲ್ಲಿ ಐ. ಜಿ. ಪಿ. ವಿಚಾರಣೆಯ ವರದಿಯನ್ನು ಸಭೆಯ ಮುಂದೆ ಇಡಿ ಆದರೆ ನಾವಂತೂ ಸಾರಿ ಸಾರಿ ಹೇಳುತ್ತೇವೆ. ಪೋಲೀಸ್ ಎನ್‌ಕ್ವೈರಿಗೆ ನಾವು ಒಪ್ಪತಕ್ಕವರಲ್ಲ. ಈ ವಿಚಾರದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದಾದರೆ ಮಾತ್ರ ನಾವು ಒಪ್ಪುತ್ತೇವೆ. ಆ ಹೆಣ್ಣುಮಗಳು ಈ ದಿವಸ ಎಲ್ಲಿ ಇದ್ದಾಳೆಂಬುದೇ ಗೊತ್ತಿಲ್ಲ ಎಂದು ಹೇಳುತ್ತಿರುವಾಗ ಈ ರಾಜ್ಯ ದಲ್ಲಿ ಯಾರಿಗೆ ರಕ್ಷಣೆ ಇದೆ ?

SRI H. SIDDAVEERAPPA : If you also come to power, the first information must always come to the Government from the Police. Subsequently, if it calls for any further enquiry by any authority, that can be looked into. We cannot rule this country, without the Police. Even when you come to power tomorrow, you must have the same Police.

ಶ್ರೀ ಎಚ್. ಡಿ ದೇವೇಗೌಡ : ಇದೇ ಮಾನ್ಯ ಸಿದ್ದವೀರಪ್ಪನವರು ಹಿಂದೆಲ್ಲಾ ಅನೇಕ ಸಂದರ್ಭಗಳಲ್ಲಿ ನೀವು ಯಾವ ವಿಷಯದಲ್ಲಿ ಬೇಕಾದರೂ ಎಂಥಾ ಎನ್‌ಕ್ವೈರಿಯನ್ನಾದರೂ ಮಾಡಿ ಅದಕ್ಕೆ ನಾವು ಜಗ್ಗುವುದಿಲ್ಲ. ಎಂದು ಹೇಳಿ ದ್ದನ್ನು ಇಂದು ಮಾನ್ಯ ಸದಸ್ಯರು ಜ್ಞಾಪಕ ಮಾಡಿಕೊಂಡರೆ ಒಳ್ಳೆಯದೆಂದು ನಾನು ಅವರಿಗೆ ತಿಳಿಸಬಯಸುತ್ತೇನೆ. ಜುಡಿಷಿಯಲ್ ಎನ್‌ಕ್ವೈರಿ ಮಾಡುವು ದಕ್ಕೆ ಇದಕ್ಕಿಂತ ಗಹನವಾದ ವಿಷಯಬೇಕೇ ? ಮಾನ್ಯ ಮಂತ್ರಿಗಳೆನಿಸಿಕೊಳ್ಳ ತಕ್ಕವರು ಇನ್ನೂ ತಲೆ ಎತ್ತಿಕೊಂಡು ರಾಜ್ಯದಲ್ಲಿ ತಿರುಗಾಡಬಹುದೇ ? ಈಗ ನಡೆದಿರುವುದು ನಾಚಿಗೇಡಿನ ವಿಚಾರವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ :—ವಿಚಾರಣೆ ಮಾಡುವುದಕ್ಕೆ ದೂರಿನ ಅರ್ಜಿ ಎಲ್ಲಿದೆ. ಯಾರು ಕೊಟ್ಟಿದ್ದಾರೆ ? Where is the complaint ?

SRI B. BASAVALINGAPPA :—Let us take the sense of the House.

ಶ್ರೀ ವಾಟಾಳ್ ನಾಗರಾಜ :—ಆಡಳಿತ ಪಕ್ಷದಲ್ಲೂ ಇದಕ್ಕೆ ಕೈ ಎತ್ತುವ ಸದಸ್ಯರಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ :—ನಾನು ಹೇಳುತ್ತೇನೆ........

ಶ್ರೀ ಬಿ. ಪುಟ್ಟಸ್ವಾಮಯ್ಯ : —ಈ ದುರಂತ ನಡೆಸಿರುವುದರಲ್ಲಿ ಒಂದು ಕಂಪೆನಿ ಒಂದು ಗ್ಯಾಂಗೇ ಇದೆ....

ಶ್ರೀ ಎಚ್. ಡಿ. ದೇವೇಗೌಡ :—ಇದರಲ್ಲಿ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕು

ಅಧ್ಯಕ್ಷರು :—ಆ ವಿಚಾರಣೆ ಆಗದೇನೇ ಇರುವಾಗ ಅದನ್ನು ಹೇಗೆ ನಿಷ್ಪಕ್ಷಪಾತವಾಗಿಲ್ಲ ಎಂದು ಹೇಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ :—ಪೋಲೀಸರಿಂದ ನಿಷ್ಪಕ್ಷಪಾತವಾದ ವಿಚಾರಣೆ ನಡೆಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು :—ಅವರಿಂದ ವರದಿ ಬರದೇನೇ ಹೇಗೆ ವಿಚಾರಣೆಯನು ಪ್ರಾರಂಭ ಮಾಡುವುದು ?

ಶ್ರೀ. ಎಚ್. ಡಿ. ದೇವೇಗೌಡ.—ಆ ಹೆಣ್ಣು ಮಗಳನ್ನು ಆ ಪೋಲೀಸ್ ಡೆಪ್ಯುಟಿ ಕಮಿಷನರು, ಅಸಿಸ್ಟೆಂಟ್ ಕಮಿಷನರೂ ಮತ್ತು ಹೆಡ್ ಕಾನ್‌ಸ್ಟೇಬಲ್ ಬಲತ್ಕಾರದಿಂದ ಹೇಗೆ ಅಲ್ಲಿಗೆ ಕರೆದು ಕೊಂಡು ಹೋದರು ? ಅವರನ್ನು ಇನ್ನೂ ಏಕೆ ಸಸ್‌ಪೆಂಡ್ ಮಾಡಲಿಲ್ಲ ? ಪೋಲೀಸ್ ಎನ್‌ಕ್ವೈರಿಯಲ್ಲಿ ನಮಗೆ ಖಂಡಿತಾ ನಂಬಿಕೆಯಿಲ್ಲ. ಆ ಹೆಣ್ಣು ಮಗಳಿಗೆ ಬುದ್ಧಿ ಭ್ರಮಣೆ ಇರಲಿಲ್ಲ ಎಂದು ಆ ಆಶ್ರಮದ ಅಧಿಕಾರಿ ಮತ್ತು ಆ ಡಿಕಾಸ್ಟಾ ಹೇಳಿದ್ದಾರೆ. ಆಕೆ ಅಲ್ಲಿಂದ ಬೆಳಗ್ಗೆ ಎದ್ದು ಹೋದಳು ಎಂದರೆ—ಎಲ್ಲಿಗೆ ಹೋದಳು ? ಏನಾದಳು ? ಶ್ರೀಮಾನ್ ಸಿದ್ದಪ್ಪನವರು ಹೇಳುತ್ತಾರೆ. ಇಲ್ಲಿಗೆ ನಾಲ್ಕು ದಿನಗಳ ಕೆಳಗೆ ಆಕೆಯನ್ನು ಸಾಯಿಸಿ—ಸುಟ್ಟು ಹಾಕಿದ್ದಾರೆ—ಎಂದು. ಹೀಗೆ ಒಂದೊಂದಕ್ಕೂ ಒಂದೊಂದನ್ನು ಹೆಣದುಕೊಂಡು ಹೋಗುವುದಾದರೆ ಇದಕ್ಕೆ ಕೊನೆ ಮಾಡಲಿಲ್ಲ. ಇಂಥ ಕಥೆಗಳನ್ನು ನಾವು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ :—ಅಧ್ಯಕ್ಷರೇ ನಮಗೆಲ್ಲಾ ಇದರಲ್ಲಿರತಕ್ಕ ಒಂದೇ ಒಂದು ಭಯ ಏನೆಂದರೆ ಕ್ಯಾಬಿನೆಟ್ಟಿನಲ್ಲಿರತಕ್ಕ ಶ್ರೀ ಸಿದ್ದವೀರಪ್ಪ ಮತ್ತು

ಚನ್ನಬಸಪ್ಪನವರ ರಾಜಕೀಯ ವೈರಿಗಳು ನಾಳೆ ಇದೇ ರೀತಿ ಒಬ್ಬ ಹೆಣ್ಣು ಮಗಳನ್ನು ಇವರಿಬ್ಬರ ಮನೆಗೆ ಕಳುಹಿಸಿ ಅವರಿಗೆ ಮುತ್ತು ಕೊಡಿಸಿ ನಾಳೆ ಇವರನ್ನು ಮನೆಗೆ ಕಳುಹಿಸುವುದಕ್ಕೆ ಇಂಥಾದ್ದು ಕಾರಿಯಾದಿಸೀತು. ಅದಕ್ಕೆ ಅವಕಾಶವಿಲ್ಲದಿರುವಂತೆ ಇದರ ಬಗ್ಗೆ ಒಂದು ಜ್ಯುಡಿಷಿಯಲ್ ಪ್ರೋಬ್ ನಡೆಸಿ ಎಂದು ಒತ್ತಾಯ ಮಾಡುತ್ತಿರುವುದು.

ಶ್ರೀ ಹೆಚ್. ಡಿ. ದೇವೇಗೌಡ:—ನಾನು ಹೇಳುತ್ತಿರುವುದು ಈ ಒಬ್ಬ ಕಿತ್ತೂರರ ವಿಚಾರವಲ್ಲ. ಈ ಪ್ರಸಂಗದಲ್ಲಿ ಇನ್ನೂ ಅನೇಕ ಜನ ಕಿತ್ತೂರುಗಳಿದ್ದಾರೆ. ಮಂತ್ರಿ ಮಂಡಲದಲ್ಲಿರತಕ್ಕವರ್ಯಾರೂ ಋಷಿ ವರ್ಗಕ್ಕೆ ಸೇರಿದವರಲ್ಲ ಎಲ್ಲರಿಗೂ ಈ ಅಭಿರುಚಿ ಇದೆ. ಆದರೆ ಅವರ ಈ ಒಂದು ಕೆಲಸವನ್ನು ಸರ್ಕಾರದ ಕೀರ್ತಿಗೆ ಧಕ್ಕೆ ಬರದಂತೆ ನಡೆಸಿಕೊಂಡು ಹೋಗಬೇಕು. ಮಂತ್ರಿ ಸ್ಥಾನದಲ್ಲಿರತಕ್ಕವರಿಗೆ ಮುಖ್ಯವಾಗಿರಬೇಕಾದ್ದು ಮಾನ ಮರ್ಯಾದೆ. ಇವೆರಡೂ ಹೋದಮೇಲೆ ಅಲ್ಲಿರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ದೇವರಾಜ ಅರಸ್ ಅವರು ಈಗ ಕ್ಯಾಬಿನೆಟ್ಟಿನಲ್ಲಿ ಎಷ್ಟು ಜನರನ್ನು ಸೇರಿಸಿಕೊಂಡಿದ್ದಾರೊ ಇಷ್ಟೂ ಜನರನ್ನು ಆ ಸೇರಿಸಿಕೊಳ್ಳತಕ್ಕ ದಿವಸ ಯಾರೂ ಅರಸರನ್ನು ಅಕ್ಷೇಪಣೆ ಮಾಡಲಿಲ್ಲ. ಆದರೆ ಈ ದಿವಸ ನಡೆದಿರತಕ್ಕ ಘೋರ ಪ್ರಸಂಗವನ್ನು ನೋಡಿದರೆ ಮರ್ಯಾದೆವುಳ್ಳವರಾರೂ ತಲೆ ಎತ್ತಿ ಓಡಾಡುವಂತಿಲ್ಲ. ಅದಕ್ಕಾಗಿ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಆಗಲೇಬೇಕು. ಅದಕ್ಕೆ ಒಪ್ಪುವವರೆಗೆ ನಾನು ಸರ್ಕಾರವನ್ನು ಅಂದರೆ ಇಲ್ಲಿ ಯಾವ ಒಂದು ಕೆಲಸವನ್ನೂ ಮಾಡುವುದಕ್ಕೆ ಬಿಡುವುದಿಲ್ಲ. ನಾನು ಕೇಳುತ್ತಿರುವ ವಿಷಯವನ್ನು ಆಡಳಿತ ಪಕ್ಷದಲ್ಲೂ ಕೂಡ ಸ್ವಾಗತ ಮಾಡತಕ್ಕ ಅನೇಕ ಮಾನ್ಯ ಸದಸ್ಯರಿರಬಹುದು. ಪ್ರಾಮಾಣಿಕತೆಯುಳ್ಳವರೂ ಉತ್ತಮ ಚರಿತ್ರೆಯುಳ್ಳವರು ದಕ್ಷರು ಮಂತ್ರಿ ಮಂಡಲದಲ್ಲಿ ಇರುವುದು ಬೇಡ ಎಂದು ಯಾರೂ ಹೇಳಲಾರರು. ಅವರು ಅತ್ತ ಕಡೆಯೇ ಇರಲಿ ಅಥವಾ ಇತ್ತ ಕಡೆಯೇ ಇರಲಿ ಇಂಥ ಒಂದು ಎನ್‌ಕ್ವೈರಿ ಆಗಬೇಕೆಂದು ಕೇಳತಕ್ಕ ಜನ ಅಧಿಕಾರ ಪಕ್ಷದಲ್ಲೂ ಬಹಳ ಜನರಿದ್ದಾರೆಂದು ನಾನು ನಂಬುತ್ತೇನೆ. ಆದರೆ ಶ್ರೀಮಾನ್ ಬಸವಲಿಂಗಪ್ಪನವರ ಅಭಿಪ್ರಾಯದಂತೆ ನಮ್ಮ ಮಂತ್ರಿ ಮಂಡಲದಲ್ಲಿ ಅನಿಷ್ಟ ಮಂತ್ರಿಗಳೇ ಇರಲೆಂದು ಹೇಳಿದರೆ ಅದನ್ನು ರಾಜ್ಯದಲ್ಲಿ ಯಾರೂ ಒಪ್ಪಲಾರರೆಂಬುದು ನನ್ನ ಅಭಿಪ್ರಾಯ. ಆದರೆ ಪೋಲೀಸ್ ಎನ್‌ಕ್ವೈರಿಯಲ್ಲಿ ಒಂದು ಏನು ತೊಂದರೆ ಇದೆ ಎಂದರೆ ಅಧಿಕಾರದ ಗದ್ದುಗೆಯಲ್ಲಿರುವಾಗ ಅಲ್ಲಿ ನಿಷ್ಪಕ್ಷಪಾತವಾದ ಒಂದು ಎನ್‌ಕ್ವೈರಿ ನಡೆಯುವುದಕ್ಕೆ ಎಂದಿಗೂ ಸಾಧ್ಯವಿಲ್ಲ. ದಯವಿಟ್ಟು ಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕು. ನಿಮ್ಮ ವರ್ತನೆ ಸರಿಯಲ್ಲ ಎಂದು ಆರೋಪ ಮಾಡುವುದಕ್ಕೆ ಮುಂಚೆ ಮಂತ್ರಿಮಂಡಲದಿಂದ ಆಶ್ವಾಸನೆ ಬರಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

5.30 P.M.

ಶ್ರೀ ಕೆ ಶ್ರೀರಾಮುಲು : ಕಳೆದ ಮೂರು ದಿವಸಗಳಿಂದ ಹೆಣ್ಣುಮಗಳ ಬಗ್ಗೆ ವಿರೋಧ ಪಕ್ಷದವರು ಒಂದೊಂದು ರೀತಿಯಲ್ಲಿ ಹೇಳುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಆಕೆ ಪೋಲೀಸ್ ಎಸ್‌ಕಾರ್ಟಿನಲ್ಲಿ ಮುಂಬೈಗೆ ಹೋದಳು ಎಂದು ಹೇಳಿದರು, ವಾಟಾಳ್ ನಾಗರಾಜರವರು ಬೆಂಗಳೂರಿನಲ್ಲೇ ಆಕೆ ಇದ್ದಾಳೆ ಎಂದು ಹೇಳಿದರು, ಸಿದ್ದಪ್ಪನವರು ಮುಚ್ಚಿ ಹಾಕಿದ್ದಾರೆ ಎಂದು ಹೇಳಿದರು. ಈ ರೀತಿ ಮೂರು ಅಭಿಪ್ರಾಯಗಳಿರುವುದ ರಿಂದ ಯಾವ ಅಭಿಪ್ರಾಯದ ಆಧಾರದ ಮೇಲೆ ನಿರ್ಧಾರಕ್ಕೆ ಬರಬೇಕು ?

ಶ್ರೀ ಬಿ. ವಿ. ಕಕ್ಕಿಲಾಯ : ಅದಕ್ಕೇ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಹೇಳುವುದು.

ಶ್ರೀ ಕೆ. ಶ್ರೀರಾಮುಲು : ಆ ಹೆಣ್ಣುಮಗಳು ಬೊಂಬಾಯಿಗೆ ಹೋಗಿ ದ್ದಾರೆ, ಅಪಾಯವಿಲ್ಲ ಎಂದು ಮುಂತಾಗಿ ಹೇಳುವುದು ಕಲ್ಪನೆ ವಿಷಯ ವಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ : ಮುಖ್ಯಮಂತ್ರಿಗಳು ಆಕೆ ಪತ್ತೆಯಿಲ್ಲ ವೆಂದು ಹೇಳಿಕೆ ಕೊಟ್ಟಿರುವುದರಿಂದ ಸಂಶಯ ಬರುವುದು. ಪೋಲೀಸ್ ಎಸ್‌ಕಾರ್ಟಿನಿಂದ ಕಳಿಸಿದರೆಂಬುದು ನಿಜ. ಮುಖ್ಯ ಮಂತ್ರಿಗಳು ಆಕೆ ಪತ್ತೆ ಯಿಲ್ಲವೆಂದು ಹೇಳಿರುವುದರಿಂದ ಸಂಶಯ ಹೆಚ್ಚಾಗಿದೆ. ಆದುದರಿಂದ ಪೋಲೀಸ್ ವರದಿ ತರಿಸುವುದು ಎಂದರೆ........

SRI H. SIDDAVEERAPPA : They do not believe the Policemen but they want their report.

ಶ್ರೀ ಎಚ್. ಡಿ. ದೇವೇಗೌಡ : ಪೋಲೀಸು ಅಧಿಕಾರಿ ತಪ್ಪಲ್ಲ. ತಮ್ಮ ಮರ್ಯಾದೆ ಕಾಪಾಡಿಕೊಳ್ಳಲು ಪೋಲೀಸ್ ಅಧಿಕಾರಿಯ ವರದಿ ಸಪ್ರೆಸ್ ಮಾಡಿ ಸಭೆಯ ಮುಂದೆ ಇಟ್ಟಿದ್ದಾರೆ ಎಂಬ ಸಂಶಯದಿಂದ ವಿಮುಕ್ತರಾಗಬೇಕಾದರೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕು.

SRI B. BASAVALINGAPPA.—What is the basis for the hon. member's surmise ? He does not believe the Chief Minister but he believes the version of the Police.

ಶ್ರೀ ಎಚ್. ಡಿ. ದೇವೇಗೌಡ :—ಪೋಲೀಸ್ ವರದಿಯನ್ನು ಮುಚ್ಚಿಡುವುದಕ್ಕೆ ಹೊರಟಿದ್ದೀರಿ. ತಾವು ಹಾಗೆ ತಪ್ಪು ಮಾಡದಿದ್ದರೆ ನಿಷ್ಪಕ್ಷಪಾತವಾಗಿ ಎನ್‌ಕ್ವೈರಿ ಏಕೆ ಮಾಡಬಾರದು ?

ಶ್ರೀ ಎಚ್. ಸಿದ್ದವೀರಪ್ಪ :—ಪೋಲೀಸ್ ವರದಿಯನ್ನು ನಂಬುವುದಿಲ್ಲವೆಂದು ಹೇಳುವುದು ಅರ್ಥವಾಗುತ್ತಿಲ್ಲ. ಇಂಥ ಸನ್ನಿವೇಶ ಇದುವರೆಗೆ ಬಂದಿರುವುದೇ ?

ಶ್ರೀ ಎಚ್. ಡಿ. ದೇವೇಗೌಡ :—ಹಿಂದೆ ಮಂತ್ರಿಗಳು ಇಂಥ ಪ್ರಕರಣದಲ್ಲಿ ಇನ್‌ವಾಲ್ವ್ ಆಗಿರಲಿಲ್ಲ. ಸರಕಾರದ ಗೌರವ ಉಳಿಯಬೇಕಾದರೆ, ರಾಜ್ಯಕ್ಕೆ ಗೌರವ ಬರಬೇಕಾದರೆ. ಅವರು ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು. ಅವರು ಹಿಂದಿನಿಂದ ಗೌರವ ಕಾಪಾಡಿಕೊಂಡು ಬಂದಿದ್ದಾರೆ. ಅವರ ಕೀರ್ತಿ ಉಳಿಯಬೇಕಾದರೆ ಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕು, ಇಂಥ ಮಂತ್ರಿಮಂಡಲದಲ್ಲಿ ಅವರಿರಬಾರದು. ತಪ್ಪಿರುವುದನ್ನು ಷೀಲ್ಡ್ ಮಾಡಬಾರದು.

ಶ್ರೀ ಎಚ್. ಸಿದ್ದವೀರಪ್ಪ :—ಷೀಲ್ಡ್ ಮಾಡುವುದಕ್ಕೆ ಯಾರೂ ಹೋಗಿಲ್ಲ. ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ :—ಸರಕಾರ ಈ ವಿಚಾರದಲ್ಲಿ ಇಂಡಿಪೆಂಡೆಂಟ್ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದು ಅವಶ್ಯಕ. ಹಾಗೆ ಮಾಡುವುದಾಗಿ ಹೇಳಿದರೆ ನಾವು ಇದರ ಬಗ್ಗೆ ಒಂದು ಚಕಾರ ಶಬ್ದವನ್ನೂ ಎತ್ತುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಈ ಪ್ರಕರಣದಿಂದ ಮಂತ್ರಿಮಂಡಲದ ಮೇಲೆ ಅಪಖ್ಯಾತಿ ಬಂದಿರುವುದರಿಂದ ಮೊದಲು ಮಂತ್ರಿಮಂಡಲ ರಾಜೀನಾಮೆ ಕೊಡಬೇಕು, ನಾವೂ ಕೊಡಬೇಕು. ನಂತರ ಜನರ ಮುಂದೆ ಹೋಗಬೇಕು, ಮತದಾರರು ಯಾರದು ಸರಿ ಯಾರದು ತಪ್ಪು ಎಂದು ತೀರ್ಮಾನ ಮಾಡುವರು.

ಶ್ರೀ ಎಚ್. ಎಂ. ಚನ್ನಬಸಪ್ಪ :—ಇದರ ಬಗ್ಗೆ ವಿಧಿ ನಿಯಮ ಮೀರಿ ಬಹಳ ಕಾಲ ಚರ್ಚೆ ಆಗಿದೆ.

ಶ್ರೀ ವಾಟಾಳ್ ನಾಗರಾಜ್ :—ನೀವು ವಿಧಿ ನಿಯಮಗಳ ಕೊಲೆ ಮಾಡಿದ್ದೀರಿ

ಅಧ್ಯಕ್ಷರು :—ವಿಧಿ ನಿಯಮ ಮೀರಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ :—ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ತಿಳಿಸಿದರು. ಅದನ್ನು ಕೇಳಿದ್ದೇವೆ. ಮುಖ್ಯಮಂತ್ರಿಗಳು ಸ್ಪಷ್ಟವಾಗಿ ತಿಳಿಸಿದ್ದಾರೆ. ಈ ವಿಷಯದಲ್ಲಿ ಯಾರೂ ಅನುಮಾನ ಪಡಬೇಕಾಗಿಲ್ಲ. ನಿಮಗಿಂತಲೂ ಹೆಚ್ಚಿನ ಕಳಕಳಿ ನಮಗಿದೆ. ಪರಿಶೀಲನೆ ನಡೆಸಿ ವಾಸ್ತವಾಂಶ ಹೊರಗೆಡಹುವುದಾಗಿ ಅನುಮಾನಕ್ಕೆ ಎಡೆಯಿಲ್ಲದಂತೆ ಒತ್ತಿ ಒತ್ತಿ ಹತ್ತು ತಡವೆ ಹೇಳಿದ್ದಾರೆ. ಸರಕಾರದ ಪರವಾಗಿ ಹೇಳುವುದಾದರೆ ಮುಖ್ಯ ಮಂತ್ರಿಗಳು ಏನು ಸ್ಪಷ್ಟವಾಗಿ ಹೇಳಿದ್ದಾರೆ ಅದಕ್ಕಿಂತ ಹೆಚ್ಚು ಹೇಳುವ ವಿಷಯವೇನೂ ಇಲ್ಲ. ಪ್ರಾರ್ಥನೆ ತಮ್ಮಲ್ಲಿ ಮಾಡುವುದು ಅಸೆಂಬ್ಲಿ ಕೆಲಸವೇನಿದೆ ಅದನ್ನು ನಡೆಸಿಕೊಂಡು ಹೋಗೋಣ, ಪರಿಶೀಲನೆ ಪ್ರಾರಂಭಿಸಿ ಪಿಷಯ ಸಂಗ್ರಹಣೆ ಮಾಡಿ ವಾಸ್ತವಾಂಶ ಹೊರಗೆಡಹುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ ಎಂದು ಮತ್ತೊಮ್ಮೆ ಸರಕಾರದ ಪರವಾಗಿ ಭರವಸೆ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ :_ನಾವು ಒತ್ತಾಯ ಮಾಡುತ್ತೇವೆ ಎಂದು ತಿಳಿಯಬಾರದು. ಮಂತ್ರಿಗಳು ಈ ವಿಷಯದಲ್ಲಿ ಇನ್‌ವಾಲ್ವ್ ಆಗಿದ್ದಾರೆ, ಅದರಲ್ಲೂ ಗೃಹ ಸಚಿವರು ಏನಿದ್ದಾರೆ ಅವರ ಮೇಲೆ ದೂರಿದೆ. ಸರಕಾರದ ಒಬ್ಬ ಸಚಿವರ ಮೇಲೆ ಇಂದು ಆಪಾದನೆ ಇದೆ. ಮೈಸೂರಿನಲ್ಲಿ ಕಳೆದ 25 ವರ್ಷಗಳಲ್ಲಿ ಈ ಘಟನೆಯಾಗಿರುವುದು ಇದೇ ಪ್ರಥಮ. ಇದು ನಮ್ಮ ಅನುಭವ. ಹಿರಿಯ ರಾಜಕಾರಣಿಗಳಾದ ಅಧ್ಯಕ್ಷಣಿಯವರೂ ಇದನ್ನು ಒಪ್ಪುವರು. ರಾಜ್ಯ ಸಚಿವರ ಮೇಲೆ ದೂರಿದೆ.

SRI H. SIDDAVEERAPPA :—Where is the complaint? Does the Minister's letter disclose that he has made a complaint to the Deputy Commissioner of Police?

SRI H. M. CHANNABASAPPA.—The Chief Minister, in his statement, has stated that the Minister of State sent for the Deputy Commissioner of Police. There is no intention to shield anybody. There is no need to shield anybody.

ಅಧ್ಯಕ್ಷರು :—ಎಷ್ಟು ಸಾರಿ ಮಾತನಾಡುವುದು? ಮಂತ್ರಿಗಳ ಸ್ಟೇಟ್‌ಮೆಂಟ್ ಆದ ಮೇಲೆ ರೂಲ್ 306ರ ಪ್ರಕಾರ ಕ್ಲಾರಿಫಿಕೇಷನ್ನಿಗೆ ಅವಕಾಶವಿರುವುದಿಲ್ಲ. ಅವರು ವಾಲಂಟರಿಯಾಗಿ ಸ್ಟೇಟ್‌ಮೆಂಟ್ ಮಾಡಿದ್ದ ಮೇಲೆ ಕ್ಲಾರಿಫಿಕೇಷನ್ನಿಗೆ ಅವಕಾಶವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ:—306ನೆಯ ರೂಲನ್ನು ಫ್ರೇಮ್ ಮಾಡಿದಾಗ ಮಂತ್ರಿಗಳ ಮನೆಯಲ್ಲಿ ಅವ್ಯವಹಾರ ನಡೆಯುತ್ತದೆ ಎಂದು ಯಾರಿಗೂ ಗೊತ್ತಿರಲಿಲ್ಲ.

ಅಧ್ಯಕ್ಷರು:—ಇದರ ಬಗ್ಗೆ ಸಾಕಾದಷ್ಟು ಚರ್ಚೆಯಾಗಿದೆ, ಇದನ್ನು ಇಲ್ಲಿಗೆ ಮುಗಿಸಿ ಬೇರೆ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್. ಡಿ. ದೇವೇಗೌಡ :— ಚರ್ಚೆಯಾಗಿಲ್ಲ.

ಶ್ರೀ ವಾಟಾಳ್ ನಾಗರಾಜ :— ಚರ್ಚೆಗೆ ಅವಕಾಶ ಮಾಡುತ್ತೀರಾ?

ಅಧ್ಯಕ್ಷರು :— ತಾವು ಕೂತುಕೊಳ್ಳಿ, ಸಮಾಧಾನವಾಗಿರಿ, ನೀವು ಹೇಳಿದ್ದನ್ನೆಲ್ಲಾ ನಾವು ಕೇಳಲಿಲ್ಲವೇ? ನಾವು ಹೇಳಿದ ಎರಡು ಮಾತನ್ನೂ ಕೇಳದಿದ್ದರೆ ಹೇಗೆ? ಈ ವಿಷಯದಲ್ಲಿ ಸಾಕಷ್ಟು ಚರ್ಚೆ ನಡೆದಿದೆ, ಎನ್‌ಕ್ವಯರಿ ಮಾಡುತ್ತೇನೆಂದು ಚೀಫ್ ಮಿನಿಸ್ಟರು ಒಪ್ಪಿಕೊಂಡಿದ್ದಾರೆ. At the first instance that will be only a police enquiry ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದಾದನಂತರ, ಅವರು ಮಾತನಾಡುವಾಗ ಅವರ ಕಳಕಳಿಯನ್ನು ನೋಡಿದರೆ ಅವರ ಕಳವಳ ಎಲ್ಲರಿಗೂ ಗೊತ್ತಾಗುತ್ತದೆ. ಆದ್ದರಿಂದ ಇದನ್ನು ಇಲ್ಲಿಗೆ ಮುಗಿಸಿಬಿಡೋಣ. Let us go on with the business of the House.

ಶ್ರೀ ಹೆಚ್. ಡಿ. ದೇವೇಗೌಡ :— ಇದರ ಬಗ್ಗೆ ಚರ್ಚೆ ಇನ್ನೂ ಮುಗಿದಿಲ್ಲ. ಮುಗಿದಿದ್ದರೆ ಇಷ್ಟು ಪ್ರತಿಭಟನೆಯನ್ನು ನಾವು ಮಾಡಲಿಕ್ಕೆ ಶಕ್ಯ ಇಲ್ಲ. ರೂಲ್ಸ್ ಪ್ರಕಾರ ಈ ವಿಷಯವನ್ನು ಇಲ್ಲಿ ಚರ್ಚೆಮಾಡಬೇಕು ಎಂದು ನೋಟೀಸನ್ನು ಕೊಟ್ಟಿದ್ದೇವೆ. ಇದರ ಪರಿಣಾಮ ಏನಾಗುತ್ತದೆ ಎನ್ನುವುದು ತಮಗೆ ಗೊತ್ತಿದೆ. ಒಂದು ವೇಳೆ ಸರ್ಕಾರ ಇದನ್ನು ಮುಚ್ಚಲಿಕ್ಕೆ ಪ್ರಯತ್ನ ಮಾಡಿದರೂ ದೇಶದ ಮುಂದೆ ಇದನ್ನು ಮುಚ್ಚಲಿಕ್ಕೆ ಆಗುವುದಿಲ್ಲ. ರೂಲ್ಸ್ ಪ್ರಕಾರ ನೋಟೀಸ್ ಅನ್ನು ಕೊಟ್ಟಿದ್ದೇವೆ, ಆದ್ದರಿಂದ ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಇವರು ಯಾವ ವಿಮಾನದಲ್ಲಿ ಬಂದರು, ಯಾರ ಜೊತೆಯಲ್ಲಿ ಬಂದರು, ಇದರ ಬಗ್ಗೆ ಪೂರ್ಣವಾಗಿ ನಾವು ಇನ್ನೂ ಕೈಹಾಕಿಲ್ಲ.

ಅಧ್ಯಕ್ಷರು:—ಈಗತಾನೇ ನೋಟೀಸು ಬಂದಿದೆ. ಇದನ್ನು ಜಾರಿಗೆ ಕೊಡಬೇಕಲ್ಲ ಎಂದು ನೋಡುತ್ತಿದ್ದೇನೆ. ಅದಕ್ಕೆ ಅವಕಾಶ ಆಗುವುದಾದರೆ ಏರ್ಪಾಡು ಮಾಡಿಕೊಡೋಣ.

ಶ್ರೀ. ಹೆಚ್. ಡಿ. ದೇವೇಗೌಡ :—ಇಂಥ ಗಹನವಾದ ವಿಷಯವನ್ನು ಇಟ್ಟು ಕೊಂಡು ನಾವು ಬೇರೆ ವಿಷಯವನ್ನು ಚರ್ಚೆ ಮಾಡುವುದು ಬೇಡ.

ಅಧ್ಯಕ್ಷರು.—ಈಗ ಇದನ್ನು ಮುಗಿಸಿಬಿಡಿ

ಶ್ರೀ ಹೆಚ್. ಡಿ. ದೇವೇಗೌಡ:—ನಾಳೆ ತೆಗೆದುಕೊಳ್ಳೋಣವೇ?

ಅಧ್ಯಕ್ಷರು.—ಸುಭಾಷ್ ಅಸೂ್ತರ್‌ರವರು ತಮ್ಮ ಮಾತನ್ನು ಮುಗಿಸಿ ಬಿಡಲಿ, ಅವರು ಮುಗಿಸಿದ ಮೇಲೆ ಸಭೆಯನ್ನು ಅಡ್ಜರ್ನ ಮಾಡುತ್ತೇನೆ.

ಶ್ರೀ. ವಾಟಾಳ್ ನಾಗರಾಜ್.—ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ. ಹೆಚ್. ಡಿ. ದೇವೇಗೌಡ :—ನೋಟೀಸ್ ಪ್ರಕಾರ ಇದನ್ನು ಚರ್ಚೆಗೆ ತೆಗೆದುಕೊಂಡು ಪ್ರತಿದಿವಸ ಇದೇ ಪ್ರಲಾಪ ಮಾಡಿಕೊಳ್ಳುವುದಕ್ಕೆ ಬದಲಾಗಿ ಗುಡ್‌ಗೆಸ್ಚರ್ ತೆಗೆದುಕೊಂಡು ಇಂದೇ ಮುಗಿಸಿಬಿಡೋಣ. ಇದರ ಬಗೆ ಇಂಡಿಪೆಂಡೆಂಟ್ ಎನ್‌ಕ್ವಯರಿ ಮಾಡಬೇಕಾಗುತ್ತದೆ.

SRI H. M. CHANNABASAPPA.—I have already said that there is nothing which I can say at present beyond what the Chief Minister has said.

ಅಧ್ಯಕ್ಷರು.—ಶ್ರೀ. ಸುಭಾಸ್ ಅಸೂ್ತರ್‌ರವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್.—ಇದಕ್ಕಿಂತ ಮುಖ್ಯ ವಿಷಯ ನಿಮಗೆ ಬೇಕೆ?

ಶ್ರೀ ಹೆಚ್. ಡಿ. ದೇವೇಗೌಡ :—ಇದು ಮತ್ತೆ ನಾಳೆ ಬೆಳಿಗ್ಗೆ ಪುನಃ ಪ್ರಾರಂಭವಾಗುತ್ತದೆ ಎಂದು ನಾನು ಹೇಳುತ್ತೇನೆ. ದಯಮಾಡಿ ತಾವು ನಾಳೆ ನಾವು ಕೊಟ್ಟ ನೋಟೀಸಿನ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು. ಇಷ್ಟು ಸೌಮ್ಯತೆಯಿಂದ ಪ್ರಾರ್ಥನೆ ಮಾಡಿ, ಇದರ ಬಗ್ಗೆ ನಾವು ಒತ್ತಾಯ ಮಾಡುವುದಕ್ಕೆ ತಾವು ತಪ್ಪು ತಿಳಿಯಬಾರದು.

MADAM SPEAKER :—Mr. Subash Asture may begin his speech.

SRI SUBASH ASTURE :—I was saying about two basic important things. We should change our attitude of our people towards agriculture.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದಕ್ಕಿಂತ ಮುಖ್ಯ ವಿಷಯ ನಿಮಗೆ ಬೇಕೆ?

ಶ್ರೀ ಕೋಣಂದೂರು ಲಿಂಗಪ್ಪ.—ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಯಾಗಬೇಕು.

ಅಧ್ಯಕ್ಷರು.—ತಿರುಗಿ ನಿಮ್ಮ ವ್ಯಾಖ್ಯಾನಬೇಡ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದರ ಬಗ್ಗೆ ಏನಾದರೂ ಸ್ಪಷ್ಟವಾದ ಹೇಳಿಕೆ ಕೊಡಲಿ, ಇಷ್ಟೊಂದು ಪ್ರಾರ್ಥಿಸಿಕೊಂಡರೂ ಅವರು ಹಿಮಾಲಯ ಪರ್ವತದ ಹಾಗೆ ಕೂತುಕೊಂಡಿದ್ದಾರೆ. ಇಂಥ ವಿಷಯಗಳು ಬಂದಾಗ ಹಿಮಾಲಯ ಪರ್ವತ ಕರಗಿ ನೀರಾಗಿ ಹರಿಯಬೇಕು, ಆದರೆ ನೀವು ಶಾಂತಿಯಿಂದ ಕುಳಿತುಕೊಂಡಿದ್ದೀರಿ.

(ವಿರೋಧಪಕ್ಷದ ಆರು-ಏಳು ಜನ ಸದಸ್ಯರು ಮಾತನಾಡುವುದಕ್ಕೆ ಶುರು ಮಾಡಿದರು)

ಶ್ರೀ ವಾಟಾಳ್ ನಾಗರಾಜ್.—ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಲೇಬೇಕು. ಇಲ್ಲದೆ ಹೋದರೆ ಸಭೆಯ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು.—ಇದು ಬಹಳ ಜಾಸ್ತಿಯಾಯಿತು. ನೀವು ಹೇಳಿದ್ದು ಮಾಡಬೇಕೇ? Let the Chief Minister know your mind.

ಶ್ರೀ ವಾಟಾಳ್ ನಾಗರಾಜ್.—ನ್ಯಾಯಾಂಗ ವಿಚಾರಣೆಯಾಗುವವರೆಗೆ ಈ ಸಭೆಯ ಬೇರೆ ಕಾರ್ಯಕಲಾಪ ಬೇಡ.

ಅಧ್ಯಕ್ಷರು.—ಅವರು ಹೇಳುವವರು ಹೇಳಿದ್ದಾರೆ, ಚರ್ಚೆಗೆ ಕಾಲಾವಕಾಶ ಕೊಡಬೇಕೇ ಎಂದು ನೋಡಿ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, ಈ ವಿಷಯದಲ್ಲಿ ನಾವು ಯಾರೂ ಅನಾವಶ್ಯಕವಾಗಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕಾಗಿಲ್ಲ.

ಅಧ್ಯಕ್ಷರು.—ತಾವು ಇದನ್ನು ಸಾವಿರ ಸರ್ತಿ ಹೇಳಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಒಪ್ಪುತ್ತಾ ಇಲ್ಲ.

ಅಧ್ಯಕ್ಷರು.– ನಾನು ಚೀಫ್ ಮಿನಿಸ್ಟರನ್ನು ಕೇಳಬೇಡವೇ ?

ಶ್ರೀ ವಾಟಾಳ್ ನಾಗರಾಜ್.— ಸರ್ಕಾರ ಬಿಜಾಪುರದ ಗೋಳಗುಮ್ಮಟ ಇದ್ದ ಹಾಗೆ ಇದೆ, ಅವರಿಗ ಹೃದಯ ಇಲ್ಲ, ಪೊಳ್ಳು ಸರ್ಕಾರ, ಭಂಡ ಸರ್ಕಾರ.

ಅಧ್ಯಕ್ಷರು.— ಅಸೆಂಬ್ಲಿ ನಿಮ್ಮದು ಅಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಇಂಥ ವಿಷಯದಲ್ಲಿ ಸರ್ಕಾರ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಒಪ್ಪುವುದಿಲ್ಲ ಎಂದರೆ ನಾವು ಇದಕ್ಕೆ ಎಷ್ಟು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕೋ ?

ಅಧ್ಯಕ್ಷರು.— ನಾಗರಾಜ್ ಹೀಗೆ ಕೂಗಿಕೊಂಡರೆ ಹೇಗೆ, ಒಂದೊಂದು ಸರ್ತಿ ನಿಮಗೆ ಎಲೆಕ್ಟ್ರಿಸಿಟಿ ಉತ್ಪತ್ತಿಯಾದಂತಾಗುತ್ತದೆ, ಇಷ್ಟು ಟಾಪ್ ವಾಯ್ಸ್‌ನಲ್ಲಿ ನಾನು ಕೂಗಿಕೊಂಡರೂ ಅದು ನಿಮ್ಮ ಕಿವಿಯೊಳಗೆ ಹೋಗದಿದ್ದರೆ ಏನು ಮಾಡುವುದು ?

ಶ್ರೀ ಕಾಗೋಡು ತಿಮ್ಮಪ್ಪ.— ಸತ್ಯಾಂಶವನ್ನು ಮುಚ್ಚಿ ಹಾಕುವುದಕ್ಕೆ ಪೋಲೀಸರು ಶರೀಕು ಆಗಿದ್ದಾರೆ ಎಂದು ಹೇಳಿಕೆಯಿಂದ ಗೊತ್ತಾಗುತ್ತದೆ ನ್ಯಾಯಾಂಗ ತನಿಖೆ ಆದರೆ ಸತ್ಯಾಂಶ ಹೊರಗೆ ಬರುತ್ತದೆ

ಅಧ್ಯಕ್ಷರು :—Sri Asture may continue his speech tomorrow Sri M. S. Krishnan's half-an-hour discussion is there, but if he does not want it today, it will lapse.

SRI H. S. SIDDAPPA :—We can forego anything.

ಶ್ರೀ ವಾಟಾಳ್ ನಾಗರಾಜ್.— ನೀತಿಗೆಟ್ಟ ಸರ್ಕಾರಕ್ಕೆ ದಿಕ್ಕಾರ........

MADAM SPEAKER :—That is not fair, Sri Vatal Nagaraj cannot hold the House to ransome like this.

(Interruption from opposition Members—Sri H. D. Devegowda, Sri Vatal Nagaraj Sri Kagodu Thimmappa, Konandur Lingappa all standing).

The House Stands Adjourned to meet tomorrow at 9-00 A. M.

The House adjourned at fifty minutes past five of the Clock and meet again at Nine of the Clock on Saturday, the 26th May, 1973.

WD 146—GEPC—550—16 2-74

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, 26th May 1973/Jaishta 5, 1895 S. E.

The House met in the Assembly Chamber, Vidhana Soudha, at nine of the Clock.

MADAM SPEAKER (Smt. K. S. NAGARATHNAMMA) in the Chair.

STARRED QUESTIONS

(to which oral answers were given)

BORE WELLS SUNK IN BIDAR DISTRICT

919. Sri V. N. PATIL (HUMNABAD.)—

Will the Minister for Community Development and Social Welfare be pleased to state : –

(*a*) the number of Rigs (Fast. Rigs) working in Bidar District ;

(*b*) the companies or the firms which supplied those machines ; whether the machines are owned by Government ;

(*c*) the amounts (digging charges) so far paid for boring wells in Bidar District since August 19,2 (monthwise and firmwise figures may please be furnished) ;

(*d*) the total number of Bore wells dug upto March 15th 1973 (villagewise, Taluk wise figures be furnished) ;

(SRI V. N. PATIL)

(*e*) the number of ;

(i) wells failed so far ;
(ii) wells in working condition ;
(iii) wells fitted with hand pumps ;
(iv) wells fitted with power pumps ;
(v) wells where pumps are yet to be fixed ;

(*f*) the dates when the pumps were fixed (villagewise figures may please be furnished) ;

(*g*) the quantum of water available per hour in terms of gallons (may be furnished villagewise)?

SRI M. MALLIKARJUNA SWAMY.—(Minister for Community Development and Social Welfare).

(*a*) 5.

(*b*) (1)	Swisteco-Drilling Hubli.	1
(2)	Agro-Industries Ltd.	3 (Wabco/Volume/RMT)
(3)	Executive Engineer, Well-Boring Division.	One (Ingersoll Rand).

The Rig shown against item 3 above is the one supplied by UNICEF and owned by Government.

(*c*) Rs. 8,30,907.95

Monthwise and firmwise details are furnished in the Statement No. 1 placed on the Table of the House*.

(*d*) 198. Villagewise, talukwise details are given in the Statement No. 2 placed on the Table of the House*.

(*e*) (i) 55
(ii) 143
(iii) 108
(iv) 25—*Vide* Statement No. 3 placed on the Table of the House*.

---

* Copies placed in the Mysore Legislature Library *vide* No 46/dt. 26-5-1973.

(v) 23

(f) The dates are noted in Col. 8 in Statement No. 2 and in Col. 4 in Statement No. 3 placed on the Table of the House.

(*g*) The quantum of water available is given in columns 5 and 6 in Statement No. 2 placed on the Table of the House.

ಶ್ರೀ ವಿ. ಎನ್. ಪಾಟೀಲ್ :—(ಇ) ಪ್ರಶ್ನೆಗೆ ಉತ್ತರ ಕೊಡುತ್ತಾ ಪಂಪು
ಗಳನ್ನು ಜೋಡಿಸಬೇಕಾಗಿರುವ ಬಾವಿಗಳ ಸಂಖ್ಯೆ 23 ಎಂಬುದಾಗಿ ಹೇಳಿದೆ.
ನೀರು ಬಹಳ ಕಡೆ ಬರುತ್ತಿಲ್ಲ. ಬೋರವೆಲ್ ಹಾಕಿ ಎರಡು ಮೂರು ತಿಂಗಳು
ಗಳಾದರೂ ಪಂಪುಗಳು ಇನ್ನೂ ಬರಲಿಲ್ಲವೆಂದು ಹೇಳುತ್ತೀರಿ. ಬೀದರ್ ಜಿಲ್ಲೆ
ಯಲ್ಲಿ ಈಗ ಎಲ್ಲೆಲ್ಲಿ ಪಂಪು ಸೆಟ್‌ಗಳನ್ನು ಕೊಟ್ಟಿದ್ದೀರಿ ?

*ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :- ಈಗ ಅಲ್ಲಿ ನೀರಿನ ಅಭಾವವಿರು
ವುದರಿಂದ ಮುಂದೆ ಎಲ್ಲಾ ಕಡೆಗಳಲ್ಲಿಯೂ ಅವನ್ನು ಹಾಕಿಸುವುದಕ್ಕೆ ಪ್ರಯತ್ನ
ಮಾಡುತ್ತೀರಾ ?

ಶ್ರೀ ವಿ. ಎನ್. ಪಾಟೀಲ್ : ಈಗ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್
ಎಂಬುದು ಪ್ರತಿಯೊಂದು ಗ್ರಾಮದಲ್ಲಿರುವುದರಿಂದ ಅಲ್ಲಿಗೆ ನಮ್ಮ ಜಿಯಾಲಜಿಸ್ಟ್
ಹೋದಾಗ ಅಲ್ಲಿ ನಡೆಯುವ ಕೆಲಸಕಾರ್ಯಗಳಲ್ಲಿ ಒಂದು ಕಡೆ ಬಾವಿಕೆಲಸ ಫೇಲ್
ಆಗಬಹುದು. ಆಗ ಆಲ್ಟರ್‌ನೇಟಿವ್ ಆಗಿ ಒಂದು ಕಡೆ ಸೈಟ್ ಸೆಲೆಕ್ಟ್ ಮಾಡಿ
ಡಿ-ಮಾರ್ಕ್ ಮಾಡಿರಬೇಕು. ಮತ್ತೊಂದು ಕಡೆ ಕೊಳವೆ ಬಾವಿಗಳನ್ನು ತೋಡಿಸು
ವುದಕ್ಕೆ ಆಗುತ್ತದೆಂದರೆ, ಅದರ ಬಗ್ಗೆ ಮುಂದಿನಕ್ರಮ ತೆಗೆದುಕೊಳ್ಳಬೇಕು.
ಬಾವಿ ಕೆಲಸ ಫೇಲಾಗಿರುವ ಕಡೆ ಆಲ್ಟರ್‌ನೇಟಿವ್ ಸೈಟನ್ನು ಸೆಲೆಕ್ಟ್‌ಮಾಡಿ ಅಲ್ಲಿ
ಆ ಕೆಲಸ ಜಾಗ್ರತೆಯಾಗಿ ಮಾಡಿಸಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು : ಈಗ ಅಲ್ಲಿ ಬರಗಾಲದ
ಪ್ರಯುಕ್ತ ನೀರು ಬಹಳ ಕೆಳಭಾಗದಲ್ಲಿದ್ದರೂ ಅದನ್ನು ತೆಗೆಯಲು ರಿಗ್ಸ್ ಅವಶ್ಯ
ಕತೆ ಇದೆ. ಮೊನ್ನೆ ಈ ಸಭೆಯಲ್ಲಿಯೇ ಹೇಳಿದ್ದಾರೆ, ಇನ್ನು ರಿಗ್ಸ್ ಬರುತ್ತವೆಂದು
ಅದು ಯಾವಾಗ ಬರುತ್ತದೆ? ಅಲ್ಲದೆ ಬಿದರ್ ಜಿಲ್ಲೆಯಲ್ಲಿ ಕೆಲವು ರಿಗ್ಸ್

* Asterisks indicate that remarks or Speechs have not been revised
y the member concerned.

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಈಗಾಗಲೇ ಕೆಲಸಮಾಡುತ್ತವೆ. ಅದರಲ್ಲಿ 4 ರಿಗ್ಸ್ ಫೇಲಾಗಿವೆ. ಅದಕ್ಕಾಗಿ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಅದಕ್ಕೆ ಸಂಬಂಧಪಟ್ಟ ಸ್ಪೇರ್ ಪಾರ್ಟ್ಸನ್ನು ತರಿಸುವುದಕ್ಕೆ ಎಲ್ಲಾ ಏರ್ಪಾಡು ಮಾಡಿದ್ದೇವೆ.

ಶ್ರೀ ವಿ. ಎನ್. ಪಾಟೀಲ್ : ಯಾವ್ಯಾವ ಗ್ರಾಮಗಳಲ್ಲಿ ನೀರಿನ ಅಭಾವ ವಿದೆ, ನೀರು ಸರಿಯಾಗಿ ಸಿಗುತ್ತಾ ಇಲ್ಲ ಅಲ್ಲಿ ಎತ್ತಿನ ಗಾಡಿಗಳ ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿದರೆ ಮಾತ್ರ ವ್ಯವಸಾಯ ನಡೆಯುತ್ತದೆ ಜನಗಳಿಗೆ ಎಷ್ಟು ನೀರು ಮುಟ್ಟಬೇಕೋ ಅಷ್ಟು ಇನ್ನೂ ಮುಟ್ಟಿಲ್ಲವೆಂಬುದನ್ನು ನಾನು ಎರಡು ಮೂರು ಸಾರಿ ಕೇಳಿದ್ದೇನೆ. ಆದ್ದರಿಂದ ಡಿ-ಮಾರ್ಕ್ ಮಾಡಿದ ಗ್ರಾಮಗಳಲ್ಲಿ ಇನಿಷಿಯೇಟಿವ್ ತೆಗೆದುಕೊಂಡು ಬಾವಿಗಳನ್ನು ತೋಡಿಸಬೇಕು ಆ ಮೂಲಕ ಪ್ರತಿಯೊಂದು ಗ್ರಾಮಕ್ಕೂ ನೀರು ಕೊಡುವ ಹಾಗೆ ಅಷ್ಯೂರೆನ್ಸ್ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಮಾನ್ಯ ಸದಸ್ಯರು ಹೇಳಿದ ಪ್ರತಿಯೊಂದು ವಿಷಯವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಟ್ಯಾಂಕರ್‌ಗಳ ಹಾಗೂ ಎತ್ತಿನ ಗಾಡಿಗಳ ಮೂಲಕ ಜನಗಳಿಗೆ ನೀರು ಪೂರೈಕೆಯನ್ನು ಮಾಡುತ್ತೇವೆ

CONSTRUCTION OF BRIDGE IN ANKOLA TALUK

928. Smt. RADHA BHATT.—(Ankola)

Will the Minister for Public Works and Electricity be pleased to state :—

(*a*) whether it is under consideration of the Government to construct a bridge across Halavalli-Asehalla in Ankola Taluk of N. K. District;

(*b*) if so, when the construction work of this bridge will be started ?

SRI H. M. CHANNABASAPPA (Minister for Public Works and Electricity) :—

(*a*) No

(*b*) Does not arise in view of reply to clause (*a*)

ಶ್ರೀಮತಿ ರಾಧಾ ಭಟ್.—ಈ ತಾಲ್ಲೂಕಿನಲ್ಲಿ ಸೇತುವೆ ತುಂಬಾ ಅವಶ್ಯಕತೆ ಇರುವುದರಿಂದ ಅದನ್ನು ಈಗ ನಿರ್ಮಾಣ ಮಾಡದಿದ್ದರೆ ಅಲ್ಲಿನ ಜನರಿಗೆ ಬಹಳ ತೊಂದರೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಅಲ್ಲಿ ರಸ್ತೆ ಇಲ್ಲ ಆದ್ದರಿಂದ ಸೇತುವೆ ಕಟ್ಟುವ ಪ್ರಶ್ನೆ ಬರುವುದಿಲ್ಲ. ಅಲ್ಲಿ ರಸ್ತೆಯಾದ ಮೇಲೆ ಸೇತುವೆ ಕಟ್ಟುವ ಪ್ರಶ್ನೆ ಬರುತ್ತದೆ.

ಶ್ರೀಮತಿ ರಾಧಾ ಭಟ್ —ಹಾಗಾದರೆ ಈ ಸೇತುವೆ ಕಟ್ಟುವ ಕಾರ್ಯದ ಬಗ್ಗೆ ಸಂಬಂಧ ಪಟ್ಟ ಇಂಜಿನಿಯರುಗಳಿಂದ ಸರ್ಕಾರಕ್ಕೆ ಏನಾದರೂ ವರದಿ ಬಂದಿದೆಯೇ ? ಅಥವಾ ಜನರಿಂದೇನಾದರೂ ಬೇಡಿಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ರೂರಲ್ ಕಮ್ಯೂನಿಕೇಷನ್. ಹಳ್ಳಿಯಿಂದ ಹಳ್ಳಿಗೆ ಹೋಗುವ ರಸ್ತೆ. ಈಗ ಅದನ್ನು ಮಾಸ್ಟರ್ ಪ್ಲಾನಿನಲ್ಲಿ ಸೇರಿಸಿದ್ದಾರೆ. ಆದ್ದರಿಂದ ರಸ್ತೆ ಆದ ಮೇಲೆ ಸೇತುವೆ ಕಟ್ಟುವ ವಿಷಯವನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಎಸ್ ಸಿದ್ದಪ್ಪ.—ಈಗ ಅಲ್ಲಿ ರಸ್ತೆ ಇಲ್ಲ, ರಸ್ತೆಯಾದಮೇಲೆ ಸೇತುವೆ ಕಟ್ಟುತ್ತೇವೆಂದು ಹೇಳಿದಿರಿ. ನಿಮ್ಮ ಇಲಾಖೆಯವರು ರಸ್ತೆಗಳನ್ನು ತೆಗೆದುಕೊಳ್ಳಬೇಕಾದರೆ ಜಾಸ್ತಿ ಹಣ ಬೇಕಾಗುತ್ತದೆ. ಮೊದಲು ಸೇತುವೆಗಳನ್ನು ಕಟ್ಟಿಕೊಂಡು ಅಮೇಲೆ ರಸ್ತೆಗಳನ್ನು ಮಾಡುತ್ತೇವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೇತುವೆಗಳು ನಾನಾ ತರಹ ಇರುತ್ತವೆ. 20 ಅಡಿ, 50 ಅಡಿ ಮತ್ತು 100 ಅಡಿಗಳಂತೆ ಇರುತ್ತವೆ. ರೂರಲ್ ಕಮ್ಯೂನಿಕೇಷನ್ಸ್ ಪ್ರೋಗ್ರಾಂನಲ್ಲಿ ಬೇಕಾದಷ್ಟು ಸೇತುವೆಗಳನ್ನು ಕಟ್ಟಬಹುದು ಆ ಕಮ್ಯೂನಿಕೇಷನ್ಸ್ ಪ್ರೋಗ್ರಾಂನಲ್ಲಿ ಇರತಕ್ಕ ಸಣ್ಣಪುಟ್ಟ ಸೇತುವೆಗಳನ್ನು ಮಾಡುವಾಗ ಇದನ್ನು ಕಟ್ಟಿಕೊಡುತ್ತಾರೆ.

ಶ್ರೀಮತಿ ರಾಧಾಭಟ್ :....ಹಾಗಾದರೆ ಅಲ್ಲಿಯ ಜನರ ಅಭ್ಯುದಯದ ದೃಷ್ಟಿಯಿಂದಲಾದರೂ ಈ ಸೇತುವೆಯನ್ನು ಕಟ್ಟುವುದು ಅವಶ್ಯಕವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಸ್ತೆಯೂದ ನಂತರ ಅದನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿ ಇನ್ನೂ ರಸ್ತೆಯೇ ಆಗದಿರುವಾಗ ಅದಕ್ಕೆ ಅದಕ್ಕೆ ಅಂಥ ಆತುರತೆಯಿಲ್ಲ ಎಂಬುದು ನನ್ನ ಅಭಿಪ್ರಾಯ.

REMOVAL OF TIMBER AND FUEL CHARCOAL UNAUTHORISEDLY IN KURUKALAMATTI ESTATE.

936 SRI HANJI SHIVANNA (Tarikere):-Will the Minister for Agriculture and Forest be pleased to state :—

(*a*) whether it is a fact that the Government seized some timber and fuel charcoal reported to have been unauthorisedly removed some years ago in Kurukalamatti Estate of Tarikere Taluk;

(*b*) since the criminal case in this respect having been dismissed, the amount claimed by the party through the notice issued to Government ;

(*c*) whether the timber logs seized are in order ;

(*d*) if not the persons responsible for their misuse?

SRI K.H. PATIL (Minister for Agriculture and Forests):

(*a*) Yes

(*b*) Rs. 2,81,240

(*c*) The seized timber logs have been not accepted by the claimant.

(*d*) Not yet known

ಶ್ರೀ ಹಂಜಿ ಶಿವಣ್ಣ :— ಸ್ವಾಮಿ, ಇಲ್ಲಿ ನನ್ನ (ಅ) ಪ್ರಶ್ನೆಗೆ ನಿಜ ಎಂದು ಉತ್ತರವನ್ನು ಕೊಟ್ಟು (ಈ) ಪ್ರಶ್ನೆಗೆ ಉತ್ತರವಾಗಿ ಇನ್ನೂ ಗೊತ್ತಿಲ್ಲ ಎಂದು ಹೇಳಿರತಕ್ಕದ್ದು ಒಂದಕ್ಕೊಂದಕ್ಕೆ ವಿರುದ್ಧವಾಗಿಲ್ಲವೇ ?

*ಶ್ರೀ ಕೆ. ಎಚ್. ಪಾಟೀಲ್ :— ಆ ಹಣವನ್ನು ಸರಕಾರ ಕೊಡಬೇಕಾಗಿಲ್ಲ

ಶ್ರೀ ಹಂಜಿ ಶಿವಣ್ಣ : ಮೊಲನು, ಮುಟ್ಟುಗೋಲು ಹಾಕಿಕೊಂಡ ಮೇಲೆ ಅದರ ಉಸ್ತುವಾರಿ ಯಾರದು ?

ಶ್ರೀ ಕೆ. ಎಚ್. ಪಾಟೀಲ್. —ಅದಿನ್ನೂ ವಿವಾದದಲ್ಲಿದೆ

ಶ್ರೀ ಹಂಜಿ ಶಿವಣ್ಣ.—ಅದನ್ನು ಮುಟ್ಟುಗೋಲು ಹಾಕಿಕೊಂಡ ಮೇಲೆ ಅದನ್ನು ಜೋಪಾನವಾಗಿ ಇಡತಕ್ಕದ್ದು ಸರಕಾರದವರ ಕರ್ತವ್ಯವಲ್ಲವೇ ?

ಶ್ರೀ ಕೆ ಎಚ್. ಪಾಟೀಲ್.—ಅದನ್ನೇ ನಾನಿನ್ನೂ ವಿವಾದದಲ್ಲಿದೆ ಎಂದು ಹೇಳಿದ್ದು

ಶ್ರೀ ಹಂಜಿ ಶಿವಣ್ಣ —ಸರಕಾರದವರು ಹಿಂದೆ ಮುಟ್ಟುಗೋಲು ಹಾಕಿಕೊಂಡ ಎಲ್ಲಾ ಮಾಲೂ ಸರಕಾರದವರ ವಶದಲ್ಲಿದೆಯೇ

SRI K. H. PATIL :— Notice, Sir

MADAM SAEAKER :— The Hon. Minister for Municipal Administration was not present in the House to answer. The question No. 945 I just have five Questions and the Minister is not present. I do not know what I should do.

SRI H. M. CHANNABASAPPA :— If you will kindly permit me........

ಶ್ರೀ ಕೆ. ಎಂ. ನಾಗಣ್ಣ —ಅಧ್ಯಕ್ಷರೇ, ತಾವು ಎಲ್ಲ ಮಂತ್ರಿಗಳಿಗೂ ಈ ಸಭೆಯಲ್ಲಿ ಪ್ರಶ್ನೋತ್ತರಗಳ ಕಾಲದಲ್ಲಾದರೂ ಒಂದು ಗಂಟೆಯ ಕಾಲ ಇದ್ದೇ ಇರಬೇಕೆಂದು ಒಂದು ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ದಿವಸ ಸಭೆ ಬೆಳಗ್ಗೆ ಒಂಭತ್ತು ಗಂಟೆಗೆ ಸೇರುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ ಅಂದಾಗ ಇನ್ನು ಆದೇಶ ನೀಡತಕ್ಕ ಪ್ರಮೆಯವೆಲ್ಲಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ :.... ಮಾನ್ಯ ಸಚಿವರು ಸ್ವಲ್ಪ ತಡವಾಗಿ ಬರುವುದಾಗಿ ವರ್ತಮಾನ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲು ನಾನು ಎದ್ದಿದ್ದೇನೆ ಅಷ್ಟೇ. ನಾನು ಇನ್ನೇನೂ ಹೇಳುವುದಿಲ್ಲ.

MADAM SPEAKER :—Question No. 957 stands in the name of the Minister of State for Home. He has resigned. This question may kindly be held over.

MADAM SPEAKER :... The Question is held over.

But I am very sorry to tell the House that we could easily take up 15 Questions a day. But I am not getting replies. It is really a sorry state of affairs. I do not know where it is happening. One question has been held over for the other. The Hon. Minister is not here. I am really sorry for this.

SRI H. M. CHANNABASAPPA :— I will try to find out where exactly the questions are held up and see that no room is given for this.

MADAM SPEAKER :— Q. No. 945 is also held over Questions are over.

ABSENCE OF THE MINISTERS

SRI M. M. SAJJAN :— Madam Speaker, I beg to call the attention of the Hon. Minister for Food and Civil Supplies regarding the hardship caused to the saffale oil seed crushers on account of the ban imposed on the export of saffale oil cakes.

(The Hon. Minister for Food and Civil Supplies was not present).

MADAM SPEAKER :-Even to replya call attention notice the Minister of state for Food is not here. Would you like me to adjourn the House ? I think the Government should come to my rescue.

SRI H. M. CHANNABASAPPA :— I would like to submit Madam, invariably whenever morning sessions are held at 9 o'clock, it has been our experience that

attendance on both sides of the House will be rather meagre and it has been probably difficult for Members and also Ministers to come in time. That has been the experience. But that is no reason for not being present in the House when some business stands in the name of Ministers. I regret for what has happened and I will see that room is not given to such things here after

SRI K. M. NAGANNA :-- They are supposed to be Ministers all the 24 hours. ಮಂತ್ರಿಗಳು 9 ಗಂಟೆಗೆ ಬರುವುದು ಕಷ್ಟ ವಾದರೆ 10 ಗಂಟೆಗೆ ಸಭೆ ಇಡಿ.

ಶ್ರೀ ಕೆ. ಎನ್. ವೀರಪ್ಪಗೌಡ :— ಮಾನ್ಯ ಉಪನಾಯಕರು ಹೇಳಿದ ವಾದವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಹಿಂದೆ ಸಭೆಯನ್ನು ಎಂಟೂವರೆ ಗಂಟೆಗೆ ನಡೆಸುತ್ತಿದ್ದಾಗ ಎಲ್ಲರೂ ಬರಬಹುದು ಆಗಿತ್ತು. ಈಗ ಸಭೆಯನ್ನು 9 ಗಂಟೆಗೆ ಇಟ್ಟುಕೊಂಡರೆ ಬರಲು ಕಷ್ಟವೇ ?

ಶ್ರೀ ಕೆ. ಎಂ. ನಾಗಣ್ಣ : ನಾವು ದೂರದಿಂದ ನಡೆದುಕೊಂಡು ಬರ ತಕ್ಕವರು 9 ಘಂಟೆಯೊಳಗೇ ಬರುವುದಕ್ಕೆ ಸಾಧ್ಯವಿದ್ದಾಗ, ಈ ಮಂತ್ರಿಗಳಿಗೆ— ಕಾರು, ಜವಾನರು ಬಂಗ್ಲೆ ಇತ್ಯಾದಿ ಸೌಕರ್ಯಗಳನ್ನು ಒದಗಿಸಿದ್ದರೂ ಅವರಿಗೆ ಕಾಲಕ್ಕೆ ಸರಿಯಾಗಿ ಬರಲು ಕಷ್ಟವೇ ? ಮಾನ್ಯ ಉಪನಾಯಕರು ಹೇಳಿದ್ದನ್ನು ನಾನು ಒಪ್ಪಲಾರೆ. ಅವರು ಈ ಉತ್ತರವನ್ನು ಹೇಳುವುದಕ್ಕೇನು ನಾವು ಅವರಿಗೆ ಇಷ್ಟೆಲ್ಲಾ ಸೌಕರ್ಯಗಳನ್ನು ಕೊಟ್ಟಿದ್ದು ? ಆದರೆ ಆಗಲೇ ಮಾನ್ಯ ಸದಸ್ಯರು ಹೇಳಿದಂತೆ ಈಗ ಸಭೆಯನ್ನೇ ಮುಂದೂಡುವುದು ಲೇಸೆಂದು ಹೇಳುತ್ತೇನೆ. ಏಕೆಂದರೆ ಒಬ್ಬ ಮಂತ್ರಿಗಳು ಕೊಡತಕ್ಕ ಉತ್ತರವನ್ನು ಇನ್ನೊಬ್ಬ ಮಂತ್ರಿ ಗಳು ಕೊಟ್ಟರೆ ಅವರಿಗೆ ಅದರ ಅನುಭವ ಪೂರ್ಣವಾಗಿ ಇರುವುದಿಲ್ಲವಾದ್ದರಿಂದ ಸದಸ್ಯರಿಗೆ ಅವರು ಕೊಡತಕ್ಕ ಉತ್ತರಗಳು ಅಷ್ಟು ಸಮರ್ಪಕವಾಗಿ ಇರುವುದಿಲ್ಲ.

SRI H. M. CHANNABASAPPA :—I am not justifying what has happened. I only made a submission that in the mornings, it is a little difficult for members and also Ministers. That is only a suggestion made to Hon. Speaker for taking such action as may be necessary in future. But any way I have expressed my regret at the absence of the Ministers and it may kindly be noted that no room will be given for this in future.

Replies to questions etc., from the Government.

SRI C. M. ARUMUGHAM :—Madam Speaker, all these three months, answers are not coming forth from Government. There is inordinate delay so far as replies are concerned. There is a similar delay in replying call attention notices on various matters. Therefore it is necessary, I request the chair to direct the Government to send answers in time and in the case of Ministers who do not send answers in time the chair may kindly direct that a list of such questions may kindly be placed before the House.

Secondly, when the House is sitting, the Hon. Minister for Public Works says that there is some difficulty in coming to the House. Can it be taken as an excuse? They are responsible to the House. They cannot afford to be absent when their subjects come up before the House. They cannot compare themselves with the Members. Members may come late. They may go away in the middle. But Ministers cannot do that.

SRI H. M. CHANNABASAPPA :— I agree with your observations, It is not justifiable for the Ministers to be absent on any ground. It is our primary duty to be here. And I would also request you to kindly look into this a pect, in this marathon session; how many Hon. Members who listed questions did not come here to put them.

